ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಡೀಪ್ ಫೇಕ್ ಹೆಸರಿನ ತಂತ್ರಗಾರಿಕೆ ಚುನಾವಣೆ ಸಂದರ್ಭದಲ್ಲಿ ಬಳಕೆಯಾದರೆ ಆಗುವ ಪರಿಣಾಮಗಳೇನು?... ಒಂದು ವಿಶ್ಲೇಷಣೆ

ರಾಹುಲ್ ವಿಚಾರದಲ್ಲಿ ಮೇಲ್ಮನವಿ: ಕಾಂಗ್ರೆಸ್ ಎಚ್ಚರಿಕೆಯ ಹೆಜ್ಜೆ 8

ದಕ್ಷಿಣ ಒಳನಾಡಿನ ಹಲವೆಡೆ ಮಳೆ ಸಾಧ್ಯತೆ 7

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ
100 ದಿನಗಳಲ್ಲಿ 116 ಕೆರೆಗಳ ಅಭಿವೃದ್ಧಿ 7

ಮಾಡಾಳ್‌ಗೆ ನ್ಯಾಯಾಂಗ ಬಂಧನ

ಬೆಂಗಳೂರು: ಲಂಚ ಪ್ರಕರಣದಲ್ಲಿ ಬಂಧಿತರಾಗಿದ್ದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಏಪ್ರಿಲ್ 11ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. 7

ಚಿನಕುರಳಿ

ಪ್ರಕಾಶ್ ಶೆಟ್ಟಿ



ಚೇತರಿಸಿಕೊಳ್ಳದ ಕೇಂದ್ರ ಸರ್ಕಾರದ ‘ಒಂದು ಜಿಲ್ಲೆ ಹಲವು ಉತ್ಪನ್ನ’

ಎಡವಿದ ಯೋಜನೆಯ ಕಥೆ..

• ಇ.ಎಸ್. ಸುಧೀಂದ್ರ ಪ್ರಸಾದ್

ಒಳನೋಟ
ನನಸಾಗದ ‘ಆತ್ಮನಿರ್ಭರ’
ಪ್ರತಿಕ್ರಿಯಿಸಿ: 9606038256
feedback@prajavani.co.in

ಧಾರವಾಡ: ‘ಮಲ್ನಾಡ್ ಅಡಿಕೆ, ಮೈಸೂರು ವೀಳ್ಯದೆಲೆ ಬೆರೆತರೆ ಕೆಂಪು...’ ‘ಸಿಂಹಾದ್ರಿಯ ಸಿಂಹ’ ಚಿತ್ರದ ಈ ಹಾಡು ಕೇಳಿದವರಿಗೆ ಪ್ರದೇಶಕ್ಕೊಂದು ಬೆಳೆ ಹಾಗೂ ಬೆಳೆಗೊಂದು ಪ್ರದೇಶ ಇದೆ ಎಂದೆನಿಸದೇ ಇರದು.

ಜನಪದದಲ್ಲಿಯೂ ಬಿಜಾಪುರದ ಬಿಳಿಜೋಳ, ಕರಾವಳಿಯ ಕರಿನೆಲ್ಲ, ಬ್ಯಾಡಗಿ ಮೆಣಸಿನಕಾಯಿ, ಲೋಕಾಪುರದ ಚಿಕ್ಕು ಅಂತೆಲ್ಲ ಉಲ್ಲೇಖಿಸಿ ತ್ರಿಪದಿಗಳಿವೆ.

ಕೃಷಿಕರ ಬದುಕಿನ ಹದ ಕೇವಲ ಕೃಷಿಯಲ್ಲಷ್ಟೇ ಅಲ್ಲ, ಅವರು ಹಾಡಿದ ಪದಗಳಲ್ಲಿಯೂ ಕಾಣಿಸಿಕೊಂಡಿವೆ. ಮೈಸೂರಿನ ವೀಳ್ಯದೆಲೆ, ನಂಜನಗೂಡಿನ ರಸಬಾಳೆ, ಬ್ಯಾಡಗಿ ಮೆಣಸಿನಕಾಯಿ, ಧಾರವಾಡದ ಆಪೂಸು, ಕೊಪ್ಪಳದ ಸೀಬೆ, ಕೊಡಗಿನ ಕಾಫಿ, ಮಂಗಳೂರಿನ ಮಲ್ಲಿಗೆ.... ಹೀಗೆ ಪಟ್ಟಿ ಮಾಡಬಹುದು.

2018ರಲ್ಲಿ ಕೇಂದ್ರ ಸರ್ಕಾರ ಜಾರಿಗೆ ತಂದ ‘ಒಂದು ಜಿಲ್ಲೆ ಒಂದು ಉತ್ಪನ್ನ’ ಯೋಜನೆಯ ಪರಿಕಲ್ಪನೆ ಹುಟ್ಟಿದ್ದು ಹೀಗೆಯೇ. ಆಯಾ ಜಿಲ್ಲೆಯ ಜನಪ್ರಿಯ ಬೆಳೆಯನ್ನೇ ಆಧರಿಸಿ, ಅದರ ಮೌಲ್ಯಾಧಾರಣೆ, ಮೌಲ್ಯವರ್ಧನೆಗೆ ಉದ್ಯಮ ಕಲ್ಪಿಸಿ ‘ಆತ್ಮನಿರ್ಭರ ಭಾರತ’ ಅಥವಾ ಸ್ವಾವಲಂಬಿ ಭಾರತವಾಗಿಸುವ ಕನಸುಗಳನ್ನು ರೈತೋದ್ಯಮಿಗಳಲ್ಲಿ ಬಿತ್ತಲಾಯಿತು.

‘ವೋಕಲ್ ಫಾರ್ ಲೋಕಲ್’ ಎಂಬ ಅಭಿಯಾನದ ಭಾಗವಾದ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯ ಮೂಲ ಜಪಾನ್ ದೇಶ. 1979ರಲ್ಲಿ ಓಯಿಟಾ ಪ್ರದೇಶದ ಗವರ್ನರ್ ಮೊರಿಹಿಕೊ ಹಿರಮಟ್ಸು ಎಂಬುವವರು ತಮ್ಮ ವ್ಯಾಪ್ತಿಯ ಪ್ರತಿ ಹಳ್ಳಿಗಳ ವಿಶೇಷಗಳಿಗೆ ಪ್ರಾಮುಖ್ಯ ನೀಡಿ, ಕೌಶಲ ಉದ್ದಿಮೆ ಸ್ಥಾಪಿಸುವತ್ತ ಹೆಚ್ಚು ಗಮನ ನೀಡಿದರು. ಆದಾಯ ಗಳಿಕೆಗೆ ಮೂಲ ಆಗುವಂತೆ ‘ಒಂದು ಹಳ್ಳಿ, ಒಂದು ಉತ್ಪನ್ನ’ ಯೋಜನೆ ಪರಿಚಯಿಸಿದ್ದರು.

ಇದೇ ಯೋಜನೆಯ ತದ್ರೂಪು ಎನ್ನುವಂತೆ 2018ರಲ್ಲಿ ಕೇಂದ್ರ ಸರ್ಕಾರ ಒಂದು ಜಿಲ್ಲೆ ಒಂದು ಉತ್ಪನ್ನ (ಒನ್ ಡಿಸ್ಟ್ರಿಕ್ಟ್, ಒನ್ ಪ್ರೊಡಕ್ಟ್‘ ಒಡಿಒಪಿ) ಎಂದು ಪ್ರತಿಪಾದಿಸಿತು.

> **ಒಣಮೀನುಗಳನ್ನು ಪೊಟ್ಟಣ ಮಾಡಿ ಕರಾವಳಿಯಿಂದ ದೂರದ ಪ್ರದೇಶಗಳಿಗೆ ರವಾನಿಸುತ್ತಿದ್ದೇವೆ. ನಮಗೆ ಪ್ರಧಾನ ಮಂತ್ರಿ ಕಿರು ಆಹಾರ ಸಂಸ್ಕರಣಾ ಘಟಕದ ಬಗ್ಗೆ ಮಾಹಿತಿಯೇ ಇಲ್ಲ**
> **ರೇಖಾ ರಾಜೇಶ ತಾಂಡೇಲ,** ಹೊನ್ನಾವರ

> **ಬಜೆಟ್‌ನಲ್ಲಿ ಘೋಷಿಸಿದಂತೆ ಹಾನಗಲ್ ತಾಲ್ಲೂಕಿನಲ್ಲಿ ಮಾವು ಸಂಸ್ಕರಣಾ ಘಟಕ ನಿರ್ಮಾಣ ಆಗಿಲ್ಲ . ಈ ಘಟಕ ನಿರ್ಮಾಣವಾದಲ್ಲಿ ಉಪ ಕಸುಬುಗಳಿಗೆ ಪ್ರೋತ್ಸಾಹ ದೊರೆಯಲಿದೆ**
> **ಮರಿಗೌಡ ಪಾಟೀಲ್,** ಹಾನಗಲ್ ತಾಲ್ಲೂಕು ರೈತ ಸಂಘದ ಅಧ್ಯಕ್ಷರು

ಒಂದು ಉತ್ಪನ್ನವನ್ನು ಒಂದು ಜಿಲ್ಲೆಗೆ ಸೀಮಿತಗೊಳಿಸಲಾಯಿತು. ಆಗ ರಾಜ್ಯದ 31 ಜಿಲ್ಲೆಗಳಿಂದ 31 ಉತ್ಪನ್ನಗಳಿಗೆ ಪ್ರೋತ್ಸಾಹ ಧನ ನೀಡುವುದಾಗಿ ಘೋಷಿಸಲಾಯಿತು.

ದವಸ ಧಾನ್ಯ, ಹಣ್ಣು, ತರಕಾರಿ, ಜೇನು, ಸಾಗರೋತ್ಪನ್ನಗಳು, ಸಾಂಬಾರ ಪದಾರ್ಥಗಳು ಹೀಗೆ ಈ ಉತ್ಪನ್ನಗಳನ್ನು ವಿಂಗಡಿಸಲಾಯಿತು.

ಈ ಯೋಜನೆಗಾಗಿ 2021ರಿಂದ 2025ರವರೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು 60:40ರ ಅನುಪಾತದಂತೆ ₹500 ಕೋಟಿ ಮೀಸಲಿಡಬೇಕಿದೆ. ರಾಜ್ಯ ಸರ್ಕಾರ 2021–22ರ ಬಜೆಟ್‌ನಲ್ಲಿ ₹100 ಕೋಟಿ ಮೀಸಲಿಟ್ಟಿತ್ತು.

ಯೋಜನೆಯಲ್ಲಿ ಶೇ 50ರಷ್ಟು ಸಬ್ಸಿಡಿ ಸಿಗಲಿದೆ. ಇದರಲ್ಲಿ ರಾಜ್ಯದ ಪಾಲು ಶೇ 15. ಉಳಿದದ್ದು ಕೇಂದ್ರದ್ದು. ಉಳಿದ ಶೇ 50ರಲ್ಲಿ ಶೇ 10ರಷ್ಟನ್ನು ಉದ್ಯಮಿಗಳಾಗಬಯಸುವವರು ಹೂಡಬೇಕು. ಶೇ 40ರಷ್ಟು ಬ್ಯಾಂಕ್‌ಗಳಿಂದ ₹10ಲಕ್ಷದಿಂದ ₹30 ಲಕ್ಷದವರೆಗೆ ಸಾಲ ಸಿಗಲಿದೆ.

ಯೋಜನೆಯು ಯೋಜಿಸಿದಂತೆಯೇ ಕಾರ್ಯಾನುಷ್ಠಾನಕ್ಕೆ ಬಂದಿದ್ದರೆ ನಮ್ಮ ಕೃಷಿಕರಲ್ಲಿ ಬಹುತೇಕರು ರೈತೋದ್ಯಮಿಗಳಾಗಬೇಕಿತ್ತು. ಮತ್ತು ಕೃಷಿಕರ ಆದಾಯವೂ ಹೆಚ್ಚಬೇಕಿತ್ತು. ಆದರೆ ದೂರದೃಷ್ಟಿಯ ಕೊರತೆಯಿಂದಾಗಿ ನಿರೀಕ್ಷಿತಮಟ್ಟದ ಸ್ಪಂದನೆ ರೈತರಿಂದ ಸಿಗಲಿಲ್ಲ.

ಯೋಜನೆ ಆರಂಭವಾದಾಗ 3 ಲಕ್ಷ ಹೆಕ್ಟೇರ್‌ಗೂ ಹೆಚ್ಚಿನ ಪ್ರದೇಶದಲ್ಲಿ ಕಬ್ಬು ಬೆಳೆಯುವ ಬೆಳಗಾವಿ ಜಿಲ್ಲೆಯಲ್ಲಿ ‘ರಾಸಾಯನಿಕ ರಹಿತ ಬೆಲ್ಲ ತಯಾರಿಕೆ ಘಟಕ’ ನಿರ್ಮಿಸಲು ಅವಕಾಶ ಕಲ್ಪಿಸಲಾಗಿತ್ತು.

6ನೇ ಪುಟ ನೋಡಿ

ಜಾನುವಾರು ಸಾಗಿಸುತ್ತಿದ್ದ ವ್ಯಕ್ತಿ ಅನುಮಾನಾಸ್ಪದ ಸಾವು

ಪ್ರಜಾವಾಣಿ ವಾರ್ತೆ


ಇರ್ಗೀಷ್ ಪಾಷ

ಕನಕಪುರ: ತಾಲ್ಲೂಕಿನ ಸಾತನೂರು ಬಳಿ ಶುಕ್ರವಾರ ಮಧ್ಯರಾತ್ರಿ ವಾಹನದಲ್ಲಿ-ಜಾನುವಾರು ಸಾಗಿಸುತ್ತಿದ್ದ ವ್ಯಕ್ತಿ-ಯೊಬ್ಬರು ಅನುಮಾನಾಸ್ಪದವಾಗಿ ಮೃತಪಟ್ಟಿದ್ದಾರೆ.

‘ಮಂಡ್ಯ ಮೂಲದ ಇರ್ಗೀಷ್ ಪಾಷ (45) ಮೃತ ವ್ಯಕ್ತಿ. ಇವರು ವಾಹನದಲ್ಲಿ ಜಾನುವಾರು ಸಾಗಿಸುತ್ತಿದ್ದ ವೇಳೆ ರಾಷ್ಟ್ರ ರಕ್ಷಣಾ ಪಡೆ ಸಂಘಟನೆಯ ಮುಖಂಡ ಪುನೀತ್ ಕೆರೆಹಳ್ಳಿ ನೇತೃತ್ವದ ತಂಡ 16 ಜಾನುವಾರುಗಳನ್ನು ರಕ್ಷಿಸಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.


ಇರ್ಗೀಷ್ ಪಾಷ ಸಾವಿನ ಕುರಿತ ತನಿಖೆಗೆ ಆಗ್ರಹಿಸಿ ಸಾತನೂರು ಪೊಲೀಸ್ ಠಾಣೆಯ ಮುಂದೆ ಪ್ರತಿಭಟನೆ ನಡೆಸಲಾಯಿತು

8ನೇ ಪುಟ ನೋಡಿ

ಎಕ್ಸ್‌ಪ್ರೆಸ್ ವೇ: ಟೋಲ್ ದರ ಹೆಚ್ಚಳ ರದ್ದು

ಪ್ರಜಾವಾಣಿ ವಾರ್ತೆ

ರಾಮನಗರ: ಬೆಂಗಳೂರು- ಮೈಸೂರು ಎಕ್ಸ್‌ಪ್ರೆಸ್ ವೇ ಟೋಲ್ ದರ ಹೆಚ್ಚಳವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಶನಿವಾರ ಹಿಂಪಡೆದಿದೆ.

ಟೋಲ್ ದರವನ್ನು ಶನಿವಾರದಿಂದ (ಏ.1) ಅನ್ವಯವಾಗುವಂತೆ ಶೇ 22ರಷ್ಟು ಹೆಚ್ಚಿಸಿ ಆದೇಶ ಹೊರಡಿಸಿತ್ತು.

ವಾಹನಗಳ ಸಾಮರ್ಥ್ಯಕ್ಕೆ ಅನುಗುಣವಾಗಿ ಕನಿಷ್ಠ ₹ 35ರಿಂದ ಗರಿಷ್ಠ ₹350ರವರೆಗೆ ಟೋಲ್ ಶುಲ್ಕ ಏರಿತ್ತು. ಶುಕ್ರವಾರ ಮಧ್ಯರಾತ್ರಿಯಿಂದ-ಲೇ ಟೋಲ್ ಸಿಬ್ಬಂದಿ ಪರಿಷ್ಕೃತ ದರ ಸಂಗ್ರಹ ಮಾಡಲು ಆರಂಭಿಸಿದರು.

8ನೇ ಪುಟ ನೋಡಿ

ಜಿಎಸ್‌ಟಿ: ರಾಜ್ಯದಲ್ಲಿ ₹10,360 ಕೋಟಿ ವರಮಾನ ಸಂಗ್ರಹ

ನವದೆಹಲಿ: ಕರ್ನಾಟಕದಲ್ಲಿ ಮಾರ್ಚ್ ತಿಂಗಳಿನಲ್ಲಿ ₹10,360 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ.

ಕಳೆದ ವರ್ಷ ಮಾರ್ಚ್‌ನಲ್ಲಿ ₹8,750 ಕೋಟಿ ಸಂಗ್ರಹವಾಗಿತ್ತು. ಈ ವರ್ಷದ ಮಾರ್ಚ್‌ನಲ್ಲಿ ಜಿಎಸ್‌ಟಿ ಸಂಗ್ರಹ ಪ್ರಮಾಣ ಶೇ 18ರಷ್ಟು ಹೆಚ್ಚಳ ಆಗಿದೆ.

9ನೇ ಪುಟ ನೋಡಿ



ನೀರಿಗಾಗಿ ನಡಿಗೆ ಉದ್ಘಾಟಿಸಿದ ನಗರ ಪೊಲೀಸ್ ಕಮಿಷನರ್ ಪ್ರತಾಪ ರೆಡ್ಡಿ, ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ.ಸಲೀಂ, ಚಲನಚಿತ್ರ ನಟ ರಿಷಿ ಮಕ್ಕಳೊಂದಿಗೆ ಹೆಜ್ಜೆ ಹಾಕಿದರು



ನಡಿಗೆಯಲ್ಲಿ ಪಾಲ್ಗೊಂಡಿದ್ದವರು ವಿಧಾನಸೌಧದ ಎದುರು ಸೇರಿದ್ದ ಕ್ಷಣ

–ಪ್ರಜಾವಾಣಿ ಚಿತ್ರಗಳು/ಎಂ.ಎಸ್.ಮಂಜುನಾಥ್



ಉತ್ಸಾಹದಲ್ಲಿ ಪಾಲ್ಗೊಂಡಿದ್ದ ಜನ

ವಿಶ್ವಜಲ ದಿನ ಮತ್ತು ಪ್ರಜಾವಾಣಿ@75 ಸಂಭ್ರಮ ● ಚಿಣ್ಣರಿಂದ ಹಿರಿಯರವರೆಗೆ ವಾಕಥಾನ್‌ನಲ್ಲಿ ಬತ್ತದ ಉತ್ಸಾಹ

ನೀರಿಗಾಗಿ ‘ಪ್ರಜಾವಾಣಿ’ ನಡಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂಡಣದಿಂದ ಸೂರ್ಯನ ಕಿರಣಗಳು ರಸ್ತೆ ಮೇಲೆ ಚೆಲ್ಲುವಷ್ಟರೊಳಗೆ ಶ್ವೇತ ಟೀಶರ್ಟ್‌ಧಾರಿಗಳ ಸಾಲೊಂದು ಎಂ.ಜಿ. ರಸ್ತೆಯಲ್ಲಿ ಹೊರಟಿತು.

ವಿಶ್ವಜಲ ದಿನ ಮತ್ತು ಪ್ರಜಾವಾಣಿ@75 ಅಂಗವಾಗಿ ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಶನಿವಾರ ಆಯೋಜಿಸಿದ್ದ ‘ನೀರಿಗಾಗಿ ನಡಿಗೆ’ ಕಾರ್ಯಕ್ರಮದ ಝಲಕ್ ಇದು.

ಈ ವಾಕಥಾನ್‌ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಸ್ಕಾಂ, ಪಿಇಎಸ್ ವಿಶ್ವವಿದ್ಯಾಲಯ, ಮಣಿಪಾಲ್ ಆಸ್ಪತ್ರೆ ಮತ್ತು ಹಟ್ಟಿ ಕಾಫಿ ಸಹಯೋಗ ನೀಡಿದ್ದವು.

ನೋಂದಣಿ ಮಾಡಿಕೊಂಡಿದ್ದ 300ಕ್ಕೂ ಹೆಚ್ಚು ಜನ ಲಗುಬಗೆಯಿಂದ ಬೆಳಿಗ್ಗೆ 6ರ ಹೊತ್ತಿಗೆ ಜಮಾಯಿಸಿದ್ದರು. ಬಿಳಿ ಬಣ್ಣದ ಟೀಶರ್ಟ್, ನೀಲಿ ಬಣ್ಣದ ಟೋಪಿ ಧರಿಸಿ ನೀರಿಗಾಗಿ ನಡೆಯಲು ಸಂಭ್ರಮದಿಂದ ಸಜ್ಜಾದರು. ನೋಂದಣಿ ಮಾಡಿಸಿಕೊಳ್ಳದವರೂ ನಡಿಗೆಯ ಸುದ್ದಿ ತಿಳಿದು ‘ಪ್ರಜಾವಾಣಿ’ಯ ಸದುದ್ದೇಶಕ್ಕೆ ಹೆಜ್ಜೆ ಹಾಕಿ ಬೆಂಬಲ ನೀಡಿದರು.


ಟ್ರಿನಿಟಿ ವೃತ್ತದಿಂದ ನಡಿಗೆ ಆರಂಭವಾಯಿತು. ನಗರ ಪೊಲೀಸ್ ಕಮಿಷನರ್ ಪ್ರತಾಪ ರೆಡ್ಡಿ, ಸಂಚಾರ ವಿಭಾಗದ ವಿಶೇಷ ಕಮಿಷನರ್ ಎಂ.ಎ.ಸಲೀಂ ಹಾಗೂ ಚಲನಚಿತ್ರ ನಟ ರಿಷಿ ಅವರು ನಡಿಗೆಗೆ ಚಾಲನೆ ನೀಡಿದರು. ಯುವಕ–ಯುವತಿಯರಷ್ಟೇ ಅಲ್ಲದೆ ಹಿರಿಯರು, ಮಕ್ಕಳೂ ನಡಿಗೆಯಲ್ಲಿ ಉತ್ಸಾಹದಿಂದ ಹೆಜ್ಜೆ ಹಾಕಿದರು. ಮಕ್ಕಳೊಂದಿಗೆ ಅತಿಥಿಗಳೂ ಸಂಭ್ರಮದಿಂದ ನಡೆದದ್ದು ಗಮನಾರ್ಹ.

‘ನೆಮ್ಮದಿಯ ನಾಳೆಗೆ ಇರಲಿ ಉಳಿತಾಯದ ಸಂಕಲ್ಪ’, ‘ಉಳಿದರೆ ನೀರು, ನೆಮ್ಮದಿಯ ತೇರು’, ‘ನೀರು ಮಿತವಾಗಿ ಬಳಸಿ, ಮುಂದಿನ ಪೀಳಿಗೆಗೆ ಉಳಿಸಿ’ ಎಂಬಿತ್ಯಾದಿ ಬರಹಗಳನ್ನು ಒಳಗೊಂಡ ಹಳದಿ ಬಣ್ಣದ ಫಲಕಗಳನ್ನು ಹಿಡಿದು ಹೊರಟ ನಡಿಗೆ ಎಂ.ಜಿ.ರಸ್ತೆಯ ‘ಪ್ರಜಾವಾಣಿ’ ಕಚೇರಿ ಬಳಿಗೆ ಬಂದಿತು.

ನಡಿಗೆಯಲ್ಲಿ ಪಾಲ್ಗೊಂಡಿದ್ದವರು ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಕಚೇರಿಯ ಮುಂದೆ ನೀರಿನ ಮಹತ್ವದ ಕುರಿತು ಘೋಷಣೆ ಕೂಗಿದರು. 75ನೇ ವರ್ಷದಲ್ಲಿರುವ ‘ಪ್ರಜಾವಾಣಿ’ಯು ಸಮಾಜ ಮತ್ತು ಜೀವಜಲದ ಕುರಿತು ಹೊಂದಿರುವ ಕಳಕಳಿಯನ್ನು ಕೊಂಡಾಡಿದರು. ‘ಪ್ರಜಾವಾಣಿ’ಯ ಪಾರಂಪರಿಕ ಕಟ್ಟಡದ ಎದುರು ನಿಂತು ಸೆಲ್ಫಿ ತೆಗೆದುಕೊಂಡರು.

ಅಲ್ಲಿಂದ ಮತ್ತೆ ಹೊರಟ ನಡಿಗೆ ಅನಿಲ್ ಕುಂಬ್ಳೆ ವೃತ್ತ, ಗಾಂಧಿ ವೃತ್ತ, ಮಿನ್ಸ್ ಸ್ಕ್ವೇರ್ ಮಾರ್ಗವಾಗಿ ವಿಧಾನಸೌಧ ತಲುಪಿತು. ಅಲ್ಲಿಯೂ ಕೆಲಕಾಲ ನೀರಿನ ಮಹತ್ವದ ಕುರಿತು ಜನರಿಗೆ ತಿಳಿವಳಿಕೆ ನೀಡಲಾಯಿತು.

ಕಬ್ಬನ್ ಉದ್ಯಾನದಲ್ಲಿರುವ ಪ್ರೆಸ್‌ಕ್ಲಬ್ ಆವರಣದಲ್ಲಿ ನಡಿಗೆ ಸಮಾರೋಪಗೊಂಡಿತು. ಪಾಲ್ಗೊಂಡವರಿಗೆ ಪ್ರಮಾಣಪತ್ರ ವಿತರಿಸಲಾಯಿತು. ಜೀವಜಲ ರಕ್ಷಿಸುವ ಮಹತ್ಕಾರ್ಯದಲ್ಲಿ ಭಾಗವಹಿಸಿದ್ದವರು ಧನ್ಯತಾ ಭಾವದೊಂದಿಗೆ ಹೊಸದೊಂದು ಸಂಕಲ್ಪ ತೊಟ್ಟು ಮರಳಿದರು.



‘ನೀರು: ಕಾಳಜಿ ವಹಿಸಿ’

ವಾತಾವರಣದಲ್ಲಿ ಆಗಿರುವ ಬದಲಾವಣೆಯಿಂದ ಜೀವಜಗತ್ತು ಸಾಕಷ್ಟು ತೊಂದರೆ ಎದುರಿಸುವಂತಾಗಿದೆ. ಇಂತಹ ಕಠಿಣ ಸಂದರ್ಭದಲ್ಲಿ ನಾವೆಲ್ಲರೂ ನೀರಿನ ಮಹತ್ವವನ್ನು ಅರಿತುಕೊಳ್ಳಬೇಕು. ನೀರು ಉಳಿಸುವ ಬಗ್ಗೆ ಕಾಳಜಿ ವಹಿಸಬೇಕು. ಬೇರೆಯವರಲ್ಲೂ ಜಾಗೃತಿ ಮೂಡಿಸಬೇಕು.

ಪ್ರತಾಪ್ ರೆಡ್ಡಿ, ನಗರ ಪೊಲೀಸ್ ಕಮಿಷನರ್, ಬೆಂಗಳೂರು



‘ನೀರನ್ನು ಮಿತವಾಗಿ ಬಳಸಿ’

ಜನಸಂಖ್ಯೆ ಹೆಚ್ಚಳದಿಂದ ನೀರಿನ ಅವಶ್ಯಕತೆ ಇಂದು ಹೆಚ್ಚಾಗಿದೆ. ನೀರನ್ನು ಮಿತವಾಗಿ ಬಳಸಬೇಕು. ಮುಂದಿನ ಪೀಳಿಗಾಗಿ ನಾವು ಪ್ರಾಕೃತಿಕ ಸಂಪನ್ಮೂಲವನ್ನು ಉಳಿಸಬೇಕು.

ಎಂ.ಎ.ಸಲೀಂ, ವಿಶೇಷ ಕಮಿಷನರ್ (ಸಂಚಾರ ವಿಭಾಗ), ಬೆಂಗಳೂರು



ಮಳೆ ನೀರು ಸಂಗ್ರಹದಿಂದ ಅಂತರ್ಜಲ ವೃದ್ಧಿ

ಪ್ರಕೃತಿ ನಮಗೆ ಸಮೃದ್ಧವಾಗಿ ನೀರು ನೀಡಿದೆ. ಅದನ್ನು ಹಿತಮಿತವಾಗಿ ಬಳಸಿದರೆ ಯಾವುದೇ ತೊಂದರೆ ಆಗುವುದಿಲ್ಲ. ಸಾಧ್ಯವಾದ ಎಲ್ಲ ಸ್ಥಳಗಳಲ್ಲೂ ಮಳೆ ನೀರು ಸಂಗ್ರಹ ಯೋಜನೆ ಅಳವಡಿಸಿಕೊಂಡರೆ ಅಂತರ್ಜಲ ವೃದ್ಧಿ ಆಗಲಿದೆ. ಹೊಸ ಮನೆ ನಿರ್ಮಿಸುವವರು ಮೊದಲು ಮಳೆ ನೀರು ಸಂಗ್ರಹಕ್ಕೆ ಆದ್ಯತೆ ನೀಡಬೇಕು.

ರಿಷಿ, ಚಲನಚಿತ್ರ ನಟ



‘ಪ್ರಜಾವಾಣಿ’ ಕಚೇರಿಯ ಎದುರು ಸಂಭ್ರಮಿಸಿದ ಜನ

ಪ್ರಮಾಣಪತ್ರ ವಿತರಣೆ

ನೀರಿಗಾಗಿ ನಡಿಗೆಯ ಸಮಾರೋಪ ಸಮಾರಂಭ ಕಬ್ಬನ್ ಉದ್ಯಾನ ಬಳಿಯ ಪ್ರೆಸ್‌ಕ್ಲಬ್ ಆವರಣದಲ್ಲಿ ನಡೆಯಿತು. ನಡಿಗೆಯಲ್ಲಿ ಪಾಲ್ಗೊಂಡು ಮೊದಲು ಗುರಿ ಮುಟ್ಟಿದ 15 ಮಂದಿಗೆ ನಟ ರಿಷಿ, ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರಭಟ್ಟ, ಡೆಪ್ಯುಟಿ ಎಡಿಟರ್ ಎಂ.ನಾಗರಾಜ ಅವರು ಪ್ರಮಾಣಪತ್ರ ವಿತರಿಸಿದರು.

ವಾಕಥಾನ್‌ನಲ್ಲಿ ಹೆಜ್ಜೆ ಹಾಕಿದ ಪುಟಾಣಿಗಳಾದ ಪವನ್, ಪ್ರತೀಕ್ಷಾ, ಸಂಜನಾ, ಜ್ಯೋತಿಷಾ ಅವರು ಖುಷಿಯಿಂದ ಪ್ರಮಾಣಪತ್ರ ಸ್ವೀಕರಿಸಿದರು.

ಚಂದ್ರಶೇಖರ್, ವೆಂಕಟರಾಮನ್, ಕರುಣಾಕರ್, ಹರೀಂದ್ರ, ಶುಭಾಷ್ ಶೆಟ್ಟಿ, ಮದನ್ ಮೋಹನ್, ರಕ್ಷನ್, ಪ್ರದೀಪ್, ವೇದವ್ಯಾಸ್, ಕುಮಾರ್, ಮಂಗಳಮ್ಮ ಸೇರಿದಂತೆ ಹಲವರಿಗೆ ಪ್ರಮಾಣಪತ್ರ ವಿತರಣೆ ಮಾಡಲಾಯಿತು.

‘ಪ್ರಜಾವಾಣಿ’ ಪ್ರಸರಣ ವಿಭಾಗದ ಪ್ರಧಾನ ವ್ಯವಸ್ಥಾಪಕ ಆಲಿವರ್ ಲೆಸ್ಲಿ, ಡಿಜಿಎಂ ರವಿ ಬಿ.ಎ. ನಡಿಗೆಯಲ್ಲಿ ಪಾಲ್ಗೊಂಡಿದ್ದರು.

ನೀರಿಗಾಗಿ ನಡೆದವರ ನುಡಿ



ನೀರನ್ನು ಮಿತವಾಗಿ ಬಳಸುವುದರ ಜೊತೆಗೆ ಮುಂದಿನ ಪೀಳಿಗೆಗಾಗಿ ಉಳಿಸಬೇಕು. ಇತ್ತೀಚಿನ ದಿನಗಳಲ್ಲಿ ಜಲಮೂಲಗಳಲ್ಲಿ ಪ್ಲಾಸ್ಟಿಕ್ ತ್ಯಾಜ್ಯ ಎಸೆಯಲಾಗುತ್ತಿದೆ. ಇದರಿಂದ ಜಲಚರಗಳ ಪ್ರಾಣಕ್ಕೆ ಕುತ್ತು ಬರುತ್ತಿದೆ. ಆದ್ದರಿಂದ ಜಲಮೂಲಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದರ ಕುರಿತು ಜಾಗೃತಿ ಅವಶ್ಯಕತೆ ಇದೆ.

ಲಾವಣ್ಯ, ಎನ್‌ಸಿಸಿ ಕೆಡೆಟ್



ಅಂತರ್ಜಲ ಸಂರಕ್ಷಣೆ, ಜಲ ಮರುಪೂರಣ ಸೇರಿ ಜಲ ಸಂರಕ್ಷಣೆಯ ವಿವಿಧ ವಿಧಾನಗಳ ಕುರಿತು ಜಾಗೃತಿ ಮೂಡಿಸಬೇಕು. ಬಳಸಿದ ನೀರನ್ನು ಪುನರ್ಬಳಕೆಗೆ ಯೋಗ್ಯಗೊಳಿಸುವ ವಿಧಾನಗಳನ್ನು ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಮಂಗಳಂ, ಗೃಹಿಣಿ



ಸಿಹಿ ನೀರಿನ ಸಂಪನ್ಮೂಲಗಳನ್ನು ಸುಸ್ಥಿರವಾಗಿ ನಿರ್ವಹಿಸಲು ಮತ್ತು ನೀರಿನ ಮಾಲಿನ್ಯ, ಕೊರತೆ, ಅಸಮರ್ಪಕ ನೀರು ಮತ್ತು ನೈರ್ಮಲ್ಯದ ಕೊರತೆಯಂತಹ ಜಲ ಸಂಬಂಧಿತ ಸಮಸ್ಯೆಗಳ ಬಗ್ಗೆ ಜನರಲ್ಲಿ ಹೆಚ್ಚು–ಹೆಚ್ಚು ಅರಿವು ಮೂಡಿಸಬೇಕಾಗಿದೆ. ಜಲಸಂರಕ್ಷಣೆಯಲ್ಲಿ ಎಲ್ಲರೂ ಕೈಜೋಡಿಸಬೇಕು.

ಸಂಜನಾ, ಮಡಿವಾಳ



ಪ್ರತಿನಿತ್ಯ ನೀರನ್ನು ಮಿತವಾಗಿ ಬಳಸಬೇಕು. ಜೀವಜಲವನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗಳಿಗೆ ಅದು ಉಳಿಯುವಂತೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ.

ಪ್ರತೀಕ್ಷಾ, ವಿದ್ಯಾರ್ಥಿನಿ, ಬಸವೇಶ್ವರನಗರ



ಶುದ್ಧ (ಆರ್‌ಒ) ನೀರು ಕುಡಿಯುವುದರಿಂದ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ ಎಂದು ಇತ್ತೀಚೆಗೆ ಸುಪ್ರೀಂ ಕೋರ್ಟ್ ಹೇಳಿದೆ. ಆದ್ದರಿಂದ ಸಾರ್ವಜನಿಕರಿಗೆ ಪೂರೈಕೆಯಾಗುವ ನೀರನ್ನೇ ಕುಡಿಯಬೇಕು. ಜಲಸಂರಕ್ಷಣೆ ಬಗ್ಗೆ ಅರಿವು ಮೂಡಿಸುವುದಷ್ಟೇ ಅಲ್ಲ, ಎಲ್ಲರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

ಜ್ಯೋತಿಷ್ ಕುಮಾರ್, ಮಡಿವಾಳ



ದೇಶದಲ್ಲಿ ನದಿಗಳ ಜೋಡಣೆ ಮಾಡುವುದರ ಮೂಲಕ ಜಲಸಂರಕ್ಷಣೆ ಕೆಲಸ ನಡೆಯುತ್ತಿದೆ. ಮನುಷ್ಯರು, ಪ್ರಾಣಿಗಳು, ಕೃಷಿ ಸೇರಿ ಎಲ್ಲದಕ್ಕೂ ನೀರಿನ ಅವಶ್ಯಕತೆ ಇದೆ. ನೀರಿಲ್ಲದೇ ಏನೂ ಇಲ್ಲ. ಆದ್ದರಿಂದ ಪ್ರತಿಯೊಬ್ಬರೂ ನೀರನ್ನು ಮಿತವಾಗಿ ಬಳಸಬೇಕು.

ನಿತಿನ್ ಭೂಷಣ್ ಕೆ.ಎನ್.,



ಪಾತ್ರೆ ತೊಳೆಯುವುದು, ಮುಖ ತೊಳೆಯುವುದಕ್ಕೆ ಮತ್ತು ಸ್ನಾನ ಮಾಡುವುದಕ್ಕೆ ಸಾಕಷ್ಟು ನೀರನ್ನು ವ್ಯಯ ಮಾಡಲಾಗುತ್ತಿದೆ. ನೀರಿನ ಸಂಗ್ರಹಣೆ ಮೂಲಗಳು, ಸಂಗ್ರಹಿಸಿದ ನೀರಿನ ಸೂಕ್ತ ಉಪಯೋಗ ಹಾಗೂ ನೀರಿನ ಸಂರಕ್ಷಣೆ ಮಾಡದಿದ್ದರೆ ಮುಂದಿನ ದಿನಮಾನಗಳಲ್ಲಿ ಕುಡಿಯುವ ನೀರಿಗಾಗಿ ಪರಿತಪಿಸುವ ಸ್ಥಿತಿ ಎದುರಾಗಲಿದೆ.

ಚಂದ್ರಶೇಖರ್, ನಿವೃತ್ತ ಸೈನಿಕ



ಪ್ರಕೃತಿ ನೀಡಿದ ಅಮೂಲ್ಯ ಕೊಡುಗೆಗಳಲ್ಲಿ ಜೀವಜಲ ಪ್ರಮುಖವಾದದ್ದು, ಜಲ ಸಂರಕ್ಷಣೆ ನಮ್ಮೆಲ್ಲರ ಆದ್ಯ ಕರ್ತವ್ಯ. ಹನಿ ನೀರನ್ನೂ ಪೋಲು ಮಾಡದೆ ಸಂರಕ್ಷಿಸುವುದು, ಮಿತವಾಗಿ ಬಳಸುವುದು ಮಾನವ ಸಂಕುಲಕ್ಕೆ ಅವಶ್ಯಕ ಹಾಗೂ ಅನಿವಾರ್ಯ.

ಮದನ್ ಮೋಹನ್ ಆರ್.

ಏಪ್ರಿಲ್–ಜೂನ್ ಅವಧಿಯಲ್ಲಿ ಹೆಚ್ಚು ಬಿಸಿಗಾಳಿ

ವಾಡಿಕೆಗಿಂತ ಅಧಿಕ ಉಷ್ಣಾಂಶ: ಐಎಂಡಿ

ನವದೆಹಲಿ (ಪಿಟಿಐ): ದೇಶದ ಬಹುತೇಕ ಭಾಗದಲ್ಲಿ ಏಪ್ರಿಲ್–ಜೂನ್ ಅವಧಿಯ ಗರಿಷ್ಠ ಉಷ್ಣಾಂಶವು ವಾಡಿಕೆಗಿಂತ ಅಧಿಕವಾಗಿ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ. ಈ ಅವಧಿಯಲ್ಲಿ ದೇಶದ ಕೇಂದ್ರ ಭಾಗ, ವಾಯವ್ಯ ಹಾಗೂ ಪೂರ್ವ ಭಾಗದ ಬಹುತೇಕ ಕಡೆಗಳಲ್ಲಿ ಬಿಸಿಗಾಳಿಯ ದಿನಗಳು ವಾಡಿಕೆಗಿಂತ ಹೆಚ್ಚಿರಲಿವೆ ಎಂದು ತಿಳಿಸಿದೆ.

ದಕ್ಷಿಣ ಭಾರತ ಹಾಗೂ ವಾಯವ್ಯ ಭಾಗದ ಕೆಲವು ಪ್ರದೇಶಗಳಲ್ಲಿ ವಾಡಿಕೆಯಷ್ಟು ಅಥವಾ ವಾಡಿಕೆಗಿಂತ ಕಡಿಮೆ ಉಷ್ಣಾಂಶ ಇರುವ ಸಾಧ್ಯತೆಯಿದೆ ಎಂದು ತಿಳಿಸಿದೆ.

‘ಬಿಹಾರ, ಜಾರ್ಖಂಡ್, ಉತ್ತರ ಪ್ರದೇಶ, ಒಡಿಶಾ, ಪಶ್ಚಿಮ ಬಂಗಾಳ, ಛತ್ತೀಸಗಡ, ಮಹಾರಾಷ್ಟ್ರ, ಗುಜರಾತ್, ಪಂಜಾಬ್, ಹರಿಯಾಣ ರಾಜ್ಯಗಳ ಕೆಲವು ಭಾಗಗಳಲ್ಲಿ ಬಿಸಿಗಾಳಿಯ ದಿನಗಳು ಅಧಿಕವಾಗಲಿವೆ ಎಂದು ಇಲಾಖೆ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದ್ದಾರೆ.

2023ರ ಫೆಬ್ರುವರಿ ತಿಂಗಳಲ್ಲಿ ವಾಡಿಕೆಗಿಂತ ಅತ್ಯಧಿಕ ಉಷ್ಣಾಂಶ ದಾಖಲಾಗಿತ್ತು. ಆದರೆ ಮಾರ್ಚ್‌ನಲ್ಲಿ (29.9 ಮಿ.ಮೀ.) ತುಸು ಹೆಚ್ಚು ಮಳೆಯಾಗಿದ್ದರಿಂದ ತಾಪ ಕಡಿಮೆಯಿತ್ತು. ಆದರೆ 2022ರ ಮಾರ್ಚ್‌ನಲ್ಲಿ ವಾಡಿಕೆಗಿಂತ ಹೆಚ್ಚು ಬಿಸಿಲು ಇತ್ತು ಎಂದು ಇಲಾಖೆ ತಿಳಿಸಿದೆ.

ಇದೇ ಏಪ್ರಿಲ್‌ನಲ್ಲಿ ವಾಡಿಕೆಯ (39.2 ಮಿ.ಮೀ.) ಮಳೆಯಾಗಲಿದೆ. ವಾಯವ್ಯ, ಕೇಂದ್ರ ಹಾಗೂ ಪರ್ಯಾಯ ದ್ವೀಪದ ಕೆಲವು ಭಾಗಗಳಲ್ಲಿ ತುಸು ಹೆಚ್ಚು ಮಳೆಯಾಗಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ಮುಂಗಾರು ಪೂರ್ವ ಅಧಿಕ ಮಳೆಯಿಂದಾಗಿ ಉತ್ತರ ಪ್ರದೇಶ, ಪಂಜಾಬ್, ಮಹಾರಾಷ್ಟ್ರದ ಕೆಲವೆಡೆ ಬೆಳೆ ನಾಶವಾಗಿದೆ.

ಅಕಾಲಿಕ ಮಳೆ ಹಾಗೂ ಗಾಳಿಯಿಂದ ದೇಶದಲ್ಲಿ ಶೇ 20ರಷ್ಟು ಮಾವಿನ ಫಸಲಿಗೆ ಹಾನಿಯಾಗಿದೆ ಎಂದು ಐಸಿಎಆರ್ ಹಿರಿಯ ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

ರಾಮೋತ್ಸವ ವಿಶೇಷ

ಶ್ರೀರಾಮೋತ್ಸವ: ಶ್ರೀಸೀತಾರಾಮ ಕಲ್ಯಾಣ, ಸಂಗೀತ: ಮೈಥಿಲಿ ಮಂಡ್ಯಂ, ಕೊಳಲು: ಪವನ್ ಮಂಡ್ಯಂ, ಭರತನಾಟ್ಯ: ಕೈಶಿಕಿ ನಾಟ್ಯವಾಹಿನಿಯ ವಿದ್ಯಾರ್ಥಿಗಳು, ನಿರ್ದೇಶನ: ಮಾಲಾ ಶಶಿಕಾಂತ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಸೇವಾ ಮಂಡಳಿ, ರಾಜಾಜಿನಗರ, ಬೆಳಿಗ್ಗೆ 10ರಿಂದ

ಶ್ರೀರಾಮೋತ್ಸವ ಕಾರ್ಯಕ್ರಮ: ಬೆಳಿಗ್ಗೆ 8: ಶ್ರೀರಾಮ ಪಟ್ಟಾಭಿಷೇಕ, ಶ್ರೀರಾಮಾಯಣ ಪಾರಾಯಣ, ಗಂಗಾಪೂಜೆ, ಅಭಿಷೇಕ, ಅಲಂಕಾರ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಶ್ರೀರಾಮ ದೇವರ ಅಡ್ಡಪಲ್ಲಕ್ಕಿ ಉತ್ಸವ, ಆಯೋಜನೆ: ಸನಾತನ ಭಕ್ತ ಮಂಡಳಿ ಟ್ರಸ್ಟ್, ಸ್ಥಳ: ಕೋದಂಡರಾಮ ದೇವಸ್ಥಾನದ ರಸ್ತೆ, ವಿಜಯನಗರ, ಸಂಜೆ 6.30

ಶ್ರೀರಾಮೋತ್ಸವ: ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ:ಸ್ಮೃತಿ ಭಾಸ್ಕರ್, ಪಿಟೀಲು: ಕಾರ್ತಿಕೇಯ ರಾಮಚಂದ್ರ, ಮೃದಂಗ: ವಿನಯ್ ಎಂ. ನಾಗರಾಜನ್, ಖಂಜೀರಾ: ಹರಿಶ್ಚಂದ್ರ ಎಂ.ಜಿ., ‘ಕೃಷ್ಣ ಕಾರುಣ್ಯ’ ಪ್ರವಚನ ಮಾಲಿಕೆ: ಪಾವಗಡ ಪ್ರಕಾಶರಾವ್, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಆರ್. ಕೆ. ಪದ್ಮನಾಭ, ಪಿಟೀಲು: ನಳಿನಾ ಮೋಹನ್, ಮೃದಂಗ: ಸಿ. ಚೆಲುವರಾಜು, ವ್ಯಾಸವಿಠ್ಠಲ, ಆಯೋಜನೆ ಮತ್ತು ಸ್ಥಳ: ಶ್ರೀರಾಮಮಂದಿರಂ ಟ್ರಸ್ಟ್, ನರಸಿಂಹರಾಜ ಕಾಲೊನಿ, ಸಂಜೆ 4.30ರಿಂದ

30ನೇ ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಅಕ್ಷತಾ ರುದ್ರಪಟ್ಟಣ, ಪಿಟೀಲು: ಸಿ.ವಿ. ಶ್ರುತಿ, ಮೃದಂಗ: ನಂದನ್ ಕಶ್ಯಪ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 4.15

ಶ್ರೀರಾಮ ನವಮಿ ಉತ್ಸವ: ಗಾಯನ: ಕಾರ್ತಿಕ್ ಎಂ.ಎ., ಪಿಟೀಲು: ಎಚ್. ವಿ. ರಘುರಾಮ್, ಮೃದಂಗ: ಫಣೀಂದ್ರ ಭಾಸ್ಕರ್, ಖಂಜಿರ: ಕಾರ್ತಿಕ್ ಆರ್., ಆಯೋಜನೆ: ವೈಯಾಲಿ ಕಾವಲ್ ಎಕ್ಸ್‌ಟೆನ್ಷನ್ ಅಸೋಸಿಯೇಷನ್, ಸ್ಥಳ: ಶ್ರೀರಾಮ ದೇವಸ್ಥಾನ, ವೈಯಾಲಿ ಕಾವಲ್, ಸಂಜೆ 6.30

ರಾಮನವಮಿ ಕಾರ್ಯಕ್ರಮ: ಗಾಯನ: ಚಿಂತಲಪಲ್ಲಿ ವಿ. ಶ್ರೀನಿವಾಸ್, ಪಿಟೀಲು: ಎಂ.ಎನ್. ಸತ್ಯನಾರಾಯಣ, ಮೃದಂಗ: ಎ. ಶ್ರೀನಿವಾಸ್, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30


ಶ್ರೀರಾಮನವಮಿ ಸಂಗೀತೋತ್ಸವ: ಗಾಯನ: ಸಂದೀಪ್ ನಾರಾಯಣ್, ಪಿಟೀಲು: ಮತ್ತೂರು ಶ್ರೀನಿಧಿ, ಮೃದಂಗ: ತುಮಕೂರು ರವಿಶಂಕರ್, ಘಟ: ಗಿರಿಧರ ಉಡುಪ, ಆಯೋಜನೆ: ಶೇಷಾದ್ರಿಪುರ ರಾಮಸೇವಾ ಸಮಿತಿ, ಸ್ಥಳ: ರಾಷ್ಟ್ರಕವಿ ಕುವೆಂಪು ರಂಗಮಂದಿರ, ಶೇಷಾದ್ರಿಪುರ ಕಾಲೇಜಿನ ಆವರಣ, ಶೇಷಾದ್ರಿಪುರ, ಸಂಜೆ 6.30

ಶ್ರೀರಾಮೋತ್ಸವ: ‘ನವರಸ ರಾಮಾಯಣ’ ವ್ಯೂಹ ಸಂಸ್ಥೆಯಿಂದ ನೃತ್ಯ ರೂಪಕ, ಆಯೋಜನೆ ಮತ್ತು ಸ್ಥಳ: ಜಯರಾಮ ಸೇವಾ ಮಂಡಳಿ, ಜಯನಗರ, ಸಂಜೆ 6.30



ಶ್ರೀರಾಮ ನವಮಿ ಸಂಗೀತೋತ್ಸವ: ಸಂಗೀತ ಕಛೇರಿ: ಕುಮಾರೇಶ್ ಆರ್., ಜಯಂತಿ ಕುಮಾರೇಶ್, ಕೆ.ಯು. ಜಯಚಂದ್ರರಾವ್, ಗಿರಿಧರ್ ಉಡುಪ, ಪ್ರಮಥ್ ಕಿರಣ್, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ‘ಪ್ರಜಾವಾಣಿ’, ಸ್ಥಳ: ಕೋಟೆ ಹೈಸ್ಕೂಲ್ ಆವರಣ, ಚಾಮರಾಜಪೇಟೆ, ಸಂಜೆ 6.30ರಿಂದ

‘ಬಾಲ ಕಾಂಡ’ ನೃತ್ಯ ಪ್ರದರ್ಶನ: ನಿರ್ದೇಶನ: ರಘುನಂದನ್ ಎಸ್., ಸಾಹಿತ್ಯ: ಎನ್.ಎಸ್.ವಿ. ಪ್ರಸಾದ್, ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮಾ, ಸೀತಾ ಗುರುಪ್ರಸಾದ್, ಆಯೋಜನೆ: ಕೇಶವ ಕಾಲೇಜ್ ಆಫ್ ಡಾನ್ಸ್ ಆ್ಯಂಡ್ ಮ್ಯೂಸಿಕ್, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10.30



ರಘುನಂದನ್ ಎಸ್.

‘ವಿಶ್ವ ಆಟಿಸಂ ದಿನ’ದ ಅಂಗವಾಗಿ ವಾಕಥಾನ್: ಆಯೋಜನೆ: ಸಂವಾದ್ ಫೌಂಡೇಷನ್, ಸ್ಥಳ: ಆರ್.ಎಂ.ಝಡ್ ಗ್ಯಾಲೇರಿಯಾ ಮಾಲ್, ಯಲಹಂಕ, ಬೆಳಿಗ್ಗೆ 8ರಿಂದ

ಪೊಲೀಸ್ ಧ್ವಜ ದಿನಾಚರಣೆ: ಅತಿಥಿಗಳು: ವಂದಿತಾ ಶರ್ಮಾ, ರಜನೀಶ್ ಗೋಯೆಲ್, ಆಯೋಜನೆ: ಪೊಲೀಸ್ ಇಲಾಖೆ, ಸ್ಥಳ: ಕೆ.ಎಸ್.ಆರ್. ಪಿ. ಪರೇಡ್ ಮೈದಾನ, ಕೋರಮಂಗಲ, ಬೆಳಿಗ್ಗೆ 8

ಸಂಗೀತ ಶಾಲೆಯ ವಾರ್ಷಿಕ ಸಮಾರಂಭ: ಅತಿಥಿ: ಎಸ್.ಆರ್. ವಿಶ್ವನಾಥ್, ಊಂಛವೃತ್ತಿ, ಸಂಗೀತ, ಕೊಳಲು: ಎಚ್. ಎಸ್. ವೇಣುಗೋಪಾಲ್, ಪಿಟೀಲು: ಜೆ.ಕೆ. ಶ್ರೀಧರ್, ಮೃದಂಗ: ಎನ್. ವಾಸುದೇವ. ಘಟ: ಬಿ.ಎಸ್. ರಘುನಂದನ್, ಆಯೋಜನೆ: ಶ್ರೀವಾಣಿ ಸಂಗೀತ ಕಲಾ ಶಾಲೆ, ಸ್ಥಳ: ಬಿಲ್ವ ವಿನಾಯಕ ದೇವಸ್ಥಾನ, ಯಲಹಂಕ, ಬೆಳಿಗ್ಗೆ 8ರಿಂದ

ಆಶಾ ರಘು ಅವರ ‘ಚಿತ್ತರಂಗ’ ಕಾದಂಬರಿ ಬಿಡುಗಡೆ: ಶ್ರೀನಿವಾಸ ಪ್ರಭು, ಅತಿಥಿ: ಗಣೇಶ ಕಾಸರಗೋಡು, ಅಧ್ಯಕ್ಷತೆ: ಅಗ್ರಹಾರ ಕೃಷ್ಣಮೂರ್ತಿ, ಪುಸ್ತಕದ ಕುರಿತು: ಎಚ್.ಎಸ್. ಸತ್ಯನಾರಾಯಣ, ಉಪಸ್ಥಿತಿ: ಆಶಾ ರಘು, ಆಯೋಜನೆ: ಸಾಹಿತ್ಯ ಲೋಕ ಪಬ್ಲಿಕೇಷನ್ಸ್, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10.30

‘ಬೆಂಗಳೂರು–ಕನ್ನಡ ಸಂಸ್ಕೃತಿ ಮತ್ತು ಅಭಿವೃದ್ಧಿ’ ಕುರಿತು ವಿಚಾರ ಸಂಕಿರಣ: ಉದ್ಘಾಟನೆ: ಪಿ.ಜಿ.ಆರ್ ಸಿಂಧ್ಯ, ಅತಿಥಿಗಳು: ಎಂ. ನರಸಿಂಹ, ಜಿ.ನಾ. ಗೋಪಾಲಕೃಷ್ಣ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಉಪಸ್ಥಿತಿ: ಬೈರಮಂಗಲ ರಾಮೇಗೌಡ, ಆಯೋಜನೆ ಮತ್ತು ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್.ಆರ್. ಕಾಲೊನಿ, ಬೆಳಿಗ್ಗೆ 10.30

‘ಸುಮಂಗಲಾ ಎಸ್. ಮುಮ್ಮಿಗಟ್ಟಿ’ ಅವರಿಗೆ ನುಡಿನಮನ: ಪ್ರಸ್ತಾವನೆ ನುಡಿ: ವೈ.ಸಿ. ಕಮಲ, ಭಾಷಣಕಾರರು: ಎಚ್. ಆರ್. ಕೃಷ್ಣಮೂರ್ತಿ, ನುಡಿ ನಮನ: ವೆಂಕಟಶಿವಾ ರೆಡ್ಡಿ, ಎ.ಎಂ. ರಮೇಶ್, ವಸುಂಧರಾ ಭೂಪತಿ, ಸಂಗೀತಾ ಕಟ್ಟಿ, ಎಂ.ಎಸ್. ಸುರೇಶ್, ಗಿರೀಶ್ ಕಡ್ಲೇವಾಡ, ಸ್ಥಳ: ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

‘ತ್ಯಾಗರಾಜ ರಾಮಾಯಣ’: ರಕ್ಷಾ ಕಾರ್ತಿಕ್, ಅತಿಥಿಗಳು: ಎಂ.ಆರ್.ವಿ. ಪ್ರಸಾದ್, ಮಿನಲ್ ಪ್ರಭು, ಗಾಯನ: ಬಾಲಸುಬ್ರಹ್ಮಣ್ಯ ಶರ್ಮಾ, ಮೃದಂಗ: ಶ್ರೀಹರಿ ರಂಗಸ್ವಾಮಿ, ವೀಣಾ: ಶಂಕರ್ ರಾಮನ್, ಕೊಳಲು: ಜಯರಾಮ್ ಕಿಕ್ಕೇರಿ, ಪಿಟೀಲು: ಅರ್ಜುನ್, ರಿದಮ್ ಪ್ಯಾಡ್: ಡಿ.ವಿ. ಪ್ರಸನ್ನ ಕುಮಾರ್, ಆಯೋಜನೆ: ನಟನಂ, ಸ್ಥಳ: ನಾರಾಯಣ ಮಂದಿರ, ಕನ್ನಡ ಭವನ, ಕಲಾಸಿಪಾಳ್ಯ, ಸಂಜೆ 5

ರವಿ ಬೆಳಗೆರೆ ಉತ್ಸವ: ಉದ್ಘಾಟನೆ: ನಿಡಸಾಲೆ ಪುಟ್ಟಸ್ವಾಮಯ್ಯ, ಪ್ರಸ್ತಾವನೆ ನುಡಿ: ಯಶೋಮತಿ ರವಿ ಬೆಳಗೆರೆ, ಆಶಯ ಭಾಷಣ: ಶಶಿಕಲಾ ವಸ್ತ್ರದ, ಅತಿಥಿಗಳು: ಸಿದ್ಧರಾಮ ಹೊನ್ಕಲ್, ಮಲ್ಲಿಕಾ ಘಂಟಿ, ಆಯೋಜನೆ: ರವಿ ಬೆಳಗೆರೆ ಸಾಹಿತ್ಯ ಹಾಗೂ ಸಾಂಸ್ಕೃತಿಕ ಪರಿಷತ್ತು, ಸ್ಥಳ: ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ 2ನೇ ಹಂತ, ಸಂಜೆ 5

ಸಂಗೀತ ಕಾರ್ಯಕ್ರಮ: ಅರ್ಪಣಾ ಮುಕುಂದ್, ಪಿಟೀಲು: ಭಾರದ್ವಾಜ್, ಮೃದಂಗ: ಭರತ್, ಘಟ: ಪ್ರಣವ್ ಭಾರದ್ವಾಜ್, ಆಯೋಜನೆ ಮತ್ತು ಸ್ಥಳ: ಕಲ್ಯಾಣ ರಾಮಚಂದ್ರಸ್ವಾಮಿ ದೇವಸ್ಥಾನದ ಆವರಣ, ಬನಶಂಕರಿ 3ನೇ ಹಂತ, ಸಂಜೆ 6.30



ಅರ್ಪಣಾ ಮುಕುಂದ್

ಅಹಿಂಸಾ ಓಟ: ಚಾಲನೆ: ಥಾವರಚಂದ್ ಗೆಹಲೋತ್, ಅತಿಥಿಗಳು: ಲೆಹರ್ ಸಿಂಗ್ ಸಿರೋಯಾ, ಶಾಲಿನಿ ರಜನೀಶ್, ಆಯೋಜನೆ: ಜೈನ್ ಇಂಟರ್‌ನ್ಯಾಷನಲ್ ಟ್ರೇಡ್ ಆರ್ಗನೈಸೇಷನ್, ಸ್ಥಳ: ಸೇಂಟ್ ಜೋಸೆಫ್ ಶಾಲಾ ಮೈದಾನ, ವಿಠ್ಠಲ್ ಮಲ್ಯ ರಸ್ತೆ, ಸಂಜೆ 6.15

‘ಪ್ರಕ್ಷುಬ್ಧ ರಾಧೇಯ’ ಏಕವ್ಯಕ್ತಿ ತಾಳಮದ್ದಳೆ: ಪ್ರಸ್ತುತಿ: ದಿವಾಕರ ಹೆಗಡೆ ಕೆರೆಹೊಂಡ, ಭಾಗವತರು: ಅನಂತ ಹೆಗಡೆ ದಂತಳಿಗೆ, ಮದ್ದಳೆ: ನರಸಿಂಹ ಭಟ್ ಹಂಡ್ರಮನೆ, ಆಯೋಜನೆ: ಅಖಿಲ ಹವ್ಯಕ ಮಹಾಸಭಾ, ಸ್ಥಳ: ಹವ್ಯಕ ಭವನ, ಮಲ್ಲೇಶ್ವರ, ಸಂಜೆ 7

ಮುತ್ಯಾಲಮ್ಮ ದೇವಿಯ ರಥೋತ್ಸವ: ಮಂದಾಸನೋತ್ಸವ, ಆಯೋಜನೆ ಮತ್ತು ಸ್ಥಳ: ಮುತ್ಯಾಲಮ್ಮ ದೇವಿ ಟೆಂಪಲ್ ಟ್ರಸ್ಟ್, ಕೆ ಸ್ಟ್ರೀಟ್ ಸೆಪ್ಪಿಂಗ್ ರಸ್ತೆ, ಶಿವಾಜಿನಗರ, ಸಂಜೆ 7

‘ಮಣಿಬೆನ್’ ನಾಟಕ ಪ್ರದರ್ಶನ: ರಚನೆ: ಕೆ.ಎಸ್. ರಂಗೇಗೌಡ, ನಿರ್ದೇಶನ: ಜೋಸೆಫ್ ಜಾನ್, ಆಯೋಜನೆ: ಸುಸ್ಥಿರ ಪ್ರತಿಷ್ಠಾನ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 7



ಭುವನೇಶ್ವರಿ ಹೆಗಡೆ

‘ಟಿ. ಸುನಂದಮ್ಮ ಪ್ರಶಸ್ತಿ’ ಪ್ರದಾನ, ‘ಟಿ. ಸುನಂದಮ್ಮ ಸಾಹಿತ್ಯ ಸಂಪುಟ–3’ ಮತ್ತು ‘ನಾನು ಕಂಡಂತೆ ಟಿ. ಸುನಂದಮ್ಮ’ ಪುಸ್ತಕಗಳ ಬಿಡುಗಡೆ: ಪ್ರಶಸ್ತಿ ಪ್ರದಾನ: ಎಂ.ಎಸ್. ನರಸಿಂಹಮೂರ್ತಿ, ಪ್ರಶಸ್ತಿ ಪುರಸ್ಕೃತರು: ಭುವನೇಶ್ವರಿ ಹೆಗಡೆ, ಪುಸ್ತಕಗಳ ಬಿಡುಗಡೆ: ಡುಂಡಿರಾಜ್ ಮತ್ತು ಎಲ್.ವಿ. ಶಾಂತಕುಮಾರಿ, ಅಧ್ಯಕ್ಷತೆ: ಎಚ್.ಎಲ್. ಪುಷ್ಪ, ಉಪಸ್ಥಿತಿ: ಎಂ. ನರಸಿಂಹಮೂರ್ತಿ, ವಸುಂಧರಾ ಭೂಪತಿ, ಆರ್. ಪೂರ್ಣಿಮಾ, ಆಯೋಜನೆ: ಟಿ. ಸುನಂದಮ್ಮ ಸ್ಮಾರಕ ಪ್ರತಿಷ್ಠಾನ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ಪಾಣಿಗ್ರಹಣಕ್ಕೆ ಪೆರೋಲ್: ಕೈದಿ ಬಿಡುಗಡೆಗೆ ಹೈಕೋರ್ಟ್ ಆದೇಶ

ಜೈಲು ಕಂಬಿ ಹಿಂದೊಂದು ಪ್ರೇಮ್ ಕಹಾನಿ

• ಬಿ.ಎಸ್.ಷಣ್ಮುಖಪ್ಪ



ಬೆಂಗಳೂರು: 'ಪ್ರತಿಯೊಂದು ಜೈಲುಗಳ ಗೋಡೆಗಳನ್ನೂ ಅವಮಾನದ ಇಟ್ಟಿಗೆಗಳಿಂದ ಪೇರಿಸಲಾಗಿದೆ...!' ಎಂಬ ಪ್ರಖ್ಯಾತ ಐರಿಷ್ ಕವಿ ಆಸ್ಕರ್ ವೈಲ್ಡ್‌ನ ಕವಿತೆಯ ಸಾಲುಗಳನ್ನು ಉದ್ಧರಿಸುತ್ತಾ ಪ್ರೇಮ ಕಹಾನಿಯ ಆರ್ತನಾದಕ್ಕೆ ಮನಮಿಡಿದಿರುವ ಹೈಕೋರ್ಟ್; ಕೊಲೆ ಆರೋಪದಡಿ ಶಿಕ್ಷೆ ಅನುಭವಿಸುತ್ತಿರುವ ಕೈದಿಯೊಬ್ಬರ ಮದುವೆಗೆ 15 ದಿನಗಳ ಪೆರೋಲ್ ನೀಡುವಂತೆ ಸಕ್ಷಮ ಪ್ರಾಧಿಕಾರದ ಅಧಿಕಾರಿಗಳಿಗೆ ನಿರ್ದೇಶಿಸಿದೆ.

'ಕೈದಿ ಆನಂದನನ್ನು ನಾನು ಒಂಬತ್ತು ವರ್ಷಗಳಿಂದ ಮನದುಂಬಿ ಪ್ರೀತಿಸುತ್ತಿದ್ದೇನೆ. ಈಗ ಅವನನ್ನೇ ಮದುವೆಯಾಗಬೇಕು. ಆದ್ದರಿಂದ, ಇದಕ್ಕಾಗಿ ಅವಕಾಶ ಮಾಡಿಕೊಡುವಂತೆ ಜೈಲು ಅಧಿಕಾರಿಗಳಿಗೆ ನಿರ್ದೇಶಿಸಬೇಕು' ಎಂದು ಕೋಲಾರ ಜಿಲ್ಲೆಯ ದಿಣ್ಣೆ ಕೊತ್ತೂರಿನ ಜಿ.ನೀತಾ (30) ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ಪೀಠ ಪುರಸ್ಕರಿಸಿದೆ.

'ನನ್ನ ಪ್ರೀತಿಯ ಜೀವವಾದ ಕೈದಿ ಆನಂದನನ್ನು ಒಂದು ವೇಳೆ ಪೆರೋಲ್ ಮೇಲೆ ಬಿಡುಗಡೆ ಮಾಡದೇ ಹೋದಲ್ಲಿ ಒಂಬತ್ತು ವಸಂತಗಳ ನನ್ನ ನಿರ್ವ್ಯಾಜ ಪ್ರೇಮ ನಿಷ್ಫಲಗೊಳ್ಳುತ್ತದೆ. ಆಗ ಎರಗಬಹುದಾದ ವಿರಹದ ಸಂಕಟವನ್ನು ಹೇಗೆ ತಾನೇ ಅನುಭವಿಸಲಿ ಎಂಬ ಅರ್ಜಿದಾರರ ತಹತಹಿಕೆ ನ್ಯಾಯಯುತವಾಗಿಯೇ ಇದೆ. ತಮ್ಮ ಬೇಗುದಿಯನ್ನೆಲ್ಲಾ ಅವರು ಕೋರ್ಟ್‌ಗೆ ಮುಚ್ಚುಮರೆಯಿಲ್ಲದೆ ಬಿಚ್ಚುಮನಸ್ಸಿನಿಂದ ಪ್ರಸ್ತುತಪಡಿಸಿದ್ದಾರೆ. ಹೀಗಾಗಿ, ಈ ಅರ್ಜಿಯನ್ನು ತೆರೆದ ಹೃದಯದ ಶುದ್ಧಪ್ರೇಮ ಮತ್ತು ಮಾನವೀಯ ಅಂತಃಕರಣದ ನೆಲೆಯಲ್ಲಿ ಮನ್ನಿಸಲಾಗುತ್ತಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಅರ್ಜಿದಾರರ ಬೇಡುವಿಕೆಯನ್ನು ಪುಷ್ಟೀಕರಿಸಬಹುದಾದ ಬಾಂಬೆ ಹೈಕೋರ್ಟ್, ರಾಜಸ್ಥಾನ ಹೈಕೋರ್ಟ್ ಮತ್ತು ರಾಜ್ಯ ಹೈಕೋರ್ಟ್‌ನ ವಿಭಾಗೀಯ ನ್ಯಾಯಪೀಠಗಳ ಹಲವು ಪೂರ್ವನಿದರ್ಶನಗಳನ್ನು ಉಲ್ಲೇಖಿಸಿರುವ ನ್ಯಾಯಮೂರ್ತಿ ನಾಗಪ್ರಸನ್ನ, ಎದೆಗಿಳಿಯುವ ಪದಗುಚ್ಛಗಳ ಕಾವ್ಯಾತ್ಮಕ ಶೈಲಿಯ ಮೂಲಕ ಹದಿನಾಲ್ಕು ಪುಟಗಳಲ್ಲಿ ಕ್ಲುಪ್ತ ತೀರ್ಪು ಪ್ರಕಟಿಸಿದ್ದಾರೆ.

'ಪ್ರತಿಯೊಬ್ಬ ಸಂತನ ಜೀವನದಲ್ಲಿ ಒಂದು ಭೂತಕಾಲವಿದೆ ಹಾಗೂ ಎಲ್ಲ ಪಾಪಿಗಳಿಗೂ ಅವರದ್ದೇ ಆದ ಭವಿಷ್ಯ ಎಂಬುದೊಂದು ಇರುತ್ತದೆ. ಅಪರಾಧಿ ತನ್ನ ತಪ್ಪನ್ನು ಶುದ್ಧೀಕರಿಸಿಕೊಳ್ಳಲಿ ಎಂದೇ ಅವನನ್ನು ಜೈಲಿನಲ್ಲಿ ಕೈದಿಯಾಗಿ ಇರುವಂತೆ ಶಿಕ್ಷೆ ವಿಧಿಸಲಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಅವನೆಡೆಗಿನ ಮನುಷ್ಯತ್ವದ ಧೋರಣೆಯನ್ನು ಯಾವುದೇ ಕಲ್ಯಾಣ ರಾಜ್ಯದ ಸಮಾಜ ಕಡೆಗಣಿಸುವಂತಾಗಬಾರದು...' ಎಂದು ನ್ಯಾಯಪೀಠ ತನ್ನ ತೀರ್ಪಿನಲ್ಲಿ ವಿವರಿಸಿದೆ.

'ಅಪರಾಧಿಗೆ ಆನಂದನಿಗೆ (ಕೈದಿ ಸಂಖ್ಯೆ 11699) ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಿ ಇದೇ 5ರ ಮಧ್ಯಾಹ್ನದ ಒಳಗಾಗಿ 15 ದಿನಗಳ ಅವಧಿಗೆ ಬಿಡುಗಡೆ ಮಾಡಬೇಕು' ಎಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಬಂದಿಖಾನೆ ಡಿಐಜಿ ಹಾಗೂ ಪರಪ್ಪನ ಅಗ್ರಹಾರ ಕಾರಾಗೃಹದ ಮುಖ್ಯ ಸೂಪರಿಂಟೆಂಡೆಂಟ್ ಅವರಿಗೆ ಆದೇಶಿಸಲಾಗಿದೆ. ಅರ್ಜಿದಾರರಾದ ನೀತಾ ಮತ್ತು ಆನಂದನ ತಾಯಿ ರತ್ನಮ್ಮ ಅವರ ಪರವಾಗಿ ವಕೀಲ ಕೆ. ರಾಘವೇಂದ್ರ ಗೌಡ ಹಾಗೂ ರಾಜ್ಯ ಪ್ರಾಸಿಕ್ಯೂಷನ್ ಪರವಾಗಿ ಎಂ.ವಿನೋದ್ ಕುಮಾರ್ ವಾದ ಮಂಡಿಸಿದ್ದರು.

ಪ್ರಕರಣವೇನು?: ಸ್ಥಿರಾಸ್ತಿ ವ್ಯಾಜ್ಯವೊಂದಕ್ಕೆ ಸಂಬಂಧಿಸಿದಂತೆ 2015ರ ಆ. 16ರಂದು ಮಾಸ್ತಿ ಹೋಬಳಿಯ ನಾಗದೇನಹಳ್ಳಿಯಲ್ಲಿ ನಡೆದಿದ್ದ ವ್ಯಕ್ತಿಯೊಬ್ಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಆನಂದ (ಘಟನೆ ನಡೆದಾಗ 21 ವರ್ಷ) ಅವರನ್ನು ಮಾಸ್ತಿ ಠಾಣೆ ಪೊಲೀಸರು 2015ರ ಆ. 17ರಂದು ಬಂಧಿಸಿದ್ದರು. ನಂತರ ಸೆಷನ್ಸ್ ನ್ಯಾಯಾಲಯ 2019ರಲ್ಲಿ ಆತನಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಇದನ್ನು ಪ್ರಶ್ನಿಸಲಾದ ಮೇಲ್ಮನವಿಯಲ್ಲಿ ಹೈಕೋರ್ಟ್ ವಿಭಾಗೀಯ ನ್ಯಾಯಪೀಠವು ಶಿಕ್ಷೆಯ ಪ್ರಮಾಣವನ್ನು 10 ವರ್ಷಗಳಿಗೆ ಇಳಿಸಿದೆ.



'ಪ್ರಜಾಪ್ರಭುತ್ವ ಚುನಾವಣೆಗೆ ಸೀಮಿತ'

ಪ್ರಣಾಳಿಕೆ ಪ್ರಸ್ತುತಿ ಕಾರ್ಯಕ್ರಮ: ಇತಿಹಾಸಕಾರ ರಾಮಚಂದ್ರ ಗುಹಾ ಕಳವಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇತ್ತೀಚಿನ ಕೆಲ ವರ್ಷಗಳಲ್ಲಿ ನಮ್ಮ ಪ್ರಜಾಪ್ರಭುತ್ವವು ಚುನಾವಣೆಗಳಿಗಷ್ಟೇ ಸೀಮಿತವಾಗಿದೆ. ಇದು ಅತ್ಯಂತ ಕಳವಳಕಾರಿ ಬೆಳವಣಿಗೆ' ಎಂದು ಇತಿಹಾಸಕಾರ ರಾಮಚಂದ್ರ ಗುಹಾ ಹೇಳಿದರು.

ನಗರದ ಸಿವಿಕ್ ಸೊಸೈಟಿ ಫೋರಂನ ಪ್ರಣಾಳಿಕೆ ಪ್ರಸ್ತುತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಈ ರೀತಿಯಲ್ಲಿ ರಾಜಕೀಯ ಪಕ್ಷಗಳು ಜನರೊಂದಿಗೆ ನೇರವಾಗಿ ಸಂವಾದಿಸುವುದರಿಂದ ಪ್ರಜಾಪ್ರಭುತ್ವವನ್ನು ಹೆಚ್ಚು ಕ್ರಿಯಾಶೀಲವಾಗಿ ಇರಿಸಲು ಸಾಧ್ಯ. ಇದು ಚುನಾವಣೆಗೆ ಸೀಮಿತವಾಗಿರಬಾರದು. ಮುಂದೆಯೂ ನಿರಂತರವಾಗಿರಬೇಕು' ಎಂದರು.



ಬೆಂಗಳೂರು ಸಿವಿಲ್ ಸೊಸೈಟಿ ಫೋರಂ ಶನಿವಾರ ಹಮ್ಮಿಕೊಂಡಿದ್ದ ಪ್ರಣಾಳಿಕೆ ಪ್ರಸ್ತುತಿ ಕಾರ್ಯಕ್ರಮದಲ್ಲಿ ಇತಿಹಾಸಕಾರ ರಾಮಚಂದ್ರ ಗುಹಾ ಮಾತನಾಡಿದರು. ಸಿವಿಕ್ ಬೆಂಗಳೂರು ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್, ಸಿಪಿಎಂ ರಾಜ್ಯ ಮಂಡಳಿ ಸದಸ್ಯ ಎಸ್.ವೈ. ಗುರುಶಾಂತ್, ಎಎಪಿ ಮುಖಂಡ ಅಶ್ವಿನ್ ಮಹೇಶ್ ಇದ್ದರು. – ಪ್ರಜಾವಾಣಿ ಚಿತ್ರ

28 ನಾಗರಿಕ ಸಂಘಟನೆಗಳು ಒಗ್ಗೂಡಿ ಜನರ ಪ್ರಣಾಳಿಕೆ ಪ್ರಸ್ತುತಿ ಹಮ್ಮಿಕೊಂಡಿದ್ದವು. ಕಾಂಗ್ರೆಸ್, ಸಿಪಿಎಂ ಮತ್ತು ಆಮ್ ಆದ್ಮಿ ಪಕ್ಷದ ಪ್ರತಿನಿಧಿಗಳು ಸಭೆಯಲ್ಲಿದ್ದರು. ಬಿಜೆಪಿ ಹಾಗೂ ಜೆಡಿಎಸ್ ಸಭೆಯಿಂದ ದೂರ ಉಳಿದಿದ್ದವು. ಈ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಗುಹಾ, 'ಬಿಜೆಪಿ ಮತ್ತು ಜೆಡಿಎಸ್ ನಾಯಕರು ಸಮಾಜದ ಅಭಿಪ್ರಾಯಗಳ ಕುರಿತು ಭಿನ್ನಾಭಿಪ್ರಾಯ ಹೊಂದಿರುವುದರ ಸಂಕೇತ ಇದು' ಎಂದರು.

ಕಾಂಗ್ರೆಸ್ ವಕ್ತಾರ ಆರ್. ಧರ್ಮಸೇನ ಮಾತನಾಡಿ, 'ನಮ್ಮ ಪಕ್ಷವೂ ಸೇರಿದಂತೆ ಯಾವ ಪಕ್ಷವೇ ಅಧಿಕಾರದಲ್ಲಿರಲಿ. ಭರವಸೆಗಳನ್ನು ಈಡೇರಿಸದಿದ್ದರೆ ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸಬೇಕು' ಎಂದು ಹೇಳಿದರು.

ಎಎಪಿ ಪ್ರತಿನಿಧಿ ಅಶ್ವಿನ್ ಮಹೇಶ್ ಮಾತನಾಡಿ, 'ಫೋರಂ ನೀಡಿರುವ ಪ್ರಣಾಳಿಕೆಯಲ್ಲಿರುವ ಶೇಕಡ 85ರಷ್ಟು ಅಂಶಗಳು ರಾಜಕೀಯ ಪಕ್ಷಗಳ ಪ್ರಣಾಳಿಕೆಯಲ್ಲೂ ಇವೆ. ಮುಂದೇನು ಮಾಡುತ್ತಾರೆ ಎನ್ನುವುದರ ಜತೆ ಈವರೆಗೆ ಮಾಡಿರುವ ಕೆಲಸಗಳ ಬಗ್ಗೆಯೂ ಪ್ರಶ್ನಿಸಬೇಕು' ಎಂದು ತಿಳಿಸಿದರು.

ಸಿಪಿಎಂ ರಾಜ್ಯ ಮಂಡಳಿ ಸದಸ್ಯ ಎಸ್.ವೈ. ಗುರುಶಾಂತ್ ಮಾತನಾಡಿ, 'ಕೇಂದ್ರ ಸರ್ಕಾರವು ರಾಜ್ಯ ಸರ್ಕಾರದ ಅಧಿಕಾರಗಳನ್ನು ಆಕ್ರಮಿಸುತ್ತಿರುವುದರ ವಿರುದ್ಧ ಹೋರಾಟ ಬಲಗೊಳ್ಳಬೇಕು' ಎಂದು ಹೇಳಿದರು.

ಸಿವಿಕ್ ಬೆಂಗಳೂರು ಸಂಸ್ಥೆಯ ಕಾರ್ಯನಿರ್ವಾಹಕ ಟ್ರಸ್ಟಿ ಕಾತ್ಯಾಯಿನಿ ಚಾಮರಾಜ್ ಉಪಸ್ಥಿತರಿದ್ದರು.

ಐಪಿಎಲ್: ವಾಹನ ನಿಲುಗಡೆ ನಿರ್ಬಂಧ

ಬೆಂಗಳೂರು: ನಗರದ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಏ. 2ರಂದು ಟಾಟಾ ಐಪಿಎಲ್ ಕ್ರಿಕೆಟ್ ಪಂದ್ಯ ನಡೆಯಲಿದ್ದು, ಸುಗಮ ಸಂಚಾರಕ್ಕಾಗಿ ಹಲವು ರಸ್ತೆಗಳಲ್ಲಿ ಸಾರ್ವಜನಿಕರ ವಾಹನ ನಿಲುಗಡೆ ನಿರ್ಬಂಧಿಸಲಾಗಿದೆ.

ಪತ್ರಿಕಾ ಪ್ರಕಟಣೆ ನೀಡಿರುವ ಸಂಚಾರ ಪೊಲೀಸರು, 'ಕ್ವೀನ್ಸ್ ರಸ್ತೆ, ಎಂ.ಜಿ. ರಸ್ತೆ, ರಾಜಭವನ ರಸ್ತೆ, ಸೆಂಟ್ರಲ್ ಸ್ಟ್ರೀಟ್, ಸೇಂಟ್ ಮಾರ್ಕ್ಸ್ ರಸ್ತೆ, ಮ್ಯೂಸಿಯಂರಸ್ತೆ, ಕಸ್ತೂರಬಾ ರಸ್ತೆ, ವಿಧಾನಸೌಧ–ಹೈಕೋರ್ಟ್ ಎದುರಿನ ರಸ್ತೆ, ಟ್ರಿನಿಟಿ ರಸ್ತೆ, ಲ್ಯಾವೆಲ್ಲೆ ರಸ್ತೆ, ವಿಠ್ಠಲ್ ಮಲ್ಯ ರಸ್ತೆ, ನೃಪತುಂಗ ರಸ್ತೆಯಲ್ಲಿ ಸಾರ್ವಜನಿಕರು ವಾಹನ ನಿಲ್ಲಿಸಬಾರದು. ನಿಯಮ ಉಲ್ಲಂಘಿಸಿದರೆ ದಂಡ ವಿಧಿಸಲಾಗುವುದು' ಎಂದಿದ್ದಾರೆ.

'ಪಂದ್ಯ ವೀಕ್ಷಿಸಲು ಬರುವ ಜನ ತಮ್ಮ ವಾಹನಗಳನ್ನು ಸೇಂಟ್ ಜೋಸೆಫ್ ಇಂಡಿಯಾ ಸ್ಕೂಲ್ ಮೈದಾನ, ಯು.ಬಿ ಸಿಟಿ ಹಾಗೂ ಶಾಂತಿನಗರ ಬಿಎಂಟಿಸಿ ಬಸ್ ನಿಲ್ದಾಣದ ಪಾರ್ಕಿಂಗ್ ಜಾಗದಲ್ಲಿ ನಿಲ್ಲಿಸಬಹುದು. ಜೊತೆಗೆ, ಸಾರ್ವಜನಿಕರು ಮೆಟ್ರೊ ಹಾಗೂ ಬಸ್ ಬಳಸುವುದು ಉತ್ತಮ' ಎಂದು ಅವರೂ ತಿಳಿಸಿದ್ದಾರೆ.

ಮಹಾಸತಿ ಆಚರಣೆಯ ವಿವರವಿರುವ ಪ್ರಾಚೀನ ಶಿಲ್ಪ

11ನೇ ಶತಮಾನದ ಮಾಸ್ತಿಗಲ್ಲು ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಎಚ್.ಎ.ಎಲ್. ಸಮೀಪದ ದೊಡ್ಡನೆಕ್ಕುಂದಿಯಲ್ಲಿ ಗಂಗರ ಕಾಲದ 11ನೇ ಶತಮಾನದ ಮಹಾಸತಿ ಆಚರಣೆಯ ಅಪರೂಪದ ಮಾಸ್ತಿಗಲ್ಲು ಪತ್ತೆಯಾಗಿದೆ.

ರಾಜ್ಯ ಸರ್ಕಾರದ ಭಾಷಾಂತರ ನಿರ್ದೇಶನಾಲಯದ ಉಪನಿರ್ದೇಶಕಿ ಸ್ಮಿತಾ ರೆಡ್ಡಿ ಅವರು ಈ ಮಾಸ್ತಿಗಲ್ಲನ್ನು ಶೋಧಿಸಿದ್ದಾರೆ.

'ಮಹಾಸತಿ ಅಥವಾ ಮಾಸ್ತಿ ಶಿಲ್ಪಗಳು ಕರ್ನಾಟಕದಾದ್ಯಂತ ಹತ್ತನೇ ಶತಮಾನದಿಂದಲೇ ದೊರೆಯುತ್ತವೆ. ಬೆಂಗಳೂರು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಸಹ ಹನ್ನೆರಡನೆ ಶತಮಾನದಿಂದ ಹೆಚ್ಚಾಗಿ ಕಂಡುಬರುತ್ತವೆ. ಆದರೆ, ಮಹಾಸತಿ ಆಚರಣೆಯನ್ನು ಸೂಚಿಸುವಂತಹ ಇಂತಹ ಶಿಲ್ಪಗಳು ಕರ್ನಾಟಕದಲ್ಲಿ ತುಂಬಾ ವಿರಳ. ಹೆಗ್ಗಡದೇವನಕೋಟೆಯ ಬೆಳತೂರಿನ ದೇಕಬ್ಬೆಯ ಶಿಲ್ಪವನ್ನು ಬಿಟ್ಟರೆ, ಕರ್ನಾಟಕದ ದಕ್ಷಿಣ ಭಾಗದಲ್ಲಿ ಮಹಾಸತಿ ಆಚರಣೆ ವಿವರವನ್ನು ಒಳಗೊಂಡಿರುವ ಪ್ರಾಚೀನ ಶಿಲ್ಪ ಇದಾಗಿದೆ' ಎಂದು ಸ್ಮಿತಾ ರೆಡ್ಡಿ ತಿಳಿಸಿದ್ದಾರೆ.

'ಇದು ಬೆಂಗಳೂರಿನಲ್ಲಿ ದೊರೆತಂತಹ ಮೊಟ್ಟ ಮೊದಲ ಮಾಸ್ತಿಗಲ್ಲಾಗಿದೆ. ಕರ್ನಾಟಕದಲ್ಲಿ ಸತಿ ಆಚರಣೆಯನ್ನು ಚಿತ್ರಿಸಿರುವ ಕ್ರಿ.ಶ. 1058ರ ದೇಕಬ್ಬೆ ಶಾಸನಕ್ಕಿಂತಲೂ ಪ್ರಾಚೀನವಾದ ಮೊಟ್ಟ ಮೊದಲ ಶಾಸನವೆಂಬ ಹೆಗ್ಗಳಿಕೆಗೆ ಈ ಮಾಸ್ತಿಗಲ್ಲು ಪಾತ್ರವಾಗುತ್ತದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

'ಈ ಶಾಸನವು ದೊಡ್ಡನೆಕ್ಕುಂದಿಯ ಕೆರೆಯ ಸಮೀಪವಿದ್ದು, ಇತ್ತೀಚೆಗೆ ಕೆರೆಯನ್ನು ಪುನಶ್ಚೇತನಗೊಳಿಸುವಾಗ ಪತ್ತೆಯಾಗಿದೆ. ಸ್ಥಳೀಯರಾದ ರಾಧಾಕೃಷ್ಣ ರೆಡ್ಡಿ ಅವರು ಅದನ್ನು ದೇವಾಲಯದ ಬಳಿ ಸುರಕ್ಷಿತವಾಗಿಟ್ಟು, ಸಂರಕ್ಷಿಸಿದ್ದರು. ಈ ಶಿಲ್ಪದ ಶೋಧದಲ್ಲಿ ಸ್ಥಳೀಯರಾದ ಎಸ್. ರಾಹುಲ್ ರೆಡ್ಡಿ, ಗೋಪಾಲ ರೆಡ್ಡಿ ನೆರವಾಗಿದ್ದಾರೆ' ಎಂದು ಹೇಳಿದ್ದಾರೆ.



ಪತ್ತೆಯಾದ ಮಾಸ್ತಿಗಲ್ಲು

> ದೊಡ್ಡನೆಕ್ಕುಂದಿಯಲ್ಲಿ ಅಪರೂಪದ ಮಾಸ್ತಿಗಲ್ಲು ಪತ್ತೆಯಾಗಿದೆ. ಅದರಲ್ಲಿ ಬರವಣಿಗೆಯಿಲ್ಲ. 10ನೇ ಶತಮಾನದ ಕೊನೆ, 11ನೇ ಶತಮಾನದ ಆರಂಭ ಎಂದು ಗುರುತಿಸಲಾಗಿದೆ.
> **ದೇವರಕೊಂಡಾ ರೆಡ್ಡಿ,** ಶಾಸನ ತಜ್ಞ

ಅನುಗಮನ ಪ್ರಕಾರ: 'ಮಹಾಸತಿ ಆಚರಣೆಯಲ್ಲಿ ಸಹಗಮನ ಹಾಗೂ ಅನುಗಮನ ಎಂಬ ಎರಡು ವಿಧಾನಗಳಿವೆ. ಸಹಗಮನದಲ್ಲಿ ವೀರನು ಮರಣ ಹೊಂದಿದಾಗ ಅವನ ಸತಿಯೂ ಅವನೊಂದಿಗೆ ಮರಣ ಹೊಂದುತ್ತಾಳೆ. ವೀರನು ಯುದ್ಧರಂಗ ಅಥವಾ ಬೇರೆಲ್ಲೊ ಮರಣ ಹೊಂದಿದಾಗ, ಅವನ ಇಷ್ಟದ ವಸ್ತುವಿನೊಂದಿಗೆ ವೀರನ ಪತ್ನಿ ಚಿತೆಗೇರುವುದನ್ನು ಅನುಗಮನ ಎಂದು ಕರೆಯಲಾಗುತ್ತದೆ. ದೊಡ್ಡ ನೆಕ್ಕುಂದಿಯಲ್ಲಿ ಪತ್ತೆಯಾದ ಮಾಸ್ತಿಗಲ್ಲು ಅನುಗಮನ ಪ್ರಕಾರಕ್ಕೆ ಸೇರುತ್ತದೆ' ಎಂದು ಸ್ಮಿತಾ ರೆಡ್ಡಿ ತಿಳಿಸಿದ್ದಾರೆ.


'ಈ ಮಾಸ್ತಿಗಲ್ಲಿನಲ್ಲಿ ಮೂರು ಹಂತಗಳಲ್ಲಿ ಶಿಲ್ಪವಿದ್ದು, ಮೊದಲ ಹಂತದಲ್ಲಿ ವಾದ್ಯಗಳ ಸಮೇತ ಮೆರವಣಿಗೆಯಲ್ಲಿ ಬಂದಿರುವ ಸತಿ ಜ್ವಲಿಸುತ್ತಿರುವ ಅಗ್ನಿಕುಂಡದಲ್ಲಿ ಕುಳಿತಿದ್ದಾಳೆ. ಆಕೆ ವೀರನೊಟ್ಟಿಗೆ ಸಹಗಮನ ಮಾಡಿಲ್ಲವೆಂಬುದಕ್ಕೆ ವೀರನ ಸಂಕೇತವಾಗಿ ಪಕ್ಕದಲ್ಲಿ ಕುದುರೆಯ ಶಿಲ್ಪವನ್ನು ಬಿಡಿಸಲಾಗಿದೆ. ಎರಡನೆಯ ಹಂತದಲ್ಲಿ ಪ್ರಧಾನವಾಗಿ ವೀರ ಮತ್ತು ಆತನ ಪತ್ನಿಯನ್ನು ಬಿಡಿಸಲಾಗಿದೆ. ವೀರ ಕೈಮುಗಿದುಕೊಂಡು ಕುಳಿತಿದ್ದು, ಅವನ ಬಲಭಾಗದಲ್ಲಿ ಪತ್ನಿಯು ಬಲಗೈಯಲ್ಲಿ ಮಂಗಲದ ಸಂಕೇತಗಳಾದ ಕನ್ನಡಿಯನ್ನು, ಇನ್ನೊಂದು ಕೈಯಲ್ಲಿ ಗಿಂಡಿಯಂತಹ ವಸ್ತುವನ್ನು ಹಿಡಿದುಕೊಂಡಿದ್ದಾಳೆ' ಎಂದು ಹೇಳಿದ್ದಾರೆ.

'ಮೂರನೆಯ ಹಂತದಲ್ಲಿ ಎಡ ಮತ್ತು ಬಲ ಭಾಗಗಳಲ್ಲಿ ಸಮಾನಾಂತರವಾಗಿ ವೀರನನ್ನು ಹಾಗೂ ಸತಿಯನ್ನು ಅಪ್ಸರೆಯರು ಪ್ರತ್ಯೇಕವಾಗಿ ಸ್ವರ್ಗಕ್ಕೆ ಕರೆದೊಯ್ಯುತ್ತಿರುವಂತೆ ಬಿಡಿಸಲಾಗಿದೆ. ಸಾಮಾನ್ಯವಾಗಿ ವೀರ ಮತ್ತು ಅವನ ಸತಿಯನ್ನು ಒಟ್ಟಿಗೆ ಸ್ವರ್ಗಕ್ಕೆ ಕರೆದೊಯ್ಯುವಂತೆ ಬಿಡಿಸುವುದು ಸಾಮಾನ್ಯ. ಆದರೆ, ಇಲ್ಲಿ ಅವರಿಬ್ಬರನ್ನೂ ಅಪ್ಸರೆಯರು ಪ್ರತ್ಯೇಕವಾಗಿ ಹೊತ್ತೊಯ್ಯುತ್ತಿರುವುದು ಈ ಶಿಲ್ಪದ ವಿಶೇಷ' ಎಂದು ತಿಳಿಸಿದ್ದಾರೆ.

ಚಿತ್ರಾವಳಿ



ನಗರದಲ್ಲಿ ಶನಿವಾರ ಕೋಟೆ ಹೈಸ್ಕೂಲ್ ಆವರಣದಲ್ಲಿ 'ಶ್ರೀರಾಮಸೇವಾ ಮಂಡಳಿ' ಆಯೋಜಿಸಿದ್ದ '85ನೇ ಶ್ರೀ ರಾಮನವಮಿ ಸಂಗೀತೋತ್ಸವ' ಕಾರ್ಯಕ್ರಮದಲ್ಲಿ ಹರೀಶ್ ಶಿವರಾಮಕೃಷ್ಣನ್ ಸಂಗೀತ ಪ್ರಸ್ತುತಪಡಿಸಿದರು –ಪ್ರಜಾವಾಣಿ ಚಿತ್ರ



ನಗರದಲ್ಲಿ ಶನಿವಾರ 'ಶ್ರೀ ಕೋದಂಡರಾಮಸ್ವಾಮಿ ದೇವಸ್ಥಾನ' ಮತ್ತು 'ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಶನ್' ಜಂಟಿಯಾಗಿ ಆಯೋಜಿಸಿದ್ದ 'ಶ್ರೀ ರಾಮನವಮಿಯ ರಾಷ್ಟ್ರೀಯ ವಿಷ್ಣು ಸಹಸ್ರನಾಮ ಮಹೋತ್ಸವ' ಕಾರ್ಯಕ್ರಮದಲ್ಲಿ ಕಮ್ಯುನಿಟಿ ಸೆಂಟರ್ ಸಮೂಹ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಕೆ.ಎಂ ನಾಗರಾಜು (ಎಡಗಡೆಯವರು) ವಿಷ್ಣು ಸಹಸ್ರನಾಮ ಇಂಗ್ಲಿಷ್ ಮತ್ತು ಕನ್ನಡ ಆವೃತ್ತಿಗಳನ್ನು ಲೋಕಾರ್ಪಣೆ ಮಾಡಿ 'ಗ್ಲೋಬಲ್ ವಿಷ್ಣು ಸಹಸ್ರನಾಮ ಸತ್ಸಂಗ ಫೆಡರೇಷನ್' ಸಂಸ್ಥಾಪಕ ಡಾ. ಅರಳುಮಲ್ಲಿಗೆ ಪಾರ್ಥಸಾರಥಿ (ಮಧ್ಯ) ಅವರಿಗೆ ಹಸ್ತಾಂತರಿಸಿದರು. ಎನ್.ಎಂ ರತ್ನಯ್ಯ ಶೆಟ್ಟಿ ಇದ್ದರು ಪ್ರಜಾವಾಣಿ ಚಿತ್ರ

ಸಾಹಿತ್ಯದ ಮೈಲುಗಲ್ಲು 'ಹಾಪ್‌ಕಿನ್ಸ್– ಬಸವಣ್ಣ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವೇಶ್ವರರು ವಿಶ್ವ ಕಂಡ ಅದ್ಭುತ ವಿಭೂತಿ ಪುರುಷ. ಸಾಮಾಜಿಕ ಕ್ರಾಂತಿಯ ಹರಿಕಾರ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಟ್ಟು ಸತ್ಯನಾರಾಯಣ ಹೇಳಿದರು.

ನಗರದ ಬಸವ ಸಮಿತಿಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಾಹಿತಿ ಬಸವರಾಜ ಡೋಣೂರ ಅವರ 'ದಿ ಪೊಯಟ್ರಿ ಆಫ್ ಜಿ.ಎಂ.ಹಾಪ್‌ಕಿನ್ಸ್ ಮತ್ತು ಬಸವಣ್ಣ: ಎ ಕಂಪ್ಯಾರಿಟಿವ್ ಸ್ಟಡಿ' ಕೃತಿಯನ್ನು ಬಿಡುಗಡೆ ಮಾಡಿ ಮಾತನಾಡಿದರು.

ವಿಶ್ವಾತ್ಮಕ ಸಂಗತಿಗಳನ್ನು ಒಳಗೊಂಡ ಬಸವರಾಜ ಡೋಣೂರರ ಈ ಕೃತಿ ಭಾರತೀಯ ಸಾಹಿತ್ಯದಲ್ಲಿ ಒಂದು ಮೈಲುಗಲ್ಲು. ಬಸವರಾಜ ಡೋಣೂರ ಒಳ್ಳೆಯ ಶಿಕ್ಷಕ, ಒಳ್ಳೆಯ ಲೇಖಕ ಮತ್ತು ಒಳ್ಳೆಯ ಆಡಳಿತಗಾರ ಆಗಿರುವ ಫಲವಾಗಿಯೇ ಇಂತಹ ಕೃತಿ ರಚಿಸಲು ಸಾಧ್ಯವಾಗಿದೆ. ಇದು ಭಾರತೀಯ ಭಾಷೆಗೆ ನೀಡಿದ ಬಹುದೊಡ್ಡ ಕೊಡುಗೆ ಎಂದರು.

> **ಪುಸ್ತಕ ಕುರಿತು**
> **ಕೃತಿ:** ದಿ ಪೊಯಟ್ರಿ ಆಫ್ ಜಿ.ಎಂ. ಹಾಪ್ ಕಿನ್ಸ್ ಮತ್ತು ಬಸವಣ್ಣ: ಎ ಕಂಪ್ಯಾರೆಟಿವ್ ಸ್ಟಡಿ
> **ಲೇಖಕರು:** ಬಸವರಾಜ ಡೋಣೂರ
> **ಪ್ರಕಾಶಕರು:** ಬಸವ ಸಮಿತಿ ಬೆಂಗಳೂರು
> **ಪುಟ:** ₹ 210
> **ಬೆಲೆ:** ₹ 250

ಕೇಂದ್ರ ಸಾಹಿತ್ಯ ಅಕಾಡೆಮಿ ಸದಸ್ಯ ಮನು ಬಳಿಗಾರ, 'ಡೋಣೂರ ಅವರು ಕೃತಿಯಲ್ಲಿ ಹಲವು ಒಳನೋಟಗಳನ್ನು ನೀಡಿದ್ದಾರೆ. ಇಬ್ಬರು ಮಹತ್ವದ ಕವಿಗಳು ಮತ್ತು ಅದ್ಯಾತ್ಮ ಪಿಪಾಸುಗಳ ಬಗ್ಗೆ ಹೊಸ ಹೊಳಹುಗಳನ್ನು ಕಟ್ಟಿಕೊಟ್ಟಿದ್ದಾರೆ. ಈ ಕೃತಿ ಕನ್ನಡಕ್ಕೆ ಅನುವಾದಗೊಳ್ಳುವ ಅಗತ್ಯವಿದೆ' ಎಂದರು.

ಕೃತಿ ರಚನೆಕಾರ ಬಸವರಾಜ ಡೋಣೂರ, '12ನೇ ಶತಮಾನದ ಬಸವಣ್ಣ, 16ನೇ ಶತಮಾನದ ಹಾಪ್‌ಕಿನ್ಸ್ ಸಾಹಿತ್ಯ, ಸಮಾಜ, ಸಂಸ್ಕೃತಿ, ಆಧ್ಯಾತ್ಮ ಮತ್ತು ಧರ್ಮದ ಬಗ್ಗೆ ಒಂದೇ ರೀತಿಯಲ್ಲಿ ಚಿಂತನೆ ಮಾಡುತ್ತಿದ್ದರು. ಭಾಷಿಕ, ತಾತ್ವಿಕ, ಆಧ್ಯಾತ್ಮಿಕ ಮತ್ತು ನೈತಿಕ ಸಾಮ್ಯಗಳು ಇವೆ. ಇದೊಂದು ತೌಲನಿಕ ಅಧ್ಯಯನ. ವಿಶ್ವ ಸಾಹಿತ್ಯದ ಅಧ್ಯಯನಕ್ಕೆ ಈ ಕೃತಿ ಸಹಾಯಕಾರಿಯಾಗಲಿದೆ' ಎಂದು ವಿವರಿಸಿದರು.

ಲೇಖಕರಾದ ವಿಕ್ರಂ ವಿಸಾಜಿ, ಎಚ್.ಎಸ್.ಪ್ರಕಾಶ್ ಕೃತಿ ಕುರಿತು ಮಾತನಾಡಿದರು. ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅಧ್ಯಕ್ಷತೆ ವಹಿಸಿದ್ದರು. ಕಲಬುರಗಿ ಬಸವಪೀಠದ ಸಂಯೋಜಕ ಡಾ.ಗಣಪತಿ ಶಿನ್ನೂರ ಇದ್ದರು.

ಸಮಾಜಮುಖಿ ಕಥಾಪುರಸ್ಕಾರ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಮಾಜಮುಖಿ ಪ್ರಕಾಶನವು 2023ನೇ ಸಾಲಿನ ವಾರ್ಷಿಕ ಕಥಾ ಸ್ಪರ್ಧೆಯ ಫಲಿತಾಂಶವನ್ನು ಘೋಷಿಸಿದೆ.

ದೀಪಾ ಹಿರೇಗುತ್ತಿ ಅವರ 'ಬಯಕೆ', ಎಂ.ನಾಗರಾಜ ಶೆಟ್ಟಿ ಅವರ 'ಮುಝಫರ್', ಶ್ರೀಹರ್ಷ ಸಾಲಿಮಠ ಅವರ 'ಹಲ್ಲೀರ ಮತ್ತು ರಂಗನಾಯಕಿ', ದೀಪ್ತಿ ಭದ್ರಾವತಿ ಅವರ 'ನಮ್ಮವರು' ಹಾಗೂ ಪ್ರೇಮಲತಾ ಬಿ. ಅವರ 'ಗೊಡ್ಡು' ಕಥೆ ಕಥಾ ಪುರಸ್ಕಾರಕ್ಕೆ ಆಯ್ಕೆಯಾಗಿವೆ. ಕಥಾ ಪುರಸ್ಕಾರವು ತಲಾ ₹ 5 ಸಾವಿರ ನಗದು ಒಳಗೊಂಡಿದೆ.

ನಂದಿನಿ ಹೆದ್ದುರ್ಗ, ಅನಿಲ್ ಟಿ. ಗುನ್ನಾಪುರ, ಸಂಜೋತಾ ಪುರೋಹಿತ, ಗೀತಾ ಕುಂದಾಪುರ, ಚಂದ್ರಪ್ರಭ ಕಠಾರಿ, ನಳಿನಿ ಭೀಮಪ್ಪ, ಆರ್.ಪವನ್‌ಕುಮಾರ್, ಪ್ರಕಾಶ್ ಪೊನ್ನಾಚಿ, ಸುಧಾ ಆಡುಕಳ, ಅಬ್ದುಲ್ ರಹಿಮಾನ್ ಬೀದರ್ ಕೋಟೆ, ಶ್ರೀದೇವಿ ಕೆರೆಮನೆ, ಆನಂದ ಕುಂಚನೂರು, ಸುಮಾ ರಮೇಶ್, ಭಾಗ್ಯಜ್ಯೋತಿ ಹಿರೇಮಠ ಹಾಗೂ ಮಿರ್ಜಾ ಬಷೀರ್ ಅವರ ಕತೆಗಳು ಸಮಾಜಮುಖಿ ವಾರ್ಷಿಕ ಕಥಾ ಸಂಕಲನಕ್ಕೆ ಆಯ್ಕೆಯಾಗಿವೆ

ಕಥಾ ಸ್ಪರ್ಧೆಯಲ್ಲಿ ಒಟ್ಟು 398 ಕಥೆಗಾರರು ಭಾಗವಹಿಸಿದ್ದರು. ಆರಂಭಿಕ ಸುತ್ತಿನ ಆಯ್ಕೆಯ ನಂತರ, ಎರಡನೇ ಹಂತದ 50 ಕಥೆಗಳನ್ನು ಲೇಖಕ ಕೆ.ಎಚ್. ಮುಸ್ತಾಫ ಹಾಗೂ ಅಂತಿಮ ಹಂತದ ಆಯ್ಕೆಯನ್ನು ಯುವ ಲೇಖಕಿ ಚೈತ್ರಿಕಾ ನಾಯ್ಕ ಹರ್ಗಿ ಮಾಡಿದ್ದಾರೆ ಎಂದು ಸಮಾಜಮುಖಿ ಪ್ರಕಾಶನದ ಚಂದ್ರಕಾಂತ ವಡ್ಡು ತಿಳಿಸಿದ್ದಾರೆ.

ಕೋವಿಡ್: ಸಕ್ರಿಯ ಪ್ರಕರಣ ಏರಿಕೆ

ಬೆಂಗಳೂರು: ನಗರದಲ್ಲಿ ಶನಿವಾರ 146 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಇದರಿಂದಾಗಿ ಸಕ್ರಿಯ ಪ್ರಕರಣಗಳ ಸಂಖ್ಯೆ 637ಕ್ಕೆ ಏರಿಕೆಯಾಗಿದೆ.

ವಾರದಿಂದ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ಹೆಚ್ಚಳವಾಗಿದೆ. ಸೋಂಕಿತರಲ್ಲಿ ಸದ್ಯ 41 ಮಂದಿ ಆಸ್ಪತ್ರೆ ಚಿಕಿತ್ಸೆಗೆ ಒಳಗಾಗಿದ್ದಾರೆ. ಐದು ಮಂದಿ ಐಸಿಯು, ಇಬ್ಬರು ವೆಂಟಿಲೇಟರ್ ಸಹಿತ ಐಸಿಯು ಹಾಗೂ ಒಬ್ಬರು ಎಚ್‌ಡಿಯು ಹಾಸಿಗೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇನ್ನುಳಿದವರಿಗೆ ಸಾಮಾನ್ಯ ಹಾಸಿಗೆಯಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ.

ವಾರದ ಅವಧಿಯಲ್ಲಿ ದೃಢಪಟ್ಟ ಪ್ರಕರಣಗಳನ್ನು ಬಿಬಿಎಂಪಿ ವಾರ್ ರೂಮ್ ವಿಶ್ಲೇಷಿಸಿದೆ. ಏಳು ದಿನಗಳಲ್ಲಿ 19,636 ಕೋವಿಡ್ ಪರೀಕ್ಷೆ ನಡೆಸಲಾಗಿದ್ದು, 665 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಈ ಅವಧಿಯಲ್ಲಿ 498 ಮಂದಿ ಚೇತರಿಸಿಕೊಂಡಿದ್ದಾರೆ. ಒಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಸೋಂಕು ದೃಢ ಪ್ರಮಾಣ ಸರಾಸರಿ ಶೇ 3.39ರಷ್ಟಿದೆ.

ಕಳೆದ 10 ದಿನಗಳಿಂದ ಬೆಳ್ಳಂದೂರು ವಾರ್ಡ್‌ನಲ್ಲಿ ಸರಾಸರಿ ನಾಲ್ಕು ಪ್ರಕರಣ, ಎಚ್.ಎಸ್.ಆರ್. ಲೇಔಟ್, ಬೇಗೂರು ಹಾಗೂ ದೊಡ್ಡ ನೆಕ್ಕುಂದಿ ವಾರ್ಡ್‌ನಲ್ಲಿ ಸರಾಸರಿ ಮೂರು ಪ್ರಕರಣಗಳು ದೃಢಪಡುತ್ತಿವೆ.

ಸಂಕ್ಷಿಪ್ತ ಸುದ್ದಿ

ಮಹಿಳೆಯರಿಗೆ ಉಚಿತ ಪಾಸ್ ಇನ್ನೂ ಇಲ್ಲ

ಬೆಂಗಳೂರು: ದುಡಿಯುವ ವರ್ಗದ ಮಹಿಳೆಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ನೀಡುವ ರಾಜ್ಯ ಸರ್ಕಾರದ ಯೋಜನೆ ಏ. 1ರಂದು ಜಾರಿಗೆ ಬಂದಿಲ್ಲ.

ಉಚಿತ ಪಾಸ್ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಬಜೆಟ್‌ನಲ್ಲಿ ಘೋಷಿಸಿದ್ದರು. 'ಸರ್ಕಾರದಿಂದ ಯಾವುದೇ ಆದೇಶ ಬಾರದ ಕಾರಣ ಪಾಸ್ ವಿತರಣೆ ಮಾಡಿಲ್ಲ' ಎಂದು ಕೆಎಸ್ಆರ್‌ಟಿಸಿ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ರಾಜ್ಯ ಕಾಂಗ್ರೆಸ್ ಘಟಕ, 'ಬಸವರಾಜ ಬೊಮ್ಮಾಯಿ ಅವರು ಏ.1ರಿಂದ ಎಲ್ಲಾ ದುಡಿಯುವ ಮಹಿಳೆಯರಿಗೆ, ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್ ಎಂಬ ಹೂವನ್ನು ಕಿವಿಯ ಮೇಲಿಟ್ಟಿದ್ದರು. ಏಪ್ರಿಲ್ 1ರಿಂದ ಎಂದಿದ್ದೆ ಮಹಿಳೆಯರನ್ನು ಮೂರ್ಖರನ್ನಾಗಿಸಲು' ಎಂದು ವ್ಯಂಗ್ಯವಾಡಿದೆ.

ಐಪಿಎಲ್: ರಾತ್ರಿ ಬಸ್ ಸೇವೆ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯಗಳು ನಗರದಲ್ಲಿ ನಡೆಯುವ ದಿನಗಳಂದು ಬಿಎಂಟಿಸಿ ಬಸ್‌ಗಳ ಸೇವೆ ರಾತ್ರಿ ಇರಲಿದೆ.


ಏ. 2, 10, 17, 26 ಮತ್ತು ಮೇ 21ರಂದು ಬೆಂಗಳೂರಿನಲ್ಲಿ ಪಂದ್ಯಗಳು ನಡೆಯಲಿವೆ. ಆ ದಿನಗಳಲ್ಲಿ ರಾತ್ರಿ 11 ಗಂಟೆ ನಂತರ ಚಿನ್ನಸ್ವಾಮಿ ಕ್ರೀಡಾಂಗಣದಿಂದ ಕಾಡುಗೋಡಿ, ಸರ್ಜಾಪುರ, ಎಲೆಕ್ಟ್ರಾನಿಕ್ ಸಿಟಿ, ಬನ್ನೇರುಘಟ್ಟ ನ್ಯಾಷನಲ್ ಪಾರ್ಕ್, ಕೆಂಗೇರಿ, ಜನಪ್ರಿಯ ಟೌನ್‌ಶಿಪ್, ನೆಲಮಂಗಲ, ಯಲಹಂಕ, ಆರ್.ಕೆ.ಹೆಗಡೆನಗರ, ಯಲಹಂಕ, ಬಾಗಲೂರು, ಹೊಸಕೋಟೆ ಮಾರ್ಗದಲ್ಲಿ ಬಸ್‌ಗಳು ಕಾರ್ಯಾಚರಣೆ ಮಾಡಲಿವೆ ಎಂದು ಬಿಎಂಟಿಸಿ ತಿಳಿಸಿದೆ.

'ಸ್ವರ ಶೃಂಗಾರ' ಏಪ್ರಿಲ್ 9ಕ್ಕೆ

ಬೆಂಗಳೂರು: ಸಪ್ತಕ ವತಿಯಿಂದ ಏ.9ರಂದು 'ಸ್ವರ ಶೃಂಗಾರ' ಸಂಗೀತ ಕಾರ್ಯಕ್ರಮವನ್ನು ಮಲ್ಲೇಶ್ವರದ ಸೇವಾ ಸದನದಲ್ಲಿ ಹಮ್ಮಿಕೊಳ್ಳಲಾಗಿದೆ.

ಗಾಯಕಿ ಶ್ರೇಯಾ ವಿ. ಮೂರ್ತಿ ಅವರು ಸಂಗೀತ ಕಛೇರಿ ನಡೆಸಿಕೊಡಲಿದ್ದು, ತಬಲಾ ವಾದಕರಾದ ವಿನಾಯಕ ಸಾಗರ, ರಾಹುಲ್ ಪೋಫಲಿ, ಹಾರ್ಮೋನಿಯಂ ವಾದಕ ವಿನಾಯಕ ಹೆಗ್ಡೆ, ಪಿಟೀಲು ವಾದಕ ಮಾನಸ್ ಕುಮಾರ್ ಸಾಥ ನೀಡಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗಾಗಿ ಸಂಪರ್ಕಿಸಿ: 7019414992.



ಕೋಲಾರ ಕ್ಷೇತ್ರದಲ್ಲಿಯೇ ಸಿದ್ದರಾಮಯ್ಯ ಸ್ಪರ್ಧಿಸಲು ಕಾಂಗ್ರೆಸ್ ಕಾರ್ಯಕರ್ತರ ಪಟ್ಟು

ಸುರ್ಜೇವಾಲಾ ಭಾಷಣಕ್ಕೆ ಅಡ್ಡಿ: ಗದ್ದಲ

ಪ್ರಜಾವಾಣಿ ವಾರ್ತೆ

ಕೋಲಾರ: 'ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಕೋಲಾರ ಕ್ಷೇತ್ರದಲ್ಲಿಯೇ ಸ್ಪರ್ಧಿಸಲು ಅವಕಾಶ ನೀಡಬೇಕು' ಎಂದು ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಭಾಷಣಕ್ಕೆ ಅಡ್ಡಿಪಡಿಸಿದರು.

ರಾಹುಲ್ ಗಾಂಧಿ ನೇತೃತ್ವದಲ್ಲಿ ಏಪ್ರಿಲ್ 9ರಂದು ನಡೆಯಲಿರುವ 'ಜೈ ಭಾರತ್' ಸಮಾವೇಶ ಆಯೋಜನೆ ಸಂಬಂಧ ಶನಿವಾರ ನಗರದಲ್ಲಿ ಪೂರ್ವಭಾವಿ ಸಭೆಯಲ್ಲಿ ಇದೇ ಕಾರಣಕ್ಕೆ ಗೊಂದಲ ಉಂಟಾಯಿತು.

ಸುರ್ಜೇವಾಲಾ ಅವರು ಭಾಷಣ ಶುರು ಮಾಡುತ್ತಿದ್ದಂತೆ ವೇದಿಕೆ ಬಳಿಗೆ ಬಂದ ಕೆಲವರು ಕೈಮುಗಿದು ಬೇಡಿದರೆ, ಇನ್ನೂ ಕೆಲವರು ಕಾಲಿಗೆರಗಲು ಮುಂದಾದರು. ಇದರಿಂದ ಸುರ್ಜೇವಾಲಾ ತಬ್ಬಿಬ್ಬಾದರು. 'ಕೋಲಾರ ಕ್ಷೇತ್ರಕ್ಕೆ ಸಿದ್ದರಾಮಯ್ಯ'ಎಂದು ಕೆಲವರು ಘೋಷಣೆ ಕೂಗಿದರು. ಸಿದ್ದರಾಮಯ್ಯ ಸುಮ್ಮನಿರಲು ಕಾರ್ಯಕರ್ತರಿಗೆ ಗದರಿದರು. 'ಸುರ್ಜೇವಾಲಾ ಅವರಿಗೆ ಮಾತನಾಡಲು ಬಿಡಿ' ಎಂದು ಜೋರು ಮಾಡಿದರು.

ಸಿದ್ದರಾಮಯ್ಯ ಅವರ ಭಾಷಣಕ್ಕೂ ಕಾರ್ಯಕರ್ತರು ಅಡ್ಡಿಪಡಿಸಿ ದರು. ಕೋಲಾರದಿಂದಲೇ ಸ್ಪರ್ಧೆ ಘೋಷಿಸುವಂತೆ ಪಟ್ಟು ಹಿಡಿದರು. 'ಸಿದ್ದರಾಮಯ್ಯ ಮುಂದಿನ ಸಿ.ಎಂ' ಎಂದು ಘೋಷಣೆ ಕೂಗಿದರು. ಗದರುತ್ತಲೇ ಭಾಷಣ ಮುಂದುವರಿಸಿದರು.

ಎಐಸಿಸಿ ಕಾರ್ಯದರ್ಶಿ ಅಭಿಷೇಕ್ ದತ್ತ, ಕೇಂದ್ರದ ಮಾಜಿ ಸಚಿವ ಕೆ.ಎಚ್. ಮುನಿಯಪ್ಪ, ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ಶಾಸಕ ಕೆ.ಆರ್. ರಮೇಶ್ ಕುಮಾರ್ ಇದ್ದರು. ಸಭೆಗೆ ಬರಬೇಕಿದ್ದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಗೈರಾಗಿದ್ದರು.



ಕೋಲಾರದಲ್ಲಿ ಶನಿವಾರ ಸಿದ್ದರಾಮಯ್ಯ ಅವರ ಸ್ಪರ್ಧೆಗೆ ಆಗ್ರಹಿಸಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರ ಭಾಷಣಕ್ಕೆ ಕಾಂಗ್ರೆಸ್ ಕಾರ್ಯಕರ್ತರು ಅಡ್ಡಿಪಡಿಸಿದರು

ಕೋಲಾರದಲ್ಲಿ ಸ್ಪರ್ಧೆಗೆ ಸಿದ್ಧ: ಸಿದ್ದರಾಮಯ್ಯ

'ಕೋಲಾರ ಕ್ಷೇತ್ರದಲ್ಲಿ ಸ್ಪರ್ಧೆಗೆ ನಾನು ಮಾನಸಿಕವಾಗಿ ಸಿದ್ಧವಾಗಿದ್ದೇನೆ. ಆದರೆ, ಹೈಕಮಾಂಡ್ ತೀರ್ಮಾನಕ್ಕೆ ಬದ್ಧ' ಎಂದು ಸಿದ್ದರಾಮಯ್ಯ ಪುನರುಚ್ಚರಿಸಿದರು.

'ಏ.4ರಂದು ಅಭ್ಯರ್ಥಿಗಳ 2ನೇ ಪಟ್ಟಿ ಬಿಡುಗಡೆ ಆಗಬಹುದು. ವರುಣಾದಲ್ಲಿ ಸ್ಪರ್ಧಿಸುತ್ತೇನೆ. ಇದು ನನ್ನ ಕೊನೆಯ ಚುನಾವಣೆ. ಹುಟ್ಟಿದೂರು ಅಲ್ಲಿಯೆ ಬರುವ ಕಾರಣ ಅಲ್ಲಿ ಸ್ಪರ್ಧಿಸುತ್ತಿದ್ದೇನೆ. ಅಲ್ಲಿಯೇ ರಾಜಕೀಯ ಪ್ರಾರಂಭವಾಗಿತ್ತು' ಎಂದು ಸುದ್ದಿಗಾರರಿಗೆ ತಿಳಿಸಿದರು.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಲಿಂಬಿಕಾಯಿಗೆ ಟಿಕೆಟ್ ಸಾಧ್ಯತೆ: ಆಕಾಂಕ್ಷಿಗಳ ಆಕ್ಷೇಪ

ಧಾರವಾಡ: 'ಹುಬ್ಬಳ್ಳಿ-ಧಾರವಾಡ ಪಶ್ಚಿಮ ಮತಕ್ಷೇತ್ರದಲ್ಲಿ ಈಚೆಗೆ ಪಕ್ಷ ಸೇರಿರುವ ಯಡಿಯೂರಪ್ಪ ಆಪ್ತ, ಮೋಹನ ಲಿಂಬಿಕಾಯಿ ಅವರಿಗೆ ಟಿಕೆಟ್ ನೀಡಲು ಕಾಂಗ್ರೆಸ್ ನೀಡಲು ಮುಂದಾಗಿರುವುದು ಅಕ್ಷಮ್ಯ' ಎಂದು ಟಿಕೆಟ್ ಆಕಾಂಕ್ಷಿ ಪಿ.ಎಚ್.ನೀರಲಕೇರಿ ಅವರು ರಾಜ್ಯ ಕಾಂಗ್ರೆಸ್ ಮುಖಂಡರ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

'ಕ್ಷೇತ್ರದಲ್ಲಿ ಪಕ್ಷ ಸಂಘಟನೆ ಮಾಡಿದವರು, ನಿಷ್ಠಾವಂತ ಕಾರ್ಯಕರ್ತರನ್ನು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಿದ್ದರಾಮಯ್ಯ ಕಡೆಗಣಿಸುತ್ತಿದ್ದಾರೆ. ಇದನ್ನೇ ಮುಂದುವರೆಸಿದರೇ ಪಕ್ಷದ ನಾಯಕರಿಗೆ ಬುದ್ಧಿ ಕಲಿಸಲಾಗುವುದು' ಎಂದು ಶನಿವಾರ ನಡೆಸಿದ ಆಕಾಂಕ್ಷಿಗಳ ಜಂಟಿ ಸುದ್ದಿಗೋಷ್ಠಿಯಲ್ಲಿ ಗುಡುಗಿದರು.

'ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಹನ್ನೊಂದು ಜನರಲ್ಲಿ ಒಬ್ಬರನ್ನು ಆಯ್ಕೆ ಮಾಡಬೇಕು. ಇಲ್ಲವಾದಲ್ಲಿ ಈ ಹನ್ನೊಂದು ಜನರೇ ಒಬ್ಬ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಒಗ್ಗಟ್ಟಿನ ಹೋರಾಟ ಮಾಡಲಾಗುವುದು' ಎಂದು ಹೇಳಿದರು. ಆಕಾಂಕ್ಷಿಗಳಾದ ದೀಪಕ ಚಿಂಚೋರೆ, ಡಾ. ಮಯೂರ್ ಮೋರೆ, ಬ್ಲಾಕ್ ಕಾಂಗ್ರೆಸ್‌ನ ಬಸವರಾಜ ಕಿತ್ತೂರ ಇದ್ದರು.



ಚಿಕ್ಕಮಗಳೂರಿನಲ್ಲಿ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಕಾರ್ಯಕರ್ತರ ನಡುವೆ ವಾಗ್ವಾದ ನಡೆಯಿತು

ಚಿಕ್ಕಮಗಳೂರು: ಕಾಂಗ್ರೆಸ್ ಸಭೆಯಲ್ಲಿ ಮಾತಿನ ಚಕಮಕಿ

ಚಿಕ್ಕಮಗಳೂರು: ಕಾಂಗ್ರೆಸ್ ಪಕ್ಷಕ್ಕೆ ಈಚೆಗೆ ಸೇರಿರುವ ಎಚ್.ಡಿ.ತಮ್ಮಯ್ಯ ಅವರಿಗೆ ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್ ನೀಡಬಾರದು ಎಂದು ಹಲವು ಮುಖಂಡರು ಆಕ್ರೋಶ ವ್ಯಕ್ತಪಡಿಸಿದ್ದು, ಈ ಬೆಳವಣಿಗೆ ಶನಿವಾರ ಜಿಲ್ಲಾ ಕಾಂಗ್ರೆಸ್ ಸಭೆಯಲ್ಲಿ ಕಾರ್ಯಕರ್ತರ ನಡುವೆ ಪರಸ್ಪರ ಕೈಕೈ ಮಿಲಾಯಿಸಲು ಕಾರಣವಾಯಿತು.

ಚಿಕ್ಕಮಗಳೂರು ಕ್ಷೇತ್ರದ ಟಿಕೆಟ್‌ಗೆ ಅರ್ಜಿ ಸಲ್ಲಿಸಿರುವ ಮಹಡಿಮನೆ ಸತೀಶ್, ಬಿ.ಎಚ್.ಹರೀಶ್, ಎ.ಎನ್.ಮಹೇಶ್, ಡಾ.ಡಿ.ಎಲ್. ವಿಜಯಕುಮಾರ್, ಮುಖಂಡರಾದ ಎಂ.ಎಲ್.ಮೂರ್ತಿ, ಸಿ.ಎನ್.ಅಕ್ಮಲ್ ಅವರು, ತಮ್ಮಯ್ಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ಅವರಿಗೆ ಟಿಕೆಟ್ ನೀಡಬಾರದು, ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿರುವ ಆರು ಮಂದಿಯಲ್ಲಿ ಒಬ್ಬರನ್ನು ವರಿಷ್ಠರು ಪರಿಗಣಿಸಬೇಕು' ಎಂದು ಆಗ್ರಹಿಸಿದರು. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಚ್.ಪಿ.ಮಂಜೇಗೌಡ ಅವರು, 'ಯಾರಿಗೇ ಟಿಕೆಟ್ ನೀಡಿದರೂ ಅವರ ಪರ ಕೆಲಸ ಮಾಡಬೇಕು' ಎಂದಾಗ ಕೆಲವರು ಮಧ್ಯಪ್ರವೇಶಿಸಿ ವಾಗ್ವಾದ ನಡೆಸಿದರು.

ಒಂದು ಹಂತದಲ್ಲಿ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ ನಡೆಯಿತು. ಕೆಲವರು ಮುಖಂಡರನ್ನು ತಳ್ಳಿ ಕೈಕೈ ಮಿಲಾಯಿಸಿ ಗಲಾಟೆ ನಡೆಸಿದರು. ಇಡೀ ಸಭಾಂಗಣದಲ್ಲಿ ಗೊಂದಲದ ವಾತಾವರಣ ನಿರ್ಮಾಣವಾಗಿತ್ತು. ಪೊಲೀಸರು ಮತ್ತು ಮುಖಂಡರು ಕಾರ್ಯಕರ್ತರ ಜಗಳ ಬಿಡಿಸಿದರು.

ತಟಸ್ಥರಾಗುತ್ತೇವೆ: 'ಎಚ್.ಡಿ.ತಮ್ಮಯ್ಯ ಅವರಿಗೆ ಟಿಕೆಟ್ ನೀಡಿದರೆ ನಾವು ತಟಸ್ಥರಾಗಿತ್ತೇವೆ. ಅವರ ಪರ ಕೆಲಸ ಮಾಡುವುದಿಲ್ಲ ಎಂದು ವರಿಷ್ಠರಿಗೆ ತಿಳಿಸಿದ್ದೇವೆ' ಎಂದು ಮಹಡಿಮನೆ ಸತೀಶ್ ಹೇಳಿದರು.

ಜೆಡಿಎಸ್ ಮುಖಂಡ ರಾಮಸ್ವಾಮಿ ಬಿಜೆಪಿಗೆ

ಪ್ರಜಾವಾಣಿ ವಾರ್ತೆ

ನವದೆಹಲಿ/ಹಾಸನ: ಹಾಸನ ಜಿಲ್ಲೆಯ ಅರಕಲಗೂಡು ಕ್ಷೇತ್ರದ ಜೆಡಿಎಸ್‌ನ ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅವರು ಕೇಂದ್ರ ಸಚಿವ ಅನುರಾಗ್ ಠಾಕೂರ್ ಸಮ್ಮುಖದಲ್ಲಿ ಶನಿವಾರ ಬಿಜೆಪಿ ಸೇರಿದರು.

ರಾಮಸ್ವಾಮಿ ಅವರು ವರ್ಷಗಳಿಂದ ಜೆಡಿಎಸ್ ರಾಜ್ಯ ನಾಯಕರ ಜತೆಗೆ ಅಂತರ ಕಾಯ್ದುಕೊಂಡಿದ್ದರು. ಅವರು ಶಾಸಕ ಸ್ಥಾನಕ್ಕೆ ಶುಕ್ರವಾರ ರಾಜೀನಾಮೆ ಸಲ್ಲಿಸಿದ್ದರು. ಬಿಜೆಪಿ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಕ್ಷಕ್ಕೆ ಸ್ವಾಗತಿಸಿದ ಠಾಕೂರ್, 'ರಾಮಸ್ವಾಮಿ ಸೇರ್ಪಡೆಯಿಂದ ಪಕ್ಷ ಇನ್ನಷ್ಟು ಬಲಗೊಳ್ಳಲಿದೆ. ಭ್ರಷ್ಟಾಚಾರ ಹಾಗೂ ಭೂಗಳ್ಳರ ವಿರುದ್ಧದ ನಿರಂತರ ಹೋರಾಟದ ಮೂಲಕ ರಾಮಸ್ವಾಮಿ ಅಪಾರ ಗೌರವ ಗಳಿಸಿದ್ದಾರೆ. ನಮ್ಮ ಪಕ್ಷಕ್ಕೆ ಸೇರ್ಪಡೆಯಾದ ಬಳಿಕವೂ ರಾಜ್ಯದ ಜನರ ಹಿತದೃಷ್ಟಿಯಿಂದ ತಮ್ಮ ಒಳ್ಳೆಯ ಕೆಲಸಗಳನ್ನು ಮುಂದುವರಿಸಲಿದ್ದಾರೆ' ಎಂದರು.

ಅರಕಲಗೂಡು ಕ್ಷೇತ್ರದಿಂದ ರಾಮಸ್ವಾಮಿ ಅವರನ್ನು ಬಿಜೆಪಿ ಕಣಕ್ಕೆ ಇಳಿಸುವ ಸಾಧ್ಯತೆ ಇದೆ. ಕಾಂಗ್ರೆಸ್ ಹಾಗೂ ಜೆಡಿಎಸ್‌ನಿಂದ ಒಟ್ಟು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ರಾಮಸ್ವಾಮಿ, 'ನಾನು ಟಿಕೆಟ್ ಅಪೇಕ್ಷೆ ಇಟ್ಟುಕೊಂಡು ಬಿಜೆಪಿಗೆ ಬಂದಿಲ್ಲ. ಪಕ್ಷ ಟಿಕೆಟ್ ನೀಡಿದರೆ ಸ್ಪರ್ಧೆ ಮಾಡುವೆ. ಸಣ್ಣ ಕಪ್ಪು ಚುಕ್ಕೆ ಬಾರದಂತೆ ಮುಂದೆಯೂ ಕೆಲಸ ಮಾಡುವೆ' ಎಂದರು.

'ನಾನು ಯಾವುದೇ ಷರತ್ತು ಇಲ್ಲದೆ ಬಿಜೆಪಿಗೆ ಸೇರಿದ್ದೇನೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್.ಯಡಿಯೂರಪ್ಪ ಜತೆಗೆ ಕೆಲಸ ಮಾಡಲು ಬಹಳ ಸಂತೋಷ ಆಗುತ್ತಿದೆ' ಎಂದು ಅವರು ಹೇಳಿದರು.

'ಬೆಂಗಳೂರಿನ ಭೂ ಅಕ್ರಮದ ಬಗ್ಗೆ 2006-07ರಲ್ಲಿ ವರದಿ ಸಲ್ಲಿಸಿದ್ದೆ. ನಕಲಿ ದಾಖಲೆಗಳನ್ನು ಸೃಷ್ಟಿಸಿ 41 ಸಾವಿರ ಎಕರೆ ಸರ್ಕಾರಿ ಭೂಮಿಯನ್ನು ಭೂಗಳ್ಳರು ಕಬಳಿಸಿದ್ದಾರೆ ಎಂಬುದನ್ನು ಉಲ್ಲೇಖಿಸಿದ್ದೆ. ಈ ಹಗರಣದಲ್ಲಿ ಸಾಕಷ್ಟು ಸರ್ಕಾರಿ ನೌಕರರು ಹಾಗೂ ರಾಜಕಾರಣಿಗಳು ಭಾಗಿಯಾಗಿದ್ದಾರೆ' ಎಂದರು.



ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಎ.ಟಿ. ರಾಮಸ್ವಾಮಿ ಅವರಿಗೆ ಶಾಲು ಹೊದಿಸಿ ಪಕ್ಷಕ್ಕೆ ಬರಮಾಡಿಕೊಂಡರು.

ಬಳಿಕ ಅವರು ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರನ್ನು ಭೇಟಿಯಾದರು. 'ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆಯುತ್ತೇನೆ' ಎಂದು ರಾಮಸ್ವಾಮಿ ತಿಳಿಸಿದರು.

ಸಿದ್ದರಾಮಯ್ಯ ನೇತೃತ್ವದ ಸರ್ಕಾರದಲ್ಲಿ ಸಚಿವರಾಗಿದ್ದ ಎ. ಮಂಜು ಅವರು ಕಳೆದ ಲೋಕಸಭಾ ಚುನಾವಣೆ ವೇಳೆಗೆ ಬಿಜೆಪಿಗೆ ಸೇರಿದ್ದರು. ಹಾಸನ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿದು ಸೋತಿದ್ದರು. ಅವರು ಇತ್ತೀಚೆಗೆ ಜೆಡಿಎಸ್‌ಗೆ ಸೇರ್ಪಡೆಯಾಗಿದ್ದರು. ಅವರು ಅರಕಲಗೂಡು ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯಾಗಲಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ ಇತ್ತೀಚೆಗೆ ಪ್ರಕಟಿಸಿದ್ದರು. ಈ ಕ್ಷೇತ್ರಕ್ಕೆ ಅಭ್ಯರ್ಥಿಯ ಹೆಸರನ್ನು ಕಾಂಗ್ರೆಸ್ ಇನ್ನೂ ಘೋಷಿಸಿಲ್ಲ.

ವಾರದಲ್ಲಿ ಬಿಜೆಪಿ ಮೊದಲ ಪಟ್ಟಿ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಅಭ್ಯರ್ಥಿಗಳ ಆಯ್ಕೆಗೆ ಮತದಾನ ನಡೆಸಿದ ಬೆನ್ನಲ್ಲೇ ಎಲ್ಲ ಸಂಘಟನಾ ಜಿಲ್ಲೆಗಳ ಪ್ರಮುಖರ ಜತೆ ಪಕ್ಷದ ರಾಜ್ಯ 'ಪ್ರಮುಖರ ಸಮಿತಿ' (ಕೋರ್ ಕಮಿಟಿ) ಸದಸ್ಯರು ಸಮಾಲೋಚನೆ ನಡೆಸಿ ಅಭಿಪ್ರಾಯ ಸಂಗ್ರಹಿಸಿದ್ದಾರೆ. ಮುಂದಿನ ವಾರಾಂತ್ಯದಲ್ಲೇ ಮೊದಲ ಪಟ್ಟಿ ಪ್ರಕಟವಾಗುವ ಸಾಧ್ಯತೆ ಇದೆ.

ರೆಸಾರ್ಟ್ ಒಂದರಲ್ಲಿ ನಡೆದ ಸಭೆಯಲ್ಲಿ ಕೇಂದ್ರ ಸಚಿವ ಮನ್‌ಸುಖ್ ಮಾಂಡವೀಯ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಶಾಸಕ ಜಗದೀಶ ಶೆಟ್ಟರ್, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಜಲ ಸಂಪನ್ಮೂಲ ಸಚಿವ ಗೋವಿಂದ ಕಾರಜೋಳ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಶುಕ್ರವಾರ ಎಲ್ಲ ಕ್ಷೇತ್ರಗಳಲ್ಲೂ ಮತದಾನದ ಮೂಲಕ ಅಭಿಪ್ರಾಯ ಸಂಗ್ರಹಿಸಲಾಗಿತ್ತು. ಮತ ಪತ್ರಗಳನ್ನು ಬೆಂಗಳೂರಿಗೆ ತಂದಿದ್ದು, ಎಣಿಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಜಿಲ್ಲಾ ಘಟಕಗಳ ಅಧ್ಯಕ್ಷರು, ಮಂಡಲ ಸಮಿತಿಗಳ ಅಧ್ಯಕ್ಷರು ಸೇರಿದಂತೆ ಆಯಾ ಜಿಲ್ಲೆಯಲ್ಲಿನ ಪ್ರಮುಖರ ಜತೆ ಪ್ರತ್ಯೇಕವಾಗಿ ಸಭೆ ನಡೆಸಿದ್ದು, ಅಭ್ಯರ್ಥಿಗಳ ಆಯ್ಕೆ ಕುರಿತು ಸಮಾಲೋಚನೆ ನಡೆಸಲಾಗಿದೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮತ ಎಣಿಕೆ ವರದಿ ಭಾನುವಾರ ಬೆಳಿಗ್ಗೆ ಲಭಿಸುವ ಸಾಧ್ಯತೆ ಇದೆ. ಅಂದೂ ಪ್ರಮುಖರ ಸಮಿತಿ ಸಭೆ ನಡೆಯಲಿದೆ. ಎಲ್ಲ ಕ್ಷೇತ್ರಗಳ ಟಿಕೆಟ್ ಆಕಾಂಕ್ಷಿಗಳ ಜತೆ ಸಮಾಲೋಚನೆ ನಡೆಸುವ ಸಾಧ್ಯತೆ ಇದೆ. ಸಂಭವನೀಯ ಅಭ್ಯರ್ಥಿಗಳ ಪಟ್ಟಿ ಬುಧವಾರದ (ಏಪ್ರಿಲ್ 5) ಒಳಗೆ ದೆಹಲಿಗೆ ರವಾನೆಯಾಗಲಿದೆ. ಪಕ್ಷದ ಸಂಸದೀಯ ಮಂಡಳಿಯ ಅನುಮೋದನೆ ಬಳಿಕ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗುತ್ತದೆ. ಗುರುವಾರ ಅಥವಾ ಶುಕ್ರವಾರ 150ರಿಂದ 170 ಕ್ಷೇತ್ರಗಳ ಅಭ್ಯರ್ಥಿಗಳ ಪಟ್ಟಿ ಪ್ರಕಟವಾಗುವ ಸಂಭವವಿದೆ ಎಂದು ಮೂಲಗಳು ಹೇಳಿವೆ.

ಸಂಧಾನಕ್ಕೆ ಕಸರತ್ತು: ವಿಧಾನ ಪರಿಷತ್ ಸದಸ್ಯ ಆರ್. ಶಂಕರ್, ರಾಣೆಬೆನ್ನೂರು ಕ್ಷೇತ್ರದಲ್ಲಿ ತಮಗೆ ಸ್ಪರ್ಧಿಸಲು ಅವಕಾಶ ನೀಡುವಂತೆ ಸಭೆಯಲ್ಲಿ ಮನವಿ ಮಾಡಿದ್ದಾರೆ. ಹಾಲಿ ಶಾಸಕ ಅರುಣ್ ಕುಮಾರ್ ಪೂಜಾರ ಮತ್ತು ಶಂಕರ್ ನಡುವೆ ಸಂಧಾನಕ್ಕೆ ವರಿಷ್ಠರು ಪ್ರಯತ್ನಿಸುತ್ತಿದ್ದಾರೆ. ಹೊಸದುರ್ಗ ಕ್ಷೇತ್ರದ ಶಾಸಕ ಗೂಳಿಹಟ್ಟಿ ಶೇಖರ್ ವಿರುದ್ಧ ಕೆಲವು ಸ್ಥಳೀಯ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂಬ ಮಾಹಿತಿ ಲಭ್ಯವಾಗಿದೆ.

ಪ್ರತಿ ಜಿಲ್ಲೆಯ ರಾಜಕೀಯ ಸ್ಥಿತಿಗತಿ ಕುರಿತು ಪ್ರಮುಖರ ಸಮಿತಿ ಹಾಗೂ ಕೇಂದ್ರದಿಂದ ಬಂದಿರುವ ನಾಯಕರು ವಿಸ್ತೃತವಾಗಿ ಮಾಹಿತಿ ಪಡೆದಿದ್ದಾರೆ. ಎದುರಾಳಿಗಳ ಬಲಾಬಲ, ಬಿಜೆಪಿಯಲ್ಲಿರುವ ಆಕಾಂಕ್ಷಿಗಳ ಸಂಖ್ಯೆ, ಹೆಚ್ಚಿನ ಪೈಪೋಟಿ ಇರುವ ಕ್ಷೇತ್ರಗಳ ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಸ್ಥಳೀಯವಾಗಿ ಆಕಾಂಕ್ಷಿಗಳ ಮಧ್ಯೆ ಸಹಮತ ಮೂಡಿಸುವ ಪ್ರಯತ್ನವೂ ನಡೆಯುತ್ತಿದೆ ಎಂದು ಮುಖಂಡರೊಬ್ಬರು ತಿಳಿಸಿದರು.

ಹಾಸನ ಟಿಕೆಟ್: ದೇವೇಗೌಡರ ನಿರ್ಧಾರದತ್ತ ಚಿತ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಹಾಸನ: ಪಕ್ಷದ ನಿಷ್ಠಾವಂತ ಕಾರ್ಯಕರ್ತರಿಗೆ ಹಾಸನ ವಿಧಾನಸಭಾ ಕ್ಷೇತ್ರದ ಟಿಕೆಟ್ ನೀಡಲಾಗುವುದು ಎಂದು ಜೆಡಿಎಸ್ ವರಿಷ್ಠ ಎಚ್.ಡಿ.ದೇವೇಗೌಡ ಹೇಳಿದರು.

ಬೆಂಗಳೂರಿನ ಪದ್ಮನಾಭನಗರದ ತಮ್ಮ ಮನೆಗೆ ಶನಿವಾರ ಭೇಟಿ ನೀಡಿದ್ದ ಟಿಕೆಟ್ ಆಕಾಂಕ್ಷಿ ಭವಾನಿ ರೇವಣ್ಣ ಬೆಂಬಲಿಗರು ಹಾಗೂ ಹಾಸನ ನಗರಸಭೆಯ ಕೆಲ ಸದಸ್ಯರ ಜತೆ ನಡೆಸಿದ ಮಾತುಕತೆಯಲ್ಲಿ ಅವರು ಅಭಿಪ್ರಾಯ ಹಂಚಿಕೊಂಡರು.

'ಹಾಸನ ಜಿಲ್ಲೆಯ ಸಂಪೂರ್ಣ ಅರಿವಿದೆ. ಪಕ್ಷದ ಬಲ ಕುಗ್ಗಿಸಲು ಅವಕಾಶ ನೀಡಲ್ಲ. ಪಕ್ಷದ ನಿಷ್ಠಾವಂತರಿಗೆ ಈ ಬಾರಿ ಆದ್ಯತೆ ನೀಡಲಾಗುವುದು' ಎಂದರು. ಹಾಸನ ಟಿಕೆಟ್‌ಗಾಗಿ ಭಾರಿ ಪೈಪೋಟಿ ನಡೆದಿರುವ ನಡುವೆಯೇ ಕ್ಷೇತ್ರದ ಪ್ರಮುಖರ ಸಭೆ ಕುತೂಹಲ ಮೂಡಿಸಿತ್ತು. ಪ್ರತೀ ಬಾರಿಯಂತೆ ಈ ಬಾರಿಯೂ ದಾಸ ಒಕ್ಕಲಿಗರಿಗೆ ಟಿಕೆಟ್ ನೀಡಲು ದೇವೇಗೌಡರು ಒಲವು ತೋರಿದ್ದು, ಭವಾನಿ ಅವರಿಗೆ ನಿರಾಸೆ ಆಗುವ ಸಾಧ್ಯತೆಗಳಿವೆ ಎಂದು ಮೂಲಗಳು ತಿಳಿಸಿವೆ.

'ಪೊಲೀಸ್ ಕಿರುಕುಳ'

ಬೆಂಗಳೂರು: ಜೆಡಿಎಸ್ ಕಾರ್ಯಕರ್ತರಿಗೆ, ಪಕ್ಷ ಸೇರುತ್ತಿರುವ ಇತರೆ ಪಕ್ಷಗಳ ಮುಖಂಡರಿಗೆ ಪೊಲೀಸರನ್ನು ಬಳಸಿ ಕಿರುಕುಳ ನೀಡಲಾಗುತ್ತಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ ಕುಮಾರಸ್ವಾಮಿ ಆರೋಪಿಸಿದರು.

ಯಶವಂತಪುರ ಕ್ಷೇತ್ರದಲ್ಲಿ ನಡೆದ ಪಂಚರತ್ನ ಯಾತ್ರೆಯಲ್ಲಿ ಅವರು ಮಾತನಾಡಿದ ಅವರು, ಚುನಾವಣೆ ಆರಂಭವಾದಾಗಿನಿಂದ ಕಿರುಕುಳ ಜಾಸ್ತಿಯಾಗಿದೆ ಎಂದು ದೂರಿದರು.

'ಅಧಿಕಾರಿಗಳು ಶಾಸಕರಿಗೆ ಅಡಿಯಾಳಾಗಿ ಕೆಲಸ ಮಾಡಿದರೆ ಜೂನ್ ತಿಂಗಳ ಬಳಿಕ ಪ್ರಾಯಶ್ಚಿತ ಅನುಭವಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಸಚಿವರ ವಿರುದ್ಧ ಕಿಡಿ: 'ನಾರಾಯಣಗೌಡರನ್ನು ಬೆಳೆಸಲು ನಮ್ಮ ಪಕ್ಷ ಹಾಳು ಮಾಡಿ ಕೊಳ್ಳಬೇಕಾ? ಅಂಥವರ ಎದುರಿಗೆ ಅಭ್ಯರ್ಥಿ ಹಾಕದೇ ಸಮ್ಮನಿರಲು ಸಾಧ್ಯವೇ?' ಎಂದರು.

ಒಂದೆಡೆ, ಎಚ್.ಡಿ.ಕುಮಾರಸ್ವಾಮಿ ಮಾಜಿ ಶಾಸಕ ಎಚ್.ಎಸ್. ಪ್ರಕಾಶ್ ಮಗ ಎಚ್.ಪಿ. ಸ್ವರೂಪ್‌ಗೆ ಟಿಕೆಟ್ ಕೊಡಲು ಮುಂದಾಗಿದ್ದು, ಎಚ್.ಡಿ.ರೇವಣ್ಣ ಕುಟುಂಬ ಭವಾನಿ ಅವರನ್ನು ಕಣಕ್ಕಿಳಿಸಲು ನಿರ್ಧರಿಸಿದೆ.

'ಸ್ವರೂಪ್‌ಗೆ ಟಿಕೆಟ್ ನೀಡಿದರೆ ಕ್ಷೇತ್ರದಲ್ಲಿ ಪಕ್ಷದ ಮೇಲಿನ ಹಿಡಿತ ತಪ್ಪುತ್ತದೆ' ಎಂಬ ಆತಂಕ ರೇವಣ್ಣ ಅವರದ್ದು. ಎಚ್.ಡಿ.ಕುಮಾರಸ್ವಾಮಿ, 'ಬ್ಲ್ಯಾಕ್‌ಮೇಲ್‌ಗೆ ಮಣಿಯುವುದಿಲ್ಲ. ನಿರ್ಧಾರದಲ್ಲಿ ಬದಲಾವಣೆ ಇಲ್ಲ' ಎಂದಿದ್ದಾರೆ.

ಈ ಮಧ್ಯೆ, ದೇವೇಗೌಡರನ್ನು ಭೇಟಿ ಮಾಡಿರುವ ಸಂಸದ ಪ್ರಜ್ವಲ್ ರೇವಣ್ಣ, 'ಅಮ್ಮನಿಗೆ ಟಿಕೆಟ್ ನೀಡಬೇಕು. ಇಲ್ಲದಿದ್ದರೆ, ಸಂಸದ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದೂ ಹೇಳಿದ್ದಾಗಿ ಗೊತ್ತಾಗಿದೆ.

ಗೊಂದಲಕ್ಕೆ ಒಳಗಾಗಿರುವ ಕಾರ್ಯಕರ್ತರು, 'ಇನ್ನೂ ಅಭ್ಯರ್ಥಿ ಅಂತಿಮಗೊಳಿಸಿಲ್ಲ. ಯಾರ ಪರ ಕೆಲಸ ಮಾಡಬೇಕೆಂದು ಗೊತ್ತಾಗುತ್ತಿಲ್ಲ' ಎನ್ನುತ್ತಿದ್ದಾರೆ.

'ದೇವೇಗೌಡರು ಸೋಮವಾರ ಅಂತಿಮ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

ಪತ್ನಿ ಕಾಟದಿಂದ ಪಾರಾಗಲು ಗೋವಾಗೆ ಹೊರಟಿದ್ದೇನೆ ಎಂದ ಗುತ್ತಿಗೆದಾರ

ಪ್ರತ್ಯೇಕ ಪ್ರಕರಣ: ₹ 37.9 ಲಕ್ಷ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ 4 ಪ್ರತ್ಯೇಕ ಪ್ರಕರಣಗಳಲ್ಲಿ ದಾಖಲೆ ಇಲ್ಲದೆ ಸಾಗಿಸುತ್ತಿದ್ದ ಒಟ್ಟು ₹ 37.9 ಲಕ್ಷ ನಗದು ಹಾಗೂ 18.67 ಲಕ್ಷ ಮೌಲ್ಯದ ಮದ್ಯವನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಬೆಳಗಾವಿ ವರದಿ: ನಗರ ಹೊರ ವಲಯದ ಚೆಕ್‌ಪೋಸ್ಟ್‌ನಲ್ಲಿ ಶುಕ್ರವಾರ ಗುತ್ತಿಗೆದಾರರೊಬ್ಬರು ಗೋವಾಗೆ ತೆರಳುತ್ತಿದ್ದ ಕಾರಿನ ಡಿಕ್ಕಿಯಲ್ಲಿಟ್ಟು ಸಾಗಿಸುತ್ತಿದ್ದ ₹ 26 ಲಕ್ಷ ನಗದನ್ನು ವಶಕ್ಕೆ ಪಡೆದಿದ್ದಾರೆ.

'ಪತ್ನಿ ಜೊತೆ ಜಗಳವಾಗಿದೆ. ನೆಮ್ಮದಿಗಾಗಿ ಗೋವಾಗೆ ಹೊರಟಿದ್ದೇನೆ. ಎಲ್ಲಿ ಆನ್‌ಲೈನ್ ಪೇಮೆಂಟ್ ಮಾಡಿದರೂ ಪತ್ನಿ ಪತ್ತೆ ಹಚ್ಚಿ ಬರುತ್ತಾಳೆ. ಹಾಗಾಗಿ, ಹಣ ವಿತ್‌ಡ್ರಾ ಮಾಡಿಕೊಂಡು ಹೊರಟಿದ್ದೇನೆ. ಗೂಗಲ್ ಮ್ಯಾಪ್ ಅಧರಿಸಿ ಗೋವಾಗೆ ಹೊರಟಿದ್ದೆ. ಚುನಾವಣೆ ಅರಿವಿಲ್ಲದೇ ಬೆಳಗಾವಿ ಪ್ರವೇಶಿಸಿದ್ದೇನೆ' ಎಂದು ಹೇಳಿಕೆ ನೀಡಿದ್ದಾರೆ.

₹ 7.9 ಲಕ್ಷ ನಗದು ವಶ (ಮಂಗಳೂರು ವರದಿ): ತಲಪಾಡಿ ಗಡಿ ತಪಾಸಣಾ ಠಾಣೆಯಲ್ಲಿ ಕಾರಿನಲ್ಲಿ ದಾಖಲೆ ಇಲ್ಲದೇ ಸಾಗಿಸುತ್ತಿದ್ದ ₹ 7.9 ಲಕ್ಷ ನಗದನ್ನು ಪೊಲೀಸರು ಶನಿವಾರ ವಶಪಡಿಸಿಕೊಂಡಿದ್ದಾರೆ. 'ಸಾಗಿಸುತ್ತಿದ್ದವರು ಅಗತ್ಯ ದಾಖಲೆ ಒದಗಿಸಿಲ್ಲ' ಎಂದು ನಗರ ಪೊಲೀಸ್ ಕಮಿಷನರ್ ಕುಲದೀಪ್ ಕುಮಾರ್ ಜೈನ್ ತಿಳಿಸಿದರು.

ಮದ್ಯವಶ(ಬಾಗಲಕೋಟೆ ವರದಿ): ಎರಡು ಪ್ರತ್ಯೇಕ ಕಡೆ ತಲಾ ₹2 ಲಕ್ಷ ನಗದು, ಬಾಗಲಕೋಟೆಯಲ್ಲಿ ₹15.37 ಲಕ್ಷ ಮೌಲ್ಯದ ಮದ್ಯವನ್ನು ಶನಿವಾರ ವಶಪಡಿಸಿಕೊಳ್ಳಲಾಗಿದೆ.

ಜಮಖಂಡಿ ಹಾಗೂ ಬಾದಾಮಿಯಲ್ಲಿ ತಲಾ ₹2 ಲಕ್ಷ ವಶಕ್ಕೆ ಪಡೆಯಲಾಗಿದೆ. ಬಾಗಲಕೋಟೆಯಲ್ಲಿ 9,317 ಲೀಟರ್ ಮದ್ಯ ಜಪ್ತಿ ಮಾಡಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಪಿ. ಸುನೀಲ್‌ಕುಮಾರ್ ತಿಳಿಸಿದ್ದಾರೆ.

₹10 ಲಕ್ಷ ಮೌಲ್ಯದ ವಿದೇಶಿ ಮದ್ಯ, ಬಲ್ಬ್ ವಶ: ಜಿಲ್ಲೆಯ ಚಿಂತಾಮಣಿ ಮತ್ತು ಗೌರಿಬಿದನೂರು ತಾಲ್ಲೂಕಿನಲ್ಲಿ ಮತದಾರರಿಗೆ ಹಂಚಲು ಸಾಗಿಸುತ್ತಿದ್ದ ₹ 10 ಲಕ್ಷಕ್ಕೂ ಹೆಚ್ಚು ಮೌಲ್ಯದ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಚಿಂತಾಮಣಿಯಲ್ಲಿ ₹7.23 ಲಕ್ಷ ಮೌಲ್ಯದ ಎಲ್‌ಇಡಿ ಬಲ್ಬ್ ಹಾಗೂ ಗೌರಿಬಿದನೂರು ತಾಲ್ಲೂಕಿನ ಜಿ.ಕೊತ್ತೂರು ಚೆಕ್ ಪೋಸ್ಟ್‌ನಲ್ಲಿ ₹ 3.30 ಲಕ್ಷ ಮೌಲ್ಯದ 400 ವಿದೇಶಿ ಮದ್ಯದ ಬಾಟಲಿ ವಶಕ್ಕೆ ಪಡೆಯಲಾಗಿದೆ.

ಶಿವಮೊಗ್ಗ: ₹ 4.50 ಕೋಟಿ ಮೌಲ್ಯದ ಸೀರೆಗಳ ವಶ

ಶಿವಮೊಗ್ಗ: ಇಲ್ಲಿನ ದೊಡ್ಡಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಕೆ.ಆರ್.ಪುರಂ ರಸ್ತೆಯ ಗೋದಾಮಿನಲ್ಲಿ ಸಂಗ್ರಹಿಸಿ ಇಡಲಾಗಿದ್ದ ₹4.50 ಕೋಟಿ ಮೌಲ್ಯದ ಸೀರೆಗಳನ್ನು ಚುನಾವಣಾ ಅಧಿಕಾರಿಗಳು ಶುಕ್ರವಾರ ರಾತ್ರಿ ವಶಕ್ಕೆ ಪಡೆದಿದ್ದಾರೆ.

'ಖಚಿತ ಮಾಹಿತಿ ಆಧರಿಸಿ ಗೋದಾಮಿನಲ್ಲಿ ಪರಿಶೀಲಿಸಿದಾಗ ಸೀರೆಗಳು ಪತ್ತೆಯಾಗಿವೆ. ಸೀರೆ ಸಂಗ್ರಹಿಸಿಟ್ಟಿದ್ದವರು ತಾವು ಸೀರೆ ವ್ಯಾಪಾರದ ಡೀಲರ್ ಎಂದು ಹೇಳಿಕೊಂಡಿದ್ದಾರೆ.

ಹೀಗಾಗಿ ದಾಖಲೆಗಳನ್ನು ಪರಿಶೀಲಿಸಲು ವಾಣಿಜ್ಯ ತೆರಿಗೆ ಇಲಾಖೆ ಸುಪರ್ದಿಗೆ ವಹಿಸಿದ್ದೇವೆ. ಇನ್ನೂ ಪ್ರಕರಣ ದಾಖಲಿಸಿಕೊಂಡಿಲ್ಲ' ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆದ ಜಿಲ್ಲಾಧಿಕಾರಿ ಡಾ.ಆರ್.ಸೆಲ್ವಮಣಿ 'ಪ್ರಜಾವಾಣಿ'ಗೆ ತಿಳಿಸಿದರು.

ಜನಾರ್ದನ ರೆಡ್ಡಿ ಚಿತ್ರವುಳ್ಳ ಆಂಬುಲೆನ್ಸ್ ವಶಕ್ಕೆ

ಕನಕಗಿರಿ (ಕೊಪ್ಪಳ) ವರದಿ: ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಆರೋಪದಡಿ ಮೇಲೆ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ (ಕೆಆರ್‌ಪಿಪಿ) ಸೇರಿದ ಆಂಬುಲೆನ್ಸ್‌ನ್ನು ಅಧಿಕಾರಿಗಳು ಶನಿವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ.

ಕೆಆರ್‌ಪಿಪಿ ಸಂಸ್ಥಾಪಕ ಗಾಲಿ ಜನಾರ್ದನ ರೆಡ್ಡಿ, ಬಳ್ಳಾರಿ ಮತಕ್ಷೇತ್ರದ ನಿಯೋಜಿತ ಅಭ್ಯರ್ಥಿ ಅರುಣಾ ಲಕ್ಷ್ಮಿ ಮತ್ತು ಕನಕಗಿರಿ ಕ್ಷೇತ್ರದ ನಿಯೋಜಿತ ಅಭ್ಯರ್ಥಿ ಡಾ.ವೆಂಕಟರಮಣ ಅವರ ಭಾವಚಿತ್ರಗಳು ವಾಹನದ ಮೇಲಿದ್ದವು.

ಕಾರಟಗಿ ವರದಿ: ದಾಖಲೆಗಳಿಲ್ಲದೆ ಕಾರಿನಲ್ಲಿ ಸಾಗಿಸುತ್ತಿದ್ದ ₹4.52 ಲಕ್ಷ ಮೌಲ್ಯದ 226 ಸೀರೆಗಳನ್ನು ಕಾರಟಗಿ ಪೊಲೀಸರು ಸಮೀಪದ ಸಿದ್ದಲಿಂಗನಗರದ ಬಳಿ ವಶಪಡಿಸಿಕೊಂಡರು.

ನರಗುಂದದಿಂದ ಸ್ಪರ್ಧೆ: ಸೊಬರದಮಠ

ಹುಬ್ಬಳ್ಳಿ: ಮುಂಬರುವ ಚುನಾವಣೆಯಲ್ಲಿ ಗದಗ ಜಿಲ್ಲೆಯ ನರಗುಂದ ಕ್ಷೇತ್ರದಿಂದ ಸ್ಪರ್ಧಿಸುವುದಾಗಿ ಮಹದಾಯಿ ಹೋರಾಟಗಾರ, ಕರ್ನಾಟಕ ರಾಜ್ಯ ರೈತಸೇನಾ ಅಧ್ಯಕ್ಷ ವೀರೇಶ ಸೊಬರದಮಠ ಶನಿವಾರ ಇಲ್ಲಿ ಘೋಷಿಸಿದರು.

ಕಿಮ್ಮನೆ ರತ್ನಾಕರ್‌ಗೆ ತೀರ್ಥಹಳ್ಳಿ ಟಿಕೆಟ್?

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀರ್ಥಹಳ್ಳಿ ಕ್ಷೇತ್ರದ ಟಿಕೆಟ್‌ಗಾಗಿ ಪೈಪೋಟಿಗಿಳಿದಿದ್ದ ಕಿಮ್ಮನೆ ರತ್ನಾಕರ್ ಮತ್ತು ಆರ್.ಎಂ. ಮಂಜುನಾಥ್ ಗೌಡ ಮಧ್ಯೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಶನಿವಾರ ಸಂಧಾನ ಸಭೆ ನಡೆಸಿದರು. ಮತ್ತೊಮ್ಮೆ ಕಿಮ್ಮನೆ ರತ್ನಾಕರ್ ಅವರನ್ನೇ ಕಣಕ್ಕಿಳಿಸಲು ಸಭೆಯಲ್ಲಿ ಸಹಮತ ವ್ಯಕ್ತವಾಗಿದೆ ಎಂದೂ ಗೊತ್ತಾಗಿದೆ.

ಕಿಮ್ಮನೆ ರತ್ನಾಕರ್ ಕ್ಷೇತ್ರದ ಮಾಜಿ ಶಾಸಕರಾಗಿದ್ದು, ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದರು. ಆದರೆ, ಈ ಬಾರಿ ಟಿಕೆಟ್ ಕೊಡುವಂತೆ ಮಂಜುನಾಥ್ ಗೌಡ ಬೇಡಿಕೆ ಇಟ್ಟಿದ್ದಾರೆ. ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಕಿಮ್ಮನೆ ಅವರಿಗೆ ಚುನಾವಣಾ ಸಿದ್ಧತೆ ನಡೆಸುವಂತೆ ಮೌಖಿಕವಾಗಿ ಸೂಚಿಸಿದ್ದರು. ಅದರಂತೆ ಅವರು ಪ್ರಚಾರ ಆರಂಭಿಸಿದ್ದರು. ಆದರೆ, ಗೊಂದಲ ಕಾರಣದಿಂದಾಗಿ ಮೊದಲ ಪಟ್ಟಿಯಲ್ಲಿ ಕಿಮ್ಮನೆ ಹೆಸರು ಘೋಷಣೆ ಆಗಿರಲಿಲ್ಲ.

ಸಭೆಯ ಬಳಿಕ ಮಾತನಾಡಿದ ಕಿಮ್ಮನೆ ರತ್ನಾಕರ್, 'ತೀರ್ಥಹಳ್ಳಿ ಕ್ಷೇತ್ರದ ಟಿಕೆಟ್ ಯಾರಿಗೆ ಕೊಡಬೇಕು ಎಂಬುದು ಪಕ್ಷದ ತೀರ್ಮಾನಕ್ಕೆ ಬಿಟ್ಟಿದ್ದೇನೆ. ಯಾರ ವಕ್ರದೃಷ್ಟಿ ಬಿದ್ದಿದೆಯೋ ಗೊತ್ತಿಲ್ಲ, ಅವೆಲ್ಲಾ ಹೇಳೋಕೆ ನಾನು ಜ್ಯೋತಿಷ್ಯ ಕಲಿಯಬೇಕಷ್ಟೇ' ಎಂದರು.

'ನಾನು ಒಂದಲ್ಲ ಮೂರು ಮೆಟ್ಟಿಲು ಇಳಿಯೋದಕ್ಕೆ ತಯಾರಿದ್ದೇನೆ. ಟಿಕೆಟ್ ವಿಚಾರವಾಗಿ ನಡೆದ ಸಭೆಯಲ್ಲಿ ನಮ್ಮಿಬ್ಬರ ಕಡೆಯಿಂದಲೂ ಒಂದೇ ರೀತಿಯ ಅಭಿಪ್ರಾಯ ವ್ಯಕ್ತವಾಗಿದೆ. ಯಾರಿಗೆ ಟಿಕೆಟ್ ನೀಡಿದರೂ ಒಗ್ಗಟ್ಟಾಗಿ ಕೆಲಸ ಮಾಡುವುದಾಗಿ ತಿಳಿಸಿದ್ದೇವೆ' ಎಂದರು.

ಮಂಜುನಾಥ್ ಗೌಡ ಮಾತನಾಡಿ, 'ಒಬ್ಬರಿಗೆ ವಿಧಾನಸಭೆ, ಒಬ್ಬರಿಗೆ ವಿಧಾನ ಪರಿಷತ್ ಎಂದು ಹೇಳಿದ್ರು. ಇಬ್ಬರೂ ಒಗ್ಗಟ್ಟಾಗಿ ಹೋಗಿ ಎಂದಿದ್ದಾರೆ. ನನ್ನ ಪ್ರಕಾರ ನನಗೇ ಟಿಕೆಟ್ ಕೊಡ್ತಾರೆ ಅಂದುಕೊಂಡಿದ್ದೇನೆ. ಯಾವುದೇ ಭಿನ್ನಾಭಿಪ್ರಾಯ ಇಲ್ಲದೇ ಕೆಲಸ ಮಾಡಬೇಕು ಎಂದು ಸೂಚಿಸಿದ್ದಾರೆ' ಎಂದರು.

'ಏಪ್ರಿಲ್ 4ರಂದು ಅಭ್ಯರ್ಥಿ ಘೋಷಣೆ ಮಾಡುವುದಾಗಿ ಹೇಳಿದ್ದಾರೆ. ಬಿಜೆಪಿಯನ್ನು ಸೋಲಿಸುವುದು ನಮ್ಮ ಗುರಿ. ಈ ಸಲ ನಾವು ಗೆಲ್ಲುವುದರಲ್ಲಿ ಅನುಮಾನ ಇಲ್ಲ' ಎಂದರು.

ಶ್ರೀನಿವಾಸಪುರ: 10ನೇ ಬಾರಿ ರಮೇಶ್ ಕುಮಾರ್ -ವೆಂಕಟಶಿವಾರೆಡ್ಡಿ ಪೈಪೋಟಿ

ಇಬ್ಬರ ರಾಜಕೀಯ ಜಿದ್ದಾಜಿದ್ದಿಗೆ 40 ವರ್ಷ!

● ಕೆ.ಓಂಕಾರ ಮೂರ್ತಿ

ಕೋಲಾರ: ಶ್ರೀನಿವಾಸಪುರ ವಿಧಾನ ಸಭಾ ಕ್ಷೇತ್ರದಲ್ಲಿ ಬರೋಬ್ಬರಿ 40 ವರ್ಷಗಳಿಂದ (ಒಂಬತ್ತು ಚುನಾವಣೆಗಳಲ್ಲಿ) ಕೆ.ಆರ್. ರಮೇಶ್ ಕುಮಾರ್ ಹಾಗೂ ಜಿ.ಕೆ. ವೆಂಕಟಶಿವಾರೆಡ್ಡಿ ನಡುವೆಯೇ ಪೈಪೋಟಿ ಇದೆ.

ಈ ಅವಧಿಯಲ್ಲಿ ಅವರು ಸ್ಪರ್ಧಿಸಿರುವ ಪಕ್ಷಗಳು ಬದಲಾದರೂ 'ಸ್ವಾಮಿ', 'ರೆಡ್ಡಿ' ಎಂದೇ ಪ್ರಸಿದ್ಧರಾಗಿರುವ ಇವರಿಬ್ಬರ ನಡುವಿನ ಜಿದ್ದಾಜಿದ್ದಿಗೆ ತಡೆ ಬಿದ್ದಿಲ್ಲ. ಹಿಂಬಾಲಕರು, ಕಾರ್ಯಕರ್ತರ ಮನಸ್ಸು ಬದಲಾಗಿಲ್ಲ. ಒಮ್ಮೆ ವೆಂಕಟಶಿವಾರೆಡ್ಡಿ ಹಿಡಿತ ಸಾಧಿಸಿದರೆ, ಮತ್ತೊಮ್ಮೆ ರಮೇಶ್ ಕುಮಾರ್ ಗೆಲ್ಲುತ್ತಾ ಬಂದಿದ್ದಾರೆ.

ವೆಂಕಟಶಿವಾರೆಡ್ಡಿ ಕಾಂಗ್ರೆಸ್, ಬಿಜೆಪಿ ಸುತ್ತಿ ಜೆಡಿಎಸ್‌ಗೆ ಬಂದರೆ, ರಮೇಶ್ ಪಕ್ಷೇತರ, ಕಾಂಗ್ರೆಸ್, ಜನತಾ ಪರಿವಾರ ಸುತ್ತಿ ಮತ್ತೆ ಕಾಂಗ್ರೆಸ್‌ಗೆ ಬಂದಿದ್ದಾರೆ.

1978ರಲ್ಲಿ ಚುನಾವಣೆಗೆ ಪದಾರ್ಪಣೆ ಮಾಡಿದ್ದ ರಮೇಶ್ ಕುಮಾರ್ ಕಾಂಗ್ರೆಸ್‌ನಿಂದ ಗೆದ್ದಿದ್ದರು.

ಶ್ರೀನಿವಾಸಪುರ: ರಮೇಶ್ ಕುಮಾರ್–ವೆಂಕಟಶಿವಾರೆಡ್ಡಿ ಪೈಪೋಟಿ


ವರ್ಷ	ಗೆದ್ದವರು	ಪಕ್ಷ	ರನ್ನರ್‌ಅಪ್	ಪಕ್ಷ
1983	ವೆಂಕಟಶಿವಾರೆಡ್ಡಿ	ಕಾಂಗ್ರೆಸ್	ರಮೇಶ್ ಕುಮಾರ್	ಸ್ವತಂತ್ರ
1985	ರಮೇಶ್ ಕುಮಾರ್	ಜನತಾ ಪಾರ್ಟಿ	ವೆಂಕಟಶಿವಾರೆಡ್ಡಿ	ಕಾಂಗ್ರೆಸ್
1989	ವೆಂಕಟಶಿವಾರೆಡ್ಡಿ	ಕಾಂಗ್ರೆಸ್	ರಮೇಶ್ ಕುಮಾರ್	ಜನತಾ ದಳ
1994	ರಮೇಶ್ ಕುಮಾರ್	ಜನತಾ ದಳ	ವೆಂಕಟಶಿವಾರೆಡ್ಡಿ	ಕಾಂಗ್ರೆಸ್
1999	ವೆಂಕಟಶಿವಾರೆಡ್ಡಿ	ಕಾಂಗ್ರೆಸ್	ರಮೇಶ್ ಕುಮಾರ್	ಸ್ವತಂತ್ರ
2004	ರಮೇಶ್ ಕುಮಾರ್	ಕಾಂಗ್ರೆಸ್	ವೆಂಕಟಶಿವಾರೆಡ್ಡಿ	ಬಿಜೆಪಿ
2008	ವೆಂಕಟಶಿವಾರೆಡ್ಡಿ	ಜೆಡಿಎಸ್	ರಮೇಶ್ ಕುಮಾರ್	ಕಾಂಗ್ರೆಸ್
2013	ರಮೇಶ್ ಕುಮಾರ್	ಕಾಂಗ್ರೆಸ್	ವೆಂಕಟಶಿವಾರೆಡ್ಡಿ	ಜೆಡಿಎಸ್
2018	ರಮೇಶ್ ಕುಮಾರ್	ಕಾಂಗ್ರೆಸ್	ವೆಂಕಟಶಿವಾರೆಡ್ಡಿ	ಜೆಡಿಎಸ್

1983ರ ಚುನಾವಣೆಯಿಂದ ಇಬ್ಬರ ಪೈಪೋಟಿ ಆರಂಭವಾಯಿತು. ಆಗ ವೆಂಕಟಶಿವಾರೆಡ್ಡಿ ಕಾಂಗ್ರೆಸ್‌ನಿಂದ ಗೆದ್ದಿದ್ದರು. ಟಿಕೆಟ್ ಕೈತಪ್ಪಿ ಸ್ವತಂತ್ರ ಅಭ್ಯರ್ಥಿಯಾಗಿದ್ದ ರಮೇಶ್ ಕುಮಾರ್ ಅವರು 642 ಮತಗಳಿಂದ ಸೋತಿದ್ದರು.


1999ರಲ್ಲೂ ಅವರು ಸ್ವತಂತ್ರ ಅಭ್ಯರ್ಥಿಯಾಗಿ ವೆಂಕಟಶಿವಾರೆಡ್ಡಿ ಎದುರು 1,193 ಮತಗಳಿಂದ ಸೋತಿದ್ದರು. ರಮೇಶ್ ಕುಮಾರ್ ಎರಡು ಬಾರಿ ಸ್ಪೀಕರ್ ಹಾಗೂ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಮುಖ್ಯಾಂಶಗಳು

- 2 ಬಾರಿ ಪಕ್ಷೇತರರಾಗಿ ಸ್ಪರ್ಧಿಸಿದ್ದ ರಮೇಶ್
- ಒಂಬತ್ತು ಚುನಾವಣೆಗಳಲ್ಲಿ ಪರಸ್ಪರ ಮುಖಾಮುಖಿ



ನಮ್ಮಿಬ್ಬರನ್ನು ಬಿಟ್ಟು ಕ್ಷೇತ್ರದ ಮತದಾರರು ಬೇರೆ ಯಾರನ್ನೂ ಪರಿಗಣಿಸಿಲ್ಲ. ನಮ್ಮಿಬ್ಬರ ಪೈಪೋಟಿ ಮೇಲಿನ ಪ್ರೀತಿ ಇರಬಹುದೇನೋ?
ಜಿ.ಕೆ.ವೆಂಕಟಶಿವಾರೆಡ್ಡಿ
ಜೆಡಿಎಸ್ ಅಭ್ಯರ್ಥಿ



ನಾನಿದನ್ನು ಪೈಪೋಟಿ, ಜಿದ್ದಾಜಿದ್ದಿ ಎನ್ನಲ್ಲ. ಕ್ಷೇತ್ರದ ಎಲ್ಲಾ ವರ್ಗದ ಜನರ ಪ್ರೀತಿ ಇಲ್ಲಿವರೆಗೆ ಕರೆದುಕೊಂಡು ಬಂದಿದೆ. ಜನರೊಂದಿಗೆ ಬೆರೆತಿದ್ದೇನೆ
ಕೆ.ಆರ್.ರಮೇಶ್ ಕುಮಾರ್
ಕಾಂಗ್ರೆಸ್ ಅಭ್ಯರ್ಥಿ

ರಮೇಶ್ ಬ್ರಾಹ್ಮಣ ಸಮುದಾಯಕ್ಕೆ ಸೇರಿದ್ದರೆ, ವೆಂಕಟಶಿವಾರೆಡ್ಡಿ ಒಕ್ಕಲಿಗರು. ಕ್ಷೇತ್ರದಲ್ಲಿ ಪರಿಶಿಷ್ಟರು, ಒಕ್ಕಲಿಗರು, ಮುಸ್ಲಿಂ ಮತದಾರರೇ ಹೆಚ್ಚು. ಆಂಧ್ರದ ಗಡಿಗೆ ಹೊಂದಿಕೊಂಡಿರುವ ತಾಲ್ಲೂಕಿನಲ್ಲಿ ತೆಲುಗು ಪ್ರಭಾವ ಹೆಚ್ಚಿದೆ.

2013, 2018ರಲ್ಲಿ ರಮೇಶ್ ಸತತವಾಗಿ ಎರಡು ಬಾರಿ ಗೆದ್ದಿದ್ದರು. ಈಗ ಕೊನೆಯ ಚುನಾವಣೆ ಎಂದು ಪ್ರಚಾರ ನಡೆಸುತ್ತಿದ್ದು, ಅವರಿಗೆ ಹ್ಯಾಟ್ರಿಕ್ ಗೆಲುವು ಒಲಿಯಲಿ ದೆಯೋ? ವೆಂಕಟಶಿವಾರೆಡ್ಡಿ ಅವರತ್ತ ಮತದಾರರು ಕರುಣೆ ತೋರಲಿದ್ದಾರೆಯೋ ಎಂಬ ಕುತೂಹಲವಿದೆ.

ಬಿಜೆಪಿ ಅಭ್ಯರ್ಥಿಗಳು ಕಳೆದ 3 ಚುನಾವಣೆಗಳಲ್ಲಿ 5 ಸಾವಿರಕ್ಕಿಂತ ಹೆಚ್ಚು ಮತ ಪಡೆದಿಲ್ಲ.

ಸಂಕ್ಷಿಪ್ತ ಸುದ್ದಿ

ಜೆಡಿಎಸ್ ಕಾರ್ಯಕರ್ತರಿಗೆ ತಡೆ, ಶಲ್ಯಕ್ಕೆ ಬೆಂಕಿ

ಔರಾದ್ (ಬೀದರ್ ಜಿಲ್ಲೆ): ತಾಲ್ಲೂಕಿನ ಮಾಳೆಗಾಂವ್ ಮಹಾದೇವ ನಗರ ತಾಂಡಾದಲ್ಲಿ ಜೆಡಿಎಸ್ ಕಾರ್ಯಕರ್ತರಿಗೆ ತಡೆಯೊಡ್ಡಿ, ಪಕ್ಷದ ಚಿಹ್ನೆ ಇದ್ದ ಶಲ್ಯಗೆ ಬೆಂಕಿ ಹಚ್ಚಿದ ಆರೋಪದ ಮೇಲೆ 6 ಜನರ ವಿರುದ್ಧ ಪ್ರಕರಣ ದಾಖಲಾಗಿದೆ.

'ನಾಲ್ಕು ದಿನಗಳ ಹಿಂದೆ ಟಿಕೆಟ್ ಆಕಾಂಕ್ಷಿ ಜೈಸಿಂಗ್ ರಾಠೋಡ್ ಜತೆ ಜೆಡಿಎಸ್ ಕಾರ್ಯಕರ್ತರು ಮಾಳೆಗಾಂವ್ ಮಹಾದೇವ ತಾಂಡಾಕ್ಕೆ ಹೋಗಿದ್ದರು. ತಾಂಡಾದ ಕೆಲ ಯುವಕರು ಪ್ರಧಾನಿ ಮೋದಿ ಮತ್ತು ಪ್ರಭು ಚವಾಣ್ ಪರ ಘೋಷಣೆ ಕೂಗಿ, ಗದ್ದಲ ಎಬ್ಬಿಸಿದರು. ನಮ್ಮ ಪಕ್ಷದ ಶಲ್ಯಗೆ ಬೆಂಕಿ ಹಚ್ಚಿದರು' ಈ ಬಗ್ಗೆ ಹೊಕ್ರಾಣಾ ಠಾಣೆಗೆ ದೂರು ನೀಡಲಾಗಿದೆ' ಎಂದು ಜೆಡಿಎಸ್ ತಾಲ್ಲೂಕು ಘಟಕದ ಅಧ್ಯಕ್ಷ ತಾನಾಜಿ ತೋರಣೆಕರ್ ತಿಳಿಸಿದ್ದಾರೆ.

ಶಾಸಕರಿಬ್ಬರಿಗೆ ನೋಟಿಸ್

ಮಡಿಕೇರಿ: ನೀತಿ ಸಂಹಿತೆ ಉಲ್ಲಂಘಿಸಿದ್ದಕ್ಕಾಗಿ, ಮಡಿಕೇರಿ ಶಾಸಕ ಎಂ.ಪಿ. ಅಪ್ಪಚ್ಚುರಂಜನ್ ಮತ್ತು ವಿರಾಜಪೇಟೆ ಶಾಸಕ ಕೆ.ಜಿ.ಬೋಪಯ್ಯ ಅವರಿಗೆ ಚುನಾವಣಾಧಿಕಾರಿಗಳು ನೋಟಿಸ್ ನೀಡಿದ್ದಾರೆ. ಅನುಮತಿ ಪಡೆಯದೇ ಬಿಜೆಪಿ ಚಿಹ್ನೆ ಬಳಸಿ ಶಿವಕುಮಾರಸ್ವಾಮೀಜಿ ಅವರ ಜಯಂತಿ ಕುರಿತು ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಾಕಿದ್ದಕ್ಕೆ ಅಪ್ಪಚ್ಚುರಂಜನ್ ಅವರಿಗೆ ನೋಟಿಸ್ ನೀಡಲಾಗಿದೆ. ಎಸ್ಸೆಸ್ಸೆಲ್ಸಿ ವಿದ್ಯಾರ್ಥಿಗಳಿಗೆ ಸಾಮಾಜಿಕ ಮಾಧ್ಯಮಗಳಲ್ಲಿ ಶುಭಾಶಯ ತಿಳಿಸಿರುವುದು ನೀತಿ ಸಂಹಿತೆಯ ಉಲ್ಲಂಘನೆ. ವಿವರಣೆ ನೀಡಿ ಎಂದು ಬೋಪಯ್ಯ ಅವರಿಗೆ ತಿಳಿಸಲಾಗಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ರಾಮನವಮಿ ಶುಭಾಶಯ ತಿಳಿಸಿದ್ದಕ್ಕೆ ಕಾಂಗ್ರೆಸ್ ಮುಖಂಡರಾದ ಮಂಥರ್‌ಗೌಡ ಹಾಗೂ ವಿ.ಪಿ.ಶಶಿಧರ್ ಅವರಿಗೂ ನೋಟಿಸ್ ನೀಡಲಾಗಿದೆ.

‘ಫ್ಲೆಮಿಂಗೋ ಸೆಲೆಬ್ರಿಟಿಸ್ ವರ್ಲ್ಡ್’ ಸಂಸ್ಥೆ ತೆರೆದಿದ್ದ ಆರೋಪಿ

ಸಿನಿ ತಾರೆಯರ ಒಡನಾಟ: 58 ಮಂದಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಿನಿಮಾ ಹಾಗೂ ಧಾರಾವಾಹಿಗಳಲ್ಲಿ ಅಭಿನಯಿಸಲು ಅವಕಾಶ ಕೊಡಿಸುವುದಾಗಿ ಹೇಳಿ ಯುವಕ–ಯುವತಿಯರಿಂದ ಹಣ ಪಡೆದು ವಂಚಿಸುತ್ತಿದ್ದ ಆರೋಪದಡಿ ನಾಗೇಂದ್ರ ಪ್ರಸಾದ್ ಅಲಿಯಾಸ್ ದವನ್ ಸುಹಾ (31) ಎಂಬುವವರನ್ನು ರಾಜಾಜಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಚಾಮರಾಜನಗರ ಜಿಲ್ಲೆಯ ಕೊಳ್ಳೆಗಾಲದ ನಾಗೇಂದ್ರ ಪ್ರಸಾದ್, ರಾಜಾಜಿನಗರ ರಾಮಮಂದಿರ ಸಮೀಪದಲ್ಲಿ ‘ಫ್ಲೆಮಿಂಗೋ ಸೆಲೆಬ್ರಿಟಿಸ್ ವರ್ಲ್ಡ್’ ಸಂಸ್ಥೆ ಕಚೇರಿ ತೆರೆದಿದ್ದ. ಸಿನಿ ತಾರೆಯರ ಜೊತೆ ಒಡನಾಟವಿಟ್ಟುಕೊಂಡು, ಅವರ ಹೆಸರಿನಲ್ಲಿ ಯುವಕ–ಯುವತಿಯರಿಂದ ಹಣ ಪಡೆದು ವಂಚಿಸುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ವಂಚನೆಗೀಡಾಗಿದ್ದ 58 ಮಂದಿ ಇತ್ತೀಚೆಗೆ ಠಾಣೆಗೆ ದೂರು ನೀಡಿದ್ದರು. ತಾಂತ್ರಿಕ ಪುರಾವೆ ಆಧರಿಸಿ ನಾಗೇಂದ್ರ ಪ್ರಸಾದ್‌ನನ್ನು ಬಂಧಿಸಲಾಗಿದೆ. ಈತ ಇದುವರೆಗೂ 58 ಮಂದಿಯಿಂದ ₹ 18 ಲಕ್ಷ ಪಡೆದು ವಂಚಿಸಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ತಿಳಿಸಿದರು.

ನಟನೆ ತರಬೇತಿ ಜಾಹೀರಾತು: ‘ಸಿನಿಮಾ–ಧಾರಾವಾಹಿಗಳಲ್ಲಿ ನಟ–ನಟಿಯರಾಗಿ ಅಭಿನಯಿಸಲು ಅವಕಾಶ ಕೊಡಿಸಲಾಗುವುದು’ ಎಂಬುದಾಗಿ ಸಾಮಾಜಿಕ ಮಾಧ್ಯಮಗಳಲ್ಲಿ ಆರೋಪಿ ಜಾಹೀರಾತು ನೀಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಚಿತ್ರ ನಟ ಪ್ರೇಮ್, ನಟಿಯರಾದ ಭವ್ಯಾ, ಸಪ್ತಮಿ ಗೌಡ ಹಾಗೂ ಇತರೆ ಸಿನಿ ತಾರೆಯರ ಜೊತೆ



ನಟ ಪ್ರೇಮ್, ನಟಿಯರಾದ ಭವ್ಯಾ ಹಾಗೂ ಸಪ್ತಮಿ ಗೌಡ ಜೊತೆ ಆರೋಪಿ ನಾಗೇಂದ್ರ ಪ್ರಸಾದ್(ಎಡದಿಂದ ಮೊದಲಿಗ)

ಆರೋಪಿ ಫೋಟೊ ತೆಗೆಸಿಕೊಂಡಿದ್ದ. ಪ್ರೇಮ್ ಹಾಗೂ ಸಪ್ತಮಿ ಗೌಡ, ಆರೋಪಿ ಕಚೇರಿಗೂ ಕೆಲ ಬಾರಿ ಭೇಟಿ ನೀಡಿದ್ದರು. ಸಿನಿ ತಾರೆಯರ ಒಡನಾಟವನ್ನು ದುರುಪಯೋಗಪಡಿಸಿಕೊಂಡಿದ್ದ ಆರೋಪಿ, ‘ನಟ–ನಟಿಯರನ್ನು ನಾನೇ ತಯಾರಿ ಮಾಡಿದ್ದೇನೆ. ನಿಮ್ಮನ್ನೂ ನಟ–ನಟಿಯರಾಗಿ ಮಾಡುತ್ತೇವೆ. ₹25 ಸಾವಿರದಿಂದ ₹ 30 ಸಾವಿರ ಪಾವತಿಸಿ ನಟನೆ ತರಬೇತಿ ಪಡೆಯಿರಿ. ಅವಕಾಶ ಖಚಿತ ಎಂಬುದಾಗಿ ಹೇಳುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಮಾತು ನಂಬಿದ್ದ ಯುವಕ–ಯುವತಿಯರು ಸಂಸ್ಥೆಗೆ ಸೇರುತ್ತಿದ್ದರು. ನಿಗದಿತ ತರಬೇತಿ ಮುಗಿದ ಬಳಿಕವೂ ಆರೋಪಿ ಯಾವುದೇ ಸಿನಿಮಾ–ಧಾರಾವಾಹಿಯಲ್ಲಿ ಅವಕಾಶ ಕೊಡಿಸುತ್ತಿರಲಿಲ್ಲ. ಇದನ್ನು ಪ್ರಶ್ನಿಸಿದ್ದಕ್ಕೆ ಕೆಲವರಿಗೆ ಜೀವ ಬೆದರಿಕೆಯೊಡ್ಡಿದ್ದ. ನೊಂದ ಅಭ್ಯರ್ಥಿಗಳು ಠಾಣೆಗೆ ಬಂದು ದೂರು ನೀಡಿದ್ದರು. ಆ ಪೈಕಿ ಯುವತಿಯೊಬ್ಬರ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಉಳಿದ ದೂರುಗಳನ್ನು ಇದೇ ಪ್ರಕರಣದಲ್ಲಿ ವಿಲೀನ ಮಾಡಲಾಗಿದೆ’ ಎಂದು ಹೇಳಿದರು.

ಮುಖ್ಯ ಪಾತ್ರವೆಂದು ಆಮಿಷ: ‘ಸಿನಿಮಾ–ಧಾರಾವಾಹಿಯಲ್ಲಿ ನಟಿಸುವ ಆಸೆ ಹೊತ್ತು ಬರುತ್ತಿದ್ದವರಿಗೆ ಮುಖ್ಯಪಾತ್ರ ಕೊಡಿಸುವುದಾಗಿ ಆಮಿಷವೊಡ್ಡುತ್ತಿದ್ದ ಆರೋಪಿ, ಅವರಿಂದ ಹೆಚ್ಚಿನ ಹಣ ಪಡೆಯುತ್ತಿದ್ದ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ಸ್ಥಾಪಿಸಿದ್ದ ‘ಫ್ಲೆಮಿಂಗೋ ಸೆಲೆಬ್ರಿಟಿಸ್ ವರ್ಲ್ಡ್’ ಸಂಸ್ಥೆಗೆ ನಟಿ ಭವ್ಯಾ ಅವರು ಮುಖ್ಯ ಮಾರ್ಗ-ದರ್ಶಕರಾಗಿದ್ದರೆಂಬ ಮಾಹಿತಿ ಇದೆ. ಈ ಬಗ್ಗೆ ಪುರಾವೆಗಳನ್ನು ಪರಿಶೀಲಿಸಲಾಗುತ್ತಿದೆ.’

‘ಬಂಧಿತ ಆರೋಪಿ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾನೆ. ಆತನಿಂದ ವಂಚನೆಗೀಡಾಗಿರುವವರು ಯಾರಾದರೂ ಇದ್ದರೆ ಠಾಣೆಗೆ ದೂರು ನೀಡಬಹುದು’ ಎಂದು ಪೊಲೀಸರು ಕೋರಿದ್ದಾರೆ.

ಮುಖ್ಯಾಂಶಗಳು

- ಸಿನಿಮಾ, ಧಾರಾವಾಹಿಗಳಲ್ಲಿ ಅಭಿನಯಿಸುವ ಅವಕಾಶದ ಆಮಿಷ
- ₹ 18 ಲಕ್ಷ ಪಡೆದು ವಂಚನೆ

ಅಪರಾಧ ಸುದ್ದಿಗಳು

ಸ್ಯಾಂಕಿ ಮೇಲ್ಸೇತುವೆ, ರಸ್ತೆ ವಿಸ್ತರಣೆ ಯೋಜನೆ ಸ್ಥಗಿತಕ್ಕೆ ಒತ್ತಾಯ

ಪ್ರತಿಭಟನಕಾರರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಯಾಂಕಿ ಮೇಲ್ಸೇತುವೆ ಹಾಗೂ ರಸ್ತೆ ವಿಸ್ತರಣೆ ಯೋಜನೆ ಸ್ಥಗಿತಗೊಳಿಸುವಂತೆ ಒತ್ತಾಯಿಸಿ ‘ನಾಗರಿಕರ ಒಗ್ಗಟ್ಟು ನಡಿಗೆ’ ಮೂಲಕ ಪ್ರತಿಭಟನೆ ನಡೆಸಿದ್ದವರ ವಿರುದ್ಧ ಸದಾಶಿವನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಯಾವುದೇ ಅನುಮತಿ ಇಲ್ಲದೇ ಕಪ್ಪು ಬಟ್ಟೆ ಧರಿಸಿಕೊಂಡು ಪ್ರತಿಭಟನೆ ನಡೆಸಿದ್ದ 60– 70 ಮಂದಿ, ಸಾರ್ವಜ-ನಿಕರಿಗೆ ತೊಂದರೆಯನ್ನುಂಟು ಮಾಡಿದ್ದರು. ಪ್ರತಿಭಟನೆಯಲ್ಲಿದ್ದ 8 ಮಂದಿ ಪ್ರಮುಖರು ಹಾಗೂ ಇತರರ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿ-ಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಫೆ. 19ರಂದು ಬೆಳಿಗ್ಗೆ 8.30 ಗಂಟೆ ಸುಮಾರಿಗೆ ಸ್ಯಾಂಕಿ ಕೆರೆ ಬಳಿಯ ಪಾದಚಾರಿ ಮಾರ್ಗದಲ್ಲಿ ಪ್ರತಿಭಟ-ನಕಾರರು ಹೊರಟಿದ್ದರು. ಇದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆ ಆಗಿತ್ತು. ಕರ್ತವ್ಯದಲ್ಲಿದ್ದ ಸಿಬ್ಬಂದಿ ಅದನ್ನು ಪ್ರಶ್ನಿಸಿದ್ದಕ್ಕೆ, ಪ್ರತಿಭಟನಕಾರರು ಏರು ಧ್ವನಿಯಲ್ಲಿ ಮಾತನಾಡಿದ್ದರು.’

‘ಪ್ರತಿಭಟನೆ ನಡೆಸುವ ಸಂಬಂಧ ಆರೋಪಿಗಳು ಯಾವುದೇ ಅನುಮತಿ ಪಡೆದಿರಲಿಲ್ಲ. ಪ್ರತಿಭಟನೆ ಕೈಬಿಡುವಂತೆ ಹೇಳಿದರೂ ಸ್ಪಂದಿಸಿರಲಿಲ್ಲ. ಹೆಚ್ಚುವರಿ ಸಿಬ್ಬಂದಿಯನ್ನು ಸ್ಥಳಕ್ಕೆ ಕರೆಸಿಕೊಂಡು ಪ್ರತಿಭಟನಕಾರರನ್ನು ಸ್ಥಳದಿಂದ ಕಳು-ಹಿಸಲಾಗಿತ್ತು’ ಎಂದು ಪೊಲೀಸರು ತಿಳಿಸಿದರು.

‘ಅವಜಿತ್ ಮೈಕೆಲ್, ಕಿಮ್ರೂಕ್ ಅಯ್ಯರ್, ಮಧುಸೂದನ್, ವಿಜಯ್ ನಿಶಾಂತ್, ವಿಜಯಾ ಶೆಣೈ, ರಾಜೀವ್ ಗೌಡ, ಕೃಷ್ಣ ಪಣಿಯಂ, ಪ್ರವೀಣ್ ಪೀಟರ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಒಬ್ಬರನ್ನು ಈಗಾಗಲೇ ವಿಚಾರಣೆ ಮಾಡಲಾಗಿದೆ. ಉಳಿದವರನ್ನು ವಿಚಾರಣೆ ಮಾಡಿ ಹೇಳಿಕೆ ಪಡೆಯಬೇಕಿದೆ’ ಎಂದು ಹೇಳಿದರು.

ಅಮಾನತ್ ಬ್ಯಾಂಕ್ ಹಗರಣ: ಇ.ಡಿಯಿಂದ ಆರೋಪಪಟ್ಟಿ

ಬೆಂಗಳೂರು: ನಗರದ ಅಮಾನತ್ ಸಹಕಾರ ಬ್ಯಾಂಕ್‌ನಿಂದ ₹ 68.43 ಕೋಟಿ ಸಾಲ ಪಡೆದು ವಂಚಿಸಿದ ಆರೋಪದಡಿ ಮೊಹಮ್ಮದ್ ಅಸಾದುಲ್ಲಾ, ಅವರ ನೇತೃತ್ವದ ಅಲ್–ಅಮೀನ್ ಹೌಸಿಂಗ್ ಡೆವಲಪ್‌ಮೆಂಟ್ ಕಂಪನಿ ಮತ್ತು ಇತರರ ವಿರುದ್ಧ ಜಾರಿ ನಿರ್ದೇಶನಾಲಯ (ಇ.ಡಿ) ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ಆರೋಪಪಟ್ಟಿ ಸಲ್ಲಿಸಿದೆ.

1985ರಿಂದ 2002ರ ಅವಧಿಯಲ್ಲಿ ಅಸ್ತಿತ್ವದಲ್ಲೇ ಇಲ್ಲದ ವ್ಯಕ್ತಿಗಳು ಹಾಗೂ ಅನುಮಾನಾಸ್ಪದ ಖಾತೆಗಳಿಗೆ ಸಾಲ ಮಂಜೂರು ಮಾಡಿರುವುದು ಮತ್ತು ಅಕ್ರಮವಾಗಿ ಚೆಕ್‌ಗಳನ್ನು ನಗದೀಕರಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಕಮರ್ಷಿಯಲ್ ಸ್ಟ್ರೀಟ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿ ತನಿಖೆ ನಡೆಸಿದ್ದರು. ಬಳಿಕ ಪ್ರಕರಣವನ್ನು ಸಿಐಡಿಗೆ ವರ್ಗಾಯಿಸಿದ್ದು, 2006ರಲ್ಲಿ ಆರೋಪಪಟ್ಟಿ ಸಲ್ಲಿಸಲಾಗಿತ್ತು. ಪೊಲೀಸರ ವರದಿ ಆಧರಿಸಿ ಇ.ಡಿ ಅಧಿಕಾರಿಗಳು ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಪ್ರತ್ಯೇಕ ಪ್ರಕರಣ ದಾಖಲಿಸಿದ್ದರು.

ಕಂಪನಿ ಹೆಸರಿನಲ್ಲಿ ಸಾಲ ಪಡೆದು ವೈಯಕ್ತಿಕ ಉದ್ದೇಶಕ್ಕೆ ಬಳಸಿಕೊಂಡು ಬ್ಯಾಂಕ್‌ಗೆ ನಷ್ಟ ಉಂಟು ಮಾಡಿರುವುದು ತನಿಖೆಯಲ್ಲಿ ಪತ್ತೆಯಾಗಿದೆ. ಈ ಪ್ರಕರಣದಲ್ಲಿ ಮೊಹಮ್ಮದ್ ಅಸಾದುಲ್ಲಾ ಮತ್ತು ಇತರರಿಗೆ ಸೇರಿದ ₹ 243.93 ಕೋಟಿ ಮಾರುಕಟ್ಟೆ ಮೌಲ್ಯದ ಆಸ್ತಿಗಳನ್ನು ವಶಕ್ಕೆ ಪಡೆಯಲಾಗಿದೆ. ಆರ್ಥಿಕ ಅಪರಾಧಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ ಎಂದು ಇ.ಡಿ ತಿಳಿಸಿದೆ.

ಮನೆಗಳಲ್ಲಿ ಕಳ್ಳತನ: ನೇಪಾಳದ ಐವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವು ಮನೆಗಳಲ್ಲಿ ಕಳ್ಳತನ ಮಾಡಿದ್ದ ಐವರು ಆರೋಪಿಗಳನ್ನು ವಿದ್ಯಾರಣ್ಯಪುರ ಪೊಲೀಸರು ಬಂಧಿಸಿದ್ದಾರೆ.

‘ನೇಪಾಳದ ಮೋಹನ್ ಸಿಂಗ್ ಅಲಿಯಾಸ್ ನವೀನ್ ಅಮರ್‌ಸಿಂಗ್, ಜನಕ್ ಜೆಸ್ಸಿ, ಸೀತಾರಾಮ್, ಬಿಬೇಕ್ ಹಾಗೂ ಕಮಲ್ ಬಂಧಿತರು. ಇವರಿಂದ ₹ 50 ಸಾವಿರ ನಗದು ಹಾಗೂ ₹ 35.50 ಲಕ್ಷ ಮೌಲ್ಯದ ಚಿನ್ನಾಭರಣ, ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

‘ನೇಪಾಳದಿಂದ ನಗರಕ್ಕೆ ಬಂದಿದ್ದ ಆರೋಪಿಗಳು ಹಲವೆಡೆ ಸುತ್ತಾಡು-ತ್ತಿದ್ದರು. ಅಂಗಳದಲ್ಲಿ ಕಸ ಬಿದ್ದಿರು-ತ್ತಿದ್ದ ಹಾಗೂ ರಂಗೋಲಿ ಹಾಕಿರದ ಮನೆಗಳನ್ನು ಗುರುತಿಸುತ್ತಿದ್ದರು. ಮನೆಗಳಲ್ಲಿ ಯಾರೂ ಇಲ್ಲದಿರುವು-ದನ್ನು ತಿಳಿದುಕೊಂಡು ರಾತ್ರಿ ವೇಳೆ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು’ ಎಂದರು.

‘ವಿದ್ಯಾರಣ್ಯಪುರ ಹಾಗೂ ಯಲಹಂಕ ನ್ಯೂ ಟೌನ್ ಠಾಣೆ ವ್ಯಾಪ್ತಿಯ ಮನೆಗಳಲ್ಲಿ ಕಳ್ಳತನ ನಡೆದಿತ್ತು. ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಾಗ ಆರೋಪಿಗಳ ಸುಳಿವು ಸಿಕ್ಕಿತ್ತು. ಸದ್ಯ ಐವರು ಆರೋಪಿಗಳು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಮಹಿಳೆಯರಿಗೆ ಸೂಕ್ತ ಭದ್ರತೆ ನೀಡಲು ಆಗ್ರಹ

ಬೆಂಗಳೂರು: ರಾಜಧಾನಿಯಲ್ಲಿ ಮಹಿಳೆಯರಿಗೆ ಸೂಕ್ತ ರಕ್ಷಣೆ ನೀಡಬೇಕು ಎಂದು ಅಖಿಲ ಭಾರತ ಸಾಂಸ್ಕೃತಿಕ ಸಂಘಟನೆ ಆಗ್ರಹಿಸಿದೆ.

ಬೆಂಗಳೂರಿನ ಕೋರಮಂಗಲದ ಬಳಿ 19 ವರ್ಷದ ಯುವತಿ ಮೇಲೆ ಚಲಿಸುತ್ತಿದ್ದ ಕಾರಿನಲ್ಲಿ ನಾಲ್ವರು ಆರೋಪಿಗಳು ನಡೆಸಿದ ಸಾಮೂಹಿಕ ಅತ್ಯಾಚಾರ ಪ್ರಕರಣವನ್ನು ಎಐಎಂಎಸ್‌ಎಸ್ ಖಂಡಿಸಿದೆ.

‘ಕೆಲ ತಿಂಗಳ ಹಿಂದೆ ಕನಕ ಪುರದ ಬಳಿ ಪ್ರೀತಿ ನಿರಾಕರಿಸಿದ ಯುವತಿ ಮೇಲೆ ಆ್ಯಸಿಡ್ ದಾಳಿ ಪ್ರಕರಣ ಬೆಂಗಳೂರಿನ ಜನಮಾನಸದಿಂದ ಮರೆಯಾಗುವ ಮುನ್ನ ಸಾಮೂಹಿಕ ಅತ್ಯಾಚಾರ ಪ್ರಕರಣವು ಜನರಲ್ಲಿ ನಡುಕ ಉಂಟು ಮಾಡಿದೆ’ ಎಂದು ಜಿಲ್ಲಾ ಕಾರ್ಯದರ್ಶಿ ಎ.ಶಾಂತ ಆತಂಕ ವ್ಯಕ್ತಪಡಿಸಿದ್ದಾರೆ.

‘ಮಹಿಳೆಯರ ಮೇಲೆ ಎಸಗುವ ಅಪರಾಧ ಪ್ರಕರಣಗಳಲ್ಲಿ ದೇಶದ ಮಾಹಿತಿ ತಂತ್ರಜ್ಞಾನ ರಾಜಧಾನಿ ಬೆಂಗಳೂರು, ದೇಶದ ಮೆಟ್ರೊ ನಗರಗಳ ಪೈಕಿ 3ನೇ ಸ್ಥಾನ ಪಡೆದಿದೆ. 2021ರಲ್ಲಿ ಮಹಿಳೆಯರ ಮೇಲಿನ ಅಪರಾಧಗಳು ಶೇ 40 ಹೆಚ್ಚಾಗಿವೆ. 1,226 ಅತ್ಯಾಚಾರ ಘಟನೆಗಳು ಮತ್ತು 136 ವರದಕ್ಷಿಣೆ ಸಾವುಗಳು ಸಂಭವಿಸಿವೆ’ ಎಂದರು.

‘ಬೆಂಗಳೂರಿನಲ್ಲಿ ನಾಲ್ಕು ವರ್ಷಗಳಿಂದ ಪೋಕ್ಸೊ ಪ್ರಕರಣಗಳ ಸಂಖ್ಯೆ ನಿರಂತರವಾಗಿ ಏರಿಕೆಯಾಗು-ತ್ತಿದೆ. ಕಳೆದ ಮೂರು ತಿಂಗಳಲ್ಲಿಯೇ 200ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ’ ಎಂದೂ ಮಾಹಿತಿ ನೀಡಿದ್ದಾರೆ.

---

15 ಕೋಟಿಗೆ ತಿಮಿಂಗಿಲ ವಾಂತಿ ಮಾರಲು ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ಮೀನುಗಾರರಿಂದ ತಿಮಿಂಗಿಲದ ವಾಂತಿ ಖರೀದಿಸಿ ತಂದು ನಗರದಲ್ಲಿ ಮಾರಲು ಯತ್ನಿಸುತ್ತಿದ್ದ ಐವರು ಆರೋಪಿಗಳನ್ನು ಕುಮಾರಸ್ವಾಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಕೇರಳದ ಸಾಜೀರ್ (36), ಸಲೀಂ (30), ಚಾರ್ಲ್ಸ್ (34), ವಿಜು (41) ಹಾಗೂ ನೌಷಾದ್ (46) ಬಂಧಿತರು. ಅಕ್ರಮ ಹಣ ಸಂಪಾದಿಸಲು ತಂಡ ಕಟ್ಟಿಕೊಂಡಿದ್ದ ಆರೋಪಿಗಳು, ₹ 15 ಕೋಟಿ ಮೊತ್ತಕ್ಕೆ ತಿಮಿಂಗಿಲದ ವಾಂತಿ ಮಾರಲು ಯತ್ನಿಸುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸುಗಂಧ ದ್ರವ್ಯ ತಯಾರಿಸಲು ತಿಮಿಂಗಿಲದ ವಾಂತಿ ಬೇಕಾಗಿದೆ. ಎಷ್ಟು ಕೋಟಿ ಹಣವಾದರೂ ನೀಡುತ್ತೇನೆ’ ಎಂಬುದಾಗಿ ವ್ಯಕ್ತಿಯೊಬ್ಬರು ಹೇಳಿದ್ದರು. ವಾಂತಿಗಾಗಿ ಆರೋಪಿಗಳು ಹುಡುಕಾಟ ಆರಂಭಿಸಿದ್ದರು. ಸಮುದ್ರದ ದಡದಲ್ಲಿ ಸಿಕ್ಕಿದ್ದ ತಿಮಿಂಗಿಲದ ವಾಂತಿಯನ್ನು ಕೆಲ ಮೀನುಗಾರರು ಸಂಗ್ರಹಿಸಿಟ್ಟು-ಕೊಂಡಿದ್ದರು. ಅವರನ್ನು ಸಂಪರ್ಕಿಸಿದ್ದ ಆರೋಪಿಗಳು, ಹಣ ನೀಡಿ ವಾಂತಿ ಖರೀದಿಸಿದ್ದರು.’

‘ಆರೋಪಿಗಳು ವಾಂತಿ ಸಮೇತ ಮಾರ್ಚ್ 30ರಂದು ಬೆಂಗಳೂರಿಗೆ ಬಂದಿದ್ದರು. ₹ 15 ಕೋಟಿ ಮೌಲ್ಯಕ್ಕೆ ವಾಂತಿ ಮಾರಲು ಯತ್ನಿಸುತ್ತಿದ್ದರೆಂಬು-ದು ಗೊತ್ತಾಗಿದೆ. ಆದರೆ, ಅಷ್ಟು ಮೊತ್ತಕ್ಕೆ ವಾಂತಿ ಖರೀದಿಸುತ್ತಿದ್ದ ವ್ಯಕ್ತಿಯ ಹೆಸರು ಏನು ಹಾಗೂ ವಾಂತಿಯನ್ನು ಆತ ಯಾವುದಕ್ಕೆ ಬಳಸುತ್ತಿದ್ದ ಎಂಬ ಮಾಹಿತಿ ಸದ್ಯಕ್ಕೆ ಲಭ್ಯವಾಗಿಲ್ಲ’ ಎಂದು ಪೊಲೀಸರು ತಿಳಿಸಿದರು.

‘ಸುಗಂಧ ದ್ರವ್ಯ ತಯಾರಿಕೆಯಲ್ಲಿ ತಿಮಿಂಗಿಲದ ವಾಂತಿ ಬಳಸಲಾಗುತ್ತದೆ. ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಬೆಲೆಯೂ ಇದೆ. ಜಪ್ತಿ ಮಾಡಿರುವ ವಾಂತಿಯ ಬೆಲೆ ₹ 15 ಕೋಟಿ ಇದೆಯಾ ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ಹೇಳಿದರು.

---

800 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಕೆ

ನವದೆಹಲಿ (ಪಿಟಿಐ): ಕಾರಿನಡಿ ಸಿಲುಕಿದ್ದ ಯುವತಿಯನ್ನು 12 ಕಿ.ಮೀ ಎಳೆದೊಯ್ದ ‘ಕಂಝಾವಾಲಾ ಅಪಘಾತ’ ಪ್ರಕರಣದ ಏಳು ಆರೋಪಿಗಳ ವಿರುದ್ಧ ದೆಹಲಿ ಪೊಲೀಸರು ಶನಿವಾರ 800 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಸುಮಾರು 117 ಸಾಕ್ಷಿಗಳ ವಿಚಾರಣೆ ಆಧಾರದಲ್ಲಿ ಈ ದೋಷಾರೋಪ ಪಟ್ಟಿ ಸಿದ್ಧಪಡಿಸಲಾ-ಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳಾದ ಅಮಿತ್ ಖನ್ನಾ, ಕೃಷ್ಣನ್, ಮಿಥುನ್ ಮತ್ತು ಮನೋಜ್ ಮಿತ್ತಲ್ ವಿರುದ್ಧ ಕೊಲೆ ಪ್ರಕರಣ ದಾಖಲಿಸಲಾಗಿದೆ. ಉಳಿದಂತೆ ಎಲ್ಲಾ ಆರೋಪಿಗಳ ವಿರುದ್ಧ ಕ್ರಿಮಿನಲ್ ಪಿತೂರಿ, ಸಾಕ್ಷ್ಯ ನಾಶ, ತಪ್ಪು ಮಾಹಿತಿ ನೀಡಿಕೆ ಮತ್ತಿತರ ಪ್ರಕರಣ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ.

ಪ್ರಕರಣ ಸಂಬಂಧಿಸಿದಂತೆ ಐವರು ಆರೋಪಿಗಳನ್ನು ಜ.2ರಂದು ಬಂಧಿಸಲಾಗಿದೆ. ಇವರ ನ್ಯಾಯಾಂಗ ಬಂಧನ ಅವಧಿಯನ್ನು ಏ.13ರವರೆಗೆ ಕೋರ್ಟ್ ವಿಸ್ತರಿಸಿದೆ. ಉಳಿದ ಇಬ್ಬರು ಜಾಮೀನಿನ ಮೇಲೆ ಹೊರಗಿದ್ದಾರೆ.

ದೆಹಲಿ ಹೊರಭಾಗದ ಸುಲ್ತಾ-ನ್‌ಪುರಿಯಲ್ಲಿ ಜನವರಿ 1ರಂದು ಸ್ಕೂಟಿಗೆ ಕಾರು ಡಿಕ್ಕಿ ಹೊಡೆದಿದ್ದರಿಂದಾಗಿ 20 ವರ್ಷದ ಅಂಜಲಿ ಸಿಂಗ್ ಮೃತಪಟ್ಟಿದ್ದರು. ಕಾರಿನಡಿ ಸಿಲುಕಿದ್ದ ಆಕೆಯ ಮೃತದೇಹವನ್ನು ಸುಮಾರು 12 ಕಿ.ಮೀ.ವರೆಗೂ ಎಳೆದೊಯ್ಯಲಾಗಿತ್ತು.

₹ 30 ಲಕ್ಷ ನಗದು ಜಪ್ತಿ

ಬೆಂಗಳೂರು: ಲಾಲ್‌ಬಾಗ್ ಪಶ್ಚಿಮ ಪ್ರವೇಶ ದ್ವಾರದ ಎದುರಿನ ರಸ್ತೆಯಲ್ಲಿ ಅಕ್ರಮವಾಗಿ ಸಾಗಿಸುತ್ತಿದ್ದ ₹ 30 ಲಕ್ಷವನ್ನು ಸಿದ್ದಾಪುರ ಠಾಣೆ ಪೊಲೀಸರು ಜಪ್ತಿ ಮಾಡಿದ್ದು, ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ.

‘ರಂಜನ್ ಗುಜ್ಜರ್ ಹಾಗೂ ರತನ್ ಎಂಬುವವರು ಶುಕ್ರವಾರ ರಾತ್ರಿ ದ್ವಿಚಕ್ರ ವಾಹನದಲ್ಲಿ ಹೊರಟಿದ್ದರು. ಅವರನ್ನು ಸಿಬ್ಬಂದಿ ತಪಾಸಣೆ ನಡೆಸಿದಾಗ ಹಣ ಪತ್ತೆಯಾಗಿದೆ. ಸೂಕ್ತ ದಾಖಲೆ ಇಲ್ಲದ ಕಾರಣ ಹಣ ಜಪ್ತಿ ಮಾಡಿ, ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

‘ರಂಜನ್ ಹಾಗೂ ರತನ್ ಉಕ್ಕಿನ ಕಂಪನಿಯೊಂದರ ಉದ್ಯೋಗಿಗಳೆಂದು ಗೊತ್ತಾಗಿದೆ. ಕಂಪನಿಗೆ ಸೇರಿದ್ದ ಹಣ ತೆಗೆದುಕೊಂಡು ಹೊರಟಿದ್ದಾಗ ಆರೋಪಿಗಳು ಹೇಳಿಕೆ ನೀಡಿದ್ದಾರೆ. ಆದರೆ, ಇದುವರೆಗೂ ಯಾವುದೇ ದಾಖಲೆ ನೀಡಿಲ್ಲ. ಹಣ ಯಾರಿಗೆ ಸೇರಿದ್ದು ಎಂಬುದನ್ನು ತಿಳಿಯಲು ತನಿಖೆ ಮುಂದುವರಿಸಲಾಗಿದೆ’ ಎಂದು ತಿಳಿಸಿದರು.

ಶ್ರೀನಿವಾಸಸಾಗರ ಜಲಾಶಯದಲ್ಲಿ ಮುಳುಗಿ ಮೂವರ ಸಾವು

ಚಿಕ್ಕಬಳ್ಳಾಪುರ: ತಾಲ್ಲೂಕಿನ ಶ್ರೀನಿವಾಸಸಾಗರ ಜಲಾಶಯದಲ್ಲಿ ಮುಳುಗಿ ಶನಿವಾರ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಬೆಂಗಳೂರಿನ ಲಿಂಗರಾಜಪುರದ ಪೂಜಾ (21), ನಾಗವಾರ ಬಳಿಯ ಅಮರಜ್ಯೋತಿ ನಗರದ ಇಮ್ರಾನ್ ಖಾನ್ (21), ಯಲಹಂಕದ ರಾಧಿಕಾ (21) ಮೃತರು. ಈ ಮೂವರು ಬೆಂಗಳೂರಿನ ಖಾಸಗಿ ಕಾಲೇಜೊಂದರಲ್ಲಿ ಡಿ.ಫಾರ್ಮ್ ಓದುತ್ತಿದ್ದರು. ಆರು ಸ್ನೇಹಿತರ ಜತೆ ಇವರು ಶ್ರೀನಿವಾಸಸಾಗರಕ್ಕೆ ಪ್ರವಾಸಕ್ಕೆ ಬಂದಿದ್ದರು. ಜಲಾಶಯದ ಹಿನ್ನೀರಿಗೆ ಇಳಿದಾಗ ಮೂವರು ಮುಳುಗಿದ್ದಾರೆ. ಚನ್ನರಾಮ, ಸುನೀತಾ ಮತ್ತು ವಿಕಾಸ್ ಅಪಾಯದಿಂದ ಪಾರಾಗಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಜಲಾಶಯದಲ್ಲಿ ಶೋಧ ಕಾರ್ಯ ನಡೆಸಿದ್ದ ಪೂಜಾ ಶವ ಪತ್ತೆಯಾಗಿದೆ. ಚಿಕ್ಕಬಳ್ಳಾಪುರ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕ್ಲಿನಿಕ್ ಆನ್ ವೀಲ್ಸ್' ಸರಣಿಯಡಿ ವಿವಿಧ ಕಾರ್ಯಕ್ರಮ

ಮನೆ ಬಾಗಿಲಿಗೆ ಆರೋಗ್ಯ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲಘು ಉದ್ಯೋಗ ಭಾರತಿ ಕರ್ನಾಟಕದ ಸಹಯೋಗದಲ್ಲಿ ಐಎಂಎಸ್ ಪ್ರತಿಷ್ಠಾನವು ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿ (ಸಿಎಸ್‌ಆರ್) ಅಡಿ 'ಮನೆ ಬಾಗಿಲಿಗೆ ಆರೋಗ್ಯ ಸೇವೆ' ಪ್ರಾರಂಭಿಸಿದೆ.

'ಕ್ಲಿನಿಕ್ ಆನ್ ವೀಲ್ಸ್' ಎಂಬ ಸರಣಿಯಡಿ ಪ್ರತಿಷ್ಠಾನವು ವಿವಿಧ ಕಾರ್ಯಕ್ರಮ ಹಮ್ಮಿಕೊಂಡಿದ್ದು, ನಗರದಲ್ಲಿ ಶನಿವಾರ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಚಾಲನೆ ನೀಡಿದರು.

'ಸೊಳ್ಳೆಗಳ ಕಡಿತದಿಂದ ಹರಡುವ ಡೆಂಗಿ, ಚಿಕೂನ್‌ಗುನ್ಯಾದಂತಹ ಕಾಯಿಲೆ ಹೆಚ್ಚಳಕ್ಕೆ ಜಾಗೃತಿ ಕೊರತೆ ಪ್ರಮುಖ ಕಾರಣ. ಆದ್ದರಿಂದ ಸಾರ್ವಜನಿಕ ಪ್ರದೇಶಗಳಲ್ಲಿ ಎಲ್‌ಇಡಿ ಪರದೆ ಇರಿಸಿ, ಪ್ರಾದೇಶಿಕ ಭಾಷೆಗಳಲ್ಲಿ ಆರೋಗ್ಯ ಸಂಬಂಧಿ ಜಾಗೃತಿ ವಿಡಿಯೊಗಳನ್ನು ಪ್ರಸಾರ ಮಾಡಲಾಗುತ್ತದೆ. ಮೊಬೈಲ್ ಕ್ಲಿನಿಕ್‌ಗಳ ನೆರವಿನಿಂದ ಆರೋಗ್ಯ ತಪಾಸಣೆಗೆ ಆದ್ಯತೆ ನೀಡಲಾಗುತ್ತದೆ. ಆರೋಗ್ಯಕ್ಕೆ ಸಂಬಂಧಿಸಿದಂತೆ ಅಧ್ಯಯನ ಕೈಗೊಳ್ಳಲು ರಕ್ತದ ಮಾದರಿಗಳನ್ನು ಸಂಗ್ರಹಿಸಲಾಗುತ್ತದೆ. ಪ್ರತಿ ರೋಗಿಯ ಆರೋಗ್ಯದ ಪ್ರೊಫೈಲ್ ಸಿದ್ಧಪಡಿಸಲಾಗುತ್ತದೆ' ಎಂದು ಪ್ರತಿಷ್ಠಾನದ ಮುಖ್ಯಸ್ಥೆ ಡಾ. ಸ್ವಪ್ನಾ ಸಿಂಗ್ ತಿಳಿಸಿದರು.



ಮೊಬೈಲ್ ಕ್ಲಿನಿಕ್

'ಅಧಿಕ ರಕ್ತದೊತ್ತಡ, ಮಧುಮೇಹ ಸೇರಿ ವಿವಿಧ ಜೀವನಶೈಲಿ ಕಾಯಿಲೆಗಳಿಗೆ ಚಿಕಿತ್ಸೆ ನೀಡಲು ಅಗತ್ಯ ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ರೋಗಿಗಳಿಗೆ ಉಚಿತ ಔಷಧ ಒದಗಿಸಲಾಗುತ್ತದೆ. ಹೆಚ್ಚಿನ ಚಿಕಿತ್ಸೆ ಅಗತ್ಯವಿದ್ದಲ್ಲಿ ಹತ್ತಿರದ ಆಸ್ಪತ್ರೆಗೆ ಕರೆದೊಯ್ಯಲಾಗುತ್ತದೆ. ಆಹಾರ ಪದ್ಧತಿಯ ಬಗ್ಗೆಯೂ ತಿಳಿಸಿಕೊಡಲಾಗುತ್ತದೆ' ಎಂದು ಹೇಳಿದರು.

'ಕ್ಲಿನಿಕ್ ಆನ್ ವೀಲ್ಸ್ ಅಡಿ ವೈದ್ಯಕೀಯ ಸೇವೆಗಳ ಜತೆಗೆ ಸಾಮಾಜಿಕ ಕಳಕಳಿಯನ್ನೂ ಮೆರೆಯಲಾಗುತ್ತದೆ. ಗ್ರಾಮೀಣ ಭಾಗದ ಜನರು ಆರೋಗ್ಯವಾಗಿದ್ದಲ್ಲಿ ಶಕ್ತಿಯುತ ರಾಷ್ಟ್ರ ನಿರ್ಮಾಣ ಸಾಧ್ಯ. ಆದ್ದರಿಂದ ಮನೆ ಬಾಗಿಲಿಗೆ ಆರೋಗ್ಯ ಸೇವೆ ಪ್ರಾರಂಭಿಸಲಾಗಿದೆ. ಡಿಜಿಟಲ್ ತಂತ್ರಜ್ಞಾನದ ನೆರವಿನಿಂದ ಆರೋಗ್ಯದ ಬಗ್ಗೆ ಶಿಕ್ಷಣವನ್ನೂ ನೀಡಲಾಗುತ್ತದೆ' ಎಂದು ವಿವರಿಸಿದರು.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಇದ್ದರು.

'ಕಾಯಕ, ದಾಸೋಹದ ಮಹತ್ವ ಸಾರಿದ ಸ್ವಾಮೀಜಿ'

ಶಿವಕುಮಾರ ಸ್ವಾಮೀಜಿ 116ನೇ ಜನ್ಮದಿನೋತ್ಸವ, ಗುರುವಂದನಾ ಕಾರ್ಯಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರ ವಿಧಾನಸಭಾ ಕ್ಷೇತ್ರದ ಮೂಡಲಪಾಳ್ಯದಲ್ಲಿ ಶನಿವಾರ ವಿ.ಸೋಮಣ್ಣ ಪ್ರತಿಷ್ಠಾನದಿಂದ ಶಿವಕುಮಾರ ಸ್ವಾಮೀಜಿ ಅವರ 116ನೇ ಜನ್ಮದಿನೋತ್ಸವ, ಗುರುವಂದನಾ ಕಾರ್ಯಕ್ರಮ ನಡೆಯಿತು.

ಶಿವಕುಮಾರ ಸ್ವಾಮೀಜಿ ಅವರ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದ ಬೇಲಿಮಠದ ಶಿವರುದ್ರ ಸ್ವಾಮೀಜಿ ಬಳಿಕ ಮಾತನಾಡಿ, 'ಸಮಾಜದಲ್ಲಿ ಜ್ಞಾನದ ದೀಪವಾಗಿ, ಎಲ್ಲರ ಬಾಳಿಗೆ ಬೆಳಕಾಗಿ ನಿಂತವರು ಶಿವಕುಮಾರ ಸ್ವಾಮೀಜಿ. ಶ್ರಮ, ಬೆವರ ಹನಿಯಿಂದ ದುಡಿದ ಹಣದಲ್ಲಿ ಸ್ವಾಭಿಮಾನಿಯಾಗಿ ಬದುಕು ಸಾಗಿಸಬೇಕು' ಎಂದು ಹೇಳಿದರು.

ಇಸ್ರೊ ಮಾಜಿ ಅಧ್ಯಕ್ಷ ಡಾ.ಎ.ಎಸ್. ಕಿರಣ್ ಕುಮಾರ್ ಮಾತನಾಡಿ,'ಅನ್ನ, ಶಿಕ್ಷಣ, ಆಶ್ರಯವನ್ನು ಸಮಾಜಕ್ಕೆ ನೀಡಿದ ಮಹಾನ್ ಸಂತ ಎಂದರೆ ಶಿವಕುಮಾರ್ ಸ್ವಾಮೀಜಿ. ವಿಜ್ಞಾನ, ತಂತ್ರಜ್ಞಾನಗಳ ಫಲವಾಗಿ ವಿಶ್ವ ಅತಿವೇಗವಾಗಿ ಬೆಳೆಯುತ್ತಿದ್ದರೂ, ಮನುಷ್ಯ ನೆಮ್ಮದಿಯ ಜೀವನ ಸಾಗಿಸಲು ಕೆಲವು ಶಕ್ತಿಗಳ ಪ್ರೇರಣೆ ಅಗತ್ಯ' ಎಂದರು.


ಶಿವಕುಮಾರ ಸ್ವಾಮೀಜಿ ಅವರ 116ನೇ ಜನ್ಮದಿನೋತ್ಸವ ಅಂಗವಾಗಿ ಅವರ ಪ್ರತಿಮೆಗೆ ಜಯದೇವ ಆಸ್ಪತ್ರೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್, ಇಸ್ರೋ ಮಾಜಿ ಅಧ್ಯಕ್ಷ ಎ.ಎಸ್.ಕಿರಣ್ ಕುಮಾರ್, ಶೈಲಜಾ ಸೋಮಣ್ಣ, ಸಚಿವ ವಿ.ಸೋಮಣ್ಣ, ಬೇಲಿಮಠದ ಶಿವರುದ್ರ ಸ್ವಾಮೀಜಿ ಪುಷ್ಪನಮನ ಸಲ್ಲಿಸಿದರು
– ಪ್ರಜಾವಾಣಿ ಚಿತ್ರ

ಜಯದೇವ ಆಸ್ಪತ್ರೆ ನಿರ್ದೇಶಕ ಸಿ.ಎನ್.ಮಂಜುನಾಥ್ ಮಾತನಾಡಿ, 'ಶ್ರೀಗಳು ಮಾಡಿದ ಸಾಧನೆ ವಿಶ್ವಕ್ಕೆ ಮಾದರಿ. ಶಿಕ್ಷಣದ ಮೂಲಕ ಸಂಸ್ಕಾರ, ಮಾನವೀಯತೆ ಮತ್ತು ಜ್ಞಾನದ ಮೂಲಕ ಸಮಾಜದ ಮೇಲೆ ಬೆಳಕು ಚೆಲ್ಲುವ ಕಾರ್ಯವನ್ನು ಸ್ವಾಮೀಜಿ ಮಾಡಿದ್ದರು. ನಮ್ಮ ಆತ್ಮತೃಪ್ತಿಯಿಂದ ಕೆಲಸ ಮಾಡಬೇಕು. ಸಂತರು, ಗುರುಗಳ ಆಶೀರ್ವಾದ ಇರಬೇಕು' ಎಂದು ಹೇಳಿದರು.

ವಸತಿ ಸಚಿವ ವಿ.ಸೋಮಣ್ಣ, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಸೋಮಣ್ಣ ಪ್ರತಿಷ್ಠಾನದ ಅಧ್ಯಕ್ಷೆ ಶೈಲಜಾ ಸೋಮಣ್ಣ, ಕನ್ನಡಪರ ಹೋರಾಟಗಾರ ಪಾಲನೇತ್ರ, ಪಾಲಿಕೆ ಮಾಜಿ ಸದಸ್ಯರಾದ ದಾಸೇಗೌಡ ಅವರು ಸ್ವಾಮೀಜಿ ಪ್ರತಿಮೆಗೆ ಪುಷ್ಪನಮನ ಸಲ್ಲಿಸಿದರು.

ಗೋವಿಂದರಾಜನಗರ ಮಂಡಲ ಬಿಜೆಪಿ ಅಧ್ಯಕ್ಷ ವಿಶ್ವನಾಥಗೌಡ, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಡಾ.ಎಸ್.ರಾಜು, ಮೋಹನ್ ಕುಮಾರ್, ರೂಪಾ ಲಿಂಗೇಶ್ವರ್, ರಾಜಪ್ಪ, ಶ್ರೀಧರ್ ಇದ್ದರು.

ಜವರಾಯಿಗೌಡ ಪರ ಎಚ್‌ಡಿಕೆ ಮತಯಾಚನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: 'ಕೇಂದ್ರ ಹಾಗೂ ರಾಜ್ಯ ಬಿಜೆಪಿ ಸರ್ಕಾರದ ದುರಾಡಳಿತವನ್ನು ನೋಡಿರುವ ರಾಜ್ಯದ ಜನತೆ ಈ ಬಾರಿ ಕನ್ನಡದ ಪ್ರಾದೇಶಿಕ ಪಕ್ಷ ಜೆಡಿಎಸ್ ಬೆಂಬಲಿಸುವ ಮೂಲಕ ಸರ್ಕಾರ ರಚನೆಗೆ ಅವಕಾಶ ಕಲ್ಪಿಸಬೇಕು' ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದರು.

ಯಶವಂತಪುರ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಟಿ. ಎನ್. ಜವರಾಯಿಗೌಡ ಪರವಾಗಿ ಮುದ್ದಯ್ಯನ ಪಾಳ್ಯ, ಉಲ್ಲಾಳ ಉಪನಗರ, ಉಲ್ಲಾಳು, ಚಿಕ್ಕಬಸ್ತಿ,ರಾಮಸಂದ್ರ, ಭುವನೇಶ್ವರಿ ನಗರ ಹಾಗೂ ನಾಗದೇವನಹಳ್ಳಿ ಬಡಾವಣೆಯ ಮುಖ್ಯ ರಸ್ತೆಗಳಲ್ಲಿ ರ್‍ಯಾಲಿ ನಡೆಸಿ ಮತಯಾಚನೆ ಮಾಡಿ ಮಾತನಾಡಿದರು.

'ಜೆಡಿಎಸ್ ಅಧಿಕಾರಕ್ಕೆ ಬಂದರೆ ಸರ್ಕಾರಿ ಅಧಿಕಾರಿಗಳಿಗೆ ನೀಡುವ ಮಾದರಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗೆ ವೇತನ ನೀಡಲಾಗುವುದು' ಎಂದು ಘೋಷಿಸಿದರು.

ಜವರಾಯಿಗೌಡ ಮಾತನಾಡಿ, 'ಮೂರು ಚುನಾವಣೆಗಳಲ್ಲಿ ಸೋಲು ಅನುಭವಿಸಿದ್ದೇನೆ. ಈ ಬಾರಿಯಾದರೂ ಬಹುಮತ ನೀಡಿ ಆಶೀರ್ವಾದ ಮಾಡಬೇಕು' ಎಂದು ಮನವಿ ಮಾಡಿದರು. ಬಿಬಿಎಂಪಿ ಮಾಜಿ ಸದಸ್ಯ ಎ. ಎಂ. ಹನುಮಂತೇಗೌಡ, ಬಮೂಲ್ ಮಾಜಿ ನಿರ್ದೇಶಕ ಪಂಚಲಿಂಗಯ್ಯ, ಜೆಡಿಎಸ್ ಮುಖಂಡರಾದ ಚೇತನ್ ಗೌಡ, ಮರಲಿಂಗೇಗೌಡ, ದೊಡ್ಮನೆ ವೆಂಕಟೇಶ್, ಪುಷ್ಪಾ ದೇವರಾಜು, ಅರುಣ್ ಗೌಡ, ಅಂಧ್ರಹಳ್ಳಿ ಗೋಪಾಲ್, ಕೇಶವಮೂರ್ತಿ, ಕಿಟ್ಟಿ ಯುವ ಮುಖಂಡ ಟಿ. ಜೆ. ಸಂತೋಷ್ ಇದ್ದರು.

ಜೆಡಿಎಸ್ ಪ್ರಣಾಳಿಕೆ ಬಿಡುಗಡೆ

ಬೆಂಗಳೂರು: ಬಂಡಿ ಮಹಾಕಾಳಿ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ 'ಮನೆ ಮನೆಗೆ ಭೇಟಿ' ಚುನಾವಣಾ ಪ್ರಚಾರಕ್ಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್. ಡಿ.ಕುಮಾರಸ್ವಾಮಿ ಚಾಲನೆ ನೀಡಿದರು.

ಬಸವನಗುಡಿ ವಿಧಾನಸಭೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಅರಮನೆ ಶಂಕರ್ ಅವರು ಕುಮಾರಸ್ವಾಮಿ ನೇತೃತ್ವದಲ್ಲಿ ಪ್ರಚಾರ ಆರಂಭಿಸಿದರು. ಇದೇ ವೇಳೆ ಮಹಿಳೆಯರ ರಕ್ಷಣೆ, ವಿದ್ಯಾರ್ಥಿಗಳ ಹಿತ, ಹಿರಿಯ ನಾಗರಿಕರ ಆರೋಗ್ಯದ ಕಾಳಜಿ ಇತ್ಯಾದಿ ಅಂಶಗಳನ್ನು ಒಳಗೊಂಡ ಚುನಾವಣಾ ಪ್ರಣಾಳಿಕೆ ಬಿಡುಗಡೆ ಮಾಡಲಾಯಿತು.ಅಭ್ಯರ್ಥಿ ಅರಮನೆ ಶಂಕರ್ ಮಾತನಾಡಿದರು.

ಶಿರಾ: ಉಗ್ರೇಶ್‌ಗೆ ಜೆಡಿಎಸ್ ಟಿಕೆಟ್

ಶಿರಾ: ಶಿರಾ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಆರ್. ಉಗ್ರೇಶ್ ಅವರನ್ನು ಆಯ್ಕೆ ಮಾಡಲಾಗಿದ್ದು, ಬಿ.ಎಸ್. ಸತ್ಯಪ್ರಕಾಶ್ ಅವರನ್ನು ತಾಲ್ಲೂಕು ಘಟಕದ ಅಧ್ಯಕ್ಷರಾಗಿ ನೇಮಿಸಲಾಗಿದೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ತಿಳಿಸಿದ್ದಾರೆ.

ಫಲಾನುಭವಿಗಳ ಜತೆ ಸೆಲ್ಫಿ: ಬಿಜೆಪಿ ಅಭಿಯಾನ

ಬೆಂಗಳೂರು: ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಯೋಜನೆಗಳ ಫಲಾನುಭವಿಗಳ ಜತೆ 'ಸೆಲ್ಫಿ' ತೆಗೆದುಕೊಳ್ಳುವ (ಸೆಲ್ಫಿ ವಿತ್ ಬೆನಿಫಿಷಿಯರಿ) ಅಭಿಯಾನವನ್ನು ರಾಜ್ಯದಾದ್ಯಂತ ನಡೆಸಲಾಗುವುದು ಎಂದು ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಘಟಕದ ಅಧ್ಯಕ್ಷೆ ಗೀತಾ ವಿವೇಕಾನಂದ ತಿಳಿಸಿದರು.

'ಪಕ್ಷದ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್. ಸಂತೋಷ್ ಅವರ ಸೂಚನೆಯಂತೆ ದೇಶದಾದ್ಯಂತ ಈ ಅಭಿಯಾನ ನಡೆಸಲಾಗುತ್ತಿದೆ. ಪ್ರತೀ ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ ಒಂದು ಸಾವಿರ ಮಂದಿಯ ಜತೆ ಸೆಲ್ಫಿ ತೆಗೆದುಕೊಳ್ಳಲಾಗುವುದು. ಭಾವಚಿತ್ರಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕೃತ ಮೊಬೈಲ್ ಆ್ಯಪ್‌ನಲ್ಲಿ ಅಪ್‌ಲೋಡ್ ಮಾಡಲಾಗುವುದು' ಎಂದರು.

ಕರಾಚಿಯಲ್ಲಿ ಲಘು ಭೂಕಂಪ: ಮೂವರ ಸಾವು

ಕರಾಚಿ (ಪಿಟಿಐ): ಪಾಕಿಸ್ತಾನದ ಬಲೂಚಿಸ್ತಾನ ಪ್ರಾಂತ್ಯದಲ್ಲಿ ಶುಕ್ರವಾರ ರಿಕ್ಟರ್ ಮಾಪಕದಲ್ಲಿ 3.5 ತೀವ್ರತೆಯ ಲಘು ಭೂಕಂಪ ಸಂಭವಿಸಿದೆ. ಮಣ್ಣಿನ ಗೋಡೆ ಕುಸಿದು ಮೂವರು ಮಕ್ಕಳು ಮೃತಪಟ್ಟು, ಐದು ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿನ ವಾಯುವ್ಯ ಕ್ವೆಟ್ಟಾ ಪ್ರದೇಶದಲ್ಲಿ ಭೂಕಂಪನ ಕೇಂದ್ರ ಬಿಂದು ಪತ್ತೆಯಾಗಿದೆ. ಭೂಕಂಪನದಿಂದ ಎರಡು ಮನೆಗಳ ಮಣ್ಣಿನ ಗೋಡೆ ಕುಸಿದಿದೆ. ಸ್ಥಳದಲ್ಲಿ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದೆ ಎಂದು ವಕ್ತಾರರು ತಿಳಿಸಿದ್ದಾರೆ.

15 ಕ್ಷೇತ್ರಗಳಲ್ಲಿ ಟಿಕೆಟ್ ನೀಡಲು ಆದಿಜಾಂಬವ ಮಹಾಸಭಾ ಆಗ್ರಹ

ಬೆಂಗಳೂರು: ಆದಿಜಾಂಬವ ಎಡಗೈ ಸಮುದಾಯಕ್ಕೆ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ವಿವಿಧ ರಾಜಕೀಯ ಪಕ್ಷಗಳು ಕನಿಷ್ಠ 15 ವಿಧಾನಸಭೆ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸಬೇಕು ಎಂದು ವಿಶ್ವ ಆದಿ ಜಾಂಬವ ಮಹಾಸಭಾ ಆಗ್ರಹಿಸಿದೆ.

'ಇತ್ತೀಚಿನ ದಿನಗಳಲ್ಲಿ ಆದಿಜಾಂಬವ ಎಡಗೈ ಜನಾಂಗದ ಶಾಸಕರ ಸಂಖ್ಯೆ ಕುಸಿಯುತ್ತಾ ಹೋಗುತ್ತಿದೆ. ಅದಕ್ಕೆ ಕಾರಣ ರಾಜಕೀಯ ಪಕ್ಷಗಳು ಸಮುದಾಯಕ್ಕೆ ಸರಿಯಾದ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುತ್ತಿಲ್ಲ. ರಾಜ್ಯದ ಎಲ್ಲ ವಿಧಾನಸಭೆಗಳಲ್ಲಿ ಆದಿಜಾಂಬವ ಸಮುದಾಯ ನಿರ್ಣಾಯಕ ಪಾತ್ರ ವಹಿಸುತ್ತದೆ. ಆದ್ದರಿಂದ ಎಲ್ಲ ರಾಜಕೀಯ ಪಕ್ಷಗಳು ಕನಿಷ್ಠ 15 ಟಿಕೆಟ್‌ಗಳನ್ನು ಸಮುದಾಯದ ಅಭ್ಯರ್ಥಿಗಳಿಗೆ ನೀಡಬೇಕು' ಎಂದು ಮಹಾಸಭಾದ ಅಧ್ಯಕ್ಷ ಭೀಮರಾಜು ಶನಿವಾರ ಸುದ್ದಿಗೋಷ್ಠಿಯಲ್ಲಿ ಒತ್ತಾಯಿಸಿದರು.

'ಬಸವರಾಜ ಬೊಮ್ಮಾಯಿ ಅವರು ಸಚಿವ ಸಂಪುಟದಲ್ಲಿ ಒಳಮೀಸಲಾತಿ ನೀಡುವ ಬಗ್ಗೆ ತೀರ್ಮಾನಿಸಿ ಕೇಂದ್ರಕ್ಕೆ ಶಿಫಾರಸು ಮಾಡಿರುವುದು ಸ್ವಾಗತಾರ್ಹ. ಸದಾಶಿವ ಆಯೋಗದ ವರದಿಯನ್ನು ಪರಿಶಿಷ್ಟ ಜಾತಿಯ ಪಟ್ಟಿಯಲ್ಲಿರುವ ಸ್ಪೃಶ್ಯ ಸಮಯದಾಯವರು ವಿರೋಧಿಸುತ್ತಲೇ ಬಂದಿದ್ದಾರೆ. ಆದರೆ, ರಾಜ್ಯ ಸರ್ಕಾರ ಜನಸಂಖ್ಯೆಗೆ ಅನುಗುಣವಾಗಿ ಒಳಮೀಸಲಾತಿ ನೀಡಿದೆ. ಅಲ್ಲದೇ ಅವರಿಗಿದ್ದ ಶೇ 3ರಷ್ಟು ಮೀಸಲಾತಿಯನ್ನು ಶೇ 4.5ಕ್ಕೆ ಹೆಚ್ಚಿಸಿದ್ದರೂ ಅಸಮಾಧಾನ ವ್ಯಕ್ತಪಡಿಸುತ್ತಿರುವುದು ಖಂಡನೀಯ' ಎಂದರು.

ಅತ್ಯಾಚಾರ, ಕೊಲೆ: 26 ಮಂದಿ ಖುಲಾಸೆ

ಗೋಧ್ರಾ (ಪಿಟಿಐ): 2002ರ ಕೋಮು ಗಲಭೆ ವೇಳೆ ಕಲೋಲ್‌ನಲ್ಲಿ ನಡೆದ ಪ್ರತ್ಯೇಕ ಘಟನೆಗಳಲ್ಲಿ ಅಲ್ಪಸಂಖ್ಯಾತ ಸಮುದಾಯದ 12ಕ್ಕೂ ಹೆಚ್ಚು ಮಂದಿ ಮೇಲೆ ಸಾಮೂಹಿಕ ಅತ್ಯಾಚಾರ ಮತ್ತು ಕೊಲೆ ಪ್ರಕರಣದ ಎಲ್ಲಾ 26 ಆರೋಪಿಗಳನ್ನು ಗುಜರಾತ್ ನ್ಯಾಯಾಲಯ ಶುಕ್ರವಾರ ಖುಲಾಸೆಗೊಳಿಸಿದೆ.

ಒಟ್ಟು 39 ಆರೋಪಿಗಳ ಪೈಕಿ 13 ಮಂದಿ ವಿಚಾರಣೆ ಹಂತದಲ್ಲಿರುವಾಗಲೇ ಮೃತಪಟ್ಟಿದ್ದಾರೆ.

ಪಂಚಮಹಲ್ ಜಿಲ್ಲೆಯ ಹಲೋಲ್‌ನ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶರಾದ ಲೀಲಾಭಾಯಿ ಚುಡಸಮ ಅವರು ಕೊಲೆ, ಸಾಮೂಹಿಕ ಅತ್ಯಾಚಾರ ಪ್ರಕರಣಗಳ 26 ಜನರನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಿದ್ದಾರೆ.

ಮುಂಬೈ ರೇಸ್

ಜೂಲಿಯೆಟ್ -ಕಿಂಗ್ ರಾನ್ಸಮ್ ಪೈಪೋಟಿ

ಬೆಂಗಳೂರಿನಲ್ಲಿ ನಡೆದ ಇನ್ವಿಟೇಶನ್ ಕಪ್ ರೇಸ್‌ನಲ್ಲಿ ಕಿಂಗ್ಸ್ ರಾನ್ಸಮ್ ವಿರುದ್ಧ ರೋಚಕ ಜಯಗಳಿಸಿರುವ ಜೂಲಿಯೆಟ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದೆ. ಸಿ.ಎನ್.ವಾಡಿಯಾ ಗೋಲ್ಡ್ ಕಪ್‌ನಲ್ಲಿ ಕಿಂಗ್ಸ್ ರಾನ್ಸಮ್ ವಿರುದ್ಧ ಸೆಣಸಾಡಲಿದೆ. ಎರಡೂ ಕುದುರೆಗಳು ತಮ್ಮ ಫಾರ್ಮ್ ಉಳಿಸಿಕೊಂಡಿದ್ದು, ಮತ್ತೊಂದು ರೋಚಕ ಫಲಿತಾಂಶ ನಿರೀಕ್ಷಿಸಲಾಗಿದೆ. ಸಂಜೆ 4:45ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಸ್ವಿಫ್ಟ್ 6, ಸ್ನೋಫಾಲ್ 3, ಬಕ್ಲಿ 11
2ನೇ ರೇಸ್: ನಾರ್ದರ್ನ್ ಲೈಟ್ಸ್ 1, ಅಹೆಡ್ ಆಫ್ ಮೈ ಟೈಮ್ 2, ಕೊಯೆರ್ ಡೆ ಲಯನ್ 8
3ನೇ ರೇಸ್: ಡ್ರೀಮ್ ಅಲೈಯನ್ಸ್ 3, ದಿ ಜನರಲ್ 3, ಮದ್ರಾಸ್ ಚೆಕ್ 9
4ನೇ ರೇಸ್: ಜೂಲಿಯೆಟ್ 2, ಕಿಂಗ್ಸ್ ರಾನ್ಸಮ್ 3, ಲಾ ರೀನ 5
5ನೇ ರೇಸ್: ಮಿಸ್ಟಿ 4, ಜೆನರಾಸಿಟಿ 3, ಪ್ರೊಫೆಸಿ 5
6ನೇ ರೇಸ್: ಕ್ವೀನ್ಸ್ ಪ್ರೈಡ್ 4, ಹೆಲಾ 7, ಜೆಟ್ ಟೈಫೂನ್ 1
7ನೇ ರೇಸ್: ಮಲಾಕಿ 3, ಸಸ್ಸಿಂಗ್ 9, ಬಾಂಬರ್ 5

ಉತ್ತಮ ಬೆಟ್: ಸ್ವಿಫ್ಟ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6


ಶೆಟ್ಟಿಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ ಸ್ವಾಮೀಜಿ ಅವರ ಪೋಸ್ಟರ್ ಅನ್ನು ಮಾಜಿ ಶಾಸಕ ಎಸ್. ಮುನಿರಾಜು ಬಿಡುಗಡೆ ಮಾಡಿದರು

'ಶ್ರೀಗಳ ಆದರ್ಶ ಎಲ್ಲರಿಗೂ ಪ್ರೇರಣೆ'

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಶೆಟ್ಟಿಹಳ್ಳಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶಿವಕುಮಾರ ಸ್ವಾಮೀಜಿ ಅವರ ಭಾವಚಿತ್ರಕ್ಕೆ ಮಾಜಿ ಶಾಸಕ ಎಸ್. ಮುನಿರಾಜು ಪುಷ್ಪಾರ್ಚನೆ ಮಾಡಿ ಪೂಜೆ ಸಲ್ಲಿಸಿದರು.

ಬಳಿಕ ಮಾತನಾಡಿ, 'ಲಕ್ಷಾಂತರ ಬಡವರಿಗೆ ಜೀವನ ಕಟ್ಟಿಕೊಟ್ಟ ಶಿವಕುಮಾರ ಸ್ವಾಮೀಜಿ. ಅವರು ಎಲ್ಲರಿಗೂ ಆದರ್ಶ. ವಿದ್ಯಾರ್ಥಿಗಳಿಗೆ ಅನ್ನ, ವಿದ್ಯೆ, ಆಶ್ರಯ ನೀಡಿದ ಶ್ರೀಗಳ ತತ್ವ, ಆದರ್ಶಗಳನ್ನು ಯುವ ಜನತೆ ಮೈಗೂಡಿಸಿಕೊಳ್ಳಬೇಕು' ಎಂದರು.

ಸಿದ್ದಗಂಗಾ ಶ್ರೀಗಳ ಭಾವಚಿತ್ರವಿದ್ದ ಪೋಸ್ಟರ್ ಬಿಡುಗಡೆ ಮಾಡಲಾಯಿತು. ಮುಖಂಡರಾದ ಹುಚ್ಚರಂಗಯ್ಯ, ಗಂಗರಾಜು, ವಿನೋದ್ ಗೌಡ, ಅಯ್ಯಣ್ಣ, ಪಾರ್ಥ ಇದ್ದರು.



ಸೆಲೆಬ್ರಿಟಿ ಮಾತು

ಮತದಾನ ಆಲಸ್ಯ ಬೇಡ

ಅದ್ವಿತಿ ಶೆಟ್ಟಿ, ಚಿತ್ರನಟಿ

ನಮ್ಮ ಆಡಳಿತಗಾರರನ್ನು ನಾವೇ ಆಯ್ಕೆ ಮಾಡಿಕೊಳ್ಳುವ ಅವಕಾಶವಿರುವುದು ಪ್ರಜಾಪ್ರಭುತ್ವದಲ್ಲಿ ಮಾತ್ರ. ಅದೇ ಈ ವ್ಯವಸ್ಥೆಯ ಸೌಂದರ್ಯ. ಹಾಗಿದ್ದರೆ ನಮ್ಮ ಹಕ್ಕು ಚಲಾಯಿಸಿ ಒಳ್ಳೆಯ ಜನಪ್ರತಿನಿಧಿಯ ಆಯ್ಕೆ ಮಾಡುವಲ್ಲಿ ಉದಾಸೀನವೇಕೆ? ನಮ್ಮ ಹಕ್ಕು ಚಲಾವಣೆಯು ನಾಡಿನ ಭವಿಷ್ಯವನ್ನು ನಿರ್ಧರಿಸುತ್ತದೆ. ಹಾಗಾಗಿ ಆಲಸ್ಯ ಬೇಡ. ಎಚ್ಚರದಿಂದ, ಮುಕ್ತವಾಗಿ ಮತದಾನ ಮಾಡಿ. ನಾನು ವೋಟ್ ಮಾಡುತ್ತೇನೆ. ನೀವೂ ವೋಟ್ ಹಾಕಿ.

ಜಿಗಿ ನೆಗೆದಾಟ



ಎ.ಟಿ. ರಾಮಸ್ವಾಮಿ

ಕಾಂಗ್ರೆಸ್ → ಜೆಡಿಎಸ್ → ಬಿಜೆಪಿ



ವಾಹನ ತಪಾಸಣೆ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಚುನಾವಣಾ ಆಯೋಗದ ತಪಾಸಣಾ ತಂಡದ ಸಿಬ್ಬಂದಿ ಶನಿವಾರ ಬೆಂಗಳೂರಿನ ಕೆಂಗೇರಿ ಬಳಿ ವಾಹನಗಳನ್ನು ತಪಾಸಣೆ ಮಾಡಿದರು.

ಪ್ರಜಾವಾಣಿ ಚಿತ್ರ

‘ಕನ್ನಡ ಅಸ್ಮಿತೆ’ಯ ರಾಜಕಾರಣ; ಬರೀ ಮಾತಿನ ಬಾಣ

• ರಾಜೇಶ್ ರೈ ಚಟ್ಲ

ಬೆಂಗಳೂರು: ಭಾಷಾವಾರು ಪ್ರಾಂತ್ಯಗಳಾಗಿ ವಿಂಗಡಣೆಗೊಂಡು, ಅದರ ಆಧಾರದ ಮೇಲೆಯೇ ಒಕ್ಕೂಟ ವ್ಯವಸ್ಥೆಯನ್ನು ಕಟ್ಟಿಕೊಂಡ ಭಾರತದಂತಹ ದೇಶದಲ್ಲಿ ರಾಜಕಾರಣದ ಚಹರೆ ಬದಲಿಸುವ, ರಾಜಕೀಯ ಹಣೆಬರಹವನ್ನೇ ತಿದ್ದುವ ಅಪಾರ ಶಕ್ತಿ ಇರುವುದು ಭಾಷೆಗೆ. ಭಾಷೆಯ ಮೇಲಿನ ಅಭಿಮಾನ, ಅಂಧಾಭಿಮಾನದ ಕಾರಣಕ್ಕೆ ರಾಜಕೀಯದಲ್ಲಿ ಅಲ್ಲೋಲಕಲ್ಲೋಲವಾಗಿದೆ. ಹೊಸ ರಾಜ್ಯಗಳೇ ಉದಯವಾಗಿವೆ.

ಕರ್ನಾಟಕದ ವಿಧಾನಸಭೆ ಚುನಾವಣೆ ಎದುರಾಗಿರುವ ಹೊತ್ತಿನೊಳಗೆ ನಮ್ಮ ಕನ್ನಡದ ಅಸ್ಮಿತೆಯ ವಿಷಯದಲ್ಲಿ ರಾಜಕೀಯ ಪಕ್ಷಗಳ ಒಲುವು–ನಿಲುವು ಕೂಡ ಮುನ್ನೆಲೆಗೆ ಬರಬೇಕಾದ ಪ್ರಮುಖ ಸಂಗತಿ. ಮುಂದೆ ಅಧಿಕಾರದ ಚುಕ್ಕಾಣಿ ಹಿಡಿಯುವ ಪಕ್ಷ, ಕನ್ನಡದ ಹಿರಿಮೆ–ಗರಿಮೆಯನ್ನು ಎತ್ತಿಹಿಡಿದು, ಸ್ವಾಭಿಮಾನಕ್ಕೆ ಧಕ್ಕೆ ಬಂದಾಗ ಸೆಟೆದು ನಿಲ್ಲುವ ರಾಜಕಾರಣ ಮಾಡಬೇಕು ಎಂಬ ಸದಾಶಯ ಕನ್ನಡಿಗರದ್ದಾಗಿದೆ. ಕನ್ನಡ, ಕನ್ನಡಿಗರ ವಿಷಯ ಮುಂಚೂಣಿಗೆ ಬಂದಾಗ, ರಾಷ್ಟ್ರೀಯತೆ, ಹಿಂದುತ್ವದ ರಾಜಕಾರಣ ಮಾಡುತ್ತಿರುವ ಆಡಳಿತಾರೂಢ ಬಿಜೆಪಿ, ಮಾತಿನಲ್ಲಷ್ಟೇ ಕನ್ನಡದ ಪರವಾಗಿ ನಿಂತಂತೆ ಕಾಣಿಸುತ್ತದೆ. ಹಿಂದಿಯನ್ನೇ ಅಸ್ತ್ರವಾಗಿ ಬಳಸಿ ಏಕಭಾಷೆ, ಏಕ ರಾಷ್ಟ್ರ, ಏಕಧರ್ಮ ಪ್ರತಿಪಾದಿಸುವ ಆ ಪಕ್ಷದ ವರಿಷ್ಠರ ಕೆಂಗಣ್ಣಿಗೆ ಗುರಿಯಾಗುವ ಆತಂಕ ಸ್ಥಳೀಯ ನಾಯಕರನ್ನು ಸುತ್ತುವರಿದಿದೆ. ಹೀಗಾಗಿ, ಈ ವಿಷಯ ಬಂದಾಗ, ಮೌನವೇ ರಾಜ್ಯ ನಾಯಕರ ಅಸ್ತ್ರ.

ಅದೇ, ಕೇಂದ್ರದಲ್ಲಿ ಬಿಜೆಪಿಯೇತರ ಸರ್ಕಾರ ಅಧಿಕಾರದಲ್ಲಿದ್ದರೆ ಕೇಸರಿ ಪಡೆಯವರು ಕನ್ನಡವನ್ನೇ ಹೊತ್ತು ಕುಣಿಯುತ್ತಿದ್ದರು ಎಂಬ ವಿಷಯದಲ್ಲಿ ಸಂಶಯವೇ ಬೇಡ.

ಇನ್ನು ಕಾಂಗ್ರೆಸ್ ನಾಯಕರ ನಿಲುವು ಗಮನಿಸಿದರೆ ಕೇಂದ್ರದಲ್ಲಿ ಅವರದ್ದೇ ಪಕ್ಷ ಅಧಿಕಾರದಲ್ಲಿದ್ದಾಗ ತೆಗೆದುಕೊಳ್ಳುವ ಧೋರಣೆ ಬೇರೆ. ಬಿಜೆಪಿ ಇದ್ದಾಗ ತೋರಿದ ಅವತಾರವೇ ಮತ್ತೊಂದು ಬಗೆಯದು. ಭಾಷೆ ವಿಷಯದಲ್ಲಿ ರಾಷ್ಟ್ರೀಯ ಪಕ್ಷಗಳದ್ದು ಬಹುತೇಕ ಕೇಂದ್ರದಲ್ಲಿ ಯಾವ ಸರ್ಕಾರ ಇದೆ ಎಂಬುದನ್ನು ಆಧರಿಸಿದ ಅನುಕೂಲಕಾರಿ ರಾಜಕಾರಣ.

ಪ್ರಾದೇಶಿಕ ಪಕ್ಷದ ಸ್ವರೂಪ ಪಡೆದುಕೊಂಡಿರುವ, ಅಧಿಕಾರಕ್ಕಾಗಿ ಕಾಂಗ್ರೆಸ್‌-ಬಿಜೆಪಿ ಎಂಬ ಭಿನ್ನತೆ ತೋರದೇ ಹೊಂದಾಣಿಕೆ ಮಾಡಿಕೊಳ್ಳುವ ಜೆಡಿಎಸ್ ಪಕ್ಷದ್ದು ಭಾಷೆ ವಿಷಯದಲ್ಲಿ ನಿಖರ, ಸ್ಪಷ್ಟ ಧೋರಣೆ. ಮೈತ್ರಿ ಸರ್ಕಾರ ಇದ್ದಾಗ, ಕೇಂದ್ರದಲ್ಲಿರುವ ಸರ್ಕಾರದ ನಿಲುವಿಗೆ ತಕ್ಕಂತೆ ನಾಜೂಕಿನ ನಡೆ ಈ ಪಕ್ಷದ್ದಾಗಿದೆ.

ಕೇಂದ್ರ ಸರ್ಕಾರದ ನೇಮಕಾತಿಗಳಲ್ಲಿ, ಹಿಂದಿ ಹೇರಿಕೆ ವಿಷಯದಲ್ಲಿ ಈ ಎಲ್ಲ ಪಕ್ಷಗಳ ಬಣ್ಣ ಬಯಲಾಗಿದೆ. ಮೈತ್ರಿ ಸರ್ಕಾರ ತೊರೆದ ಬಳಿಕ ಜೆಡಿಎಸ್ ನಾಯಕ ಎಚ್‌. ಡಿ. ಕುಮಾರಸ್ವಾಮಿ, ಕನ್ನಡ ಹೋರಾಟಗಾರರಷ್ಟೇ ಪ್ರಬಲರಾಗಿ ಕನ್ನಡಿಗರ ಪರ ಧ್ವನಿ ಎತ್ತಿದ್ದಾರೆ. ಕೇಂದ್ರದಲ್ಲಿ ಬಿಜೆಪಿ ಇರುವುದರಿಂದ ಸಹಜವಾಗಿಯೇ ಕಾಂಗ್ರೆಸ್ ನಾಯಕರು, ಕನ್ನಡದ ಪರ ಗಟ್ಟಿ ಧ್ವನಿ ಎತ್ತುವ ಸಲೀಸಿನ ಹಾಗೂ ಲಾಭದ ದಾರಿಯಲ್ಲಿಯೇ ಸಾಗುತ್ತಿದ್ದಾರೆ.



ಆದರೆ, ಭಾಷಾಭಿಮಾನ ಎಂದ ಕೂಡಲೇ ಎಲ್ಲರೂ ತಮಿಳುನಾಡಿನ ಕಡೆಗೆ ಮುಖ ಮಾಡುತ್ತಾರೆ. ನೆರೆ ರಾಜ್ಯದಲ್ಲಿ ತಮಿಳು ಭಾಷೆಗೆ ಗಟ್ಟಿ ನೆಲೆ ಇದೆ. ಅಷ್ಟರಮಟ್ಟಿಗೆ ಕರ್ನಾಟಕದಲ್ಲಿ ಕನ್ನಡ ಮನಸ್ಸುಗಳು ಕನ್ನಡವನ್ನು ಉಳಿಸಿ ಬೆಳೆಸಲು ಕಂಕಣ ಬದ್ಧರಾಗಿಲ್ಲ.

‘ಒಂದು ದೇಶ, ಒಂದು ಭಾಷೆ ಎಂಬ ಪರಿಕಲ್ಪನೆಯಡಿಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತದ ‘ಅಧಿಕೃತ ಭಾಷೆ ಹಿಂದಿ’ ಎಂದು ಪರಿಗಣಿಸಲ್ಪಟ್ಟರೆ ಒಳಿತು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ 2019ರಲ್ಲಿ ಹೇಳಿದಾಗ ರಾಜ್ಯದಲ್ಲಿಯೂ ಅಸಮಾಧಾನ–ಆಕ್ರೋಶ ವ್ಯಕ್ತವಾಗಿತ್ತು. ಎಲ್ಲ ವಲಯಗಳಿಂದ ಪಕ್ಷಾತೀತವಾಗಿ ಕನ್ನಡಪರ ಧ್ವನಿ ಮೊಳಗಿತ್ತು. ಹಿಂದಿಯನ್ನು ಬಲವಂತವಾಗಿ ಹೇರುವ ಕುತಂತ್ರ ಎಂಬ ಆಕ್ರೋಶದ ಕೂಗು ಎಲ್ಲೆಡೆ ಕೇಳಿ ಬಂದಿತ್ತು.

ಇದನ್ನು ಒಪ್ಪಿಕೊಳ್ಳಲು ಸಾಧ್ಯವೇ ಇಲ್ಲ ಎಂದು ಕಾಂಗ್ರೆಸ್, ಜೆಡಿಎಸ್ ನಾಯಕರು ಹೇಳಿದ್ದರು. ‘ಪ್ರತಿಯೊಬ್ಬರೂ ಹಿಂದಿ ಕಲಿಯಬೇಕೆಂಬ ಅರ್ಥದಲ್ಲಿ ಶಾ ಹೇಳಿದ್ದಾರೆಯೇ ಹೊರತು, ಅದು ಹಿಂದಿ ಹೇರಿಕೆ ಅಲ್ಲ. ಅನಗತ್ಯವಾಗಿ ವಿವಾದ ಮಾಡಲಾಗುತ್ತಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಷಿ ಸಮಜಾಯಿಷಿ ನೀಡಿದ್ದರು.

ಚುನಾವಣೆ ಎದುರುಗೊಳ್ಳುವ ಹೊತ್ತಿಗೆ ರಾಜ್ಯದ ಬಿಜೆಪಿ ಸರ್ಕಾರ, ಕನ್ನಡ ಭಾಷೆಗೆ ಕಾನೂನು ರಕ್ಷಣೆ ನೀಡುವ, ಜೊತೆಗೆ ಉನ್ನತ ಶಿಕ್ಷಣದಲ್ಲಿ ಕನ್ನಡಿಗರಿಗೆ ಮೀಸಲಾತಿ ಮತ್ತು ಸ್ಥಳೀಯರಿಗೆ ಉದ್ಯೋಗಕ್ಕೆ ಆದ್ಯತೆ ನೀಡುವ ಅಂಶಗಳಿರುವ ‘ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಕಾಯ್ದೆ’ ರೂಪಿಸಿದೆ. ಕರ್ನಾಟಕದಲ್ಲಿ ಆಡಳಿತ ಮತ್ತು ಇತರ ಕ್ಷೇತ್ರಗಳಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ನೀಡುವಂತೆ ಅಧಿಕಾರಕ್ಕೆ ಬಂದ ಎಲ್ಲ ಸರ್ಕಾರಗಳು ಹಲವು ಆದೇಶಗಳನ್ನು ಹೊರಡಿಸಿವೆ. ಆದರೂ, ಕಾನೂನು ಬೆಂಬಲ ಇಲ್ಲದ ಕಾರಣ ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಯಶಸ್ವಿ ಆಗಿರಲಿಲ್ಲ. ಅಧಿಕಾರ ಅನುಭವಿಸುವ ಎಲ್ಲ ಪಕ್ಷಗಳು ಚುನಾವಣೆ ವರ್ಷದಲ್ಲೇ ಇಂತಹ ವಿಷಯದಲ್ಲಿ ’ನಿರ್ಣಾಯಕ‘ ತೀರ್ಮಾನ ತೆಗೆದುಕೊಂಡದ್ದುಂಟು.


ಶಾಸ್ತ್ರೀಯ ಭಾಷೆಯ ವಿಷಯಕ್ಕೆ ಬಂದರೆ, 2017ರಿಂದ 2020ರ ಅವಧಿಯಲ್ಲಿ ಸಂಸ್ಕೃತ ಭಾಷೆಯ ಅಭಿವೃದ್ಧಿಗೆ ಕೇಂದ್ರ ಸರ್ಕಾರ ₹ 642 ಕೋಟಿ ಮೀಸಲಿಟ್ಟಿದೆ. ಕನ್ನಡಕ್ಕೆ ₹ 42 ಕೋಟಿ ಬೇಡಿಕೆ ಇದ್ದರೂ ಕೇವಲ ₹ 3 ಕೋಟಿ ನೀಡಿದೆ. ಇದೇ ಅವಧಿಯಲ್ಲಿ ತಮಿಳು ಭಾಷೆಗೆ ₹ 23 ಕೋಟಿ ನೀಡಲಾಗಿದೆ. ಕಳೆದ ಐದು ವರ್ಷಗಳಲ್ಲಿ ಕನ್ನಡ ಭಾಷೆಗೆ ಸುಮಾರು ₹ 5 ಕೋಟಿ ಬಂದಿದೆ ಎಂದೂ ದೊಡ್ಡರಂಗೇಗೌಡ ಅವರು 86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಭಾಷಣದಲ್ಲಿ ಮಾಹಿತಿ ಹಂಚಿಕೊಂಡಿದ್ದರು.

ಅವರ ಮಾತುಗಳಿಗೆ ಪ್ರತಿಕ್ರಿಯಿಸಿದ್ದ ಎಚ್‌.ಡಿ. ಕುಮಾರಸ್ವಾಮಿ, ‘ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ಸಿಕ್ಕಿ 15 ವರ್ಷಗಳೇ ಆಗಿವೆ. ಆದರೆ ಮೂರು ವರ್ಷಗಳಲ್ಲಿ ಕನ್ನಡಕ್ಕೆ ಸಿಕ್ಕಿದ ಅನುದಾನ ಕೇವಲ ₹ 3 ಕೋಟಿ. ಕನ್ನಡದ ಕಣ್ಣಿಗೆ ಸುಣ್ಣ, ಬೇರೆ ಭಾಷೆಗಳಿಗೆ ಬೆಣ್ಣೆ. ಕನ್ನಡ ತಬ್ಬಲಿ ಮಕ್ಕಳ ಭಾಷೆಯೇ’ ಎಂದು ಪ್ರಶ್ನಿಸಿದ್ದರು. ಒಕ್ಕೂಟ ಭಾಷೆಗಳ ನಡುವೆ ಅನುದಾನದಲ್ಲಿ ಮಾತ್ರವಲ್ಲ, ಯಾವ ವಿಷಯದಲ್ಲೂ ತಾರತಮ್ಯ ಎಸಗಬಾರದು. ಈ ವ್ಯವಸ್ಥೆಯಲ್ಲಿ ಆಡಳಿತ ನಡೆಸುವವರಿಗೆ ರಾಜಧರ್ಮ ಪಾಲನೆ ಅತ್ಯಗತ್ಯ. ದೇಶಕ್ಕೆ ಅತಿಹೆಚ್ಚು ತೆರಿಗೆ ತೆರುತ್ತಿರುವ ಕರ್ನಾಟಕದ ವಿಷಯದಲ್ಲಿ ಇಂಥ ರಾಜಧರ್ಮ ಪಾಲನೆ ಆಗುತ್ತಿಲ್ಲ’ ಎಂದು ಟೀಕಿಸಿದ್ದರು.

‘ನಮಗೆ (ಕನ್ನಡಿಗರಿಗೆ) ನಮ್ಮದೇ ಆದ ಭಾಷೆ ಇದೆ. ಧ್ವಜ, ಸ್ವಾಭಿಮಾನವಿದೆ. ಭಾಷೆ ಎಂದರೆ ಸ್ವಾಭಿಮಾನದ ಪ್ರಶ್ನೆಯಾಗಿದೆ’ ಎನ್ನುವುದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಪ್ರತಿಪಾದನೆ. ‘ನಮ್ಮ ನೆಲ, ಜಲ ರಕ್ಷಣೆ ಮಾಡುವುದು ನಮ್ಮ ಕರ್ತವ್ಯ. ಹೀಗಾಗಿ, ನಮ್ಮ ಮೊದಲ ಆದ್ಯತೆ ಕನ್ನಡ ಭಾಷೆ. ನಂತರ ನಾವು ಸಂವಿಧಾನದಲ್ಲಿ ನೀಡಲಾಗಿರುವ ಹಕ್ಕಿನ ಪ್ರಕಾರ ಬೇರೆ ಭಾಷೆಗಳನ್ನು ಬಳಸಬಹುದು’ ಎನ್ನುವುದು ಅವರ ವಾದ.

ಪ್ರಸ್ತುತ ಕನ್ನಡವನ್ನು ಉಳಿಸಿ ಎಂಬ ಘೋಷಣೆ ರಾಜ್ಯದಲ್ಲಿ ಜೀವ ತಳೆದಿದೆ. ಹಾಗೆಂದ ಮಾತ್ರಕ್ಕೆ ಕನ್ನಡಿಗರಿಗೆ ಮಾತೃಭಾಷೆಯ ಮೇಲೆ ಅಭಿಮಾನ ಇಲ್ಲ ಎಂದರ್ಥವಲ್ಲ. ಬದಲಾಗಿ ನಮ್ಮ ರಾಜ್ಯದಲ್ಲಿ ಕನ್ನಡಾಭಿಮಾನಕ್ಕೆ ಸ್ವಂತ ತಾತ್ವಿಕ ನೆಲೆಯಿಲ್ಲ, ರಾಜಕೀಯ ಶಕ್ತಿ ಇಲ್ಲ. ಹೀಗಾಗಿ, ಕನ್ನಡದ ಒಳಗಿನ ವಿಕೃತಿಗೆ ವಿರೋಧವಾಗುವುದು ಕನ್ನಡಾಭಿಮಾನದ ತಾತ್ವಿಕ ನೆಲೆಯಾಗಬೇಕು ಹಾಗೂ ಸ್ಪಷ್ಟ ರಾಜಕೀಯ ಶಕ್ತಿ ಪ್ರಾಪ್ತವಾಗಬೇಕು ಎನ್ನುವುದು ಕನ್ನಡ ಮನಸ್ಸುಗಳ, ಕನ್ನಡಪರ ಹೋರಾಟಗಾರರ ಆಶಯ.

ಶಾಸ್ತ್ರೀಯ ಭಾಷೆ ಸ್ಥಾನ: ಕಣ್ಣೊರೆಸುವ ತಂತ್ರ



ಕನ್ನಡ ಭಾಷೆಯು ಶಾಸ್ತ್ರೀಯ ಭಾಷೆಯ ಮಾನ್ಯತೆ ಪಡೆದಿದ್ದರೂ ಕೇಂದ್ರದ ಅನುದಾನ ಪಡೆಯುವಲ್ಲಿ ರಾಜ್ಯ ಸರ್ಕಾರ ಜವಾಬ್ದಾರಿಯುತವಾಗಿ ನಡೆದುಕೊಳ್ಳುತ್ತಿಲ್ಲ ಎನ್ನುವುದು ಕನ್ನಡಿಗರ ಆರೋಪ. ಹಾವೇರಿಯಲ್ಲಿ ನಡೆದ 86ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದ ದೊಡ್ಡರಂಗೇಗೌಡ, ‘ಡಬಲ್ ಎಂಜಿನ್’ (ರಾಜ್ಯ ಮತ್ತು ಕೇಂದ್ರ) ಬಿಜೆಪಿ ಸರ್ಕಾರಗಳು ಕನ್ನಡ ಭಾಷೆಯ ರಕ್ಷಣೆ ಮತ್ತು ಬೆಳವಣಿಗೆಗೆ ನೀಡಿರುವ ಕೊಡುಗೆಯನ್ನು ಪ್ರಶ್ನಿಸಿದ್ದರು. ಕೇಂದ್ರ ಸರ್ಕಾರದ ಹಿಂದಿ ಭಾಷೆ ಹೇರಿಕೆ ಮೇಲೆ ಪರೋಕ್ಷವಾಗಿ ವಾಗ್ದಾಳಿ ನಡೆಸಿದ್ದರು. ‘ಕೇಂದ್ರ ಸರ್ಕಾರ ಯಾವಾಗಲೂ ‘ಡಬಲ್ ಎಂಜಿನ್’ ಸರ್ಕಾರದ ಅನುಕೂಲಗಳ ಬಗ್ಗೆ ಮಾತನಾಡುತ್ತದೆ. ಆದರೆ, ಅದು ಕನ್ನಡಕ್ಕೆ ಹೇಗೆ ಒಲವು ತೋರಿದೆ, ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಕೇವಲ ಕಣ್ಣೊರೆಸುವ ತಂತ್ರವಾಗಿದ್ದು, ಭಾಷೆಯ ಅಭಿವೃದ್ಧಿ ಮತ್ತು ಸಂಶೋಧನೆಗೆ ಸಂಬಂಧಿಸಿದಂತೆ ಹೆಚ್ಚಿನದನ್ನು ಇದುವರೆಗೆ ಸಾಧಿಸಲಾಗಿಲ್ಲ’ ಎಂದೂ ಅವರು ಕುಟುಕಿದ್ದರು.

ಪ್ರಜಾ ಪತ್ರ

ಸರ್ವಜನಾಂಗದ ಹಿತ ಮುಖ್ಯ



ಅಬ್ರಹಾಂ ಲಿಂಕನ್ ಅವರು ಪ್ರಜಾಪ್ರಭುತ್ವಕ್ಕೆ ‘ಜನರಿಂದ, ಜನರಿಗಾಗಿ, ಜನರೇ ನಡೆಸುವ ಸರ್ಕಾರ’ ಎಂದು ಐತಿಹಾಸಿಕ ವ್ಯಾಖ್ಯಾನ ನೀಡಿದ್ದರು. ಆದರೆ, ಇಂದಿನ ರಾಜಕೀಯವು ‘ದುಡ್ಡಿನಿಂದ, ದುಡ್ಡಿಗಾಗಿ, ದುಡ್ಡಿಗೋಸ್ಕರ’ ಎನ್ನುವಂತಾಗಿದೆ. ಜನಪ್ರತಿನಿಧಿಗಳ ಆಮಿಷ, ಭ್ರಷ್ಟಾಚಾರ, ಪಕ್ಷಾಂತರ, ಸ್ವಜನ ಪಕ್ಷಪಾತ, ದ್ವೇಷ ರಾಜಕಾರಣದ ಮೇಲೆ ಈಗಿನ ರಾಜಕೀಯ ವ್ಯವಸ್ಥೆ ನಿಂತಿದೆ. ಜಾತಿ, ಧರ್ಮ ಮತ್ತು ವಿವಿಧ ವಸ್ತುಗಳನ್ನು ಉಚಿತವಾಗಿ ನೀಡುವ ಯೋಜನೆಗಳೆಲ್ಲ ಹೆಚ್ಚು ವೈಭವೀಕರಿಸುತ್ತಿವೆ. ಇಂಥ ರಾಜಕೀಯ ಧ್ರುವೀಕರಣಕ್ಕೆ ಮತದಾರರು ಕಿವಿಗೊಡದೆ, ನಮ್ಮ ಆಡಳಿತ ಚುಕ್ಕಾಣಿ ಅರ್ಹರ ಕೈಯಲ್ಲಿರುವಂತೆ ನೋಡಿಕೊಳ್ಳಬೇಕು. ತಮ್ಮ ಕ್ಷೇತ್ರದ ಮೂಲ ಸೌಕರ್ಯ ಅಭಿವೃದ್ಧಿಯ ಜತೆಗೆ ಪರಿಸರ ಸಂರಕ್ಷಣೆಗೆ ಒತ್ತು ನೀಡುವಂತಹ ವ್ಯಕ್ತಿಯನ್ನು ಆಯ್ಕೆ ಮಾಡಬೇಕು. ನಾವು ಆಯ್ಕೆ ಮಾಡುವ ನಾಯಕ ಸರ್ವಜನಾಂಗದ ಹಿತ ಬಯಸುವವನಾಗಿರಬೇಕು.

ಬಿ.ಎಸ್. ಚೈತ್ರ, ಜಾಲಿಕಟ್ಟೆ, ಚಿತ್ರದುರ್ಗ

ಅಪವಿತ್ರಗೊಳಿಸುವವರು ತೊಲಗಲಿ



‘ಹಗರಣ... ಹಗರಣ... ಹಗರಣ ಸದೆ ಬಡಿಯ ಬೇಕು ಯುವಜಾಗರಣ’ ಎನ್ನುವಂತೆ ಭ್ರಷ್ಟಾಚಾರದ ವಿರುದ್ಧ ಡಮರು ಶಂಕುಗಳನ್ನು ಮೊಳಗಿಸಲು ಪ್ರಜೆಗಳು ಇನ್ನಾದರೂ ಪ್ರಜ್ಞಾವಂತರಾಗಬೇಕಾಗಿದೆ. ಪ್ರಸ್ತುತದ ದಿನಗಳಲ್ಲಿ ರಾಜಕೀಯ ಎಂದರೆ ಸರ್ವರೂ ಅಸಡ್ಡೆ ತೋರುವ ಪರಿಸ್ಥಿತಿ ಎದುರಾಗಿದೆ. ಆದರೆ, ರಾಜಕೀಯ ಎಂಬುದು ಪ್ರಜೆಗಳನ್ನು ಪ್ರಭುಗಳನ್ನಾಗಿಸುವ ಪವಿತ್ರವಾದ ವ್ಯವಸ್ಥೆ. ಅದನ್ನು ಅಪವಿತ್ರ ಮಾಡುವಂತಹ ಸನ್ನಿವೇಶ ಸೃಷ್ಟಿಯಾಗಿದ್ದು, ಅದನ್ನು ತೊಲಗಿಸಲು ದಕ್ಷ, ಪ್ರಾಮಾಣಿಕ, ನಿಷ್ಠಾವಂತ, ಪ್ರಜ್ಞಾವಂತ, ಸಮರ್ಥ ರಾಜಕಾರಣಿಗಳನ್ನು ಆಯ್ಕೆ ಮಾಡಬೇಕು.

ಚೈತ್ರ.ವಿ.ವೈ, ಚಿಕ್ಕಮಗಳೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ. 9606038256

ಕನ್ನಡ ಧ್ವನಿ

ಸಂವಿಧಾನಕ್ಕೆ ತಿದ್ದುಪಡಿಯೊಂದೇ ಮಾರ್ಗ




ಸರ್ಕಾರದಿಂದ ಶಿಕ್ಷಣ, ಉದ್ಯೋಗ, ಆಡಳಿತ– ಈ ಮೂರು ಕ್ಷೇತ್ರಗಳಲ್ಲಿ ಕನ್ನಡಪರ ಕೆಲಸ ಆಗಬೇಕಿದೆ. ರಾಜ್ಯದ ಪಠ್ಯಕ್ರಮದ ಶಾಲೆಗಳಷ್ಟೇ ಅಲ್ಲ, ಕೇಂದ್ರ ಪಠ್ಯಕ್ರಮಗಳಲ್ಲೂ ಕನ್ನಡ ಒಂದು ಭಾಷೆಯಾಗಿ ಕಡ್ಡಾಯವಾಗಬೇಕು. 2014ರ ಸುಪ್ರೀಂ ಕೋರ್ಟಿನ ತೀರ್ಪಿನ ಪ್ರಕಾರ ಶಿಕ್ಷಣ ಮಾಧ್ಯಮದ ಆಯ್ಕೆ ಪೋಷಕರಿಗೆ ಸೇರಿದ್ದರಿಂದ ಸರ್ಕಾರಗಳು ಕಡ್ಡಾಯ ಮಾಡುವಂತಿಲ್ಲ. ಎಲ್ಲ ರಾಜ್ಯಗಳ ಎಲ್ಲ ಮಾದರಿಯ ಪ್ರಾಥಮಿಕ ಶಾಲೆಗಳಲ್ಲಿ ಆಯಾ ರಾಜ್ಯದ ಅಧಿಕೃತ ಭಾಷೆ ಅಥವಾ ಮಾತೃಭಾಷೆಯು ಕಲಿಕೆಯ ಮಾಧ್ಯಮವಾಗಲು ಕೇಂದ್ರ ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತರುವುದೊಂದೇ ಮಾರ್ಗ.

10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿದವರಿಗೆ ವೃತ್ತಿ ಶಿಕ್ಷಣದ ಎಲ್ಲ ಕೋರ್ಸ್‌ಗಳಲ್ಲಿ ಮತ್ತು ಸರ್ಕಾರದ ಉದ್ಯೋಗಗಳಲ್ಲಿ ಮೀಸಲಾತಿಯ ಪ್ರತಿ ವಿಭಾಗದಲ್ಲೂ ಶೇ 5ರಷ್ಟು ಮೀಸಲಾತಿ ನೀಡುವ ಕಾನೂನನ್ನು ನಾನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದಾಗ ಜಾರಿಗೊಳಿಸಲಾಯಿತು. ಈ ಮೀಸಲಾತಿ ಪ್ರಮಾಣ ಮತ್ತಷ್ಟು ಹೆಚ್ಚಾಗಬೇಕು. ಕನ್ನಡ ಮಾಧ್ಯಮದ ಕಲಿಕೆಯ ಮಾನದಂಡವನ್ನು ಅಗತ್ಯವೆನಿಸಿದರೆ ಹಿರಿಯ ಪ್ರಾಥಮಿಕ ಶಾಲೆಗೆ ಮಿತಿಗೊಳಿಸಬೇಕು.

ಸ್ಥಳೀಯ ಅರ್ಹ ಅಭ್ಯರ್ಥಿಗಳಿಗೆ ಆದ್ಯತೆ ನೀಡುವ ರಾಷ್ಟ್ರೀಯ ಉದ್ಯೋಗ ನೀತಿಯನ್ನು ಕೇಂದ್ರ ಸರ್ಕಾರ ರೂಪಿಸಿ ಅನುಷ್ಠಾನಗೊಳಿಸಬೇಕು. ಬಹುರಾಷ್ಟ್ರೀಯ ಕಂಪನಿಗಳೂ ಈ ನಿಯಮ ಅನುಷ್ಠಾನಗೊಳಿಸಲು ಇಂತಹ ನೀತಿಯೇ ಬೇಕು. ಆಡಳಿತದಲ್ಲಿ ಕನ್ನಡ ಅನುಷ್ಠಾನಗೊಳಿಸದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಕಾನೂನು ಕೂಡಾ ನನ್ನ ಅವಧಿಯಲ್ಲಿ ರೂಪಿಸಲಾಗಿತ್ತು. ನಿಯಮದ ಪ್ರಕಾರವೇ ಈ ಕಾನೂನು ರೂಪಿಸಿರುವುದರಿಂದ ಸೂಕ್ತ ಕಠಿಣ ಕ್ರಮ ಕೈಗೊಳ್ಳುವುದು ಮುಖ್ಯ. ಗಡಿಭಾಗ ಮತ್ತು ಹೊರನಾಡಿನ ಕನ್ನಡಿಗರಿಗೆ ಒಳನಾಡಿನ ಕನ್ನಡಿಗರಿಗೆ ಸಿಗುವ ಶೈಕ್ಷಣಿಕ, ಸಾಂಸ್ಕೃತಿಕ, ಸೌಲಭ್ಯಗಳು ಮತ್ತಷ್ಟು ವಿಸ್ತೃತವೂ ಕ್ರಮಬದ್ಧವೂ ಆಗಬೇಕು. ಸರ್ಕಾರಿ ಶಾಲೆಗಳ ಉನ್ನತೀಕರಣ ಕ್ರಿಯೆಯಲ್ಲಿ ಅಧ್ಯಾಪಕರ ಅಭಿಪ್ರಾಯಗಳನ್ನೂ ಪರಿಗಣಿಸಬೇಕು.

ಬರಗೂರು ರಾಮಚಂದ್ರಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ

ಕಾಯ್ದೆಯಿಂದ ಕನ್ನಡಕ್ಕೆ ಕಾನೂನು ಬಲ



ಸಂವಿಧಾನದಲ್ಲಿ ಮುಖ್ಯವಾದ ತಿದ್ದುಪಡಿ ಆಗಬೇಕು. ಇದುವರೆಗೆ ಎರಡು ಬಾರಿ ಮಾತ್ರ ಭಾಷೆಗೆ ಸಂಬಂಧಪಟ್ಟಂತೆ ತಿದ್ದುಪಡಿ ಆಗಿದೆ. ಸಂವಿಧಾನದ ಎಂಟನೇ ಪರಿಚ್ಛೇದದಲ್ಲಿ 22 ಭಾಷೆಗಳಿಗೂ ಸಮಾನವಾದ ಅವಕಾಶ, ಆದ್ಯತೆ ಕೊಡಬೇಕಾದರೆ ಈ ಎಲ್ಲ ಭಾಷೆಗಳು ಒಂದೇ ಎಂದು ಈ ತಿದ್ದುಪಡಿ ಮೂಲಕ ಮಾಡಬೇಕಿದೆ. ‘ತ್ರಿ ಭಾಷಾ’ ನೀತಿಯು ವೈಜ್ಞಾನಿಕವಾಗಿಲ್ಲ. ಯಾವುದೇ ಒಂದು ನೀತಿ ಜನರ ಮಟ್ಟಗೆ ಪ್ರಯೋಜನಕ್ಕೆ ಬಂದಿಲ್ಲವೆಂದರೆ ಪರಿಷ್ಕರಿಸಬೇಕು. ಅದನ್ನು ಯಾವ ಪಕ್ಷಗಳೂ ಮಾಡಿಲ್ಲ. ಚರ್ಚೆಯೂ ಆಗಿಲ್ಲ. ಹೀಗಾಗಿ, ಭಾಷೆಯ ಬಗ್ಗೆ ಇಡೀ ದೇಶದಲ್ಲಿ ಪರಿಶೋಧನೆ (ಆಡಿಟ್) ಆಗಬೇಕು.

ಭಾಷಾವಾರು ರಾಜ್ಯಗಳ ಮೂಲ ಆಶಯದಲ್ಲಿ ಭಾಷೆಗಳನ್ನು ಉಳಿಸಿಕೊಳ್ಳುವ ಕೆಲಸ ಮಾಡಬೇಕಿದೆ. ಇದು ಆಶಯ. ನಾನು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿದ್ದ ಅವಧಿಯಲ್ಲಿ ಕನ್ನಡ ಭಾಷೆಯ ಸಮಗ್ರ ಅಭಿವೃದ್ಧಿಗೆ ಕಾಯ್ದೆ ತಂದಿದ್ದೇನೆ. ಭಾಷಾ ಸಮಾನ ಅವಕಾಶ ಇಲ್ಲದೇ ಇದ್ದುದರಿಂದ ಈ ಕಾಯ್ದೆ ತರಲಾಗಿದೆ. ಈ ಹಿಂದೆಯೇ ಯಾಕೆ ತರಲಿಲ್ಲವೊ ಗೊತ್ತಿಲ್ಲ. ನಾನು ಹಟ ಹಿಡಿದ ಕಾರಣ ಕಾಯ್ದೆ ಆಗಿದೆ. ಇದರಿಂದಾಗಿ ಕನ್ನಡ ಭಾಷೆಯನ್ನು ಉಳಿಸಿಕೊಳ್ಳುವ, ಜೊತೆಗೆ ಬೆಳೆಸಲು ಸವಲತ್ತು ಸಿಗುವಂತಾಯಿತು. ಕಾನೂನು ಬಲ ಸಿಕ್ಕಿರುವುದರಿಂದ ಕನ್ನಡ ಕಡ್ಡಾಯಗೊಳಿಸಲು ಕೂಡಾ ಅವಕಾಶ ಸಿಕ್ಕಿದೆ. ಈ ಕಾಯ್ದೆಯನ್ನು ಬಳಸಿಕೊಂಡು ಕನ್ನಡವನ್ನು ಶಕ್ತಿಶಾಲಿಯಾಗಿಸಬೇಕು. ಆದರೆ, ಸಂವಿಧಾನದಲ್ಲಿಯೇ ಭಾಷೆಗೆ ಬೇಕಾದ ಬದಲಾವಣೆ ಮಾಡಲೇಬೇಕು.

ಟಿ.ಎಸ್. ನಾಗಾಭರಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ

ಪ್ರಾದೇಶಿಕ ಭಾಷೆಗಳ ಉಳಿವು ಮುಖ್ಯ



ಎಲ್ಲ ಪ್ರಾದೇಶಿಕ ಭಾಷೆಗಳ ಉಳಿವು ಬಹಳ ಮುಖ್ಯ. ಸಂವಿಧಾನಾತ್ಮಕವಾಗಿ ರಾಜ್ಯ ಭಾಷೆಯಾಗಿ ಅಂಗೀಕರಿಸಿರುವ ರಾಜ್ಯಗಳಲ್ಲಿ ಆ ಭಾಷೆಯಲ್ಲಿಯೇ ಆಡಳಿತ ನಡೆಯಬೇಕು. ಜೊತೆಗೆ ಇಂಗ್ಲಿಷ್ ಇರಲಿ. ಅಗತ್ಯ ಇದ್ದ ಕಡೆ ಹಿಂದಿಯೂ ಇರಲಿ. ಕನ್ನಡ ಗೊತ್ತಿರುವ ಸ್ಥಳೀಯರಿಗೆ ಶೇ 80ರಷ್ಟು ಉದ್ಯೋಗ ಕಡ್ಡಾಯ ಮಾಡಬೇಕು. ಸರ್ಕಾರಿ ಶಾಲೆಗಳನ್ನು ದುರಸ್ತಿಗೊಳಿಸುವ ಜೊತೆಗೆ, 1ರಿಂದ 4ವರೆಗೆ ಕಲಿಕಾ ಮಾಧ್ಯಮ ಸ್ಥಳೀಯ ಭಾಷೆಯಲ್ಲಿ (ಕನ್ನಡ) ಇರಬೇಕು. ಗಡಿಭಾಗಗಳಲ್ಲಿ ಇತರ ಭಾಷಿಕರು ಬಹುಸಂಖ್ಯಾತರಿರುತ್ತಾರೆ. ಅಂಥ ಕಡೆಯೂ ಅಲ್ಲಿನ ಭಾಷಿಗರ ಜೊತೆಗೆ, ಕನ್ನಡ ಕಲಿಕೆಗೂ ಅವಕಾಶ ಇರಬೇಕು. ಖಾಸಗಿ ಶಾಲೆಗಳಲ್ಲಿರುವ ಮೂಲಸೌಕರ್ಯವನ್ನು ಸರ್ಕಾರಿ ಶಾಲೆಗಳಲ್ಲೂ ಕಲ್ಪಿಸಬೇಕು. ಆ ಮೂಲಕ, ಸರ್ಕಾರಿ ಶಾಲೆಗಳತ್ತ ಮಕ್ಕಳನ್ನು ಸೆಳೆಯಬೇಕಿದೆ. ದೆಹಲಿಯಲ್ಲಿ ನಮ್ಮ ಸರ್ಕಾರ (ಎಎಪಿ) ಈಗಾಗಲೇ ಅದನ್ನು ಮಾಡಿ ತೋರಿಸಿದೆ. ರಾಜ್ಯದಲ್ಲಿ ನಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಯಲ್ಲಿಯೂ ಈ ವಿಷಯವನ್ನು ಹೇಳಿದ್ದೇವೆ.

‘ಮುಖ್ಯಮಂತ್ರಿ’ ಚಂದ್ರು, ಎಎಪಿ ರಾಜ್ಯ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ (ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ)

ನಾಡು, ನುಡಿಯ ಕಳಕಳಿ ಇಲ್ಲದವರಿಗೆ ಟಿಕೆಟ್ ಬೇಡ



ಈ ನೆಲದವರಿಗೆ ಎಲ್ಲ ರಾಜಕೀಯ ಪಕ್ಷಗಳು ಟಿಕೆಟ್ ನೀಡಬೇಕು. ಅಭ್ಯರ್ಥಿ ಆದವನಿಗೆ ಇಲ್ಲಿನ ಭಾಷೆಯ ಮೇಲೆ ಹಿಡಿತ ಇರಬೇಕು. ಪ್ರತಿನಿಧಿಸಲು ಬಯಸುವ ಕ್ಷೇತ್ರದ, ಜಿಲ್ಲೆಯ ಇತಿಹಾಸ, ಜನರ ನಾಡಿಮಿಡಿತ ಗೊತ್ತಿರಬೇಕು. ಅದರ ಬದಲು ಭಾಷೆ ಗೊತ್ತಿಲ್ಲದವರಿಗೆ, ಎಲ್ಲಿಂದಲೋ ವಲಸೆ ಬಂದವರಿಗೆ ಟಿಕೆಟ್ ನೀಡಿದರೆ, ಅವರು ತಮ್ಮ ಭಾಷಾ ಪ್ರೇಮ ಮೆರೆಯಲು, ಅದನ್ನು ವಿಜೃಂಭಿಸಲು, ನೆಲೆ ಕಟ್ಟಿಕೊಡಲು ಅವಕಾಶವಾಗುತ್ತದೆ. ಕನ್ನಡ ಭಾಷೆ, ನನ್ನ ನಾಡು, ನನ್ನ ಜನ ಎಂಬ ಕಳಕಳಿ ಇಲ್ಲದವರು ಇಲ್ಲಿ (ಕರ್ನಾಟಕದಲ್ಲಿ) ರಾಜಕೀಯ ಮಾಡಲು ಯೋಗ್ಯರಲ್ಲ.

ಹಿಂದೆ ಎಡಿಎಂಕೆ, ಎಂಇಎಸ್ ಪಕ್ಷಗಳಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಕನ್ನಡಿಗರ ಒಗ್ಗಟ್ಟು, ನಮ್ಮ ಸಂಘಟನೆಯ (ಕರ್ನಾಟಕ ರಕ್ಷಣಾ ವೇದಿಕೆ) ಬಲದಿಂದ ಇದಕ್ಕೆ ಕಡಿವಾಣ ಬಿದ್ದಿದೆ. ದಕ್ಷಿಣ ಭಾರತದಿಂದ, ಹಿಂದಿ ರಾಜ್ಯಗಳಿಂದ ವಲಸೆ ಬಂದವರನ್ನು ರಾಷ್ಟ್ರೀಯ ಪಕ್ಷಗಳು ಓಲೈಕೆ ಮಾಡುತ್ತಿವೆ. ಹೀಗೆ ಬಂದವರು ಎಂದೂ ‘ನಮ್ಮವರಾಗಲು’ (ಕನ್ನಡಿಗ) ಹೋಗುವುದಿಲ್ಲ. ಅದರ ಬದಲು ತಮ್ಮದೇ ಕೋಟೆ ಕಟ್ಟಿಕೊಳ್ಳುತ್ತಾರೆ. ಹೀಗಾಗಿ, ಅನ್ಯರಿಗೆ ಟಿಕೆಟ್ ಕೊಡುವ ಪರಿಪಾಠವನ್ನು ರಾಜಕೀಯ ಪಕ್ಷಗಳು ಬಿಡಬೇಕು. ಅಷ್ಟೇ ಅಲ್ಲ, ಎಲ್ಲಿಂದಲೋ ಬಂದು ಟಿಕೆಟ್ ಗಿಟ್ಟಿಸಿಕೊಂಡು ಮತ ಬಯಸಿ ಮನೆಬಾಗಿಲಿಗೆ ಬರುವ ಅಭ್ಯರ್ಥಿಯನ್ನು, ‘ಈ ನೆಲಕ್ಕೆ ನಿನ್ನ ಕೊಡುಗೆ ಏನು’ ಎಂದು ಮತದಾರರಾದ ನಾವು ಪ್ರಶ್ನಿಸುವ ಅಗತ್ಯವಿದೆ.

ಟಿ.ಎ. ನಾರಾಯಣಗೌಡ, ಅಧ್ಯಕ್ಷ, ಕರ್ನಾಟಕ ರಕ್ಷಣಾ ವೇದಿಕೆ

ಗಾಳಿ ಮಾತು



ಟಿಕೆಟ್ ‘ಕೈ’ ತಪ್ಪಿದರೆ ‘ಅಖಂಡ’ ಪಕ್ಷೇತರ; ಬೆನ್ನಿಗೆ ಬಿಜೆಪಿ?

ಬೆಂಗಳೂರು: ಎಸ್‌ಸಿ ಮೀಸಲು ಕ್ಷೇತ್ರವಾದ ಪುಲಕೇಶಿನಗರದ ಕಾಂಗ್ರೆಸ್ ಶಾಸಕ ಅಖಂಡ ಶ್ರೀನಿವಾಸಮೂರ್ತಿ ಅವರನ್ನು ಕೆ.ಜಿ ಹಳ್ಳಿ, ಡಿ.ಜೆ ಹಳ್ಳಿ ಗಲಭೆ ಬೆಂಬಿಡದ ಭೂತದಂತೆ ಕಾಡುತ್ತಿದೆ. 2018ರ ಚುನಾವಣೆಯಲ್ಲಿ ಜೆಡಿಎಸ್‌ನ ಬಿ. ಪ್ರಸನ್ನ ಕುಮಾರ್ ವಿರುದ್ಧ ಅತಿ ಹೆಚ್ಚು 81,626 ಮತಗಳಿಂದ ಗೆಲುವು ಸಾಧಿಸಿದ್ದ ಅಖಂಡಗೆ ಇನ್ನೂ ಟಿಕೆಟ್ ಖಚಿತವಾಗಿಲ್ಲ!


ಟಿಕೆಟ್ ಕೈ ತಪ್ಪಿದರೆ ಪಕ್ಷೇತರನಾಗಿ ಕಣಕ್ಕಿಳಿದು ‘ಶಕ್ತಿ ಪ್ರದರ್ಶನ’ಕ್ಕೆ ಅಖಂಡ ತಯಾರಾಗುತ್ತಿದ್ದಾರೆ. ಅಷ್ಟೇ ಅಲ್ಲ, ಪಕ್ಷದಿಂದ ಅಭ್ಯರ್ಥಿಯನ್ನು ಅಖಾಡಕ್ಕೆ ಇಳಿಸದೆ ಬೆನ್ನಿಗೆ ನಿಲ್ಲಲು ಬಿಜೆಪಿ ತಯಾರಾಗಿದೆ ಎಂಬ ಸುದ್ದಿಯೂ ಹಬ್ಬಿದೆ.

2020ರ ಆಗಸ್ಟ್‌ನಲ್ಲಿ ಕೆ.ಜಿ ಹಳ್ಳಿ, ಡಿ.ಜೆ ಹಳ್ಳಿಯಲ್ಲಿ ನಡೆದ ಅಹಿತಕರ ಘಟನೆಗೆ ಕಾರಣರಾಗಿ ಜೈಲು ಸೇರಿದ ತಮ್ಮ ಸಮುದಾಯದವರ ಜೊತೆಗೆ ಅಖಂಡ ನಿಲ್ಲಲಿಲ್ಲವೆಂದು ಮುಸ್ಲಿಂ ಸಮುದಾಯ ಅಸಮಾಧಾನಗೊಂಡಿದೆ. ಅಲ್ಲದೆ, ಆ ಸೇಡನ್ನು ಚುನಾವಣೆಯಲ್ಲಿ ಸಮುದಾಯ ತೋರಿಸಬಹುದು ಎಂಬ ಕಾರಣಕ್ಕೆ ಅಖಂಡ ಅವರಿಗೆ ಟಿಕೆಟ್ ನಿರಾಕರಿಸಲಾಗುತ್ತಿದೆ ಎನ್ನಲಾಗಿದೆ.

ಟಿಕೆಟ್ ನೀಡುವ ವಿಷಯದಲ್ಲಿ ಸಿದ್ದರಾಮಯ್ಯ ಮತ್ತು ಶಾಸಕ ಜಮೀರ್ ಅಹ್ಮದ್ ಖಾನ್ ಅವರು ಅಖಂಡ ಪರ ಇದ್ದರೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಹಮತ ತೋರಿಲ್ಲ ಎಂದೂ ಹೇಳಲಾಗಿದೆ. ಅಲ್ಲದೆ, ಇನ್ನೂ ಒಂದು ಹೆಜ್ಜೆ ಮುಂದೆ ಇಟ್ಟಿರುವ ಜಮೀರ್, ‘ಅಖಂಡಗೆ ಟಿಕೆಟ್ ನೀಡದೇ ಇದ್ದರೆ ನಾನು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿಯುತ್ತೇನೆ’ ಎಂದು ಪಕ್ಷದ ನಾಯಕರ ಬಳಿ ಹೇಳಿಕೊಂಡಿದ್ದಾರೆ ಎಂದೂ ಹೇಳಲಾಗಿದೆ.

ಟಿಕೆಟ್ ಸಿಗದೆ ಪಕ್ಷೇತರನಾಗಿ ಅಖಂಡ ಕಣಕ್ಕಿಳಿದರೆ, ‘ಮುಸ್ಲಿಂ ಮುಖಂಡರ ಮಾತು ಕೇಳಿ ದಲಿತ ಶಾಸಕನಿಗೆ ಕಾಂಗ್ರೆಸ್ ನಾಯಕರು ಟಿಕೆಟ್ ತಪ್ಪಿಸಿದ್ದಾರೆ’ ಎಂದು ರಾಜ್ಯವಿಡೀ ಪ್ರಚಾರ ಮಾಡಲು ಬಿಜೆಪಿಯಲ್ಲಿ ಚರ್ಚೆ ನಡೆದಿದೆ. ಆ ಮೂಲಕ, ಮೀಸಲಾತಿ ವಿಚಾರದಲ್ಲಿ ನಡೆಯುತ್ತಿರುವ ಪ್ರತಿಭಟನೆಗೆ ಕುಮ್ಮಕ್ಕು ನೀಡುತ್ತಿರುವ ಕಾಂಗ್ರೆಸ್‌ಗೆ ತಿರುಗೇಟು ನೀಡಲು ಕೂಡಾ ಕಮಲ ನಾಯಕರು ಮುಂದಾಗಿದ್ದಾರೆ ಎಂದೂ ಗೊತ್ತಾಗಿದೆ.

ಸರ್ಕಾರಿ ಕಾರು ಮರಳಿಸದ ನಡಹಳ್ಳಿ!



ಬೆಂಗಳೂರು: ದೇವರಹಿಪ್ಪರಗಿಯ ಬಿಜೆಪಿ ಶಾಸಕರೂ ಆಗಿರುವ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಅಧ್ಯಕ್ಷ ಎ.ಎಸ್. ಪಾಟೀಲ ನಡಹಳ್ಳಿ ಅವರು ನಿಗಮದಿಂದ ನೀಡಿದ್ದ ಸರ್ಕಾರಿ ಕಾರನ್ನು ಚುನಾವಣಾ ನೀತಿಸಂಹಿತೆ ಜಾರಿಯಾದ ಬಳಿಕವೂ ತಮ್ಮ ಬಳಿಯಲ್ಲೇ ಉಳಿಸಿಕೊಂಡಿದ್ದಾರೆ.

ರಾಜ್ಯ ವಿಧಾನಸಭಾ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗವು ಬುಧವಾರ ವೇಳಾಪಟ್ಟಿ ಪ್ರಕಟಿಸಿತ್ತು. ಆ ಕ್ಷಣದಿಂದಲೇ ಮಾದರಿ ಚುನಾವಣಾ ನೀತಿಸಂಹಿತೆ ಜಾರಿಯಾಗಿದೆ. ಸಚಿವರು, ನಿಗಮ, ಮಂಡಳಿಗಳ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ನೀಡಿದ್ದ ಸರ್ಕಾರಿ ವಾಹನಗಳನ್ನು ಬುಧವಾರದಿಂದಲೇ ಹಿಂಪಡೆಯಲಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೇರಿದಂತೆ ಬಹುತೇಕರು ಮಾರ್ಗ ಮಧ್ಯದಲ್ಲೇ ಸರ್ಕಾರಿ ಕಾರು ತ್ಯಜಿಸಿದ್ದರು.

ನಡಹಳ್ಳಿ ಅವರಿಗೆ ಕೆಎ–04, ಎಂವೈ– 3528 ನೋಂದಣಿ ಸಂಖ್ಯೆಯ ಟೊಯೊಟಾ ಇನ್ನೋವಾ ಕಾರು ಹಾಗೂ ಕೆಎ–04 ಎಂಎಚ್– 8844 ನೋಂದಣಿ ಸಂಖ್ಯೆಯ ಟೊಯೊಟಾ ಕೊರೊಲ್ಲಾ ಕಾರನ್ನು ನಿಗಮದಿಂದ ನೀಡಲಾಗಿತ್ತು. ನೀತಿಸಂಹಿತೆ ಜಾರಿಯಾಗಿರುವ ಕಾರಣದಿಂದ ಎರಡೂ ಕಾರುಗಳನ್ನು ಹಿಂದಿರುಗಿಸುವಂತೆ ನಿಗಮದ ವ್ಯವಸ್ಥಾಪಕ ನಿರ್ದೇಶಕರು ವಿಜಯಪುರ ಜಿಲ್ಲಾಧಿಕಾರಿಯವರ ಮೂಲಕ ನಡಹಳ್ಳಿ ಅವರಿಗೆ ಅಂದೇ ಪತ್ರ ಕಳುಹಿಸಿದ್ದರು.

ಅದಕ್ಕೆ ಉತ್ತರಿಸಿರುವ ನಡಹಳ್ಳಿ ಅವರ ಆಪ್ತ ಸಹಾಯಕ, ‘ಅಧ್ಯಕ್ಷರ ಕಾರ್ಯಾವಧಿ ಇನ್ನೂ ಇರುವುದರಿಂದ ವಾಹನವನ್ನು ಹಿಂಪಡೆಯಲು ಸಾಧ್ಯವಿಲ್ಲ. ನೀತಿಸಂಹಿತೆ ನಿಯಮಗಳಿಗೆ ಅನುಗುಣವಾಗಿ ವಾಹನ ಬಳಕೆ ಮಾಡದೇ ಅಧ್ಯಕ್ಷರ ಬೆಂಗಳೂರಿನ ಮನೆಯ ಕೆಳಮಹಡಿಯ ನಿಲುಗಡೆ ಪ್ರದೇಶದಲ್ಲಿ ನಿಲ್ಲಿಸಲಾಗಿದೆ. ಈ ವಿಷಯವನ್ನು ನಿಮ್ಮ ಗಮನಕ್ಕೆ ತರುವಂತೆ ಅಧ್ಯಕ್ಷರು ನಿರ್ದೇಶನ ನೀಡಿದ್ದಾರೆ’ ಎಂದು ತಿಳಿಸಿದ್ದಾರೆ.

ಜನರಿಗೆ ವಾಗ್ದಾನ ನೀಡಿದರೆ ಮಾತ್ರ ಬಿ ಫಾರಂ

ಭ್ರಷ್ಟನಾಗುವುದಿಲ್ಲ: ಕೆಆರ್‌ಎಸ್ ಪಕ್ಷದ ಅಭ್ಯರ್ಥಿಗಳ ಪ್ರತಿಜ್ಞೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸತ್ಯ, ನ್ಯಾಯ, ನೀತಿ, ಧರ್ಮದಿಂದ ನಡೆದುಕೊಳ್ಳುತ್ತೇನೆ. ಭ್ರಷ್ಟಾಚಾರದಲ್ಲಿ ಪಾಲ್ಗೊಳ್ಳುವುದಿಲ್ಲ....’

ಇದು ಕೆಆರ್‌ಎಸ್ ಅಭ್ಯರ್ಥಿಗಳ ಪ್ರತಿಜ್ಞಾ ವಿಧಿ. ಭ್ರಷ್ಟಾಚಾರವೇ ಈ ಬಾರಿಯ ಚುನಾವಣೆಯ ಪ್ರಮುಖ ವಿಷಯವಾಗಿರುವಾಗ ಕೆಆರ್‌ಎಸ್ ಪಕ್ಷದ ಈ ನಡೆ ಗಮನಸೆಳೆದಿದೆ.

‘ರಾಜ್ಯದ ಜನತೆಯ ಹಿತಕ್ಕಾಗಿ ಕಾಯಾ– ವಾಚಾ– ಮನಸಾ ಕೆಲಸ ಮಾಡುತ್ತೇನೆ’ ಎಂದು ಸಾರ್ವಜನಿಕವಾಗಿ ವಾಗ್ದಾನ ನೀಡಿ, ಕಡ್ಡಾಯವಾಗಿ ಪ್ರತಿಜ್ಞೆ ಮಾಡುವ ಅಭ್ಯರ್ಥಿಗಳಿಗೆ ಮಾತ್ರ ಪಕ್ಷದ ‘ಬಿ ಫಾರಂ’ ನೀಡಲಾಗುತ್ತಿದೆ.

47 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಕೆಆರ್‌ಎಸ್ ಪ್ರಕಟಿಸಿದೆ. ಶುಕ್ರವಾರ ಮೈಸೂರಿನಲ್ಲಿ ಮೂವರಿಗೆ ಬಿ ಫಾರಂ ನೀಡಲಾಗಿದೆ. ಬೆಂಗಳೂರಿನಲ್ಲಿ ಶನಿವಾರ ನಡೆದ ಪಕ್ಷದ ಸಭೆಯಲ್ಲಿ ಪ್ರತಿಜ್ಞಾ ವಿಧಿ ಪೂರೈಸಿದ 37 ಅಭ್ಯರ್ಥಿಗಳಿಗೆ ಬಿ. ಫಾರಂ ನೀಡಲಾಯಿತು.



‘ಮತದಾರರಿಗೆ ಆಮಿಷವೊಡ್ಡುವ ಕಾನೂನುಬಾಹಿರ ಚಟುವಟಿಕೆಗಳನ್ನು ಕೈಗೊಳ್ಳುವುದಿಲ್ಲ. ಜನಪ್ರತಿನಿಧಿಯಾಗಿ ಆಯ್ಕೆಯಾದರೆ ದೊರೆಯುವ ಸಂಬಳ ಅಥವಾ ಗೌರವಧನದಲ್ಲಿ ಮೂರನೇ ಒಂದು ಭಾಗವನ್ನು ಪಕ್ಷಕ್ಕೆ ದೇಣಿಗೆ ನೀಡುತ್ತೇನೆ ಮತ್ತು ಕಾನೂನುಬಾಹಿರ ಖಾಸಗಿ ವ್ಯವಹಾರಗಳನ್ನು ಮಾಡುವುದಿಲ್ಲ. ಜನ ಹಿತಕ್ಕಾಗಿ ದುಡಿಯುತ್ತೇನೆ ಮತ್ತು ಅಧಿಕಾರ ದುರುಪಯೋಗಪಡಿಸಿಕೊಳ್ಳುವುದಿಲ್ಲ. ಯಾವುದೇ ರೀತಿಯ ಜನದ್ರೋಹಿ ಅಥವಾ ಪಕ್ಷದ್ರೋಹಿ ಕೆಲಸ ಮಾಡುವುದಿಲ್ಲ’ ಎಂದು ಅಭ್ಯರ್ಥಿಗಳು ಪ್ರತಿಜ್ಞಾ ವಿಧಿ ಸ್ವೀಕರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

‘ಭ್ರಷ್ಟರೇ ಪವಿತ್ರವಾದ ರಾಜಕಾರಣವನ್ನು ಬಿಟ್ಟು ತೊಲಗಿ, ನಾಡಪ್ರೇಮಿಗಳೇ ಪ್ರಾಮಾಣಿಕ ರಾಜಕಾರಣಕ್ಕೆ ಮುಂದಾಗಿ’ ಎನ್ನುವ ಜಾಗೃತಿ ಅಭಿಯಾನವನ್ನು ರಾಜ್ಯ ಘಟಕದ ಅಧ್ಯಕ್ಷ ರವಿ ಕೃಷ್ಣಾರೆಡ್ಡಿ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದೆ.

ಮತ ಆಮಿಷ, ಸಿಕ್ಕಿದ್ದೇನು?



₹ 39.38 ಕೋಟಿ ನೀತಿ ಸಂಹಿತೆ ಜಾರಿ ಬಳಿಕ ವಶಪಡಿಸಿಕೊಳ್ಳಲಾದ ವಸ್ತುಗಳ ಒಟ್ಟು ಮೌಲ್ಯ



₹ 4.50 ಕೋಟಿ ಮೌಲ್ಯದ ಸೀರೆ ಶಿವಮೊಗ್ಗದಲ್ಲಿ ವಶ



₹ 15.37 ಲಕ್ಷ ಮೌಲ್ಯದ ಮದ್ಯ ಬಾಗಲಕೋಟೆಯಲ್ಲಿ ವಶ

₹ 9 ಲಕ್ಷ ನಗದು ರಾಯಚೂರಲ್ಲಿ ವಶ

₹ 7.9 ಲಕ್ಷ ನಗದು ತಲಪಾಡಿಯಲ್ಲಿ ವಶ

ಎಡವಿದ ಯೋಜನೆಯ ಕಥೆ...

ಜಿಲ್ಲೆ	ಉತ್ಪನ್ನ	ಸಲ್ಲಿಕೆಯಾದ ಅರ್ಜಿ	ಸಾಲ ಸೌಲಭ್ಯ ಪಡೆದವರು
ಮಂಡ್ಯ	ಬೆಲ್ಲ	160	120
ಕೊಡಗು	ಕಾಫಿ	35	22
ಹಾಸನ	ತೆಂಗು	69	69
ಮೈಸೂರು	ಬಾಳೆ	20	20
ಚಾಮರಾಜನಗರ	ಅರಿಸಿನ	57	07
ಕಲಬುರಗಿ	ತೊಗರಿ	396	33
ರಾಯಚೂರು	ಮೆಣಸಿನಕಾಯಿ	220	33
ಹಾವೇರಿ	ಮಾವು	252	61
ಬಳ್ಳಾರಿ	ಅಂಜೂರ ಸಂಸ್ಕರಣಾ ಘಟಕ	122	19
ರಾಮನಗರ	ತೆಂಗು	144	29
ಚಿಕ್ಕಬಳ್ಳಾಪುರ	ಟೊಮೆಟೊ	74	21
ದಕ್ಷಿಣ ಕನ್ನಡ	ಸಾಗರೋತ್ಪನ್ನ	250	93
ಉಡುಪಿ	ಸಾಗರೋತ್ಪನ್ನ	182	71
ಚಿಕ್ಕಮಗಳೂರು	ಕಾಫಿ ಮತ್ತು ಸಾಂಬಾರ ಉತ್ಪನ್ನ	126	33
ಬೀದರ್	ವಿವಿಧ ಬೆಳೆಗಳು	341	90
ಕೊಪ್ಪಳ	ಪೇರಲದೊಂದಿಗೆ ವಿವಿಧ ಬೆಳೆಗಳು	286	23
ಬೆಳಗಾವಿ	ಆಹಾರ ಸಂಸ್ಕರಣೆ ಘಟಕ	994	357
ಯಾದಗಿರಿ	ಆಹಾರ ಸಂಸ್ಕರಣಾ ಘಟಕ	192	23
ಧಾರವಾಡ	ಆಹಾರೋತ್ಪನ್ನ	289	91
ದಾವಣಗೆರೆ	ಆಹಾರೋತ್ಪನ್ನ	265	48
ವಿಜಯಪುರ	ಲಿಂಬೆ ಮತ್ತಿತರ ಬೆಳೆ	837	94
ಶಿವಮೊಗ್ಗ	ಪೈನಾಪಲ್ ಮತ್ತಿತರ ಬೆಳೆ	300	111
ಗದಗ	ಬ್ಯಾಡಗಿ ಮೆಣಸಿನಕಾಯಿ ಮತ್ತಿತರ ಬೆಳೆ	163	19
ಬಾಗಲಕೋಟೆ	ಆಹಾರ ಸಂಸ್ಕರಣೆ ಘಟಕ	133	70
ಉತ್ತರ ಕನ್ನಡ	ಆಹಾರ ಸಂಸ್ಕರಣಾ ಘಟಕ	79	55
ಬೆಂಗಳೂರು ಗ್ರಾಮಾಂತರ	ಆಹಾರ ಸಂಸ್ಕರಣೆ ಘಟಕ	166	41
ಕೋಲಾರ	ಟೊಮೆಟೊ, ಮಾವು, ಸಿರಿಧಾನ್ಯ	42	33
ತುಮಕೂರು	ತೆಂಗು ಮತ್ತು ಆಹಾರ ಉತ್ಪನ್ನಗಳ ಸಂಸ್ಕರಣೆ	338	79
ಚಿತ್ರದುರ್ಗ	ಶೇಂಗಾ ಮತ್ತು ಇತರ ಬೆಳೆ	211	20
ಬೆಂಗಳೂರು ನಗರ	ಬೇಕರಿ, ತಿಂಡಿ–ತಿನಿಸುಗಳು	414	101
	ಒಟ್ಟು	7,157	1,886

ನಿರಾಸಕ್ತಿಗೆ ಕಾರಣಗಳು

- ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆ ಕುರಿತು ಮಾಹಿತಿ, ಅರ್ಜಿ ಸಲ್ಲಿಸುವ ಬಗೆ, ಅರ್ಹತೆ, ವರದಿ ಸಲ್ಲಿಕೆ ಇತ್ಯಾದಿಗಳೇನು ಎಂಬ ಮಾಹಿತಿ ಸುಲಭವಾಗಿ ಸಿಗದಿರುವುದು
- ಬ್ಯಾಂಕುಗಳು ಅರ್ಜಿಗಳನ್ನು ತಿರಸ್ಕರಿಸುತ್ತಿರುವುದರಿಂದ ಅರ್ಜಿದಾರರು ಆಸಕ್ತಿ ಕಳೆದುಕೊಳ್ಳುತ್ತಿದ್ದಾರೆ.
- ಒಮ್ಮೆ ಅರ್ಜಿ ತಿರಸ್ಕೃತಗೊಂಡವರು ಇತರರೊಂದಿಗೂ ಈ ಮಾಹಿತಿ ಹಂಚಿಕೊಳ್ಳುತ್ತಿರುವುದರಿಂದ ಅರ್ಜಿ ಸಲ್ಲಿಸುವವರ ಸಂಖ್ಯೆಯೇ ಕಡಿಮೆಯಾಗುತ್ತಿದೆ ಎಂದು ಅಂದಾಜಿಸಲಾಗಿದೆ.
- ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು ಪ್ರತಿಷ್ಠಿತ ಕಂಪನಿಗಳ ಜತೆಗಿನ ಒಪ್ಪಂದ ಹೇಗೆ ಎಂಬುದರ ಮಾಹಿತಿ ಕೊರತೆ
- ದಿಢೀರ್ ಲಾಭದ ಉದ್ದೇಶ ಹಾಗೂ ಲಾಭ ಬಾರದಿದ್ದರೆ ಸಾಲ ತೀರಿಸುವ ಬಗೆ ಕುರಿತ ಚಿಂತೆಯೂ ನಿರಾಸಕ್ತಿಗೆ ಕಾರಣ

ಸಾಲ ನೀಡಲು ಹಿಂದೇಟು ಏಕೆ?

- ಲೀಡ್ ಬ್ಯಾಂಕ್ ಮೂಲಕ ವಿವಿಧ ಬ್ಯಾಂಕುಗಳಿಗೆ ಮಾಹಿತಿ ರವಾನೆಯಾಗಿದ್ದರೂ, ಬಹಳಷ್ಟು ಬ್ಯಾಂಕುಗಳ ಅಧಿಕಾರಿಗಳಿಗೆ ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯ ಮಾಹಿತಿ ಕೊರತೆ ಇದೆ.
- ಕೊರೊನಾ ಸಂದರ್ಭದಲ್ಲಿ ಜಾರಿಗೆ ಬಂದ ಯೋಜನೆಯಿಂದಾಗಿ ಬ್ಯಾಂಕುಗಳು ಸಾಲ ನೀಡಲು ಎಚ್ಚರಿಕೆಯ ಹೆಜ್ಜೆಯನ್ನಿಡುತ್ತಿವೆ.

ತರಬೇತಿ ಪಡೆದ ಮೇಲೆ ಪಿಎಂಎಫ್‌ಎಂಇ ಸಾಲ ಪಡೆದು ಮೀನಿನ ಉಪ್ಪಿನಕಾಯಿ, ಚಟ್ನಿಪುಡಿ ತಯಾರಿಸಿ, ಮೂವರು ಮಹಿಳೆಯರು ಸೇರಿ ಮಾರಾಟ ಮಾಡುತ್ತಿದ್ದೇವೆ. ಯೋಜನೆಯಿಂದ ಅನುಕೂಲ ಆಗಿದೆ

ಬಬಿತಾ ಮುರ, ಉದ್ಯಮಿ, ಕಂದಾವರ

ಒಂದನೇ ಪುಟದಿಂದ...

ಆದರೆ, ಘಟಕ ಸ್ಥಾಪಿಸುವ ಜಾಗವನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸುವ ಷರತ್ತು, ಸಾಲ ನೀಡಲು ಬ್ಯಾಂಕ್‌ಗಳ ನಿರಾಕರಣೆ ಮತ್ತಿತರ ಕಾರಣಗಳಿಂದಾಗಿ ಬೆರಳೆಣಿಕೆಯ ಅರ್ಜಿಗಳಷ್ಟೇ ಬಂದಿದ್ದವು. ಮಹತ್ವಾಕಾಂಕ್ಷೆಯ ಯೋಜನೆಯೊಂದು ನೆಲಕಚ್ಚುವ ಎಲ್ಲ ಸಾಧ್ಯತೆಗಳನ್ನೂ ತೆರೆದಿಟ್ಟಿತು.

ನೀರಸ ಪ್ರತಿಕ್ರಿಯೆ: ರೈತರು ಮತ್ತು ಬಹುತ್ವ ಭಾರತದ ಆಹಾರ ವೈವಿಧ್ಯವನ್ನು ಅರಿಯದೆಯೇ ಮೇಲ್ಪದರದಲ್ಲಿ ಯೋಚಿಸಿ, ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದರಿಂದ ಎಲ್ಲಿಲ್ಲದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು. 2022–23ರ ಸಾಲಿನಲ್ಲಿ ಯೋಜನೆಯ ಸ್ವರೂಪವನ್ನು ಬದಲಿಸದೆಯೇ, 'ಒಂದು ಜಿಲ್ಲೆ ಹಲವು ಉತ್ಪನ್ನ' ಎಂದು ತನ್ನ ಘೋಷವಾಕ್ಯವನ್ನು ಬದಲಿಸಿತು. ಪರಿಣಾಮ 30 ಉತ್ಪನ್ನಗಳಿಂದ 265 ಉತ್ಪನ್ನಗಳಿಗೆ ಈ ಯೋಜನೆ ವಿಸ್ತರಣೆ ಆಯಿತು. ಬೆಲ್ಲ ಅಷ್ಟೇ ಅಲ್ಲ, ಬೆಳಗಾವಿಯಲ್ಲಿ ಆಹಾರ ಸಂಸ್ಕರಣೆ ಘಟಕಗಳ ಸ್ಥಾಪನೆಗೆ ಅವಕಾಶ ನೀಡಲಾಯಿತು. ಪರಿಣಾಮ ರಾಜ್ಯದಲ್ಲಿಯೇ ಅತಿ ಹೆಚ್ಚು 357 ಫಲಾನುಭವಿಗಳಿಗೆ ಸಾಲ ಮಂಜೂರಾಯಿತು.



ಕೊಪ್ಪಳ ಜಿಲ್ಲೆಯಲ್ಲಿ ಪೇರಲ ಹಣ್ಣು ಹೇರಳವಾಗಿ ಬೆಳೆಯಲಾಗುತ್ತಿದೆ. 500 ಹೆಕ್ಟೇರ್ ಪೇರಲ ಬೆಳೆಯುವ ಪ್ರಮಾಣ ಈಗ 2,000 ಹೆಕ್ಟೇರ್‌ಗೆ ವಿಸ್ತಾರವಾಗಿದೆ. ಆದರೆ, ಪೇರಲ ಸಂಸ್ಕರಣೆಗೆ, ಮೌಲ್ಯವರ್ಧನೆಗೆ ಅವಕಾಶವಿಲ್ಲ. ಜ್ಯಾಮ್ ಮತ್ತು ಜ್ಯೂಸು ಮಾಡುವ ಪ್ರಯತ್ನ ಮಾಡಿದರೂ ಉತ್ತರ ಕರ್ನಾಟಕ, ಕಲ್ಯಾಣ ಕರ್ನಾಟಕ ಭಾಗದಲ್ಲಿ ಜ್ಯಾಮ್ ತಿನ್ನುವುದು, ಸೀಬೆಕಾಯಿ ಜ್ಯೂಸು ಸೇವಿಸುವುದು ಎರಡೂ ಇಲ್ಲಿಯ ಆಹಾರ ಸಂಸ್ಕೃತಿಯಿಂದ ದೂರವೇ ಇದೆ. ಉತ್ಪನ್ನಗಳನ್ನು ಮಾರಾಟ ಮಾಡುವಷ್ಟೇ ಕಷ್ಟದ ಕೆಲಸ ಸಂಗ್ರಹಿಸಿಡುವುದು, ಕೆಡದಂತೆ ದಾಸ್ತಾನು ಮಾಡುವುದೂ ಸಹ. ಕೇವಲ ರಸ್ತೆಬದಿಗೆ ಹಣ್ಣು ಮಾರಾಟ ಮಾಡುವುದರಲ್ಲಿಯೇ ರೈತರು ಸಂತೃಪ್ತರಾಗುವಂತಾಗಿದೆ.

ಗದಗ ಜಿಲ್ಲೆಯಲ್ಲಿ ಕೇವಲ 19 ಮಂದಿ ಈ ಯೋಜನೆಯ ಲಾಭ ಪಡೆದುಕೊಂಡಿದ್ದಾರೆ. ಈ ಪೈಕಿ ಬ್ಯಾಡಗಿ ಮೆಣಸಿನ ಮೌಲ್ಯವರ್ಧನೆ ಹಾಗೂ ಅದಕ್ಕೆ ಸಂಬಂಧಿಸಿದ ಇತರೆ ಉತ್ಪನ್ನಗಳ ಮಾರಾಟ ಸಂಬಂಧಿ ಕಿರು ಆಹಾರ ಸಂಸ್ಕರಣಾ ಉದ್ದಿಮೆ ಸ್ಥಾಪಿಸಿಕೊಂಡವರು 9 ಮಂದಿ. ಉಳಿದಂತೆ, ಸಿರಿಧಾನ್ಯ 4, ಜೋಳ 3, ಎಣ್ಣೆಗಾಣ 1, ಭತ್ತ 1 ಮತ್ತು ಆಲೂಗಡ್ಡೆ ಸಂಬಂಧಿತ ಉತ್ಪನ್ನಗಳ ತಯಾರಿಗೆಂದು ಒಬ್ಬರು ಸಹಾಯಧನ ಪಡೆದುಕೊಂಡಿದ್ದಾರೆ. 25 ಮಂದಿಯ ಅರ್ಜಿಗಳು ಬ್ಯಾಂಕ್‌ನಲ್ಲಿನ ಎಲ್ಲ ಪ್ರಕ್ರಿಯೆ ಪೂರ್ಣಗೊಳಿಸಿದ್ದು, ಅವರಿಗೆ ಇನ್ನು ಕೆಲವೇ ದಿನಗಳಲ್ಲಿ ಸಹಾಯಧನ ಲಭ್ಯವಾಗಲಿದೆ ಎಂದು ಕೃಷಿ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಉದ್ದಿಮೆಯಾಗಿ ರೂಪುಗೊಳ್ಳದ ತರಬೇತಿ: ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಮೀನಿನ ವಿವಿಧ ಉತ್ಪನ್ನಗಳ ತಯಾರಿಕೆಗೆ ಸ್ವ ಸಹಾಯ ಗುಂಪುಗಳಿಗೆ ತರಬೇತಿ ನೀಡಲಾಗಿತ್ತು. ಆದರೆ, ಉತ್ಪನ್ನಗಳ ತಯಾರಿಕೆ ಮನೆ ಮಟ್ಟಕ್ಕೆ ಸೀಮಿತವಾಗಿ, ಉದ್ದಿಮೆಯಾಗಿ ರೂಪುಗೊಂಡಿಲ್ಲ. ಜತೆಗೆ, ಇದನ್ನು ಹೆಚ್ಚು ದಿನ ಕೆಡದಂತೆ ಇಡುವ ಸವಾಲು ಸೇರಿದಂತೆ ಅನೇಕ ಮಿತಿಗಳು ಇವೆ. ಕೆಲವೇ ಮಹಿಳೆಯರು ಗೃಹ ಉತ್ಪನ್ನಗಳನ್ನು ತಯಾರಿಸಿ, ಮಾರುಕಟ್ಟೆಗೆ ತಂದಿದ್ದಾರೆ, ಆದರೆ ಇದು ಜಿಲ್ಲೆಯ ಗಡಿ ದಾಟಿಲ್ಲ. ಕಾರವಾರ ಜಿಲ್ಲೆಯಲ್ಲಂತೂ ಬಹುತೇಕ ಜನರಿಗೆ ಈ ಬಗ್ಗೆ ಮಾಹಿತಿಯೇ ಇಲ್ಲ.

ಹೀಗೆಯೇ ಒಂದೊಂದು ಜಿಲ್ಲೆಯ ಕತೆಗಳೂ ಭಿನ್ನವಾಗಿವೆ. ಇಂಥ ಸವಾಲುಗಳನ್ನೂ ಮೀರಿ ಕೋಲಾರದಲ್ಲಿ ಟೊಮೆಟೊ ಸಾಸ್, ಕೆಚಪ್, ಟೊಮೆಟೊ ಉಪ್ಪಿನಕಾಯಿ ಸೇರಿದಂತೆ ಹಲವು ಉತ್ಪನ್ನಗಳ ತಯಾರಿಕಾ ಘಟಕಗಳು ಸ್ಥಾಪನೆಯಾಗಿವೆ. ಬೆಳಗಾವಿಯಲ್ಲಿಯೂ ಯಶಸ್ಸಿನ ಹಲವು ಕತೆಗಳು ಸಿಗುತ್ತವೆ. ಆದರೆ ಈ ಯೋಜನೆ ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಾಣದೇ ಇರಲು ಕಾರಣವನ್ನು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ 'ಪ್ರಜಾವಾಣಿ'ಗೆ ಬಿಚ್ಚಿಟ್ಟರು.

ಅವರ ಪ್ರಕಾರ 'ಮಾರುಕಟ್ಟೆ ಕಲ್ಪಿಸದೇ ಮೌಲ್ಯವರ್ಧನೆ ಮಾಡಿ ಎಂದರೆ ಹೇಗೆ? ಬಾಳೆಹಣ್ಣು ಬೆಳೆಯುವರೈತನಿಗೆಮಾರುಕಟ್ಟೆಕಲ್ಪಿಸಿಕೊಳ್ಳುವುದೇಸವಾಲಾಗಿದೆ.ಇಂತಹಪರಿಸ್ಥಿತಿಯಲ್ಲಿಬಾಳೆಹಣ್ಣನ್ನು ಮೌಲ್ಯವರ್ಧನೆ ಮಾಡಿ, ವಿದೇಶಕ್ಕೆ ಕಳುಹಿಸಿ ಎಂದು ಬಾಯಿಮಾತಿನಲ್ಲಿ ಹೇಳಿದರೆ ಸಾಧ್ಯವಾಗುವುದೇ? ಮಾರುಕಟ್ಟೆ ವ್ಯವಸ್ಥೆ ಅರಿವುಳ್ಳ ರೈತರು ಮಾತ್ರ ಯಶಸ್ವಿಯಾಗಲು ಸಾಧ್ಯವಿದೆ. ಅವರೂ ಬೆರಳೆಣಿಕೆಯಷ್ಟು ಮಂದಿ ಇದ್ದಾರೆ. ಅರಿಸಿನದಿಂದ ಫೇಸ್‌ಮಾಸ್ಕ್, ಪೌಡರ್ ಮಾಡಬಹುದು. ಬೇಯಿಸಿದ ಅರಿಸಿನ ಮಾರಾಟ ಮಾಡುವುದೇ ರೈತರಿಗೆ ಸವಾಲಾಗಿದೆ. ಅಲ್ಪಸ್ವಲ್ಪ ಜಮೀನುವುಳ್ಳ ರೈತನೊಬ್ಬ ಸಾಲ ಪಡೆದು, ಸಂಸ್ಕರಣಾ ಘಟಕ ತೆರೆದು ಮೌಲ್ಯವರ್ಧನೆ ಮಾಡಿ ಮಾರುಕಟ್ಟೆಯಲ್ಲಿ ಅಸ್ತಿತ್ವ ಕಂಡುಕೊಳ್ಳಲು ಸಾಧ್ಯವಿದೆಯೇ ಎಂದೂ ಅವರು ಪ್ರಶ್ನಿಸುತ್ತಾರೆ.

ರಾಮನಗರದಲ್ಲಿ ತೆಂಗು ಉತ್ಪನ್ನಗಳ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಲು ಈ ಯೋಜನೆ ಅಡಿ ಸಬ್ಸಿಡಿ ಸೌಲಭ್ಯ ಸಿಗುತ್ತದೆ. ಕೊಬ್ಬರಿ ಎಣ್ಣೆ, ಬಿಸ್ಕತ್, ಕ್ರೀಂ, ಪೌಡರ್, ಐಸ್‌ಕ್ರೀಂ ಸೇರಿದಂತೆ 30 ಬಗೆಯ ತೆಂಗು ಉತ್ಪನ್ನಗಳನ್ನು ತಯಾರಿಸುವ ಅವಕಾಶ ಇದೆ. ಪ್ರತಿಷ್ಠಿತ ಕಂಪನಿಯ ಬ್ರ್ಯಾಂಡ್‌ಗಳೇ ಮಾರುಕಟ್ಟೆಯಲ್ಲಿದ್ದು, ಕೈಗೆಟಕುವ ದರದಲ್ಲಿ ಅತ್ಯಾಕರ್ಷಕ ಪ್ಯಾಕೇಜಿನಲ್ಲಿ ಉತ್ಪನ್ನಗಳು ಲಭ್ಯ ಇರುವಾಗ ರೈತರು ತಮ್ಮ ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಿಕೊಳ್ಳುವುದು ಕಠಿಣವಾಗುತ್ತಿದೆ. ಮಧ್ಯಮ ಮತ್ತು ಚಿಕ್ಕ ಹಿಡುವಳಿದಾರರು ತಮ್ಮ ಕೃಷಿ ಭೂಮಿಯನ್ನು ಕೃಷಿಯೇತರ ಭೂಮಿಯಾಗಿ ಪರಿವರ್ತಿಸಿಕೊಳ್ಳುವಲ್ಲಿಯೂ ಅನಾಸಕ್ತಿ ತೋರುತ್ತಿದ್ದಾರೆ. ಈ ಎಲ್ಲ ಅಡೆತಡೆಗಳನ್ನು ಬದಿಗಿರಿಸಿ, ಉದ್ಯಮದ ಸಾಹಸಕ್ಕೆ ಇಳಿದವರಿಗೆ ಈ ಉದ್ದಿಮೆ ಲಾಭಕರ ಎಂದೆನಿಸುತ್ತಿಲ್ಲ.

ತೋಟಗಾರಿಕೆ ಹಾಗೂ ಹಣ್ಣುಗಳ ಉತ್ಪನ್ನಗಳು ಮಾರುಕಟ್ಟೆ ಕಂಡುಕೊಳ್ಳುವಲ್ಲಿ ವಿಫಲವಾಗಿರುವುದು, ಅಗತ್ಯದ ಮೂಲಸೌಲಭ್ಯಗಳಿಲ್ಲದೇ ಇರುವುದು, ಯೋಜನೆ ಹಿಂದುಳಿಯಲು ಕಾರಣವಾಗಿದೆ.

ಸಾಂಬಾರ ಪದಾರ್ಥ ಹಾಗೂ ಕಾಫಿಯಂಥ ಬೆಳೆಗಳೂ ನಿರೀಕ್ಷಿತ ಮಟ್ಟದಲ್ಲಿ ಸದ್ದು ಮಾಡಲಿಲ್ಲ. ಕಾಫಿ ಹಾಗೂ ಕಾಳುಮೆಣಸಿನ ಮೌಲ್ಯವರ್ಧನೆಗೆ ಸಂಬಂಧಿಸಿದ ರೈತರೇ ಯಂತ್ರೋಪಕರಣ ಅಳವಡಿಸಿಕೊಳ್ಳುವುದು ಕಷ್ಟ. ದುಬಾರಿ ಸಹ ಹೌದು. ಗೃಹ ಕೈಗಾರಿಕೆಗಳಂತೆ ಕಾಫಿ ಉದ್ದಿಮೆ ನಡೆಸಲು ಸಾಧ್ಯವಿಲ್ಲ. ಬ್ರಿಟಿಷರ ಕಾಲದಿಂದಲೂ ಕಾಫಿ ಮಾರುಕಟ್ಟೆ ವಿಸ್ತಾರವಾಗಿ ಬೆಳೆದಿದೆ. ಮೂವರೇ ಬೆಳೆಗಾರರು ಸೇರಿಕೊಂಡು ಕಾಫಿಯ ಮೌಲ್ಯವರ್ಧನೆ ಮಾಡುವುದು ಪ್ರಸ್ತುತ ಕಷ್ಟವಿದೆ. ಇನ್‌ಸ್ಟಂಟ್ ಕಾಫಿಯಲ್ಲಿ ಬ್ರೂ, ನೆಸ್‌ಕೆಫೆ ಸನ್‌ರೈಸ್‌ನಂತಹ ಬ್ರ್ಯಾಂಡ್‌ಗಳಿವೆ. ಈ ಬ್ರ್ಯಾಂಡ್‌ಗಳ ನಡುವೆ ಅಸ್ತಿತ್ವ ಕಂಡುಕೊಳ್ಳುವುದು ಸಣ್ಣ ರೈತರಿಗೆ ಸವಾಲು. ಹೊಸ ಮಾರುಕಟ್ಟೆ ಸೃಷ್ಟಿಯೂ ಸಾಧ್ಯವಾಗುವುದಿಲ್ಲ. 10ಕ್ಕೂ ಹೆಚ್ಚು ಮಂದಿ ಗುಂಪಾಗಿ ಸೇರಿಕೊಂಡು ಕಾಫಿ ಸಂಸ್ಕರಣಾ ಘಟಕ, ಪಲ್ಪಿಂಗ್ ಯಂತ್ರ ಅಳವಡಿಸಿಕೊಂಡರೆ ಯೋಜನೆಯಿಂದ ಪ್ರಯೋಜನ ಪಡೆದುಕೊಳ್ಳಬಹುದು ಎಂದು ಸಮಸ್ಯೆಯನ್ನೂ ಪರಿಹಾರವನ್ನೂ ವಿಶ್ಲೇಷಿಸುತ್ತಾರೆ ಕರ್ನಾಟಕ ಕಾಫಿ ಬೆಳೆಗಾರರ ಒಕ್ಕೂಟದ ಸಂಘಟನಾ ಕಾರ್ಯದರ್ಶಿ ವಿಶ್ವನಾಥ್.

ಇವು ವಾಸ್ತವದ ಸಮಸ್ಯೆಗಳನ್ನು ಬಿಡಿಸಿಡುತ್ತವೆ. ಮೂಲ ಸಮಸ್ಯೆ ಇರುವುದು ಯೋಜನೆಯ ಅನುಷ್ಠಾನದ ಪ್ರಮುಖ ಘಟ್ಟ ಸಾಲ ನೀಡುವಿಕೆ. ಸಾಲ ಕೊಡುವ ಪ್ರಕ್ರಿಯೆಯೂ ತ್ರಾಸದಾಯಕವಾಗಿದೆ.

ಆಡಳಿತಶಾಹಿಯಲ್ಲಿರುವ ಸಮನ್ವಯದ ಕೊರತೆ ಅಂದರೆ ಕೃಷಿ ಇಲಾಖೆಯವರು ಸಾಲ ಮಂಜೂರು ಮಾಡಲು ಶಿಫಾರಸು ಮಾಡುತ್ತಾರೆ. ಬ್ಯಾಂಕಿನವರು ತಡೆ ಹಿಡಿಯುತ್ತಾರೆ. ಜಿಲ್ಲಾಧಿಕಾರಿಗಳು ಕೆಲವೆಡೆ ಮಧ್ಯಪ್ರವೇಶಿಸಿ ಸಾಲ ನೀಡಲು ಬ್ಯಾಂಕುಗಳಿಗೆ ತಾಕೀತು ಮಾಡಿರುವ ಉದಾಹರಣೆಗಳೂ ಅಲ್ಲಲ್ಲಿ ಸಿಗುತ್ತವೆ. ಅಗತ್ಯದ ದಾಖಲೆಗಳನ್ನು ಸೂಕ್ತವಾದ ರೀತಿಯಲ್ಲಿ ಕಚೇರಿಗೆ ನೀಡಲು ರೈತರಲ್ಲಿ ಅರಿವಿನ ಕೊರತೆ, ಬ್ಯಾಂಕ್ ಅಧಿಕಾರಿಗಳಲ್ಲಿ ಬದ್ಧತೆಯ ಕೊರತೆ ಇವೆಲ್ಲವೂ ಸೇರಿ ಯೋಜನೆಯೊಂದು ದಾಖಲೆಗಳಲ್ಲಿ ಅಂಕಿ ಅಂಶಗಳಡಿ 'ಅಡಕ'ವಾಗಿ ಹೋಗಿದೆ.

ಪೂರಕ ಮಾಹಿತಿ: ಇಮಾಮ್ ಹುಸೇನ್ ಗೂಡುನವರ, ಸಂಧ್ಯಾ ಹೆಗಡೆ, ಗಣಪತಿ ಹೆಗಡೆ, ಆದಿತ್ಯ ಕೆ.ಎ. ಮತ್ತು ಪ್ರಜಾವಾಣಿಯ ಜಿಲ್ಲಾ ವರದಿಗಾರರ ತಂಡ

ಸಿರಿಧಾನ್ಯದಿಂದಲೇ ಸ್ವಾವಲಂಬನೆ...

ಬೆಳಗಾವಿ: 'ನಾನು ಓದಿದ್ದು ಎಸ್ಸೆಸ್ಸೆಲ್ಸಿ ಮಾತ್ರ. ಸ್ವಂತ ಕಾಲ ಮೇಲೆ ನಿಲ್ಲಬೇಕು ಎಂಬ ತವಕ ಇತ್ತು. ಆ ಸಂದರ್ಭದಲ್ಲಿ ಗಮನಕ್ಕೆ ಬಂದಿದ್ದು 'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆ. ನನ್ನಲ್ಲಿ ಇದ್ದ ಆಹಾರ ತಯಾರಿಕೆ ಕೌಶಲವನ್ನೇ ಬಳಸಿಕೊಳ್ಳಲು ನಿರ್ಧರಿಸಿದೆ. ಈಗ ನನ್ನಂಥ ನಾಲ್ವರು ಮಹಿಳೆಯರಿಗೆ ಕೆಲಸ ಕೊಟ್ಟಿದ್ದೇನೆ...'

ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನ ಇಟಗಿ ಎಂಬ ಪುಟ್ಟ ಗ್ರಾಮದ ಭಾರತಿ ಬಡಿಗೇರ ಅವರ ಮನದಾಳದ ಮಾತು ಇವು. ಸಿರಿಧಾನ್ಯಗಳನ್ನು ಬಳಸಿ ಬಗೆಬಗೆಯ ತಿಂಡಿ– ತಿನಿಸುಗಳನ್ನು ತಯಾರಿಸಿ ಅವರು ಸ್ವಾವಲಂಬನೆ ಸಾಧಿಸಿದ್ದಾರೆ. ಈ ಬಗ್ಗೆ 'ಪ್ರಜಾವಾಣಿ'ಯೊಂದಿಗೆ ಅನುಭವ ಹಂಚಿಕೊಂಡರು.



ಖಾನಾಪುರ ತಾಲ್ಲೂಕಿನ ಇಟಗಿ ಗ್ರಾಮದ ಸ್ವಯಂ ಉದ್ಯೋಗಿ ಭಾರತಿ ಬಡಿಗೇರ

ಸಿರಿಧಾನ್ಯಗಳಿಂದ ಶಾವಿಗೆ, ಸಂಡಿಗೆ, ರೊಟ್ಟಿ, ಹಪ್ಪಳ, ಕೇಕ್, ಬಿಸ್ಕತ್, ಪಾನೀಯ, ಗಿಣ್ಣ, ಸಿಹಿ ತಿಂಡಿಗಳು ಮುಂತಾದ ತಿನಿಸು ತಯಾರು ಮಾಡುತ್ತೇನೆ.

ನೆರವಾಗಿದ್ದು ಏನು?: ₹1.50 ಲಕ್ಷ ಬೆಲೆಬಾಳುವ ಒಂದು ಶಾವಿಗೆ ಯಂತ್ರ, ₹1.85 ಲಕ್ಷದ ಒಂದು ರೊಟ್ಟಿ ಮಾಡುವ ಯಂತ್ರವನ್ನು ಯೋಜನೆ ಅಡಿ ಖರೀದಿ ಮಾಡಿದೆ. ಆರಂಭದಲ್ಲಿ ₹ 25 ಸಾವಿರ ಬಂಡವಾಳ ಹಾಕಿದೆ. ಈಗ ಪ್ರತಿ ತಿಂಗಳೂ ಲಕ್ಷಕ್ಕೂ ಹೆಚ್ಚು ವ್ಯವಹಾರ ಮಾಡುತ್ತೇನೆ. ಕನಿಷ್ಠ ₹ 25 ಸಾವಿರ ಉಳಿತಾಯವಾಗುತ್ತದೆ.

ಹಟ ಹಿಡಿದು ಸಾಧಿಸಿದೆ: ಮೊದಲು ವಿವಿಧ ಸರ್ಕಾರಿ ಕಚೇರಿಗಳು, ಕಾರ್ಖಾನೆಗಳು, ಆಸ್ಪತ್ರೆಗಳಲ್ಲಿ ತಿನಿಸುಗಳ ಮಾರಾಟ ಶುರು ಮಾಡಿದೆ. ಮನೆ ಮನೆಗೂ ತಿರುಗಿದೆ. ಈಗ ನನಗೆ 'ಆರ್ಡರ್' ಬರುತ್ತವೆ. ಬೆಂಗಳೂರು, ಮೈಸೂರು, ಬೆಳಗಾವಿ, ವಿಜಯಪುರ ಮುಂತಾದ ಜಿಲ್ಲೆಗಳಿಗೂ ಸರಬರಾಜು ಮಾಡುತ್ತೇನೆ.

ಸಾವಯವ ರೈತರಿಂದಲೇ ರಾಗಿ, ನವಣೆ, ಸಾವೆ, ಬರಗು, ಹಾರಕ, ಊದಲು, ಕೊರಲೆ, ಸಜ್ಜೆ, ಸಾವಯವ ಬೆಲ್ಲ ಮುಂತಾದವುಗಳನ್ನು ಖರೀದಿಸುತ್ತೇನೆ.

ರಾಜ್ಯದಲ್ಲಿ ಎಲ್ಲಿಯೇ ಸಿರಿಧಾನ್ಯ ಮೇಳ, ಆಹಾರ ಮೇಳ, ನಾಡ ಉತ್ಸವಗಳು ನಡೆದರೂ ಮಳಿಗೆ ಹಾಕುತ್ತೇನೆ. ಉತ್ಪಾದನೆ ಹೆಚ್ಚಿಸಬೇಕಿದೆ. ಇನ್ನಷ್ಟು ಜನರನ್ನು ಕೆಲಸಕ್ಕೆ ತೆಗೆದುಕೊಂಡು, ಬೆಳಗಾವಿ ನಗರದಲ್ಲಿ ಸ್ವಂತ ಮಳಿಗೆ ಹಾಕುವ ತಯಾರಿ ನಡೆಸಿದ್ದೇನೆ. ಇದಕ್ಕೆ ತೋಟಗಾರಿಕೆ ಇಲಾಖೆಯಿಂದ ನೆರವು ನೀಡುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ನಿರೂಪಣೆ: **ಸಂತೋಷ ಈ. ಚಿನಗುಡಿ**

'ಸುಪ್ರೀಂ'ನಲ್ಲಿ ಮೇಲ್ಮನವಿ: ಡಿ.ಸಿ.ಗೌರಿಶಂಕರ

ತುಮಕೂರು: 'ನನ್ನನ್ನು ಶಾಸಕ ಸ್ಥಾನದಿಂದ ಅನರ್ಹಗೊಳಿಸಿರುವ ಹೈಕೋರ್ಟ್ ಆದೇಶಕ್ಕೆ ತಡೆಯಾಜ್ಞೆ ಕೋರಿ ಸುಪ್ರೀಂ ಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಲಾಗುವುದು. ನನಗೆ ನ್ಯಾಯ ಸಿಗುವ ವಿಶ್ವಾಸವಿದೆ' ಎಂದು ಶಾಸಕ ಡಿ.ಸಿ. ಗೌರಿಶಂಕರ್ ಇಲ್ಲಿ ಶನಿವಾರ ಹೇಳಿದರು.

'ಚುನಾವಣೆಗೆ ಸ್ಪರ್ಧಿಸಂತೆ ಹೈಕೋರ್ಟ್ ಹೇಳಿಲ್ಲ. ಆದೇಶದಲ್ಲಿ ಈ ಬಗ್ಗೆ ಪ್ರಸ್ತಾಪ ಇಲ್ಲ. ಹಾಗಾಗಿ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತೇನೆ' ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಖಾಸಗಿ ಶಾಲಾ ಶುಲ್ಕ ಹೆಚ್ಚಳ; ಪೋಷಕರಿಗೆ ಹೊರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಸಗಿ ಶಾಲೆಗಳನ್ನು ನಿಯಂತ್ರಿಸುವ ಶಿಕ್ಷಣ ಇಲಾಖೆಯ ಆದೇಶವನ್ನು ಈಚೆಗೆ ಹೈಕೋರ್ಟ್ ವಜಾಗೊಳಿಸಿದ ಬೆನ್ನಲ್ಲೇ ರಾಜ್ಯದ ಕೆಲ ಅನುದಾನರಹಿತ ಖಾಸಗಿ ಶಾಲೆಗಳು 2023–24ನೇ ಸಾಲಿಗೆ ಶೇ 30ರಿಂದ 40ರಷ್ಟು ಶುಲ್ಕ ಹೆಚ್ಚಿಸಿವೆ.

ಶಾಲೆಗಳ ಮಿತಿಮೀರಿದ ಶುಲ್ಕ ಹೆಚ್ಚಳದಿಂದ ಮಕ್ಕಳಿಗೆ ಶಿಕ್ಷಣ ಕೊಡಿಸುವುದು ಹೊರೆಯಾಗಿದೆ ಎಂದು ಹಲವು ಪೋಷಕರು ದೂರಿದ್ದಾರೆ.

ಶಿಕ್ಷಣ ಇಲಾಖೆ 27 ವರ್ಷಗಳ ಹಿಂದೆ ಆದೇಶ ಹೊರಡಿಸಿ, ಮಕ್ಕಳ ಶುಲ್ಕ ನಿಗದಿ ಸೇರಿದಂತೆ ಖಾಸಗಿ ಶಾಲಾ ಆಡಳಿತ ಮಂಡಳಿಗಳ ಕೆಲ ಚಟುವಟಿಕೆಗಳನ್ನು ನಿಯಂತ್ರಿಸಿತ್ತು. ಈ ಆದೇಶದಿಂದಾಗಿ ಖಾಸಗಿ ಶಾಲೆಗಳು ಪ್ರತಿ ವರ್ಷ ಶುಲ್ಕ ಹೆಚ್ಚಳ ಮಾಡುವುದಕ್ಕೆ ಕಡಿವಾಣ ಬಿದ್ದಿತ್ತು.

ಸರ್ಕಾರದ ಆದೇಶದ ವಿರುದ್ಧ ಅನುದಾನ ರಹಿತ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ಕುಸ್ಮ) ಎರಡೂವರೆ ದಶಕದ ಹಿಂದೆಯೇ ಹೈಕೋರ್ಟ್ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ್ದ ಕೋರ್ಟ್, 'ಸರ್ಕಾರದ ಅನುದಾನ ಪಡೆಯದ ಖಾಸಗಿ ಶಿಕ್ಷಣ ಸಂಸ್ಥೆಗಳ ಚಟುವಟಿಕೆಗಳಲ್ಲಿ ಸರ್ಕಾರ ಹಸ್ತಕ್ಷೇಪ ಮಾಡುವಂತಿಲ್ಲ' ಎಂದು ತೀರ್ಪು ನೀಡಿತ್ತು.

ಈ ತೀರ್ಪಿನ ವಿರುದ್ಧ ಶಿಕ್ಷಣ ಇಲಾಖೆ ಸುಪ್ರೀಂಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಸುಪ್ರೀಂಕೋರ್ಟ್ ಸೂಚನೆಯಂತೆ ಮತ್ತೆ ಹೈಕೋರ್ಟ್‌ನಲ್ಲೇ ಮೇಲ್ಮನವಿಯ ವಿಚಾರಣೆ ನಡೆದಿತ್ತು. ಈ ಮಧ್ಯೆ 2017ರಲ್ಲಿ ಮರು ಆದೇಶ ಹೊರಡಿಸಿದ್ದ ಇಲಾಖೆ ಖಾಸಗಿ ಶಿಕ್ಷಣ ಸಂಸ್ಥೆಗಳ ಮೇಲೆ ಹಿಡಿತ ಸಾಧಿಸಿತ್ತು. ಎರಡೂ ಆದೇಶಗಳನ್ನೂ ಹೈಕೋರ್ಟ್ ವಜಾಗೊಳಿಸಿದೆ.

'ಖಾಸಗಿ ಶಿಕ್ಷಣ ಸಂಸ್ಥೆಗಳು ಸರ್ಕಾರದ ಅನುದಾನ ಪಡೆಯುವುದಿಲ್ಲ. ಮೂಲ ಸೌಕರ್ಯ, ಶಿಕ್ಷಕರಿಗೆ ವೇತನ ಸೇರಿದಂತೆ ಎಲ್ಲ ವೆಚ್ಚವನ್ನೂ ಸಂಸ್ಥೆಗಳೇ ಭರಿಸಬೇಕಿದೆ. ಹಾಗಾಗಿ, ಶುಲ್ಕ ಹೆಚ್ಚಳ ಅನಿವಾರ್ಯ. ಎಷ್ಟು ಪ್ರಮಾಣದಲ್ಲಿ ಹೆಚ್ಚಳ ಮಾಡಬೇಕು ಎನ್ನುವ ಕುರಿತು ಆಯಾ ಸಂಸ್ಥೆಗಳೇ ನಿರ್ಧಾರ ತೆಗೆದುಕೊಳ್ಳುತ್ತವೆ' ಎನ್ನುತ್ತಾರೆ ಕುಸ್ಮಾ ಕಾರ್ಯದರ್ಶಿ ಎ.ಮರಿಯಪ್ಪ.

ಸುಪ್ರೀಂ ಕೋರ್ಟ್‌ಗೆ ಮತ್ತೆ ಮೇಲ್ಮನವಿ

'ರಾಜ್ಯದ ಎಲ್ಲ ಶಿಕ್ಷಣ ಸಂಸ್ಥೆಗಳೂ ಶಿಕ್ಷಣ ಇಲಾಖೆಯ ಅಧೀನದಲ್ಲೇ ಕಾರ್ಯನಿರ್ವಹಿಸುತ್ತಿವೆ. ಮಕ್ಕಳ ಶಿಕ್ಷಣ ಮೂಲಭೂತ ಹಕ್ಕಾಗಿರುವ ಕಾರಣ, ಪೋಷಕರಿಗೆ ಹೊರೆಯಾಗದಂತೆ ಖಾಸಗಿ ಶಿಕ್ಷಣ ಸಂಸ್ಥೆಗಳು ನೋಡಿಕೊಳ್ಳಬೇಕು. ಶುಲ್ಕ ಹೆಚ್ಚಳದ ಬಗ್ಗೆ ಕೆಲ ಪೋಷಕರು ಮಾಹಿತಿ ನೀಡಿದ್ದಾರೆ. ಹೈಕೋರ್ಟ್ ತೀರ್ಪು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮತ್ತೆ ಮೇಲ್ಮನವಿ ಸಲ್ಲಿಸಿದ್ದೇವೆ' ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತ ಆರ್.ವಿಶಾಲ್ ಹೇಳಿದರು.

ಗುಂಡಣ್ಣ



25 ವರ್ಷಗಳ ಹಿಂದೆ — ಗುರುವಾರ, 2-4-1998

● ಮೇ ಅಂತ್ಯದೊಳಗೆ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆಗೆ ನಿರ್ಧಾರ

ಬೆಂಗಳೂರು, ಏ. 1– ರಾಜ್ಯ ಸರ್ಕಾರಿ ನೌಕರರ ಸಾಮಾನ್ಯ ವರ್ಗಾವಣೆಯನ್ನು ಮೇ 31ರ ಒಳಗೆ ಮುಗಿಸುವಂತೆ ರಾಜ್ಯ ಸಚಿವ ಸಂಪುಟ ಇಂದು ಇಲ್ಲಿ ತೀರ್ಮಾನ ಕೈಗೊಂಡಿತು.

ಈ ವಿಷಯವನ್ನು ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದ ವಾರ್ತಾ ಮತ್ತು ಪ್ರಚಾರ ಖಾತೆ ಸಚಿವ ಎಂ.ಸಿ. ನಾಣಯ್ಯ, 'ಒಮ್ಮೆ ವರ್ಗಾವಣೆ ಮಾಡಿದ ನಂತರ ಅದನ್ನು ರದ್ದುಗೊಳಿಸಲು ಸಾಧ್ಯವಿಲ್ಲ. ವಿಶೇಷ ಸಂದರ್ಭದಲ್ಲಿ ಅಂತಹ ಪ್ರಕರಣಗಳ ಬಗ್ಗೆ ಮುಖ್ಯಮಂತ್ರಿ ಅವರಷ್ಟೇ ತೀರ್ಮಾನ ಕೈಗೊಳ್ಳುವರು' ಎಂದು ಹೇಳಿದರು.

50 ವರ್ಷಗಳ ಹಿಂದೆ — ಸೋಮವಾರ, 2-4-1973

● ಹುಲಿ ರಕ್ಷಣೆಗೆ ಬೃಹತ್ ಯೋಜನೆ

ಕಾರ್ಬೆಟ್ ಉದ್ಯಾನ, ನೈನಿತಾಲ್, ಏ.1– ವ್ಯಾಘ್ರ ಸಂತಾನ ನಶಿಸಿಹೋಗುವುದನ್ನು ತಡೆಗಟ್ಟುವ 6 ವರ್ಷ ಕಾಲಾವಧಿಯ 4 ಕೋಟಿ ರೂಪಾಯಿ ಯೋಜನೆಯನ್ನು ಕೇಂದ್ರ ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನಸಾರಿಗೆ ಖಾತೆ ಸಚಿವ ಡಾ. ಕರಣ್ ಸಿಂಗ್ ಅವರು ಇಂದು ಇಲ್ಲಿ ಉದ್ಘಾಟಿಸಿದರು.

'ಈಗಿನ ಪರಿಸ್ಥಿತಿ ಮುಂದುವರಿದರೆ ವನ್ಯಮೃಗ ಜೀವನದ ವಿಶ್ವ ಸಂಕೇತವಾಗಿರುವ ಹುಲಿ, ನಮ್ಮ ಮಕ್ಕಳ ಪಾಲಿಗೆ ನೋಡಲೂ ಸಿಗದ ಹಾಗೆ ಆಗಿಹೋಗಬಹುದು' ಎಂದು ಕರಣ್ ಸಿಂಗ್ ಕಳವಳ ವ್ಯಕ್ತಪಡಿಸಿದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಏಪ್ರಿಲ್ 2, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ಚೈತ್ರ ಶುದ್ಧ ದ್ವಾದಶಿ ಅಹೋರಾತ್ರ ಮಳೆನಕ್ಷತ್ರ: ರೇವತಿ 1 ನಿತ್ಯನಕ್ಷತ್ರ: ಮಘಾ ಅಹೋರಾತ್ರ ಯೋಗ: ಶೂಲ ಗಂ. 27-20, ಕರಣ: ಬವ ಗಂ. 17-25, ಮೀನ ಮಾಸದ 18 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06-00, ಸೂರ್ಯೋದಯ : 06-29
ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 10 ರಂಜಾನ್,
ದಿನ ವಿಶೇಷ : ವಂಜುಲಿ ಮಹಾ ದ್ವಾದಶಿ, ಪಾಮ್ ಸಂಡೇ (ಕ್ರಿಶ್ಚಿಯನ್),
ಅದೃಷ್ಟ ಸಂಖ್ಯೆ : 2, 5

ಮೇಷ: ನಿವೃತ್ತಿ ಜೀವನವನ್ನು ಸುಖವಾಗಿ ಕಳೆಯುವ ನಿಟ್ಟಿನಲ್ಲಿ ಶ್ರಮವಹಿಸಿ ಕೆಲಸ ಮಾಡುವ ಯೋಜನೆಯನ್ನು ಮಾಡುವಿರಿ. ಇಂದಿನ ನಿಮ್ಮ ದಿನಚರಿಯಲ್ಲಿ ಕೋಪ ಹಾಗು ಆಕ್ರಮಣಶೀಲತೆ ಎಲ್ಲರಿಗೂ ಗೋಚರವಾಗಬಹುದು.

ವೃಷಭ: ಬಾಲ್ಯದ ಮುಗ್ಧತೆಯಿಂದಾಗಿ ತಪ್ಪಿಸಿಕೊಂಡ ಹಲವಾರು ಅವಕಾಶಗಳನ್ನು ನೆನೆದು ಮರುಗುವಿರಿ. ನ್ಯಾಯಯುತವಾಗಿ ಇಲ್ಲಿಯವರೆಗೆ ನೀವು ಮಾಡಿದ ಕುಟುಂಬ ಕಾರ್ಯಗಳು ನಿಮಗೆ ಉತ್ತಮ ಫಲಗಳನ್ನೇ ನೀಡುತ್ತವೆ.

ಮಿಥುನ: ಇತರರಿಗೆ ಪ್ರಶ್ನಿಸಲಾಗದ ರೀತಿಯಲ್ಲಿ ಮಾತುಗಳನ್ನಾಡಿ ನಿಮ್ಮ ಗೌರವ, ಸ್ವಾಭಿಮಾನ ಕಾಪಾಡಿಕೊಳ್ಳುವಿರಿ. ನಿಮ್ಮ ಸಮುದಾಯದ ಮುಖ್ಯಸ್ಥರಿಗೆ ಪ್ರಶ್ನೆ ಮಾಡುವ ಹಕ್ಕು ನಿಮಗಿರುವುದರಿಂದ ಅದನ್ನು ಚಲಾಯಿಸುವುದು ತಪ್ಪಲ್ಲ.

ಕರ್ಕಾಟಕ: ಮೋಸದ ವ್ಯವಹಾರ ಹಾಗೂ ಕಾನೂನು ಬಾಹಿರ ಸಂಗತಿಗಳಲ್ಲಿ ಕೈಹಾಕುವುದನ್ನು ಬಿಟ್ಟುಬಿಡಿ. ಮಾನಸಿಕ ಕೇಂದ್ರೀಕರಣದಿಂದ ಯಾವುದೇ ನಿಮ್ಮ ಇಷ್ಟದ ಕ್ಷೇತ್ರದಲ್ಲಿ ಜಯವನ್ನು ಸಾಧಿಸುವ ಹಾದಿ ಸುಗಮವಾಗುತ್ತದೆ.

ಸಿಂಹ: ನೀವು ಯಾರಿಂದಲೋ ಕೇಳಿಸಿಕೊಂಡ ವಾರ್ತೆಗಳನ್ನು ಹಬ್ಬಿಸುವ ಮೊದಲು ಆ ಸುದ್ದಿಯು ಸತ್ಯವೋ ಅಲ್ಲವೋ ಎಂಬುದನ್ನು ತಿಳಿಯಿರಿ. ನಿಮ್ಮ ಕಟ್ಟಡ ನಿರ್ಮಾಣಕ್ಕೆ ಸೋದರ ಮಾವನಿಂದ ಸಹಾಯವಾಗಬಹುದು.

ಕನ್ಯಾ: ಗಿರವಿ ಇಟ್ಟ ಆಭರಣಗಳನ್ನು ಆದಷ್ಟು ಬೇಗ ಬಿಡಿಸಿಕೊಳ್ಳುವ ಯೋಜನೆ ಮಾಡುವುದು ಸೂಕ್ತಕರ. ನಂಬಿಕೆ ಹಾಗೂ ದೃಢ ನಿರ್ಧಾರದಿಂದ ಮಾಡಿದ ಕೆಲಸಗಳು ನಿಮ್ಮ ನಿರೀಕ್ಷೆಯನ್ನು ನಿಸ್ಸಂಶಯವಾಗಿ ತಲುಪುತ್ತವೆ.

ತುಲಾ: ಅಂಗಾಂಶ ಕೃಷಿ ಸಂಶೋಧನೆಯಲ್ಲಿ ತೊಡಗಿರುವವರಿಗೆ ಹೊಸ ಸವಾಲುಗಳು ಎದುರಾಗುತ್ತವೆ. ನಿಮ್ಮ ಬಗ್ಗೆ ನಿಮಗೆ ತಿಳಿಯದೆ ಉಂಟಾಗುತ್ತಿರುವ ಅಪಪ್ರಚಾರ ಗಮನಕ್ಕೆ ಬಂದು ಪೇಚಾಡುವಂತಾಗುತ್ತದೆ.

ವೃಶ್ಚಿಕ: ಅನುಭವೇ ಇಲ್ಲದೆ ಮಾಡಿದ ಅಡಿಗೆಯು ಸಂತೃಪ್ತಕರ ಗುಣಮಟ್ಟದ್ದಾಗುತ್ತದೆ. ಕೆಲವು ವಿಚಾರಗಳಲ್ಲಿನ ನಿಮ್ಮ ಭಾವಶೂನ್ಯತೆ ನಿಮ್ಮ ಕುಟುಂಬ ವರ್ಗದವರಿಗೆ ನುಂಗಲಾರದ ತುತ್ತಿನಂತೆ ಕಾಣುತ್ತದೆ.

ಧನು: ಶಿಕ್ಷಣ ಹಾಗೂ ಸೌಕರ್ಯ ಎಂಬ ಎರಡು ಆಯ್ಕೆಗಳು ಬಂದಾಗ ಬುದ್ಧಿವಂತಿಕೆಯಿಂದ ಆರಿಸಿಕೊಳ್ಳಿ. ದುಃಖದ ವಿಚಾರವನ್ನು ಆತ್ಮೀಯರೊಂದಿಗೆ ಹಂಚಿಕೊಳ್ಳುವುದರಿಂದ ಮನಸ್ಸು ಹಗುರವಾದದಂತೆ ಭಾಸವಾಗುವುದು.

ಮಕರ: ಮನೆಯ ಖರ್ಚು ವೆಚ್ಚಗಳ ಮೇಲಿನ ನಿಮ್ಮ ನಿರ್ಲಕ್ಷ್ಯ ಮುಂದೊಂದು ದಿನ ಹಣದ ಅಭಾವಕ್ಕೆ ಕಾರಣವಾಗಬಹುದು. ನೆರೆ ಹೊರೆಯರಿಗೆ ನೀವು ಕೊಡುವಂತಹ ಅತಿಯಾದ ಸಲುಗೆಯು ದುರುಪಯೋಗಗೊಳ್ಳಬಹುದು.

ಕುಂಭ: ಮಕ್ಕಳ ದುಡಿಮೆಯಿಂದ ಬರುತ್ತಿರುವ ಹಣದ ಮೂಲದ ಬಗ್ಗೆ ಗಮನಹರಿಸಿ. ಚಲನಚಿತ್ರ ಹಾಗೂ ಧಾರಾವಾಹಿಗಳಲ್ಲಿ ಬರುವ ಸನ್ನಿವೇಶಗಳನ್ನು ನಿಮ್ಮ ನಿಜ ಜೀವನದಲ್ಲಿ ಕಲ್ಪಿಸಿಕೊಳ್ಳಬೇಡಿ. ಅತಿಯಾದ ನಿದ್ರೆ ಒಳ್ಳೆಯದಲ್ಲ.


ಮೀನ: ಶೈಕ್ಷಣಿಕ ಸಂಸ್ಥೆಗಳಲ್ಲಿ ನಿಮ್ಮ ಬೌದ್ಧಿಕ ಅನಾವರಣಕ್ಕೆ ಹಾದಿ ಸಿಗಲಿದೆ. ಆಗಬೇಕಾದ ಅಪಾಯವು ಕೂದಲೆಳೆಯಲ್ಲಿ ತಪ್ಪಿಹೋಗುತ್ತದೆ. ಕುಟುಂಬದ ಮುಖ್ಯ ಸಂಗತಿಗಳನ್ನು ಮರೆತಿರುವಿರೇ ಎಂದು ಜ್ಞಾಪಿಸಿಕೊಳ್ಳಿ.

ಪದಬಂಧ 5276

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ತಾಪ ನಡುವಿದ್ದಾಗ ಈ ಸಲ್ಲದ ವ್ಯವಹಾರ! (4)
5.ಮರ್ಯಾದೆಯನ್ನು ಹೊಂದಿರುವ ಹುಟ್ಟು ಗುಣ (4)
6.ಕೊಂಕಿದ ಧಾರೆಯುಳ್ಳ ಕೊಯ್ಯುವ ಸಾಧನ (4)
8.ಬಟ್ಟೆಗಳನ್ನು ನೈರ್ಮಲ್ಯ ಮಾಡುವವನು (4)
12.ಕಾಡಿನ ಹೂವಿದು (4)
14.ಯಾವುದೇ ಆಯುಧವಿಲ್ಲದಿರುವಿಕೆ (4)
15.ಇದ್ದಕ್ಕಿದ್ದಂತೆಯೇ ಮಾಯವಾಗುವಿಕೆ (4)
16.ಹೊಸ ಯುಗ ಈ ತರ ಬಂದಿದೆ (4)

ಮೇಲಿಂದ ಕೆಳಕ್ಕೆ
1.ವೈರಿಯೇ ಹುಟ್ಟಿಲ್ಲದವನು (5)
2.ಕೊನೆಗಿರುವ ಮಗ ತಿರುಗಿದಾಗ ಸೇರುವಿಕೆ (4)
3.ಕೊನೆಗಿದ್ದು ಒತ್ತು ಕಳೆದುಕೊಂಡ ಕುಳ್ಳ ನೀಡುವ ತೊಂದರೆ (4)
4. ಮನಸ್ಸಿಗೆ ಬಂದಂತೆ ವರ್ತಿಸುವಿಕೆ (3)
7.ಲಗೋರಿ ಆಟ ಆಡುವಾಗ ಕಾಣಿಸಿದ ಸಮಾಧಿ (2)
9.ವಿಷ್ಣುವಿನ ದಶಾವತಾರದಲ್ಲಿ ಐದನೆಯದು (3)
10.ಅಲಕ್ಷ್ಯತನ ಇಲ್ಲಿ ಕಾಣುತ್ತಿದೆ (5)
11.ನಿರಾಯಾಸವಾಗಿ ದೊರೆತ ಮಾದಕ ಪಾನೀಯ (2)
12.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13.ಮನದೊಳಗಿರುವ ಕುಲ (4)
14.ಮಗನು ತಿಳಿದಿಕೊಂಡಿರುವ ವೇದ (3)



5275ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರೋಹಣ 3.ವ್ಯರ್ಥಾಲಾಪ 5.ಸಿತಾರ 7.ಪರಧನ 9.ಡಪ್ಪಿಂ 10.ವಜ್ರ 11.ಜನಿವಾರ 14.ಸಂತತಿ 16.ತರಗತಿ 17.ಅತಿಸಾರ

ಮೇಲಿಂದ ಕೆಳಕ್ಕೆ:
1.ಆಲಸಿ 2.ಹಗುರ 3.ವ್ಯವಹಾರ 4.ಪನ್ನೀರು 6.ತಾರಾಪುಂಜ 7.ಪಗಾರ 8.ನವಜಾತ 12.ವಾಚಸ್ಪತಿ 13.ಪ್ರಪಾತ 14.ಸಂಗಾತಿ 15.ತಿಮಿರ

ಸುಡೊಕು 5662

7	5			1			8	
		6			9			7
4			7				9	6
	7			2	1			8
	6	4	9		8		7	
8		1				9		4
	8			9			4	
1		2				7		3
	4		1		7		2	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5661 ಸುಡೊಕು

5	2	1	4	7	3	9	6	8
7	9	8	6	1	2	3	4	5
4	6	3	5	9	8	7	2	1
1	4	9	2	3	5	6	8	7
2	3	7	1	8	6	4	5	9
8	5	6	7	4	9	2	1	3
6	7	5	9	2	1	8	3	4
3	1	4	8	6	7	5	9	2
9	8	2	3	5	4	1	7	6

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ವಿವಿಧ ತಾಂಡಾಗಳಲ್ಲಿ ಚುನಾವಣೆ ಬಹಿಷ್ಕರಿಸುವ ಎಚ್ಚರಿಕೆ • ರಾಜಕಾರಣಿಗಳಿಗೆ ಪ್ರವೇಶ ನಿರ್ಬಂಧಿಸಿ ಫ್ಲೆಕ್ಸ್

ಒಳ ಮೀಸಲಾತಿ ವಿರೋಧ, ನಿಲ್ಲದ ಆಕ್ರೋಶ

ಪ್ರಜಾವಾಣಿ ವಾರ್ತೆ

ಶಿರಾ: ಪರಿಶಿಷ್ಟ ಜಾತಿಯ ಒಳ ಮೀಸಲಾತಿ ವಿರೋಧಿಸಿ, ರಾಜ್ಯ ಸರ್ಕಾರದ ವಿರುದ್ಧ ಬಂಜಾರ ಸಮುದಾಯದವರು ಶನಿವಾರ ತುಮಕೂರು ಜಿಲ್ಲೆ ಶಿರಾ ತಾಲ್ಲೂಕಿನ ಕಿಲಾರದಹಳ್ಳಿ ತಾಂಡಾದಲ್ಲಿ ಪ್ರತಿಭಟನೆ ನಡೆಸಿದರು.

ವಿಧಾನಸಭಾ ಚುನಾವಣೆ ಬಹಿಷ್ಕರಿಸಲು ತೀರ್ಮಾನಿಸಿರುವ ಸಮುದಾಯ, ಯಾವುದೇ ರಾಜಕೀಯ ಪಕ್ಷದವರು ಮತ್ತು ರಾಜಕಾರಣಿಗಳು ಗ್ರಾಮದೊಳಗೆ ಪ್ರವೇಶ ಮಾಡದಂತೆ ಗ್ರಾಮದಲ್ಲಿ ಫ್ಲೆಕ್ಸ್ ಹಾಕಿದ್ದಾರೆ. ಕಿಲಾರದಹಳ್ಳಿ ತಾಂಡಾವು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಪ್ರತಿನಿಧಿಸುವ ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಸೇರಿದೆ.

ಒಳ ಮೀಸಲಾತಿ ಸರ್ಕಾರವು ಕೇಂದ್ರಕ್ಕೆ ಶಿಫಾರಸು ಮಾಡಿರುವುದನ್ನು ವಿರೋಧಿಸಿ ಪ್ರತಿಭಟಿಸುತ್ತಿದ್ದಾರೆ.

'ಸರ್ಕಾರದ ನಿಲುವಿನಿಂದ ಲಂಬಾಣಿ ಜನಾಂಗಕ್ಕೆ ಅನ್ಯಾಯವಾಗಲಿದೆ. ಮೀಸಲಾತಿ ನಮ್ಮ ಹಕ್ಕು, ಭಿಕ್ಷೆಯಲ್ಲ. ಹೀಗಾಗಿ ಕೇಂದ್ರ ಸರ್ಕಾರಕ್ಕೆ ಮಾಡಿರುವ ಶಿಫಾರಸು ವಾಪಸ್ ಪಡೆಯಬೇಕು' ಎಂದರು. ಶಿರಾ ತಾಲ್ಲೂಕು ಲಂಬಾಣಿ ಶ್ರೇಯೋಭಿವೃದ್ಧಿ ಸಂಘದ ಅಧ್ಯಕ್ಷ ಕೆ.ಎನ್. ಶೇಷ ನಾಯಕ್, ಚಂದ್ರನಾಯಕ್ ಪಾಲ್ಗೊಂಡಿದ್ದರು.



ಕಿಲಾರದಹಳ್ಳಿ ತಾಂಡಾದಲ್ಲಿ ಒಳ ಮೀಸಲಾತಿ ಶಿಫಾರಸು ವಿರೋಧಿಸಿ ಶನಿವಾರ ಪ್ರತಿಭಟನೆ ನಡೆಯಿತು

2ಬಿ ಮೀಸಲಾತಿ ರದ್ದು; ಮುಸ್ಲಿಮರ ಪ್ರತಿಭಟನೆ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ಅಲ್ಪಸಂಖ್ಯಾತರ 2ಬಿ ಮೀಸಲಾತಿ ರದ್ದುಪಡಿಸಿರುವುದನ್ನು ವಿರೋಧಿಸಿ ಕರ್ನಾಟಕ ಮುಸ್ಲಿಂ ಸಂಘದ ಪದಾಧಿಕಾರಿಗಳು ಹಾಗೂ ಮುಸ್ಲಿಂ ಸಮುದಾಯದವರು ಶನಿವಾರ ಪಟ್ಟಣದಲ್ಲಿ ಮೌನ ಮೆರವಣಿಗೆ ಮಾಡಿದರು.

ಸಂಘದ ರಾಜ್ಯ ಘಟಕದ ಅಧ್ಯಕ್ಷ ಎಲ್.ಎಸ್. ಬಷೀರ್ ಅಹಮ್ಮದ್ ಮಾತನಾಡಿ, ಕರ್ನಾಟಕದಲ್ಲಿ ಮುಸ್ಲಿಂ ಸಮುದಾಯಕ್ಕೆ ನೀಡಿದ್ದ 2ಬಿ ಮೀಸಲಾತಿಯನ್ನು ಕಿತ್ತುಕೊಂಡಿರುವುದು ಮುಸ್ಲಿಂ ಸಮುದಾಯಕ್ಕೆ ತುಂಬಲಾರದ ನಷ್ಟವಾಗಿದೆ. ಮುಸ್ಲಿಮರಿಗೆ ನೀಡಿದ್ದ ಶೇ 4ರ ಮೀಸಲಾತಿಯನ್ನು ರದ್ದುಪಡಿಸಿರುವ ತಿದ್ದುಪಡಿಗೆ ರಾಜ್ಯಪಾಲರು ಅಂಕಿತ ಹಾಕಬಾರದು. ಮುಸ್ಲಿಂ ಸಮುದಾಯಕ್ಕೆ ಅನ್ಯಾಯವಾಗದ ರೀತಿಯಲ್ಲಿ ಕೇಂದ್ರ ಸರ್ಕಾರಕ್ಕೆ ವರದಿ ನೀಡಿ ಪುನಃ ಪ್ರತ್ಯೇಕ ಸಮಿತಿಯನ್ನು ರಚಿಸಿ 2ಬಿ ಮೀಸಲಾತಿ ಮುಂದುವರಿಸಬೇಕು ಎಂದು ಆಗ್ರಹಿಸಿದರು.

ಧಾರವಾಡ, ಹೂವಿನಹಡಗಲಿಯಲ್ಲೂ ರ್‍ಯಾಲಿ, ಪ್ರತಿಭಟನೆ

ಧಾರವಾಡ: ಸದಾಶಿವ ಆಯೋಗ ವರದಿ ಜಾರಿಯಿಂದ ಸಮುದಾಯಕ್ಕಿದ್ದ ಮೀಸಲಾತಿ ಸೌಲಭ್ಯ ಕಡಿತಗೊಂಡಿದೆ ಎಂದು ಆರೋಪಿಸಿ ಬಂಜಾರ ಸಮುದಾಯದವರು ನಗರದಲ್ಲಿ ಶನಿವಾರ ಪ್ರತಿಭಟನಾ ರ್‍ಯಾಲಿ ನಡೆಸಿದರು.

ಕಡಪಾ ಮೈದಾನದಿಂದ ಜಿಲ್ಲಾಧಿಕಾರಿ ಕಚೇರಿವರೆಗೆ ಶ್ರೀ ಸೇವಾಲಾಲ ಲಂಬಾಣಿ ಹಿತವರ್ಧಕ ಸಂಘದ ಪದಾಧಿಕಾರಿಗಳು, ಯುವಕರು ಹಾಗೂ ಮುಖಂಡರು ಪ್ರತಿಭಟನಾ ರ್‍ಯಾಲಿಯಲ್ಲಿ ಪಾಲ್ಗೊಂಡರು. ಜಾಥಾದುದ್ದಕ್ಕೂ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಮೊಳಗಿಸಿದರು.

ಹೂವಿನಹಡಗಲಿಯಲ್ಲಿ ಪ್ರತಿಭಟನೆ: ಒಳಮೀಸಲಾತಿ ವಿರುದ್ಧ ಹೂವಿನಹಡಗಲಿ ತಾಲ್ಲೂಕಿನ ಬಂಜಾರ ಸಮುದಾಯದವರು ತಾಂಡಾಗಳಲ್ಲಿ ಚುನಾವಣೆ ಬಹಿಷ್ಕಾರದ ಫ್ಲೆಕ್ಸ್ ಅಳವಡಿಸಿದ್ದಾರೆ.

ತಾಲ್ಲೂಕಿನ ತುಂಬಿನಕೇರಿ ದೊಡ್ಡ ತಾಂಡಾ, ಸಣ್ಣ ತಾಂಡಾದಲ್ಲಿ ಶುಕ್ರವಾರ ಹಟ್ಟಿನಾಯ್ಕ, ಕಾರಬಾರಿ ನೇತೃತ್ವದಲ್ಲಿ ಸಭೆ ಸೇರಿ ಚುನಾವಣೆ ಬಹಿಷ್ಕರಿಸುವ ಫಲಕ ಅಳವಡಿಸಿದ್ದಾರೆ. ಬಾನ್ಯನ ತಾಂಡಾ, ಸೋವೇನಹಳ್ಳಿ ತಾಂಡಾ, ದುಂಗಾವತಿ ತಾಂಡಾ, ಭಿತ್ಯಾನತಾಂಡಾ, ಗೋವಿಂದಪುರಗಳಲ್ಲಿ ಇದೇ ರೀತಿಯ ಆಕ್ರೋಶ ವ್ಯಕ್ತವಾಗಿದೆ.

ಮೀಸಲಾತಿ ಸಂರಕ್ಷಣಾ ಒಕ್ಕೂಟದ ಸಂಚಾಲಕ ಡಾ.ಎಲ್.ಪಿ.ನಾಯ್ಕ ಕಠಾರಿ ಮಾತನಾಡಿ, 'ಅವೈಜ್ಞಾನಿಕ ಒಳ ಮೀಸಲಾತಿ ವರದಿ ಜಾರಿಯಿಂದ ಲಂಬಾಣಿ ಸಮುದಾಯಕ್ಕೆ ತೀವ್ರ ಅನ್ಯಾಯವಾಗಿದ್ದರೂ ರಾಜಕೀಯ ಪಕ್ಷಗಳ ಯಾವ ನಾಯಕರು ನಮ್ಮ ಪರವಾಗಿ ಧ್ವನಿ ಎತ್ತಿಲ್ಲ. ಇದನ್ನು ಖಂಡಿಸಿ ಚುನಾವಣಾ ಬಹಿಷ್ಕಾರದ ತೀರ್ಮಾನ ಕೈಗೊಂಡಿದ್ದೇವೆ' ಎಂದು ಅವರು ಹೇಳಿದರು.

'ಮುಸ್ಲಿಮರಿಗೆ ಅನ್ಯಾಯವಾಗಿಲ್ಲ'

ಬೆಂಗಳೂರು: 'ಮುಸ್ಲಿಮರ ಮೀಸಲಾತಿ ರದ್ದುಪಡಿಸಲಾಗಿದೆ ಎಂಬ ಕಾಂಗ್ರೆಸ್, ಜೆಡಿಎಸ್ ಆರೋಪದಲ್ಲಿ ಹುರುಳಿಲ್ಲ. ಮುಸ್ಲಿಮರನ್ನು ಶೇಕಡ 4ರಷ್ಟು ಮೀಸಲಾತಿ ಇದ್ದ ಪ್ರವರ್ಗದಿಂದ ಶೇ 10ರಷ್ಟು ಮೀಸಲಾತಿ ಇರುವ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಸೇರಿಸಲಾಗಿದೆ. ಇದರಿಂದ ಮುಸ್ಲಿಮರಿಗೆ ಅನ್ಯಾಯವಾಗಿಲ್ಲ' ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ಹೇಳಿದರು.

ಬಿಜೆಪಿ ರಾಜ್ಯ ಘಟಕದ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಪರಿಷ್ಕರಣೆ ನಡೆದಿದೆ. ಸಾಮಾಜಿಕ ನ್ಯಾಯಕ್ಕೆ ಪೂರಕವಾಗಿ ಈ ಪ್ರಕ್ರಿಯೆ ನಡೆದಿದೆ' ಎಂದರು.

ನಿವೃತ್ತ ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಪರಿಶೀಲಿಸಿ, ಒಳ ಮೀಸಲಾತಿ ಕಲ್ಪಿಸುವ ಕೆಲಸವನ್ನು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಮಾಡಿರಲಿಲ್ಲ. ಆದರೆ, ಬಿಜೆಪಿ ಸರ್ಕಾರ ಆ ಕೆಲಸ ಮಾಡಿದೆ. ಸಾಮಾಜಿಕ ನ್ಯಾಯ ನೀಡಿದ ಬಿಜೆಪಿ ಸರ್ಕಾರವನ್ನು ಅವರು ಅಭಿನಂದಿಸದೇ ಇರಬಹುದು. ಆದರೆ, ವಾಸ್ತವ ಸಂಗತಿಯನ್ನು ಒಪ್ಪಿಕೊಳ್ಳಬೇಕಲ್ಲವೆ ಎಂದು ಅವರು ಪ್ರಶ್ನಿಸಿದರು.

ಶರಣು ಶರಣು ಜ್ಞಾನ ಗಂಗೆ, ಸಿದ್ಧಗಂಗೆ: ಉಘೇ ಉಘೇ ಶಿವಕುಮಾರ ಸ್ವಾಮೀಜಿ....

ಶಿವಕುಮಾರ ಸ್ವಾಮೀಜಿಗೆ 'ಗಾನ ನಮನ'

ಪ್ರಜಾವಾಣಿ ವಾರ್ತೆ

ತುಮಕೂರು: 'ಶರಣು ಶರಣು ಜ್ಞಾನ ಗಂಗೆ, ಸಿದ್ಧಗಂಗೆ... ಉಘೇ ಉಘೇ ಶಿವಕುಮಾರ ಸ್ವಾಮೀಜಿ' ಎಂಬ ಹಂಸಲೇಖ ಅವರ ಹಾಡಿಗೆ ಸಿದ್ಧಗಂಗಾ ಮಠದ ನೂರಾರು ಮಕ್ಕಳು ಧ್ವನಿಗೂಡಿಸಿದರು.

ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮೀಜಿ 116ನೇ ಜಯಂತಿ ಮತ್ತು ಗುರುವಂದನಾ ಮಹೋತ್ಸವದ ಪ್ರಯುಕ್ತ 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಶಿವಕುಮಾರ ಸ್ವಾಮೀಜಿ ಗಾನೋತ್ಸವ' ಸಂಗೀತ ಕಾರ್ಯಕ್ರಮಕ್ಕೆ ಸಾವಿರಾರು ಜನರು ಸಾಕ್ಷಿಯಾದರು.

ಖ್ಯಾತ ಗಾಯಕ ಹಂಸಲೇಖ ಅವರ ಹಾಡುಗಳಿಗೆ ನೆರೆದಿದ್ದ ಜನರೂ ಹೆಜ್ಜೆ ಹಾಕಿದರು. ಹಿನ್ನೆಲೆ ಗಾಯಕರಾದ ಕೆ.ಎಸ್. ಚಿತ್ರಾ, ಎಸ್.ಪಿ. ಚರಣ್, ಹೇಮಂತ್ ಕುಮಾರ್, ಪೃಥ್ವಿ, ಅನುರಾಧ ಭಟ್ ಅವರು ತಮ್ಮ ಇಂಪಾದ ಧ್ವನಿ ಮೂಲಕ ಕೇಳುಗರ ಮನ ತಣಿಸಿದರು.

ಮಠದ ಮಕ್ಕಳು, ಪ್ರೇಕ್ಷಕರು ಉತ್ಸಾಹದಿಂದ ಭಾಗವಹಿಸಿದ್ದರು. ಕುಳಿತುಕೊಳ್ಳಲು ಆಸನಗಳು ಸಿಗದೆ ಇದ್ದರೂ ನಿಂತುಕೊಂಡೇ ಕಾರ್ಯಕ್ರಮ ವೀಕ್ಷಿಸಿದರು.

'ಈ ಪಾದ ಪುಣ್ಯ ಪಾದ, ದಯೆ ತೋರುವ ದಿವ್ಯ ಪಾದ' ಎಂಬ ಗೀತೆಗೆ ಮಕ್ಕಳ ನೃತ್ಯ ಪ್ರದರ್ಶನ ಗಮನ ಸೆಳೆಯಿತು. ಲತಾ ಹಂಸಲೇಖ ಅವರ 'ಶ್ರೀ ಕ್ಷೇತ್ರ ಜಯಂತ್ಯುತ್ಸವ', 'ದೇವರೇ, ಓ ದೇವರೇ, ನಡೆದಾಡುವ ದೇವರೇ...' ಹಾಡಿಗೆ ಮಕ್ಕಳ ಚಪ್ಪಾಳೆ ಮೊಳಗಿದವು.

ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ಚಿತ್ರನಟ ಡಾಲಿ ಧನಂಜಯ್ ಇತರರು ಉಪಸ್ಥಿತರಿದ್ದರು.



ತುಮಕೂರಿನ ಸಿದ್ಧಗಂಗಾ ಮಠದಲ್ಲಿ ಶನಿವಾರ ರಾತ್ರಿ ನಡೆದ ಶಿವಕುಮಾರ ಸ್ವಾಮೀಜಿ ಗಾನೋತ್ಸವ ಸಂಗೀತ ಕಾರ್ಯಕ್ರಮದಲ್ಲಿ ಗಾಯಕರಾದ ಕೆ.ಎಸ್ ಚಿತ್ರಾ, ಹಂಸಲೇಖ ಹಾಡು ಹಾಡಿದರು. ನಟ ಆನಂದ್ ಇದ್ದರು

116 ಮಕ್ಕಳಿಗೆ ನಾಮಕರಣ

ಸ್ವಾಮೀಜಿ 116ನೇ ಜಯಂತ್ಯುತ್ಸವದ ಅಂಗವಾಗಿ 116 ಮಕ್ಕಳಿಗೆ 'ಶಿ' ಅಕ್ಷರದಿಂದ ಪ್ರಾರಂಭವಾಗುವ ಹೆಸರು ಇಡಲಾಯಿತು. ಪ್ರತಿ ವರ್ಷವೂ ಮಕ್ಕಳಿಗೆ 'ಶಿ' ಅಕ್ಷರದ ನಾಮಕರಣ ಮಾಡುವ ಸಂಪ್ರದಾಯ ಪಾಲಿಸಲಾಗುತ್ತಿದೆ. ಕಳೆದ ವರ್ಷ 115 ಮಕ್ಕಳಿಗೆ ನಾಮಕರಣ ಮಾಡಲಾಗಿತ್ತು.

ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾಗಿದ್ದು ಕಾರ್ಯಕ್ರಮವನ್ನು ಸರಳವಾಗಿ ಆಚರಿಸಲಾಯಿತು. ಪ್ರತಿ ವರ್ಷವೂ ರಾಜಕಾರಣಿಗಳು, ಅಧಿಕಾರಿಗಳು, ಗಣ್ಯರು ಭಾಗವಹಿಸುತ್ತಿದ್ದರು. ಈ ಬಾರಿ ರಾಜಕಾರಣಿಗಳು ಇತ್ತ ಸುಳಿಯಲಿಲ್ಲ.

ಸ್ವಾಮೀಜಿ ಸ್ಮರಣೆ: ತ್ರಿವಿಧ ದಾಸೋಹಿ ಶಿವಕುಮಾರ ಸ್ವಾಮೀಜಿ 116ನೇ ಜಯಂತಿ ಹಾಗೂ ಗುರುವಂದನಾ ಕಾರ್ಯಕ್ರಮಕ್ಕೆ ಸಹಸ್ರಾರು ಭಕ್ತರು ಸಾಕ್ಷಿಯಾದರು. ನಾಡಿನ ವಿವಿಧೆಡೆಗಳಿಂದ ಬಂದಿದ್ದ ಜನರು ಸ್ವಾಮೀಜಿಯನ್ನು ಸ್ಮರಿಸಿದರು.

ಶಿವಕುಮಾರ ಸ್ವಾಮೀಜಿ ಗದ್ದುಗೆಗೆ ಮಠಾಧ್ಯಕ್ಷ ಸಿದ್ಧಲಿಂಗ ಸ್ವಾಮೀಜಿ ಮುಂಜಾನೆ ಪೂಜೆ ಸಲ್ಲಿಸುವ ಮೂಲಕ ಜಯಂತ್ಯುತ್ಸವ ಕಾರ್ಯಕ್ರಮಗಳಿಗೆ ಚಾಲನೆ ನೀಡಿದರು. ಧಾರ್ಮಿಕ ವಿಧಿ ವಿಧಾನಗಳ ಜತೆ ಅಭಿಷೇಕ, ಅಷ್ಟೋತ್ತರ ನೆರವೇರಿದವು. ಭಜನೆ, ಮಂತ್ರ ಘೋಷಗಳು ಮೊಳಗಿದವು. ವಿವಿಧ ಸ್ವಾಮೀಜಿಗಳು ಪೂಜೆ ಸಲ್ಲಿಸಿದ ನಂತರ ಭಕ್ತರಿಗೆ ಅವಕಾಶ ಮಾಡಿಕೊಡಲಾಯಿತು.

ಸ್ವಾಮೀಜಿ ಕಂಚಿನ ಪುತ್ಥಳಿ ಹೊತ್ತ ರುದ್ರಾಕ್ಷಿ ಮಂಟಪದ ಮೆರವಣಿಗೆ ಮಠದ ಆವರಣದಲ್ಲಿ ನಡೆಯಿತು. ಮಠಕ್ಕೆ ಬಂದಿದ್ದ ಭಕ್ತರಿಗೆ ದಾಸೋಹ ವ್ಯವಸ್ಥೆ ಮಾಡಲಾಗಿತ್ತು.

ಒಳ ಮೀಸಲಾತಿ ಗೊಂದಲ: ತಿದ್ದುಪಡಿ ಪ್ರಸ್ತಾವನೆ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿ ಜಾರಿ ಕುರಿತು ಕೇಂದ್ರಕ್ಕೆ ರಾಜ್ಯ ಸರ್ಕಾರ ಸಲ್ಲಿಸಿದ್ದ ಪಟ್ಟಿಯಲ್ಲಿ ಹಲವು ಗೊಂದಲಗಳಿದ್ದು, ತಿದ್ದುಪಡಿ ಶಿಫಾರಸನ್ನು ಮತ್ತೊಮ್ಮೆ ರಾಜ್ಯ ಸರ್ಕಾರ ಕಳುಹಿಸಿದೆ.

ಪರಿಶಿಷ್ಟ ಜಾತಿಯಲ್ಲಿನ 101 ಜಾತಿಗಳನ್ನು ನಾಲ್ಕು ವಿಭಾಗ ಮಾಡಲು ಸಚಿವ ಸಂಪುಟ ನಿರ್ಧರಿಸಿತ್ತು. ಅದನ್ನು ಕೇಂದ್ರಕ್ಕೆ ಶಿಫಾರಸು ಮಾಡುವಾಗ ಬಲಗೈ ಸಮುದಾಯದಲ್ಲಿನ(ಅಸ್ಪೃಶ್ಯ) 'ಹೊಲೆಯ, ಹೊಲಯ, ಹೋಲೇರ್' ಉಪ ಜಾತಿಗಳನ್ನು ಎರಡನೇ ಗುಂಪಿಗೆ(ಶೇ5.5 ಮೀಸಲಾತಿ) ಸೇರಿಸುವ ಬದಲು ನಾಲ್ಕನೇ ಗುಂಪಿಗೆ(ಶೇ 1ರಷ್ಟು ಮೀಸಲಾತಿ) ಸೇರಿಸಲಾಗಿತ್ತು.

'ಇದು ಅವೈಜ್ಞಾನಿಕವಾಗಿದ್ದು, ಕೂಡಲೇ ಶಿಫಾರಸು ಹಿಂಪಡೆಯಬೇಕು' ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಅವರು ಸಮಾಜ ಕಲ್ಯಾಣ ಇಲಾಖೆ ಕಾರ್ಯದರ್ಶಿಗೆ ಮನವಿ ಸಲ್ಲಿಸಿದ್ದರು. 'ಯಾವುದೇ ಅಧ್ಯಯನ ಇಲ್ಲದೆ ಅವೈಜ್ಞಾನಿಕವಾಗಿ ಒಳ ಮೀಸಲಾತಿ ವರ್ಗೀಕರಿಸಲಾಗಿದೆ. ಇದು ಚುನಾವಣಾ ಕೇಂದ್ರಿತ ನಿರ್ಧಾರ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮೀಸಲಾತಿ ವರ್ಗೀಕರಣದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಒಳಮೀಸಲಾತಿ ಹೋರಾಟಗಾರ ಎಸ್.ಮಾರಪ್ಪ ಅವರು, 'ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಎಂಬ ವಿಂಗಡಣೆಯೂ ಅವೈಜ್ಞಾನಿಕವಾಗಿದೆ' ಎಂದು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಹಳೇ ಮೈಸೂರು ಭಾಗದಲ್ಲಿ ಬಲಗೈಗೆ (ಹೊಲೆಯ) ಸಂಬಂಧಿಸಿದ ಉಪಜಾತಿಯವರು ಜಾತಿ ಪ್ರಮಾಣಪತ್ರದಲ್ಲಿ 'ಆದಿ ಕರ್ನಾಟಕ' ಎಂದು ಬರೆಸುತ್ತಿದ್ದರೆ, ಮಧ್ಯ ಕರ್ನಾಟಕದಲ್ಲಿ ಮಾದಿಗ(ಎಡಗೈ) ಸಂಬಂಧಿತ ಉಪಜಾತಿಗಳು 'ಆದಿ ಕರ್ನಾಟಕ' ಎಂದು ಬರೆಸುತ್ತಿವೆ. ಮೀಸಲಾತಿ ವರ್ಗೀಕರಣ ಮಾಡುವಾಗ ಆದಿ ಕರ್ನಾಟಕ ಎಂದರೆ ಬಲಗೈ, ಆದಿ ದ್ರಾವಿಡ ಎಂದರೆ ಎಡಗೈ ಎಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಇದು ಅತ್ಯಂತ ಅವೈಜ್ಞಾನಿಕ ಕ್ರಮ' ಎಂದರು.

'ಆಕ್ಷೇಪಗಳು ವ್ಯಕ್ತವಾದ ಬಳಿಕ ತಿದ್ದುಪಡಿಯನ್ನು ರಾಜ್ಯ ಸರ್ಕಾರವು ಕೇಂದ್ರಕ್ಕೆ ಕಳಹಿಸಿದೆ. ಅದರಲ್ಲಿ ಹೊಲೆಯ, ಹೊಲಯ ಮತ್ತು ಹೋಲೇರ್ ಉಪಜಾತಿಗಳನ್ನು ಎರಡನೇ ಗುಂಪಿಗೆ ಸೇರಿಸಿದೆ. ಮುದ್ರಣ ದೋಷದಿಂದ ಆಗಿದ್ದ ತಪ್ಪನ್ನು ಸರಿಪಡಿಸಲಾಗಿದೆ' ಎಂದು ಸಮಾಜ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಮೇಜರ್ ಮಣಿವಣ್ಣನ್ 'ಪ್ರಜಾವಾಣಿ'ಗೆ ತಿಳಿಸಿದರು. 'ಆದಿ ಕರ್ನಾಟಕ ಮತ್ತು ಆದಿ ದ್ರಾವಿಡ ಎಂಬುದರ ಮುಂದೆ ಸ್ಪಷ್ಟವಾಗಿ ಜಾತಿಗಳನ್ನು ನಮೂದಿಸಬೇಕಿತ್ತು. ತಿದ್ದುಪಡಿ ಪ್ರಸ್ತಾವನೆಯಲ್ಲೂ ಅದನ್ನು ಮಾಡದೆ ಗೊಂದಲಗಳನ್ನು ಉಳಿಸಲಾಗಿದೆ. ನಾಲ್ಕನೇ ಗುಂಪಿನಲ್ಲಿ ಹಲವು ಅಸ್ಪೃಶ್ಯ ಜಾತಿಗಳನ್ನು ಉಳಿಸಲಾಗಿದೆ' ಎಂದು ಎಸ್.ಮಾರಪ್ಪ ಹೇಳಿದರು.

ಹರ್ಷೋದ್ಗಾರದ ನಡುವೆ ವೈರಮುಡಿ ಉತ್ಸವ

ಪ್ರಜಾವಾಣಿ ವಾರ್ತೆ

ಮೇಲುಕೋಟೆ (ಮಂಡ್ಯ ಜಿಲ್ಲೆ): ಸಾವಿರಾರು ಭಕ್ತರ ಜಯಘೋಷಗಳ ನಡುವೆ ಇಲ್ಲಿ ಶನಿವಾರ ರಾತ್ರಿ ಚೆಲುವನಾರಾಯಣಸ್ವಾಮಿ ಸ್ವಾಮಿಯ ಐತಿಹಾಸಿಕ ವೈರಮುಡಿ ಉತ್ಸವ ಸಡಗರ, ಸಂಭ್ರಮದಿಂದ ನೆರವೇರಿತು.

ವಜ್ರಖಚಿತ ವೈರಮುಡಿ ಧರಿಸಿದ್ದ ಚೆಲುವನಾರಾಯಣಸ್ವಾಮಿಯನ್ನು ಕಣ್ತುಂಬಿಕೊಂಡ ಭಕ್ತರು 'ಗೋವಿಂದ, ಗೋವಿಂದ' ಮಂತ್ರ ಜಪಿಸಿದರು.

ಗಂಡಭೇರುಂಡ ಸ್ವರೂಪಿ ಚಂದ್ರಪ್ರಭೆ ಪ್ರಭಾವಳಿ ನಡುವೆ ಅಲಂಕಾರ ಸ್ವರೂಪಿಯಾಗಿದ್ದ ಚೆಲುವನಾರಾಯಣಸ್ವಾಮಿ ಉತ್ಸವ ದೇವಾಲಯದ ಹೊರಕ್ಕೆ ಬರುತ್ತಿದ್ದಂತೆ ಭಕ್ತರು ಜಯಘೋಷ ಮೊಳಗಿಸಿದರು. ರಾಮಾನುಜಾಚಾರ್ಯರ ಸನ್ನಿಧಿಯಲ್ಲಿ ಪ್ರಥಮ ಪೂಜೆ ಸಲ್ಲಿಸಿದ ನಂತರ ರಾತ್ರಿ 8.30ಕ್ಕೆ ಉತ್ಸವಕ್ಕೆ ಚಾಲನೆ ನೀಡಲಾಯಿತು.

ಉತ್ಸವ ಸಾಗಿದ ರಾಜಬೀದಿ ತಳಿರು, ತೋರಣ, ದೀಪಾಲಂಕಾರದಿಂದ ಕಂಗೊಳಿಸುತ್ತಿತ್ತು. ರಾಜ್ಯ ಮಾತ್ರವಲ್ಲದೇ ತಮಿಳುನಾಡು, ಆಂಧ್ರಪ್ರದೇಶ, ಕೇರಳದಿಂದಲೂ ಬಂದಿದ್ದ ಭಕ್ತರು ಬೀದಿಯ ಎರಡೂ ಬದಿಯಲ್ಲಿ ಸಾಲುಗಟ್ಟಿ ನಿಂತಿದ್ದರು. ವಸತಿ ಗೃಹಗಳು, ಛತ್ರಗಳು ಭಕ್ತರಿಂದ ಕಿಕ್ಕಿರಿದಿದ್ದವು.

ಜಿಲ್ಲಾ ಖಜಾನೆಯಲ್ಲಿದ್ದ ವೈರಮುಡಿ ಹಾಗೂ ರಾಜಮುಡಿ ತಿರುವಾಭರಣ ಪೆಟ್ಟಿಗೆಯನ್ನು ಬೆಳಿಗ್ಗೆ ಜಿಲ್ಲಾಧಿಕಾರಿ ಡಾ.ಎಚ್.ಎನ್.ಗೋಪಾಲಕೃಷ್ಣ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಪೂಜೆ ಸಲ್ಲಿಸಿ ಹೊರ ತೆಗೆದರು. ನಂತರ ಮಂಡ್ಯದ ಲಕ್ಷ್ಮಿಜನಾರ್ಧನ ದೇವಾಲಯದಲ್ಲಿ ಆಭರಣ ಪೆಟ್ಟಿಗೆಗೆ ಪೂಜೆ ಸಲ್ಲಿಸಲಾಯಿತು. ವಿಶೇಷ ವಾಹನದಲ್ಲಿ ಪೊಲೀಸ್ ಭದ್ರತೆಯೊಂದಿಗೆ ಮೇಲುಕೋಟೆಗೆ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು.

ಜಿಲ್ಲಾಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ನೇತೃತ್ವದಲ್ಲಿ ಆಭರಣ ಪೆಟ್ಟಿಗೆ ತೆರೆಯಲಾಯಿತು. ದೇವಾಲಯದ ಸ್ಥಾನಿಕರು ಆಭರಣ ಜೋಡಣೆ (ಪರ್ಕಾವಣೆ) ಪೂರ್ಣಗೊಳಿಸಿ ಕಿರೀಟ ಸಿದ್ಧಗೊಳಿಸಿದರು.

ನಂತರ ಮಹಾಮಂಗಳಾರತಿಯೊಂದಿಗೆ ಚೆಲುವನಾರಾಯಣ ಉತ್ಸವ ಮೂರ್ತಿಯ ಮುಡಿಗೇರಿಸಲಾಯಿತು. ಉತ್ಸವ ಭಾನುವಾರ ಬೆಳಗಿನ ಜಾವ 3 ಗಂಟೆಯವರೆಗೂ ನಡೆಯಿತು.



ಅಪಾರ ಭಕ್ತರ ಸಮ್ಮುಖದಲ್ಲಿ ಶನಿವಾರ ಮೇಲುಕೋಟೆ ಚೆಲುವನಾರಾಯಣಸ್ವಾಮಿ ವೈರಮುಡಿ ಉತ್ಸವ ನಡೆಯಿತು

ಮಾಡಾಳ್‌ಗೆ ನ್ಯಾಯಾಂಗ ಬಂಧನ

ಬೆಂಗಳೂರು: ಲಂಚ ಪ್ರಕರಣದಲ್ಲಿ ಬಂಧಿತರಾಗಿದ್ದ ಚನ್ನಗಿರಿ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತದ (ಕೆಎಸ್‌ಡಿಎಲ್) ಮಾಜಿ ಅಧ್ಯಕ್ಷ ಕೆ. ಮಾಡಾಳ್ ವಿರೂಪಾಕ್ಷಪ್ಪ ಅವರನ್ನು ಏಪ್ರಿಲ್ 11ರವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಕೆಎಸ್‌ಡಿಎಲ್ ಕಚ್ಚಾವಸ್ತು ಪೂರೈಕೆಗೆ ಕಾರ್ಯಾದೇಶ ನೀಡಿರುವುದಕ್ಕಾಗಿ ಶ್ರೇಯಸ್ ಕಶ್ಯಪ್ ಎಂಬುವವರಿಂದ ₹ 40 ಲಕ್ಷ ಲಂಚ ಪಡೆಯುತ್ತಿದ್ದ ವಿರೂಪಾಕ್ಷಪ್ಪ ಅವರ ಮಗ, ರಾಜ್ಯ ಲೆಕ್ಕಪತ್ರ ಇಲಾಖೆಯ ಅಧಿಕಾರಿ ಪ್ರಶಾಂತ್ ಮಾಡಾಳ್ ಅವರನ್ನು ಮಾರ್ಚ್ 2ರಂದು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಈ ಪ್ರಕರಣದಲ್ಲಿ ತಲೆಮರೆಸಿಕೊಂಡಿದ್ದ ವಿರೂಪಾಕ್ಷಪ್ಪ ಅವರಿಗೆ ಹೈಕೋರ್ಟ್ ಮಧ್ಯಂತರ ನಿರೀಕ್ಷಣಾ ಜಾಮೀನು ಮಂಜೂರು ಮಾಡಿತ್ತು.

ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಿ ಹೈಕೋರ್ಟ್ ಇದೇ 27ರಂದು ಆದೇಶ ಹೊರಡಿಸಿತ್ತು. ಅದೇ ದಿನ ರಾತ್ರಿ ವಿರೂಪಾಕ್ಷಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದರು. ಮರುದಿನ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಲೋಕಾಯುಕ್ತ ಪೊಲೀಸರ ಕೋರಿಕೆಯಂತೆ ನಾಲ್ಕು ದಿನಗಳ ಕಾಲ ಶಾಸಕರನ್ನು ತನಿಖಾ ತಂಡದ ವಶಕ್ಕೆ ನೀಡಲಾಗಿತ್ತು.

ಪೊಲೀಸ್ ಕಸ್ಟಡಿ ಅವಧಿ ಪೂರ್ಣಗೊಂಡ ಕಾರಣದಿಂದ ಶನಿವಾರ ಸಂಜೆ ವಿರೂಪಾಕ್ಷಪ್ಪ ಅವರನ್ನು ಜನಪ್ರತಿನಿಧಿಗಳ ಪ್ರಕರಣಗಳ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ಆರೋಪಿಯನ್ನು ಏ.11ರವರೆಗೂ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ನ್ಯಾಯಾಧೀಶರು ಆದೇಶ ಹೊರಡಿಸಿದರು. ಬಳಿಕ ತನಿಖಾಧಿಕಾರಿಗಳು ಶಾಸಕರನ್ನು ಕರೆದೊಯ್ದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ವಶಕ್ಕೆ ಒಪ್ಪಿಸಿದರು.

ದಕ್ಷಿಣ ಒಳನಾಡಿನ ಹಲವೆಡೆ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ದಕ್ಷಿಣ ಒಳನಾಡಿನ ಹಲವು ಭಾಗಗಳಲ್ಲಿ ಭಾನುವಾರ ಜೋರು ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಬೆಂಗಳೂರು ಗ್ರಾಮಾಂತರ ಹಾಗೂ ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಕೋಲಾರ, ರಾಮನಗರ ಜಿಲ್ಲೆಗಳಲ್ಲಿ ಮಳೆಯಾಗುವ ಸಾಧ್ಯತೆಯಿದೆ.

ಬೆಂಗಳೂರಿನಲ್ಲಿ ಭಾಗಶಃ ಮೋಡ ಕವಿದ ವಾತಾವರಣ ಇರಲಿದೆ.

ಸಂಜೆ ಅಥವಾ ರಾತ್ರಿ ವೇಳೆ ಮಳೆ ಸುರಿಯಲಿದೆ. ರಾಜಧಾನಿಯಲ್ಲಿ ಶನಿವಾರ ಉಷ್ಣಾಂಶ ಗರಿಷ್ಠ 35, ಕನಿಷ್ಠ 23 ಡಿಗ್ರಿ ಸೆಲ್ಸಿಯಸ್ ದಾಖಲಾಗಿದ್ದರೆ, ಕಲಬುರಗಿ ಜಿಲ್ಲೆಯಲ್ಲಿ ಗರಿಷ್ಠ ಉಷ್ಣಾಂಶ 38 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

ಶುಕ್ರವಾರ ದಕ್ಷಿಣ ಒಳನಾಡಿನ ಹಲವೆಡೆ ಜೋರು ಮಳೆ ಸುರಿದಿದೆ. ಶನಿವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ ಕಳೆದ 24 ಗಂಟೆಗಳ ಅವಧಿಯಲ್ಲಿ ಕೋಲಾರ ಜಿಲ್ಲೆಯ ರಾಯಲ್ಪಾಡ್‌ನಲ್ಲಿ 7 ಸೆಂ.ಮೀ ಹಾಗೂ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ 3 ಸೆಂ.ಮೀ ಮಳೆ ಸುರಿದಿದೆ ಎಂದು ಇಲಾಖೆ ಮಾಹಿತಿ ನೀಡಿದೆ.



ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ರಾಯಲ್ಪಾಡುವಿನಲ್ಲಿ ಶುಕ್ರವಾರ ರಾತ್ರಿ ಮಳೆಯಾಯಿತು

ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಶ್ರೀನಿವಾಸಪುರ (ಕೋಲಾರ): ತಾಲ್ಲೂಕಿನ ವಿವಿಧೆಡೆ ಶುಕ್ರವಾರ ರಾತ್ರಿ ಗುಡುಗು ಸಿಡಿಲು ಸಮೇತ ಜೋರು ಮಳೆಯಾಗಿದೆ.

ಶ್ರೀನಿವಾಸಪುರ ಪಟ್ಟಣ, ದಳಸೂರು, ರಾಯಲ್ಪಾಡು ಹಾಗೂ ಸುತ್ತಲಿನ ಗ್ರಾಮಗಳಲ್ಲಿ ರಾತ್ರಿ 9.30 ರಿಂದ 11 ಗಂಟೆವರೆಗೆ ಮಳೆ ಸುರಿಯಿತು.

ಯರವರಂಪಳ್ಳಿಯಲ್ಲಿ 3.4 ಸೆ.ಮೀ., ತಾಡಿಗೋಳುವಿನಲ್ಲಿ 2.3 ಸೆ.ಮೀ., ಲಕ್ಷ್ಮಿಪುರದಲ್ಲಿ 1.5 ಸೆ.ಮೀ., ಕೂರಿಗೆಪಳ್ಳಿಯಲ್ಲಿ 1.1 ಸೆ.ಮೀ ಹಾಗೂ ರಾಯಲ್ಪಾಡುವಿನಲ್ಲಿ 1 ಸೆ.ಮೀ. ಮಳೆಯಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ತಡರಾತ್ರಿವರೆಗೂ ಹದ ಮಳೆ (ದೇವನಹಳ್ಳಿ ವರದಿ): ಬೆಂಗಳೂರು ಗ್ರಾಮಾಂತರ ಜಿಲ್ಲೆಯಾದ್ಯಂತ ಶುಕ್ರವಾರ ರಾತ್ರಿ 9 ಗಂಟೆಗೆ ಆರಂಭವಾದ ಮಳೆ ತಡರಾತ್ರಿಯವರೆಗೂ ಸುರಿದಿದೆ. ಐದು ತಾಸಿನಲ್ಲಿ 19.4 ಮಿಲಿ ಮೀಟರ್ ಮಳೆ ಬಿದ್ದಿದೆ ಎಂದು ಕೃಷಿ ಇಲಾಖೆ ಮಾಹಿತಿ ನೀಡಿದೆ. ಶನಿವಾರದ ವಾತಾವರಣ ಎಂದಿಗಿಂತ ಸ್ವಲ್ಪ ತಂಪಾಗಿತ್ತು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ

100 ದಿನಗಳಲ್ಲಿ 116 ಕೆರೆಗಳ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ 'ನಮ್ಮೂರು ನಮ್ಮ ಕೆರೆ' ಯೋಜನೆಯಡಿ ಈ ವರ್ಷ 100 ದಿನಗಳಲ್ಲಿ ರಾಜ್ಯದಲ್ಲಿ 116 ಕೆರೆಗಳ ಪುನಶ್ಚೇತನ ಕಾರ್ಯ ಕೈಗೊಳ್ಳಲಾಗಿದೆ ಎಂದು ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಎಲ್.ಎಚ್. ಮಂಜುನಾಥ್ ತಿಳಿಸಿದ್ದಾರೆ.

ರಾಜ್ಯದಲ್ಲಿ ಅಂದಾಜು 36 ಸಾವಿರ ಕೆರೆಗಳಿರುವ ಮಾಹಿತಿ ಇದೆ. ನಿರ್ವಹಣೆ ಕೊರತೆ, ಮರಳು–ಮಣ್ಣಿಗಾಗಿ ಕೆರೆಯ ಒಡಲು ಅಗೆದಿರುವುದು, ಒತ್ತುವರಿಯಿಂದಾಗಿ ಹಲವು ಕೆರೆಗಳು ಸಂಗ್ರಹ ಸಾಮರ್ಥ್ಯ ಕಳೆದುಕೊಂಡಿವೆ.

ರೈತರು ಮತ್ತು ನೀರಿಗಾಗಿ ಕಿಲೋಮೀಟರ್‌ಗಟ್ಟಲೆ ಅಲೆಯುವ ಮಹಿಳೆಯರ ಸಂಕಷ್ಟ ಗಮನಿಸಿದ ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆಯವರು ಹಾಗೂ ಹೇಮಾವತಿ ವಿ.ಹೆಗ್ಗಡೆ ಅವರು 2016ರಲ್ಲಿ ಪಾರಂಪರಿಕ ಕೆರೆಗಳ ಪುನಶ್ಚೇತನಕ್ಕಾಗಿ 'ನಮ್ಮೂರು ನಮ್ಮ ಕೆರೆ' ಕಾರ್ಯಕ್ರಮವನ್ನು ಪ್ರಾರಂಭಿಸಿದರು.

ಡಿಸೆಂಬರ್ ಮಧ್ಯಭಾಗದಲ್ಲಿ ಕೆರೆಗಳ ಆಯ್ಕೆ ಪ್ರಕ್ರಿಯೆ ನಡೆಸಲಾಯಿತು. ಎಂಟು ಜನ ಎಂಜಿನಿಯರು, 101 ನೋಡಲ್ ಅಧಿಕಾರಿಗಳುಹಾಗೂ 116 ಕೆರೆ ಸಮಿತಿಯ 580ಕ್ಕೂ ಹೆಚ್ಚು ಪದಾಧಿಕಾರಿಗಳ ತಂಡದವರು ಜಲಯೋಧರಾಗಿ ದುಡಿದು ಈ ಬೃಹತ್ ಕಾರ್ಯದ ಯಶಸ್ವಿಗೊಳಿಸಿದ್ದಾರೆ.

ಕೆರೆಗಳ ದುರಸ್ತಿಗೆ 412 ಜೆಸಿಬಿ. ಹಾಗೂ ಹಿಟಾಚಿ ಯಂತ್ರಗಳು-,2,682ಕ್ಕೂ ಅಧಿಕ ಟ್ರ್ಯಾಕ್ಟರ್ ಹಾಗೂ ಟಿಪ್ಪರ್ ಬಳಸಲಾಯಿತು. ಹೂಳು ತೆಗೆಯುವುದು, ಏರಿ ಭದ್ರಪಡಿಸುವುದು, ಕಾಲುವೆ ಹಾಗೂ ಕೋಡಿಗಳ ರಿಪೇರಿ, ಕಲ್ಲು ಕಟ್ಟುವುದು ಇತರ ಕಾಮಗಾರಿಗಳ ಮೂಲಕ ಕೆರೆಗಳು ಪುನರ್ ನಿರ್ಮಾಣಗೊಂಡಿವೆ. ಮಳೆಗಾಲದಲ್ಲಿ ಒಂದೆರಡು ವರ್ಷಕ್ಕೆ ಬೇಕಾದ ನೀರು ಸಂಗ್ರಹಿಸಿ ಸುತ್ತಲಿನ ಪ್ರದೇಶದ ಅಂತರ್ಜಲ ಮಟ್ಟ ಏರಿಕೆಗೆ ನೆರವಾಗಲಿವೆ.

ಪುನಶ್ಚೇತನಗೊಂಡ ಕೆರೆಗಳ ನಿರ್ವಹಣೆ ಹೊಣೆಯನ್ನು ಕೆರೆ ಸಮಿತಿ, ಗ್ರಾಮ ಪಂಚಾಯಿತಿಗಳಿಗೆ ವಹಿಸಲಾಗುತ್ತದೆ.

ಕೆರೆಗಳ ಸುತ್ತ ಅರಣ್ಯೀಕರಣಕ್ಕಾಗಿ ಮಳೆಗಾಲದಲ್ಲಿ ಕೆರೆ ಸಮಿತಿ, ಅರಣ್ಯ ಇಲಾಖೆ, ಗ್ರಾಮ ಪಂಚಾಯಿತಿ ಸಹಭಾಗಿತ್ವದಲ್ಲಿ 'ಕೆರೆಯಂಗಳದಲ್ಲಿ ಗಿಡನಾಟಿ' ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು. ಪ್ರಾದೇಶಿಕವಾರು ವಿವಿಧ ಜಾತಿಯ ಹಣ್ಣಿನ ಗಿಡಗಳನ್ನು ನೆಡಲಾಗುವುದು ಎಂದು ಡಾ.ಎಲ್.ಎಚ್. ಮಂಜುನಾಥ್ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.



ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ಅಭಿವೃದ್ಧಿ ಪಡಿಸಿರುವ ಹಾವೇರಿ ಜಿಲ್ಲೆಯ ಕಬ್ಬೂರು ಕೆರೆ

ಕೆರೆ ಪುನಶ್ಚೇತನದ ವಿವರ	
ಪುನಶ್ಚೇತನಗೊಂಡ ಕೆರೆಗಳು	568
ಪುನಶ್ಚೇತನಗೊಂಡ ಕೆರೆಗಳ ವಿಸ್ತೀರ್ಣ	3,996.68 ಎಕರೆ
ಪ್ರಯೋಜನವಾಗಲಿರುವ ಕೃಷಿಭೂಮಿ	1.66 ಲಕ್ಷ ಎಕರೆ
ಪ್ರಯೋಜನ ಪಡೆದ ಕುಟುಂಬಗಳು	2.68 ಲಕ್ಷ
ಸಂಸ್ಥೆಯಿಂದ ನೀಡಿದ ಅನುದಾನ	₹ 44.75 ಕೋಟಿ
ಸ್ಥಳೀಯರ ಪಾಲು (ಹೂಳು ಸಾಗಾಟ)	₹ 39.27 ಕೋಟಿ
ಒತ್ತುವರಿ ತೆರವುಗೊಳಿಸಿದ ಪ್ರದೇಶ	171 ಎಕರೆ

'ಜೀವಿಲೋಕ ಸಾಹಿತ್ಯ ಸಂಭ್ರಮ' ಮುಂದೂಡಿಕೆ

ಬೆಂಗಳೂರು: ಪರಿಸರ, ನಿಸರ್ಗ ಸಂರಕ್ಷಣಾ ಸಂಸ್ಥೆಯು ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ ಸ್ಮರಣಾರ್ಥ ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ ತಾಲ್ಲೂಕಿನ ಕೊಟ್ಟಿಗೆಹಾರದಲ್ಲಿ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪ್ರಥಮ 'ಜೀವಿಲೋಕ ಸಾಹಿತ್ಯ ಸಂಭ್ರಮ' ಮುಂದೂಡಲ್ಪಟ್ಟಿದೆ. ಸಂಸ್ಥೆಯು ಕಾರ್ಯಕ್ರಮವನ್ನು ಇದೇ 5–7ರವರೆಗೆ ಹಮ್ಮಿಕೊಂಡಿತ್ತು. ಕಾರಣಾಂತರಗಳಿಂದ ಈ ಕಾರ್ಯಕ್ರಮ ಮುಂದೂಡಲ್ಪಟ್ಟಿದ್ದು, ಇದೇ 7ರಿಂದ 9ರವರೆಗೆ ನಡೆಯಲಿದೆ ಎಂದು ತಿಳಿಸಿದೆ.

ಜೈಲುಗಳಲ್ಲಿ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿಚಾರಣಾಧೀನ ಕೈದಿಗಳು: 'ಸುಪ್ರೀಂ' ಕಳವಳ

'ತ್ವರಿತ ವಿಚಾರಣೆ, ಶೀಘ್ರ ಇತ್ಯರ್ಥ ಖಾತರಿಪಡಿಸಿ'



ನವದೆಹಲಿ (ಪಿಟಿಐ): ದೇಶದಲ್ಲಿನ ಜೈಲುಗಳಲ್ಲಿ ಅವುಗಳ ಸಾಮರ್ಥ್ಯಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ವಿಚಾರಣಾಧೀನ ಕೈದಿಗಳನ್ನು ಇರಿಸಲಾಗಿದೆ. ಅವರ ಸ್ಥಿತಿಯೂ ದಿಗಿಲು ಹುಟ್ಟಿಸುವಂತಿದೆ. ಹೀಗಾಗಿ, ಎಲ್ಲ ನ್ಯಾಯಾಲಯಗಳು ವಿಚಾರಣೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಿ, ಪ್ರಕರಣಗಳನ್ನು ಇತ್ಯರ್ಥಗೊಳಿಸುವುದನ್ನು ಖಾತರಿಪಡಿಸಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಒಂದು ವೇಳೆ ನ್ಯಾಯಾಲಯಗಳು ನಿಗದಿತ ಅವಧಿಯೊಳಗೆ ವಿಚಾರಣೆಯನ್ನು ಪೂರ್ಣಗೊಳಿಸದೇ ಇದ್ದಲ್ಲಿ, ವ್ಯಕ್ತಿಗೆ ಆಗಬಹುದಾದ ಹಾನಿ, ಅನ್ಯಾಯ ಅಳತೆಗೂ ಮೀರಿದ್ದಾಗಿರುತ್ತದೆ ಎಂದು ನ್ಯಾಯಮೂರ್ತಿಗಳಾದ ರವೀಂದ್ರ ಭಟ್ ಹಾಗೂ ದೀಪಂಕರ್ ದತ್ತ ಅವರಿದ್ದ ನ್ಯಾಯಪೀಠ ಹೇಳಿದೆ.

ಎನ್‌ಡಿಪಿಎಸ್ ಕಾಯ್ದೆಯಡಿ ದಾಖಲಾದ ಪ್ರಕರಣದ ಆರೋಪಿಯೊಬ್ಬರು ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಪೀಠ ನಡೆಸಿತು. ಅರ್ಜಿದಾರ ಏಳು ವರ್ಷ ಹಾಗೂ ನಾಲ್ಕು ತಿಂಗಳುಗಳಿಂದ ಕಸ್ಟಡಿಯಲ್ಲಿದ್ದಾರೆ. ಹೀಗಾಗಿ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬೇಕು ಎಂದು ನ್ಯಾಯಪೀಠ ಆದೇಶಿಸಿತು.

'ಆರೋಪಿಯು ಒಂದು ವೇಳೆ ಆರ್ಥಿಕವಾಗಿ ದುರ್ಬಲ ಸ್ತರಕ್ಕೆ ಸೇರಿದ್ದಲ್ಲಿ, ಕಾರಾಗೃಹವಾಸದಿಂದ ಆತನಿಗೆ ಆಗುವ ಯಾತನೆ ಅಗಾಧವಾಗಿರುತ್ತದೆ. ಆರೋಪಿಯು ತಕ್ಷಣಕ್ಕೆ ಜೀವನೋಪಾಯ ಕಳೆದುಕೊಳ್ಳುತ್ತಾನೆ. ಹಲವು ಪ್ರಕರಣಗಳಲ್ಲಿ, ಆರೋಪಿಗಳ ಕುಟುಂಬಗಳು ಚದುರಿಹೋಗುತ್ತವೆ. ಕೌಟುಂಬಿಕ ಬಾಂಧವ್ಯ ಛಿದ್ರಗೊಳ್ಳುವ ಜೊತೆಗೆ ಸಮಾಜದಿಂದ ಬೇರ್ಪಡುತ್ತವೆ' ಎಂದು ನ್ಯಾಯಪೀಠ ಹೇಳಿದೆ.

'ಇಂಥ ಸಂಗತಿಗಳ ಬಗ್ಗೆ ನ್ಯಾಯಾಲಯಗಳು ಹೆಚ್ಚು ಸಂವೇದನಾಶೀಲವಾಗಿರಬೇಕು. ಅದರಲ್ಲೂ, ಕಠಿಣ ನಿಯಮಗಳನ್ನು ಒಳಗೊಂಡಿರುವ ಕಾಯ್ದೆಗಳಡಿ ದಾಖಲಾದ ಪ್ರಕರಣಗಳ ವಿಚಾರಣೆಗೆ ವೇಗ ನೀಡಿ, ಅವುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಬೇಕು' ಎಂದು ಹೇಳಿದೆ.

'ಆರೋಪಿಗೆ ಜಾಮೀನು ನೀಡಲು ಕೆಲ ಕಾಯ್ದೆಗಳು ಕಠಿಣ ನಿಬಂಧನೆಗಳನ್ನು ಹೊಂದಿವೆ. ಸಾರ್ವಜನಿಕ ಹಿತಾಸಕ್ತಿ ದೃಷ್ಟಿಯಿಂದ ಇದು ಅಗತ್ಯವೂ ಹೌದು. ಆದರೆ, ನಿಗದಿತ ಸಮಯದೊಳಗೆ ವಿಚಾರಣೆ ಮುಗಿಯದಿದ್ದಾಗ ಆರೋಪಿಗೆ ಆಗುವ ಆಘಾತ ಅಗಾಧವಾದುದು' ಎಂದೂ ಹೇಳಿದೆ.

'ಸೂಕ್ತ ಆದೇಶವಿಲ್ಲದೇ ಯಾರೂ ಜೈಲುವಾಸ ಅನುಭವಿಸಬಾರದು'

ನವದೆಹಲಿ: ಕಾನೂನಾತ್ಮಕ ಪ್ರಕ್ರಿಯೆ ಪೂರ್ಣಗೊಂಡು, ಸೂಕ್ತ ಆದೇಶವಿರದ ಹೊರತು ಯಾವ ವ್ಯಕ್ತಿಯೂ ಕಾರಾಗೃಹವಾಸ ಅನುಭವಿಸುವಂತಾಗಬಾರದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

ಸುರಕ್ಷತೆಯನ್ನು ಖಾತರಿಪಡಿಸುವುದು ಹಾಗೂ ಅಪರಾಧ ಕೃತ್ಯಗಳನ್ನು ತಡೆಗಟ್ಟುವುದು ಸರ್ಕಾರದ ಕರ್ತವ್ಯವಾಗಿದ್ದರೂ, ವೈಯಕ್ತಿಕ ಸ್ವಾತಂತ್ರ್ಯವು ಗೌಣವಾಗಬಾರದು ಎಂದೂ ಹೇಳಿದೆ.

'ಡಿಫಾಲ್ಟ್ ಜಾಮೀನು' ಕುರಿತ ಅರ್ಜಿಯೊಂದರ ವಿಚಾರಣೆ ನಡೆಸಿದ, ನ್ಯಾಯಮೂರ್ತಿಗಳಾದ ಕೆ.ಎಂ. ಜೋಸೆಫ್, ಹೃಷಿಕೇಶರಾಯ್ ಹಾಗೂ ಬಿ.ವಿ.ನಾಗರತ್ನ ಅವರಿದ್ದ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ಯೆಸ್ ಬ್ಯಾಂಕ್‌ಗೆ ಸಂಬಂಧಿಸಿದ ಹಣದ ಅಕ್ರಮ ವರ್ಗಾವಣೆ ಪ್ರಕರಣದ ಆರೋಪಿಗಳಾದ ಡಿಎಚ್ಎಫ್ಎಲ್ ಪ್ರವರ್ತಕರಾದ ಕಪಿಲ್ ವಾಧ್ವಾನ್ ಮತ್ತು ಧೀರಜ್ ವಾಧ್ವಾನ್ ಅವರಿಗೆ ಡಿಫಾಲ್ಟ್ ಜಾಮೀನು ಮಂಜೂರು ಮಾಡಿ ಬಾಂಬೆ ಹೈಕೋರ್ಟ್ ಹೊರಡಿಸಿರುವ ಆದೇಶವನ್ನು ಪ್ರಶ್ನಿಸಿ ಜಾರಿ ನಿರ್ದೇಶನಾಲಯ ಮೇಲ್ಮನವಿ ಸಲ್ಲಿಸಿತ್ತು.

ಪ್ರಾಸಿಕ್ಯೂಷನ್ 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದ ಕಾರಣ ಆರೋಪಿಯು, ಕಾನೂನುಬದ್ಧವಾಗಿ ತಂತಾನೆ ಪಡೆಯಬಹುದಾದ ಜಾಮೀನಿಗೆ 'ಡಿಫಾಲ್ಟ್' ಜಾಮೀನು ಎನ್ನಲಾಗುತ್ತದೆ.

ಡಿಫಾಲ್ಟ್ ಜಾಮೀನು ನೀಡುವ ಸಂದರ್ಭದಲ್ಲಿ, ಆರೋಪಿಯನ್ನು ಕಸ್ಟಡಿಗೆ ಒಪ್ಪಿಸಿದ ದಿನವನ್ನು ಪರಿಗಣಿಸಬೇಕೇ ಅಥವಾ ಬಿಡಬೇಕೇ ಎಂಬ ಬಗ್ಗೆ ನ್ಯಾಯಪೀಠ ಪರಿಶೀಲನೆ ನಡೆಸಿತು.

ಪ್ರಾಸಿಕ್ಯೂಷನ್ 60 ದಿನಗಳ ಒಳಗಾಗಿ ದೋಷಾರೋಪ ಪಟ್ಟಿ ಸಲ್ಲಿಸದಿದ್ದಲ್ಲಿ, ಸಿಆರ್‌ಪಿಸಿ ಸೆಕ್ಷನ್ 167ರ ಪ್ರಕಾರ, ಆರೋಪಿಯು ಡಿಫಾಲ್ಟ್ ಜಾಮೀನು ಪಡೆಯಲು ಅರ್ಹನಾಗುತ್ತಾನೆ. ಕೆಲ ಅಪರಾಧಗಳಿಗೆ ಸಂಬಂಧಿಸಿ, ದೋಷಾರೋಪ ಪಟ್ಟಿ ಸಲ್ಲಿಸುವ ಅವಧಿಯನ್ನು 90 ದಿನಗಳ ವರೆಗೆ ವಿಸ್ತರಿಸಲು ಅವಕಾಶ ಇದೆ.

ಈ ಕುರಿತ ವಾದ–ಪ್ರತಿವಾದಗಳನ್ನು ಆಲಿಸಿದ ನ್ಯಾಯಪೀಠ, 'ಡಿಫಾಲ್ಟ್ ಜಾಮೀನು ನೀಡಲು, ಆರೋಪಿಯನ್ನು ಕಸ್ಟಡಿಗೆ ಒಪ್ಪಿಸಿದ ದಿನವನ್ನೂ ಪರಿಗಣಿಸಬೇಕು' ಎಂದು ಹೇಳಿತು.

ಸುದ್ದಿ 2 ನಿಮಿಷ

ವಿಮಾನ ಸಿಬ್ಬಂದಿಗೆ ಲೈಂಗಿಕ ಕಿರುಕುಳ ಆರೋಪ: ಬಂಧನ

ಮುಂಬೈ (ಪಿಟಿಐ): ಇಂಡಿಗೊ ವಿಮಾನದ ಸಿಬ್ಬಂದಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ಸ್ವೀಡನ್ ಪ್ರಜೆಯೊಬ್ಬರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ಈ ಘಟನೆಯು, ಬ್ಯಾಂಕಾಕ್‌ನಿಂದ ಮುಂಬೈಗೆ ಬಂದ ವಿಮಾನದಲ್ಲಿ (6ಇ–1052) ಗುರುವಾರ ನಡೆದಿದೆ. ಕ್ಲಾಸ್ ಎರಿಕ್ ಹರಾಲ್ಡ್ ಜೋನಸ್ ವೆಸ್ಟ್‌ಬರ್ಗ್ ಬಂಧಿತ ಆರೋಪಿ ಎಂದು ಸಹಾರ ಠಾಣೆ ಪೊಲೀಸರು ತಿಳಿಸಿದ್ದಾರೆ.

'ಪ್ರಯಾಣದ ವೇಳೆ, ಆರೋಪಿಯು ಮದ್ಯದ ಅಮಲಿನಲ್ಲಿದ್ದ ಎನ್ನಲಾಗಿದೆ. ಆಹಾರವನ್ನು ಖರೀದಿಸುವ ಸಂದರ್ಭದಲ್ಲಿ ವಿಮಾನದ ಸಿಬ್ಬಂದಿಯೊಬ್ಬರನ್ನು ಅನುಚಿತ ರೀತಿ ಸ್ಪರ್ಶಿಸಿದ್ದರು. ಈ ನಡೆಯನ್ನು ಆಕ್ಷೇಪಿಸಿದ್ದ ಸಹಪ್ರಯಾಣಿಕರೊಬ್ಬರ ಮೇಲೆ ಹಲ್ಲೆ ಮಾಡಿದ್ದರು ಎನ್ನಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.



'ವಿಮಾನ ಇಲ್ಲಿಗೆ ಬಂದಿಳಿದ ತಕ್ಷಣವೇ ಆರೋಪಿಯನ್ನು ಬಂಧಿಸಿ, ಅಂಧೇರಿ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ಶುಕ್ರವಾರ ಹಾಜರುಪಡಿಸಲಾಯಿತು. ನಂತರ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು' ಎಂದು ತಿಳಿಸಿದ್ದಾರೆ.

ವೆಸ್ಟ್‌ಬರ್ಗ್ ಅವರು, ವಿಮಾನದಲ್ಲಿ ತೋರಿದ ಅಶಿಸ್ತಿನ ವರ್ತನೆ ಆರೋಪದಡಿ ಕಳೆದ ಮೂರು ತಿಂಗಳ ಅವಧಿಯಲ್ಲಿ ಭಾರತದಲ್ಲಿ ಬಂಧಿಸಲಾದ ಎಂಟನೇ ವ್ಯಕ್ತಿ ಎಂದು ಮೂಲಗಳು ಹೇಳಿವೆ.

ಹಕ್ಕಿ ಡಿಕ್ಕಿ: ಫೆಡೆಕ್ಸ್ ವಿಮಾನ ತುರ್ತು ಭೂಸ್ಪರ್ಶ

ನನವದೆಹಲಿ (ಪಿಟಿಐ): ದೆಹಲಿಯಿಂದ ದುಬೈಗೆ ತೆರಳುತ್ತಿದ್ದ ಫೆಡೆಕ್ಸ್ ಸಂಸ್ಥೆಯ ಸರಕು ಸಾಗಣೆ ವಿಮಾನಕ್ಕೆ ಟೇಕ್ ಆಫ್ ಆದ ಕೆಲವೇ ಕ್ಷಣದಲ್ಲಿ ಪಕ್ಷಿಯೊಂದು ಡಿಕ್ಕಿ ಹೊಡೆದಿದೆ. ಹೀಗಾಗಿ, ಇಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನವನ್ನು ತುರ್ತು ಭೂಸ್ಪರ್ಶ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಶನಿವಾರ ಬೆಳಿಗ್ಗೆ 10.50ಕ್ಕೆ ಟೇಕ್ ಆಫ್ ಕೆಲವೇ ಕ್ಷಣಗಳಲ್ಲಿ ಹಕ್ಕಿಯೊಂದು ಡಿಕ್ಕಿ ಹೊಡೆಯಿತು. ಇದರಿಂದಾಗಿ, ಕಿಟಕಿಯಲ್ಲಿ ಬಿರುಕು ಕಾಣಿಸಿಕೊಂಡಿತು. ವಿಮಾನ ನಿಲ್ದಾಣದಲ್ಲಿ ತುರ್ತು ಪರಿಸ್ಥಿತಿ ಘೋಷಿಸಿ, ನಂತರ ವಿಮಾನವನ್ನು ಇಳಿಸಲಾಯಿತು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

'ಸುರಕ್ಷತೆಗೆ ಸಂಬಂಧಿಸಿ ಸಂಪೂರ್ಣ ತಪಾಸಣೆ ನಡೆಸಿದ ಬಳಿಕ, ಮಧ್ಯಾಹ್ನ 1.40ಕ್ಕೆ ವಿಮಾನ ದುಬೈನತ್ತ ಪ್ರಯಾಣ ಬೆಳೆಸಿತು' ಎಂದು ಫೆಡೆಕ್ಸ್ ಸಂಸ್ಥೆಯ ವಕ್ತಾರರೊಬ್ಬರು ತಿಳಿಸಿದ್ದಾರೆ.

ರಾಹುಲ್ ಗಾಂಧಿಗೆ ಜೈಲುಶಿಕ್ಷೆ– ಮೇಲ್ಮನವಿ

ಕಾಂಗ್ರೆಸ್ ಎಚ್ಚರಿಕೆಯ ಹೆಜ್ಜೆ

• ಶೆಮಿನ್ ಜಾಯ್

ನವದೆಹಲಿ: ಮಾನನಷ್ಟ ಮೊಕದ್ದಮೆಯಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಸೂರತ್‌ನ ನ್ಯಾಯಾಲಯವು ಜೈಲುಶಿಕ್ಷೆ ವಿಧಿಸಿ ನೀಡಿರುವ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ವಿಷಯದಲ್ಲಿ ಕಾಂಗ್ರೆಸ್ ಎಚ್ಚರಿಕೆಯ ಹೆಜ್ಜೆಗಳನ್ನಿಡುತ್ತಿದೆ.

ರಾಹುಲ್ ವಿರುದ್ಧ ದೇಶದ ವಿವಿಧ ನ್ಯಾಯಾಲಯಗಳಲ್ಲಿ ಮತ್ತಷ್ಟೂ ಪ್ರಕರಣಗಳು ದಾಖಲಾಗುತ್ತಿವೆ. ಇಂಥ ಸಮಯದಲ್ಲಿ ಮೇಲ್ಮನವಿಯಲ್ಲಿನ ಯಾವುದಾದರೂ ದೋಷವೊಂದು ರಾಹುಲ್ ಗಾಂಧಿ ಅವರನ್ನು ಮತ್ತಷ್ಟೂ ಸಂಕಷ್ಟಕ್ಕೆ ದೂಡಬಾರದು ಎಂಬ ಕಾರಣಕ್ಕೆ ಕಾಂಗ್ರೆಸ್ ಈ ನಿಲುವು ಬಂದಿದೆ ಎಂದು ಮೂಲಗಳು ಹೇಳಿವೆ.

'ಎಲ್ಲ ಕಳ್ಳರಿಗೂ ಮೋದಿ ಎಂಬ ಉಪನಾಮ ಏಕಿದೆ' ಎಂದು ರಾಹುಲ್ ಅವರು ಪ್ರಶ್ನಿಸಿದ್ದರು. ಲೋಕಸಭೆಗೆ 2019ರಲ್ಲಿ ನಡೆದ ಚುನಾವಣಾ ಪ್ರಚಾರ ಸಂದರ್ಭದಲ್ಲಿ ರಾಹುಲ್ ಅವರು ಕೋಲಾರದಲ್ಲಿ ಮಾಡಿದ ಭಾಷಣದಲ್ಲಿ ಈ ಹೇಳಿಕೆ ಕೊಟ್ಟಿದ್ದರು. ಅದನ್ನು ಪ್ರಶ್ನಿಸಿ ಸೂರತ್ (ಪಶ್ಚಿಮ) ಕ್ಷೇತ್ರದ ಶಾಸಕ ಪೂರ್ಣೇಶ್ ಮೋದಿ ಅವರು ಮಾನನಷ್ಟ ಮೊಕದ್ದಮೆ ದಾಖಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಸೂರತ್ ನ್ಯಾಯಾಲಯವು ರಾಹುಲ್ ಅವರಿಗೆ ಎರಡು ವರ್ಷಗಳ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದೆ.

ಹಿರಿಯ ಸಂಸದ ಅಭಿಷೇಕ್ ಮನು ಸಿಂಘ್ವಿ ನೇತೃತ್ವದ ವಕೀಲರ ತಂಡವು, ಸೂರತ್ ನ್ಯಾಯಾಲಯ ನೀಡಿರುವ ಆದೇಶದ ವಿರುದ್ಧ ಶೀಘ್ರವೇ ಮೇಲ್ಮನವಿ ಸಲ್ಲಿಸಲಿದೆ ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ಹೇಳಿವೆ.

ಆದರೆ, ಮೇಲ್ಮನವಿ ಸಲ್ಲಿಸುವ ವಿಚಾರದಲ್ಲಿ ಈ ತಂಡವು ಅವಸರದ ಕ್ರಮ ಅನುಸರಿಸದೇ ಇರಲು ನಿರ್ಧರಿಸಿದೆ. ಅಲ್ಲದೇ, ಯಾವುದೇ ನ್ಯೂನತೆಗಳು ಇಲ್ಲದಂತೆ ಅರ್ಜಿ ಸಿದ್ಧಪಡಿಸಲಾಗುತ್ತಿದೆ ಎಂದೂ ಹೇಳಿವೆ.

ಏಪ್ರಿಲ್ 12ರಂದು ತನ್ನ ಮುಂದೆ ಹಾಜರಾಗುವಂತೆ ರಾಹುಲ್ ಅವರಿಗೆ ಪಟ್ನಾದ ನ್ಯಾಯಾಲಯವು ಸಮನ್ಸ್ ಜಾರಿ ಮಾಡಿದೆ. ಇದೇ ವಿಷಯಕ್ಕೆ ಸಂಬಂಧಿಸಿ ರಾಂಚಿಯಲ್ಲಿಯೂ ಪ್ರಕರಣವೊಂದು ದಾಖಲಾಗಿದೆ.

'ಸೂರತ್ ನ್ಯಾಯಾಲಯದ ತೀರ್ಪು ಪ್ರಶ್ನಿಸಿ ಸಲ್ಲಿಸಲಾಗುವ ಮೇಲ್ಮನವಿಯು ಸಾರ್ವಜನಿಕ ದಾಖಲೆ ಎನಿಸುತ್ತದೆ. ಹೀಗಾಗಿ, ಪಟ್ನಾ, ರಾಂಚಿ ಸೇರಿದಂತೆ ಬೇರಾವುದೇ ಕೋರ್ಟ್‌ನಲ್ಲಿ ವಾದ ಮಂಡಿಸುವ ವೇಳೆ, ರಾಹುಲ್ ವಿರೋಧಿಗಳು ಈ ಮೇಲ್ಮನವಿಯನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ. ಹೀಗಾಗಿ, ಯಾವುದೇ ತಪ್ಪುಗಳು ಇಲ್ಲದಂತಹ ಮೇಲ್ಮನವಿಯನ್ನು ಸಿದ್ಧಪಡಿಸಲು ವಕೀಲರ ತಂಡವು ಮುಂದಾಗಿದೆ' ಎಂದು ಕಾಂಗ್ರೆಸ್‌ನ ಹಿರಿಯ ಮುಖಂಡರೊಬ್ಬರು ಹೇಳಿದರು.

ಆದರೆ, ಮೇಲ್ಮನವಿ ಸಲ್ಲಿಸುವ ವಿಷಯದಲ್ಲಿನ ವಿಳಂಬವನ್ನೇ ಅಸ್ತ್ರವನ್ನಾಗಿಸಿಕೊಂಡಿರುವ ಬಿಜೆಪಿ, 'ರಾಹುಲ್ ಅವರನ್ನು ಜೈಲಿನಲ್ಲಿರಿಸುವ ಉದ್ದೇಶದಿಂದಲೇ ಕಾಂಗ್ರೆಸ್ ಈ ವಿಳಂಬ ತಂತ್ರ ಅನುಸರಿಸುತ್ತಿದೆ' ಎಂದು ಆರೋಪಿಸುತ್ತಲೇ ಇದೆ.

ಕಾಂಗ್ರೆಸ್‌ನ ಮತ್ತೊಬ್ಬ ಮುಖಂಡರೊಬ್ಬರು, 'ರಾಹುಲ್ ಅವರು ಭಾಷಣ ಮಾಡಿದ್ದು ಕರ್ನಾಟಕದ ಕೋಲಾರದಲ್ಲಿ, ಆದರೆ, ಅದಕ್ಕೆ ಸಂಬಂಧಿಸಿದ ಅರ್ಜಿಯ ವಿಚಾರಣೆಯನ್ನು ಸೂರತ್‌ನಲ್ಲಿ ನಡೆಸಿದ್ದು ಹೇಗೆ ಎಂಬುದು ಪಕ್ಷದ ಪ್ರಶ್ನೆಯಾಗಿದೆ' ಎಂದರು.

ಹೌರಾ ಶಾಂತ: ನಿಷೇಧಾಜ್ಞೆ ಮುಂದುವರಿಕೆ

ಹೌರಾ, ಪಶ್ಚಿಮ ಬಂಗಾಳ (ಪಿಟಿಐ): ರಾಮ ನವಮಿ ಅಂಗವಾಗಿ ನಡೆದ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವಿನ ಘರ್ಷಣೆ ಹಿನ್ನೆಲೆಯಲ್ಲಿ ಉದ್ವಿಗ್ನಗೊಂಡಿದ್ದ ಹೌರಾದ ಕಾಜಿಪಾಡಾ ಪ್ರದೇಶದಲ್ಲಿ ಪರಿಸ್ಥಿತಿಯು ಶನಿವಾರ ಹತೋಟಿಯಲ್ಲಿದ್ದು, ಶಾಂತಿ ನೆಲೆಸಿತ್ತು.

ಈ ಪ್ರದೇಶದಲ್ಲಿ ನಿಷೇಧಾಜ್ಞೆಯನ್ನು ಮುಂದುವರಿಸಲಾಗಿದೆ. ಅಂಗಡಿಗಳು ತೆರೆದಿದ್ದು, ಮಾರುಕಟ್ಟೆಗಳು ಕೂಡ ಕಾರ್ಯನಿರ್ವಹಿಸುತ್ತಿವೆ. ಬಿಗಿ ಭದ್ರತೆ ನಡುವೆಯೇ ವಾಹನಗಳ ಸಂಚಾರವೂ ಆರಂಭವಾಗಿದ್ದು, ಜನಜೀವನ ಸಹಜ ಸ್ಥಿತಿಗೆ ಮರಳಿದೆ ಎಂದು ಪೊಲೀಸ್ ಅಧಿಕಾರಿಗಳು ಹೇಳಿದ್ದಾರೆ.

ಘರ್ಷಣೆ ವೇಳೆ ಉದ್ರಿಕ್ತರು ಹಲವಾರು ಅಂಗಡಿಗಳು ಹಾಗೂ ಮನೆಗಳನ್ನು ಧ್ವಂಸಗೊಳಿಸಿದ್ದರು. ಈ ಹಿನ್ನೆಲೆಯಲ್ಲಿ ಕಾಜಿಪಾಡಾ ಪ್ರದೇಶದಲ್ಲಿ ನಿಷೇಧಾಜ್ಞೆಯ ಮುಂದುವರಿಕೆ ಜೊತೆಗೆ, ಇಂಟರ್‌ನೆಟ್ ಸೇವೆಯನ್ನು ಸಹ ಸ್ಥಗಿತಗೊಳಿಸಲಾಗಿದೆ ಎಂದೂ ಹೇಳಿದ್ದಾರೆ.

ನವಜೋತ್ ಸಿಂಗ್ ಸಿಧು ಬಿಡುಗಡೆ



ಪಟಿಯಾಲ (ಪಿಟಿಐ): ರಸ್ತೆಯಲ್ಲಿ ರೋಷಾವೇಶ ತೋರಿದ ಪ್ರಕರಣದಲ್ಲಿ ಕಳೆದ 10 ತಿಂಗಳಿನಿಂದ ಜೈಲು ಶಿಕ್ಷೆ ಅನುಭವಿಸುತ್ತಿದ್ದ ಕಾಂಗ್ರೆಸ್ ನಾಯಕ ನವಜೋತ್ ಸಿಂಗ್ ಸಿಧು ಶನಿವಾರ ಪಟಿಯಾಲ ಕೇಂದ್ರ ಕಾರಾಗೃಹದಿಂದ ಬಿಡುಗಡೆಯಾದರು.

ಮಧ್ಯಾಹ್ನವೇ ಬಿಡುಗಡೆಯಾಗುವ ನಿರೀಕ್ಷೆ ಇತ್ತು. ಆದರೆ ಸಂಜೆ 5.53ಕ್ಕೆ ಜೈಲಿನಿಂದ ಹೊರಬಂದರು. ಈ ವೇಳೆ ಅವರು ಆಕಾಶ ನೀಲಿ ಬಣ್ಣದ ಜಾಕೆಟ್ ಧರಿಸಿದ್ದರು.

ಬೆಳಿಗ್ಗೆಯಿಂದಲೇ ಜೈಲಿನ ಹೊರಗೆ ನೆರೆದಿದ್ದ ಪಕ್ಷದ ನಾಯಕರು ಮತ್ತು ಬೆಂಬಲಿಗರು, ಅವರಿಗೆ ಹೂವಿನ ಹಾರ ಹಾಕಿ ಅದ್ಧೂರಿ ಸ್ವಾಗತ ನೀಡಿದರು. 'ನವಜೋತ್ ಸಿಧು ಜಿಂದಾಬಾದ್' ಎಂದು ಘೋಷಣೆ ಕೂಗಿದರು.

1988ರಲ್ಲಿ ನಡೆದಿದ್ದ ಅಪಘಾತದಲ್ಲಿ 65 ವರ್ಷದ ಗುರ್ನಾಮ್ ಸಿಂಗ್ ಎಂಬುವವರು ಮೃತಪಟ್ಟಿದ್ದರು.

ಸುರಕ್ಷಿತ ಸಂವಹನ: ಆರ್‌ಆರ್‌ಐನಲ್ಲಿ ಮಹತ್ವದ ಸಂಶೋಧನೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಸೈಬರ್ ಭದ್ರತೆ ಮತ್ತು ಆನ್‌ಲೈನ್ ವಹಿವಾಟುಗಳನ್ನು ಸುರಕ್ಷಿತವಾಗಿ ಕೈಗೊಳ್ಳುವ ನಿಟ್ಟಿನಲ್ಲಿ ರಾಮನ್ ಸಂಶೋಧನಾ ಸಂಸ್ಥೆ (ಆರ್‌ಆರ್‌ಐ) ಮಹತ್ವದ ಸಂಶೋಧನೆ ಕೈಗೊಂಡಿದೆ.

ಉಪಗ್ರಹ ಆಧಾರಿತ 'ಕ್ವಾಂಟಮ್ ಕಮ್ಯೂನಿಕೇಷನ್' ಕುರಿತ ಸಂಶೋಧನೆ ಇದಾಗಿದ್ದು, ರಕ್ಷಣಾ ವಲಯ ಸೇರಿದಂತೆ ವಿವಿಧ ವಲಯಗಳನ್ನು ಈ ತಾಂತ್ರಿಕತೆಯನ್ನು ಬಳಸಬಹುದಾಗಿದೆ.

'ಸುರಕ್ಷಿತ ಸಂವಹನವನ್ನು ಖಾತರಿಪಡಿಸುವ ತಾಂತ್ರಿಕತೆಯನ್ನು ಇಲ್ಲಿ ಅಭಿವೃದ್ಧಿಪಡಿಸಲಾಗಿದೆ. ಈ ಮೂಲಕ ಮಾಹಿತಿ ಬೇಧಿಸುವುದನ್ನು ತಡೆಯಬಹುದಾಗಿದೆ. ಸದ್ಯ ಲಭ್ಯವಿರುವ ವ್ಯವಸ್ಥೆಗಿಂತಲೂ ಇದು ಹೆಚ್ಚು ಸುರಕ್ಷಿತವಾಗಿದೆ' ಎಂದು ವಿಜ್ಞಾನಿಗಳು ಪ್ರತಿಪಾದಿಸಿದ್ದಾರೆ.

ಇಸ್ರೊದ ಯು.ಆರ್. ರಾವ್ ಉಪಗ್ರಹ ಕೇಂದ್ರದ ಸಹಭಾಗಿತ್ವದಲ್ಲಿ ಈ ಸಂಶೋಧನೆಯನ್ನು ಕೈಗೊಳ್ಳಲಾಗಿದೆ.

ಆರ್‌ಆರ್‌ಐ ಪ್ರೊಫೆಸರ್ ಡಾ. ಉರ್ಬಾಸಿ ಸಿನ್ಹಾ ಅವರ ನೇತೃತ್ವದ ಸಂಶೋಧನಾ ತಂಡ ಈ ಕಾರ್ಯವನ್ನು ಕೈಗೊಂಡಿದೆ.



ಬೆಂಗಳೂರಿನ ಆರ್‌ಆರ್‌ಐನಲ್ಲಿ 'ಕ್ವಾಂಟಮ್ ಕಮ್ಯೂನಿಕೇಷನ್' ಸಂಶೋಧನೆ ಕುರಿತು ಪ್ರೊ. ಡಾ. ಉರ್ಬಾಸಿ ಸಿನ್ಹಾ ವಿವರಿಸಿದರು – ಪ್ರಜಾವಾಣಿ ಚಿತ್ರ

'ಸ್ಥಿರ ಮತ್ತು ಸಂಚರಿಸುವ ವಾಹಕಗಳ ನಡುವೆ ಸುರಕ್ಷಿತವಾದ ಸಂಪರ್ಕ ಕಲ್ಪಿಸುವ ಪ್ರಮುಖ ವ್ಯವಸ್ಥೆ ಇದಾಗಿದೆ. ಇದೇ ಪ್ರಥಮ ಬಾರಿಗೆ ಭಾರತದಲ್ಲಿ ಸುರಕ್ಷಿತವಾದ ಇಂತಹ ಪ್ರಯೋಗವನ್ನು ಕೈಗೊಳ್ಳಲಾಗಿದೆ. ಉದಾಹರಣೆಗೆ, ಭಾರತೀಯ ನೌಕಾಪಡೆ ಈ ತಾಂತ್ರಿಕತೆ ಬಳಸಬಹುದಾಗಿದೆ' ಎಂದು ಸಿನ್ಹಾ ವಿವರಿಸಿದ್ದಾರೆ.

'ಉಪಗ್ರಹ ಆಧಾರಿತ ಕ್ವಾಂಟಮ್ ಕಮ್ಯುನಿಕೇಷನ್ ಕ್ಷೇತ್ರದಲ್ಲಿ ಇದು ಮೈಲಿಗಲ್ಲು' ಎಂದು ಆರ್‌ಆರ್‌ಐ ನಿರ್ದೇಶಕ ಪ್ರೊ. ತರುಣ ಸೌರದೀಪ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಿಜೆಪಿಗೆ ಕೋಮು ಹಿಂಸೆಯೇ ಆದ್ಯತೆ: ಕಪಿಲ್ ಸಿಬಲ್

ನವದೆಹಲಿ (ಪಿಟಿಐ): 2024ರ ಸಾರ್ವತ್ರಿಕ ಚುನಾವಣೆ ಹತ್ತಿರವಾಗುತ್ತಿರುವ ಈ ಸಮಯದಲ್ಲಿ, ಕೋಮು ಹಿಂಸಾಚಾರವೇ ಬಿಜೆಪಿ ಮುಂದಿರುವ ಆದ್ಯತೆಯ ವಿಚಾರ ಎಂದು ರಾಜ್ಯಸಭಾ ಸದಸ್ಯ ಕಪಿಲ್ ಸಿಬಲ್ ಅವರು ಶನಿವಾರ ಆರೋಪಿಸಿದ್ದಾರೆ. ಪಶ್ಚಿಮ ಬಂಗಾಳ ಹಾಗೂ ಗುಜರಾತ್‌ನಲ್ಲಿ ಇತ್ತೀಚೆಗೆ ನಡೆದ ಹಿಂಸಾಚಾರದ ಘಟನೆಗಳನ್ನು ಸಿಬಲ್ ಉಲ್ಲೇಖಿಸಿದ್ದಾರೆ. ಈ ಘಟನೆಗಳು ಕೇವಲ 'ಟ್ರೈಲರ್' ಎಂದು ಅವರು ಕರೆದಿದ್ದಾರೆ.

ಪಶ್ಚಿಮ ಬಂಗಾಳದ ಹೌರಾದಲ್ಲಿ ರಾಮನವಮಿ ವೇಳೆ ಎರಡು ಗುಂಪುಗಳ ನಡುವೆ ಉಂಟಾದ ಘರ್ಷಣೆಯ ಬಳಿಕ ಹಿಂಸಾಚಾರ ಭುಗಿಲೆದ್ದಿತ್ತು. ಇದು ಬಿಜೆಪಿ ಹಾಗೂ ಟಿಎಂಸಿ ನಡುವೆ ವಾಕ್ಸಮರಕ್ಕೆ ಕಾರಣವಾಗಿದೆ. ರಾಮನವಮಿ ಸಂಭ್ರಮದ ವೇಳೆ ಗುಜರಾತ್ ಹಾಗೂ ಮಹಾರಾಷ್ಟ್ರದಲ್ಲೂ ಹಿಂಸಾಚಾರ ನಡೆದಿರುವ ಬಗ್ಗೆ ವರದಿಯಾಗಿದೆ.



ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಭೋಪಾಲ್‌ನಲ್ಲಿ ವಂದೇ ಭಾರತ್ ರೈಲಿಗೆ ಚಾಲನೆ ನೀಡಿದರು. ರಾಜ್ಯಪಾಲ ಮಂಗುಭಾಯಿ ಪಟೇಲ್, ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಇದ್ದರು

ಕೆರೆ ಅಭಿವೃದ್ಧಿ ಪ್ರಾಧಿಕಾರದ ಅಧಿಕಾರಿ ಲೋಕಾಯುಕ್ತ ಬಲೆಗೆ



ಶಿವಲಿಂಗಸ್ವಾಮಿ

ಹಾವೇರಿ: ಕೆರೆ ಅಭಿವೃದ್ಧಿ ಕಾಮಗಾರಿಗಳ ಹಣ ಸಂದಾಯ ಮಾಡಲು ₹2.20 ಲಕ್ಷ ಲಂಚಕ್ಕೆ ಬೇಡಿಕೆ ಇಟ್ಟಿದ್ದ, ಹಾವೇರಿಯ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರದ ಪ್ರಭಾರ ಜಿಲ್ಲಾ ಕಾರ್ಯನಿರ್ವಹಣಾಧಿಕಾರಿ ಶಿವಲಿಂಗಸ್ವಾಮಿ ಹಲಗಲಿಮಠ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಸವಣೂರಿನ ಹೊರಕೇರಿ ಓಣಿಯ ಗುತ್ತಿಗೆದಾರ ಸುರೇಶ ಕಳಸೂರು ಅವರಿಗೆ ಕೆರೆ ಅಭಿವೃದ್ಧಿ ಕಾಮಗಾರಿಗಳ ಹಣ ಸಂದಾಯಕ್ಕೆ ಬೇಕಾದ ಪತ್ರಗಳನ್ನು ನೀಡಲು ಶಿವಲಿಂಗಸ್ವಾಮಿ ಅವರು ಮುಂಗಡವಾಗಿ ₹1 ಲಕ್ಷ ಲಂಚ ಪಡೆದಿದ್ದರು. ಉಳಿದ ₹1.20 ಲಕ್ಷ ಕೊಡುವಂತೆ ಬೇಡಿಕೆ ಇಟ್ಟು, ಖಾಲಿ ಚೆಕ್ ಅನ್ನು ಪಡೆದುಕೊಂಡಿದ್ದರು.ಬಾಕಿ ಹಣ ಪಡೆಯಲು ಸುರೇಶ ಅವರನ್ನು ಧಾರವಾಡದ ಎಸ್‌ಡಿಎಂ ಆಸ್ಪತ್ರೆ ಬಳಿಗೆ ಕರೆದಿದ್ದರು. ಅಲ್ಲಿಂದ ತಮ್ಮ ಕಾರಿನಲ್ಲಿ ಕರೆದೊಯ್ದು ಲಂಚದ ಹಣ ಪಡೆದಿದ್ದರು.

ನನ್ನ ವರ್ಚಸ್ಸು ಹಾಳುಗೆಡವಲು ಸುಪಾರಿ: ಮೋದಿ ಆರೋಪ

ಭೋಪಾಲ್ (ಪಿಟಿಐ): 'ನನ್ನ ವರ್ಚಸ್ಸನ್ನು ಹಾಳುಮಾಡುವ ಸಲುವಾಗಿ ಕೆಲವರು ದೇಶದ ಒಳಗೆ ಮತ್ತು ಹೊರಗಿನ ಜನರೊಂದಿಗೆ ಶಾಮೀಲಾಗಿದ್ದಾರೆ ಹಾಗೂ ಇದಕ್ಕಾಗಿ ಕೆಲವರಿಗೆ ಸುಪಾರಿಯನ್ನೂ ನೀಡಿದ್ದಾರೆ' ಎಂದು ಪ್ರಧಾನಿ ನರೇಂದ್ರ ಮೋದಿ ಶನಿವಾರ ಇಲ್ಲಿ ಆರೋಪಿಸಿದ್ದಾರೆ.

ಇಲ್ಲಿನ ರಾಣಿ ಕಮಲಾಪತಿ ರೈಲ್ವೆ ನಿಲ್ದಾಣದಲ್ಲಿ ಭೋಪಾಲ್–ದೆಹಲಿ ಮಾರ್ಗದ ವಂದೇಭಾರತ್ ಎಕ್ಸ್‌ಪ್ರೆಸ್ ರೈಲು ಸಂಚಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, 'ಈ ಹಿಂದಿದ್ದ ಸರ್ಕಾರಗಳು ವೋಟ್ ಬ್ಯಾಂಕ್ ಓಲೈಕೆಯಲ್ಲಿ ನಿರತವಾಗಿದ್ದವು. ಆದರೆ, ನಾವು ಜನರನ್ನು ಸಂತೃಪ್ತಗೊಳಿಸಲು ನಿರತವಾಗಿದ್ದೇವೆ' ಎಂದರು.

'ಅಂದಿನ ಸರ್ಕಾರಗಳು ಒಂದೇ ಕುಟುಂಬವನ್ನು ದೇಶದ ಮೊದಲ ಕುಟುಂಬವೆಂದು ಪರಿಗಣಿಸಿವೆ. ಆದರೆ, ಬಡ ಮತ್ತು ಮಧ್ಯಮ ವರ್ಗವನ್ನು ಕಡೆಗಣಿಸಿವೆ. ರೈಲ್ವೆಯು ಇದಕ್ಕೆ ಜೀವಂತ ಉದಾಹರಣೆಯಾಗಿದೆ' ಎಂದೂ ಅವರು ಹೇಳಿದರು.

ಎಕ್ಸ್‌ಪ್ರೆಸ್ ವೇ: ಟೋಲ್ ಹೆಚ್ಚಳ ರದ್ದು

ಒಂದನೇ ಪುಟದಿಂದ...

ಶನಿವಾರ ಬೆಳಿಗ್ಗೆ 10 ಗಂಟೆವರೆಗೆ ಹೊಸ ದರವನ್ನೇ ವಸೂಲಿ ಮಾಡಲಾಗುತ್ತಿತ್ತು. ನಂತರದಲ್ಲಿ ಮಾಧ್ಯಮಗಳು ಸ್ಥಳಕ್ಕೆ ಬಂದ ಬಳಿಕ ಸಿಬ್ಬಂದಿ ಟೋಲ್‌ನಲ್ಲಿ ಹಾಕಿದ್ದ ಹೊಸ ದರಪಟ್ಟಿ ಕಿತ್ತು ಹಾಕಿ ಹಳೇ ದರವನ್ನೇ ಸಂಗ್ರಹ ಮಾಡಲು ಆರಂಭಿಸಿದರು.

ಜನಾಭಿಪ್ರಾಯಕ್ಕೆ ಮಣಿದು ದರ ಪರಿಷ್ಕರಣೆ ಆದೇಶ ಹಿಂಪಡೆದಿರುವುದಾಗಿ ಹೆದ್ದಾರಿ ಪ್ರಾಧಿಕಾರ ತಿಳಿಸಿದೆ. ಟೋಲ್ ಸಂಗ್ರಹ ಆರಂಭಿಸಿ ಎರಡು ವಾರದ ಅಂತರದಲ್ಲೇ ಟೋಲ್ ದರ ಏರಿಸಿದ್ದಕ್ಕೆ ಸಾರ್ವಜನಿಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದರು.

ಪ್ರಧಾನಿ ಮೋದಿ ಮಾರ್ಚ್ 12ರಂದು ಹೆದ್ದಾರಿ ಉದ್ಘಾಟಿಸಿದ್ದರು. 14ರಿಂದ ಬೆಂಗಳೂರು ದಕ್ಷಿಣ ತಾಲ್ಲೂಕಿನ ಕಣಮಿಣಕಿ, ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿ ಟೋಲ್ ಪ್ಲಾಜಾಗಳಲ್ಲಿ ಟೋಲ್ ಸಂಗ್ರಹ ಆರಂಭಗೊಂಡಿತ್ತು.


ಜಾನುವಾರು ಸಾಗಿಸುತ್ತಿದ್ದ ವ್ಯಕ್ತಿ ಅನುಮಾನಾಸ್ಪದ ಸಾವು


ಒಂದನೇ ಪುಟದಿಂದ...


ಈ ಸಂದರ್ಭ ವಾಹನದಿಂದ ಇಳಿದು ಇರ್ಗೀಷ್ ಪಾಷ ಅವರು ಓಡಿಹೋಗಿದ್ದರು. ಘಟನೆ ನಡೆದ ಸ್ಥಳದಿಂದ ಸ್ವಲ್ಪ ದೂರದಲ್ಲಿಯೇ ಇರ್ಗೀಷ್ ಶವ ಪತ್ತೆಯಾಗಿದೆ.

'ಇರ್ಗೀಷ್ ಅವರನ್ನು ಪುನೀತ್ ಕೆರೆಹಳ್ಳಿ ಹಾಗೂ ಮತ್ತಿತರರೇ ಹಲ್ಲೆ ನಡೆಸಿ, ಕೊಲೆ ಮಾಡಿದ್ದಾರೆ. ಅವರನ್ನು ಬಂಧಿಸಬೇಕು' ಎಂದು ಆರೋಪಿಸಿ ಅವರ ಕುಟುಂಬಸ್ಥರು ಶನಿವಾರ ಸಾತನೂರು ಪೊಲೀಸ್ ಠಾಣೆ ಮುಂದೆ ಪ್ರತಿಭಟನೆ ನಡೆಸಿದರು.

'ಇರ್ಗೀಷ್ ಸಾವಿಗೆ ನಿಖರ ಕಾರಣ ಏನೆಂಬುದು ಮರಣೋತ್ತರ ಪರೀಕ್ಷೆಯ ನಂತರವಷ್ಟೇ ತಿಳಿಯಲಿದೆ. ಅದನ್ನು ಆಧರಿಸಿ ಕ್ರಮ ಕೈಗೊಳ್ಳಲಾಗುವುದು' ಎಂದು ಪೊಲೀಸರು ತಿಳಿಸಿದ್ದಾರೆ. ಸಾತನೂರು ಠಾಣೆಯಲ್ಲಿ ದೂರು ದಾಖಲಾಗಿದೆ.







ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹445
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹450

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1680 (1680)
ಸೋಯಾ (ರಿಫೈನ್ಡ್)	₹1060 (1050)
ಸೂರ್ಯಕಾಂತಿ (ರಿಫೈನ್ಡ್)	₹1075 (1080)
ಪಾಮೋಲಿನ್	₹970 (955)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹146.50
ಆರ್‌ಎಸ್‌ಎಸ್-5	₹139.50
ಗುಡ್ ಲಾಟ್	₹131.50

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ



(50 ಕೆಜಿಗೆ)

ಎಪಿ	₹14300
ಎಸಿ	₹7560
ಆರ್‌ಪಿ	₹10250
ಆರ್‌ಸಿ	₹5275

2022–23ನೇ ಹಣಕಾಸು ವರ್ಷದಲ್ಲಿ ಶೇ 22ರಷ್ಟು ಹೆಚ್ಚಳ

ಜಿಎಸ್‌ಟಿ: ₹1.60 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ ಮಾರ್ಚ್‌ನಲ್ಲಿ ₹1,60,122 ಕೋಟಿ ವರಮಾನ ಸಂಗ್ರಹ ಆಗಿದೆ. ಜಿಎಸ್‌ಟಿ ವ್ಯವಸ್ಥೆಯು ಜಾರಿಗೆ ಬಂದಾಗಿನಿಂದ ಈವರೆಗಿನ ಅವಧಿಯಲ್ಲಿ ಎರಡನೇ ಅತ್ಯಧಿಕ ಸಂಗ್ರಹ ಇದಾಗಿದೆ. 2022ರ ಏಪ್ರಿಲ್‌ನಲ್ಲಿ 1.67 ಲಕ್ಷ ಕೋಟಿ ವರಮಾನ ಸಂಗ್ರಹ ಆಗಿತ್ತು.

ಕಳೆದವರ್ಷದಮಾರ್ಚ್‌ಗೆಹೋಲಿಸಿದರೆ ಈ ಮಾರ್ಚ್‌ನಲ್ಲಿ ವರಮಾನ ಶೇ 13ರಷ್ಟು ಹೆಚ್ಚಾಗಿದೆ. ಈ ಮಾರ್ಚ್‌ನಲ್ಲಿ ಸಂಗ್ರಹ ಆಗಿರುವ ಒಟ್ಟು ಮೊತ್ತದಲ್ಲಿ ಸಿಜಿಎಸ್‌ಟಿ ₹29,546 ಕೋಟಿ, ಎಸ್‌ಜಿಎಸ್‌ಟಿ ₹37,314 ಕೋಟಿ, ಐಜಿಎಸ್‌ಟಿ ₹82,907 ಕೋಟಿ ಮತ್ತು ಸೆಸ್ ₹10,355 ಕೋಟಿ ಸೇರಿದೆ ಎಂದು ಹಣಕಾಸು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ತೆರಿಗೆ ಸಂಗ್ರಹದ ವಿವರ (ಕೋಟಿಗಳಲ್ಲಿ)

ಜನವರಿ	1,57,554
ಫೆಬ್ರುವರಿ	1,49,577
ಮಾರ್ಚ್	1,60,122

2022–23ರಲ್ಲಿ ವರಮಾನ ಸಂಗ್ರಹ ಶೇ 22ರಷ್ಟು ಹೆಚ್ಚಾಗಿದ್ದು, 18.10 ಲಕ್ಷ ಕೋಟಿ ಗೆ ತಲುಪಿದೆ. ಮಾರ್ಚ್‌ನಲ್ಲಿ ಸರಕುಗಳ ಆಮದಿನಿಂದ ಬರುವ ವರಮಾನ ಶೇ 8ರಷ್ಟು ಹೆಚ್ಚಾಗಿದೆ. ದೇಶಿ ವಹಿವಾಟಿನ (ಸೇವೆಗಳ ಆಮದು ಸೇರಿ) ವರಮಾನ ಶೇ 14ರಷ್ಟು ಹೆಚ್ಚಾಗಿದೆ.

ಜಿಎಸ್‌ಟಿ ರಿಟರ್ನ್ಸ್ ಸಲ್ಲಿಕೆ ಮಾರ್ಚ್‌ನಲ್ಲಿ ಶೇ 91ರಷ್ಟನ್ನು ಮೀರಿದ್ದು, ಇದುವರೆಗಿನ ಗರಿಷ್ಠ ಮಟ್ಟ ತಲುಪಿದೆ. ಜಿಎಸ್‌ಟಿಆರ್-1 ಸಲ್ಲಿಕೆಯು ಶೇ 93.2 ಮತ್ತು ಜಿಎಸ್‌ಟಿ-ಆರ್-3ಬಿ ಸಲ್ಲಿಕೆಯು ಶೇ 91.4ರಷ್ಟು ಆಗಿದೆ. ಕಳೇದ ವರ್ಷದ ಮಾರ್ಚ್‌ನಲ್ಲಿ ಜಿಎಸ್‌ಟಿಆರ್-1 ಸಲ್ಲಿಕೆಯು ಶೇ 83.1 ಮತ್ತು ಜಿಎಸ್‌ಟಿಆರ್-3ಬಿ ಸಲ್ಲಿಕೆಯು ಶೇ 84.7ರಷ್ಟು ಇತ್ತು.

ಭಾರತದ ಆರ್ಥಿಕತೆಯು ಬೆಳವಣಿಗೆಯ ಹಾದಿಯಲ್ಲಿದೆ ಎನ್ನುವುದನ್ನು ತಿಂಗಳ ಮತ್ತು ವಾರ್ಷಿಕ ಜಿಎಸ್‌ಟಿ ಸಂಗ್ರಹವು ಸೂಚಿಸುತ್ತಿದೆ ಎಂದು ಕೆಪಿಎಂಜಿ ಇಂಡಿಯಾದ ಪರೋಕ್ಷ ತೆರಿಗೆ ಪಾಲುದಾರ ಅಭಿಷೇಕ್ ಜೈನ್ ತಿಳಿಸಿದ್ದಾರೆ.

₹10,360 ಕೋಟಿ ವರಮಾನ ಸಂಗ್ರಹ

ಒಂದನೇ ಪುಟದಿಂದ...

2022–23ನೇ ಆರ್ಥಿಕ ವರ್ಷದಲ್ಲಿ ರಾಜ್ಯದಲ್ಲಿ ₹1,18,320 ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಜಿಎಸ್‌ಟಿ ಸಂಗ್ರಹದಲ್ಲಿ ರಾಜ್ಯವು ಶೇಕಡ 30ರಷ್ಟು ಪ್ರಗತಿ ಸಾಧಿಸಿದೆ. ಅಕ್ಟೋಬರ್ ತಿಂಗಳಿನಿಂದ ಪ್ರತಿ ತಿಂಗಳು ಜಿಎಸ್‌ಟಿ ಸಂಗ್ರಹ ಪ್ರಮಾಣ ₹10 ಸಾವಿರ ಕೋಟಿ ದಾಟಿದೆ.

ತೆರಿಗೆ ಲೆಕ್ಕಾಚಾರ ಬದಲಾವಣೆ: ಮಾರುಕಟ್ಟೆ ತಜ್ಞರ ಅಭಿಪ್ರಾಯ

ಡೆಟ್ ಫಂಡ್ ಆಕರ್ಷಣೆ ತಗ್ಗದು

● ವಿಶ್ವನಾಥ ಎಸ್.

ಬೆಂಗಳೂರು: ಡೆಟ್ ಮ್ಯೂಚುವಲ್ ಫಂಡ್‌ಗಳಿಂದ ಸಿಗುವ ಲಾಭದ ತೆರಿಗೆ ಲೆಕ್ಕಾಚಾರದಲ್ಲಿ ಬದಲಾವಣೆ ತರುವ ಕೇಂದ್ರದ ನಿರ್ಧಾರವು, ಡೆಟ್ ಫಂಡ್‌ಗಳ ಬಗ್ಗೆ ಹೂಡಿಕೆದಾರರು ಹೊಂದಿರುವ ಆಕರ್ಷಣೆಯನ್ನು ತಗ್ಗಿಸುವುದಿಲ್ಲ ಎಂಬ ಅಭಿಪ್ರಾಯವನ್ನು ಕೆಲವು ತಜ್ಞರು ವ್ಯಕ್ತಪಡಿಸಿದ್ದಾರೆ.

‘ಇಂಡೆಕ್ಸೇಷನ್ ಪ್ರಯೋಜನ ಕೈಬಿಟ್ಟಮಾತ್ರಕ್ಕೆ ಡೆಟ್ ಫಂಡ್‌ಗಳಲ್ಲಿ ಬಂಡವಾಳ ಒಳಹರಿವಿಗೆ ಹೆಚ್ಚಿನ ಪರಿಣಾಮ ಉಂಟಾಗುವುದಿಲ್ಲ. ಡೆಟ್ ಫಂಡ್ ಮತ್ತು ನಿಶ್ಚಿತ ಠೇವಣಿ (ಎಫ್.ಡಿ.) ಮಧ್ಯೆ ತೆರಿಗೆ ವಿಚಾರದಲ್ಲಿ ಸಮಾನತೆ ಮೂಡಬಹುದು. ಆದರೆ, ಇದೊಂದೇ ಕಾರಣಕ್ಕೆ ಎಫ್.ಡಿ.ಯು ಡೆಟ್ ಫಂಡ್ ಅನ್ನು ಮೀರಿ ಬೆಳೆಯಲಾರದು’ ಎಂದು ಎಲ್‌ಐಸಿ ಮ್ಯೂಚುವಲ್ ಫಂಡ್ ಅಸೆಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನ ನಿಶ್ಚಿತ ಆದಾಯ ವಿಭಾಗದ ನಿಧಿ ನಿರ್ವಾಹಕ ಸಂಜಯ್ ಪವಾರ್ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದ್ದಾರೆ.

> **ಬಾಂಡ್ ಗಳಿಕೆ ಶೇ 7.35-7.40ರ ಮಟ್ಟದಲ್ಲಿದೆ. ಇದರಿಂದ ಸರ್ಕಾರಿ ಸಾಲಪತ್ರ, ಬಿಪಿಎಸ್‌ಯು, ಡೆಟ್ ಇಟಿಎಫ್‌ಗಳಲ್ಲಿ ಹೂಡಿಕೆಗೆ ಅವಕಾಶ ಲಭ್ಯವಾಗಲಿದೆ**
> **ಸಂಜಯ್ ಪವಾರ್,**
> ಎಲ್‌ಐಸಿ ಮ್ಯೂಚುವಲ್ ಫಂಡ್ ಅಸೆಟ್ ಮ್ಯಾನೇಜ್‌ಮೆಂಟ್ ಲಿಮಿಟೆಡ್‌ನ ನಿಶ್ಚಿತ ಆದಾಯ ವಿಭಾಗದ ನಿಧಿ ನಿರ್ವಾಹಕ

‘ಏಕೆಂದರೆ, ಡೆಟ್ ಫಂಡ್ ಉತ್ಪನ್ನಗಳು ಸರಳವಾಗಿವೆ, ಇಲ್ಲಿ ನಿತ್ಯವೂ ಮೌಲ್ಯ ನಿಗದಿ ಆಗುತ್ತಿರುತ್ತದೆ. ಹೀಗಾಗಿ ಡೆಟ್ ಫಂಡ್‌ಗಳು ಹೂಡಿಕೆದಾರರಿಗೆ ನೆಮ್ಮದಿ ನೀಡಲಿವೆ’ ಎಂದು ಪವಾರ್ ಹೇಳಿದ್ದಾರೆ.

‘ಬಹುತೇಕ ಡೆಟ್ ಫಂಡ್‌ಗಳಲ್ಲಿ ಎಕ್ಸಿಟ್ ಲೋಡ್ (ನಿಗದಿತ ಅವಧಿಗೆ ಮೊದಲು ನಗದೀಕರಿಸಿಕೊಂಡರೆ ವಿಧಿಸುವ ವೆಚ್ಚ) ಇರುವುದಿಲ್ಲ. ಇದಲ್ಲದೆ, ಇನ್ನೂ ಹಲವು ಕಾರಣಗಳಿಂದಾಗಿ ಡೆಟ್ ಫಂಡ್‌ಗಳಲ್ಲಿ



ಬಂಡವಾಳ ಒಳಹರಿವು ಕಡಿಮೆ ಆಗುವ ಸಾಧ್ಯತೆ ಇಲ್ಲ. ಸದ್ಯದ ಬಡ್ಡಿದರ ಹೆಚ್ಚಳದ ಪ್ರಮಾಣ ಗಮನಿಸಿದರೆ, ಬಡ್ಡಿ ಹೆಚ್ಚಳವು ಕೊನೆಯ ಹಂತ ತಲುಪಿರುವಂತೆ ಕಾಣುತ್ತಿದೆ. ಹೀಗಾಗಿ ಡೆಟ್ ಫಂಡ್‌ಗಳಲ್ಲಿ ಈಗ ಹೂಡಿಕೆ ಮಾಡುವುದರಿಂದ ಹೂಡಿಕೆಯ ಮೌಲ್ಯ ಇನ್ನಷ್ಟು ಹೆಚ್ಚಾಗಲು ಅವಕಾಶ ಇದೆ’ ಎಂದರು.

‘ಪ್ರತಿಕೂಲ ಪರಿಣಾಮ’: ‘ದೀರ್ಘಾವಧಿ ಬಂಡವಾಳ ವೃದ್ಧಿ ತೆರಿಗೆ ಪ್ರಯೋಜನಗಳು ಇಲ್ಲವಾಗುವುದರಿಂದ ಉದ್ಯಮದ ಮೇಲೆ ಪ್ರತಿಕೂಲ ಪರಿಣಾಮ ಆಗಲಿದೆ’ ಎನ್ನುವುದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಅವರ ಅಭಿಪ್ರಾಯ.

‘ಡೆಟ್ ಫಂಡ್‌ಗಳಿಗೆ ಅಲ್ಪಾವಧಿ ಬಂಡವಾಳ ವೃದ್ಧಿ ತೆರಿಗೆ ವಿಧಿಸುವ ಪರಿಣಾಮವಾಗಿ, ಬ್ಯಾಂಕ್‌ಗಳ ನಿಶ್ಚಿತ ಠೇವಣಿಯಿಂದ (ಎಫ್.ಡಿ) ಬರುವ ಗಳಿಕೆಗೆ ವಿಧಿಸುವ ತೆರಿಗೆಗೆ ಇದು ಸಮನಾಗಲಿದೆ. ಇದು ಡೆಟ್ ಮಾರುಕಟ್ಟೆಗೆ ದೊಡ್ಡ ಪೆಟ್ಟು ನೀಡಲಿದೆ’ ಎಂದು ಅವರು ಹೇಳಿದ್ದಾರೆ.

ಪರಿಣಾಮಗಳು

- ಬ್ಯಾಂಕ್ ಎಫ್.ಡಿ.ಗಳಲ್ಲಿ ಹೆಚ್ಚಿನ ಹೂಡಿಕೆ ಆಗುವ ಸಾಧ್ಯತೆ
- ಈಕ್ವಿಟಿಗಳಲ್ಲಿ ಶೇ 35ಕ್ಕಿಂತ ಹೆಚ್ಚಿನ ಹೂಡಿಕೆ ಇರುವ ಈಕ್ವಿಟಿ ಮ್ಯೂಚುವಲ್ ಫಂಡ್ ಮತ್ತು ಹೈಬ್ರಿಡ್ ಫಂಡ್‌ಗಳು ಹೆಚ್ಚಿನ ಹೂಡಿಕೆ ಆಕರ್ಷಿಸಲಿವೆ.
- ಚಿನ್ನದ ಬಾಂಡ್‌ಗಳಲ್ಲಿ ಬಂಡವಾಳ ಒಳಹರಿವು ಹೆಚ್ಚಾಗಲಿದೆ
- ಕೇಂದ್ರಕ್ಕೆ ತೆರಿಗೆ ವರಮಾನ ಹೆಚ್ಚುವ ನಿರೀಕ್ಷೆ

ನಿರುದ್ಯೋಗ 3 ತಿಂಗಳ ಗರಿಷ್ಠ

ಮುಂಬೈ (ಪಿಟಿಐ): ದೇಶದಲ್ಲಿ ನಿರುದ್ಯೋಗ ಪ್ರಮಾಣವು ಮಾರ್ಚ್‌ನಲ್ಲಿ ಮೂರು ತಿಂಗಳ ಗರಿಷ್ಠ ಮಟ್ಟವಾದ ಶೇ 7.8ಕ್ಕೆ ಏರಿಕೆ ಕಂಡಿದೆ ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ಹೇಳಿದೆ.

ನಿರುದ್ಯೋಗ ಪ್ರಮಾಣವು 2022ರ ಡಿಸೆಂಬರ್‌ನಲ್ಲಿ ಶೇ 8.30ಕ್ಕೆ ಏರಿಕೆ ಕಂಡಿತ್ತು. ಆ ಬಳಿಕ 2023ರ ಜನವರಿಯಲ್ಲಿ ಶೇ 7.14ಕ್ಕೆ ಇಳಿಕೆ ಕಂಡಿತು. ಆದರೆ, ಫೆಬ್ರುವರಿಯಲ್ಲಿ ಮತ್ತೆ ಶೇ 7.45ಕ್ಕೆ ಏರಿಕೆ ಕಂಡಿತು ಎಂದು ತಿಳಿಸಿದೆ.

ಮಾರ್ಚ್‌ನಲ್ಲಿ ನಗರ ಪ್ರದೇಶದಲ್ಲಿ ನಿರುದ್ಯೋಗ ಪ್ರಮಾಣ ಶೇ 8.4 ಮತ್ತು ಗ್ರಾಮೀಣ ಭಾಗದಲ್ಲಿ ಶೇ 7.5ರಷ್ಟು ಆಗಿದೆ.

ದೇಶದ ಕಾರ್ಮಿಕ ಮಾರುಕಟ್ಟೆಯು ಮಾರ್ಚ್‌ನಲ್ಲಿ ಕುಸಿತ ಕಂಡಿದೆ. ಕಾರ್ಮಿಕರ ಭಾಗವಹಿಸುವಿಕೆ ಪ್ರಮಾಣ ಶೇ 39.9 ರಿಂದ ಶೇ 39.8ಕ್ಕೆ ಅಲ್ಪ ಇಳಿಕೆ ಕಂಡಿದೆ ಎಂದು ಸಿಎಂಐಇ ವ್ಯವಸ್ಥಾಪಕ ನಿರ್ದೇಶಕ ಮಹೇಶ್ ವ್ಯಾಸ್ ತಿಳಿಸಿದ್ದಾರೆ.

ಉದ್ಯೋಗ ಪ್ರಮಾಣವು ಫೆಬ್ರುವರಿಯಲ್ಲಿ ಶೇ 36.9ರಷ್ಟು ಇದ್ದಿದ್ದು ಮಾರ್ಚ್‌ನಲ್ಲಿ ಶೇ 36.7ಕ್ಕೆ ಇಳಿಕೆ ಆಗಿದೆ ಎಂದು ಅವರು ಹೇಳಿದ್ದಾರೆ.

ಕಾರವಾರ ವಾಣಿಜ್ಯ ಬಂದರಿಗೆ ದಾಖಲೆಯ ಆದಾಯ

ಪ್ರಜಾವಾಣಿ ವಾರ್ತೆ

ಕಾರವಾರ: ಮ್ಯಾಂಗನೀಸ್ ಅದಿರು ರಫ್ತಿನ ಕಾಲದಲ್ಲಿ ಆದಾಯದ ಉತ್ತುಂಗದಲ್ಲಿದ್ದ ಇಲ್ಲಿನ ವಾಣಿಜ್ಯ ಬಂದರು ಅದಿರು ವ್ಯವಹಾರ ಸ್ಥಗಿತದ ಬಳಿಕ ಕಳೆಗುಂದಿತ್ತು. ಆದರೆ ದಶಕಗಳ ಬಳಿಕ ಮತ್ತೆ ದಾಖಲೆಯ ಆದಾಯ ಸಂಗ್ರಹಿಸಿದೆ. 2022–23ನೇ ಸಾಲಿನಲ್ಲಿ ₹21 ಕೋಟಿ ನೇರ ಆದಾಯ ಸಂಗ್ರಹಿಸಿದೆ.

ಈ ಬಂದರಿನಲ್ಲಿ ದಶಕಗಳ ಹಿಂದೆ ಡೀಸೆಲ್, ತಾಳೆ ಎಣ್ಣೆ, ಗ್ರಾನೈಟ್ ಸೇರಿ ಹತ್ತಕ್ಕೂ ಹೆಚ್ಚು ಉತ್ಪನ್ನಗಳ ಆಮದು ಮತ್ತು ರಫ್ತು ವ್ಯವಹಾರ ನಡೆಯುತ್ತಿತ್ತು. ಸರಾಸರಿ ₹5 ಕೋಟಿಯಿಂದ ₹10 ಕೋಟಿ ನೇರ ಆದಾಯ ಗಳಿಕೆ ಮಾತ್ರ ಇತ್ತು.

2022–23ನೇ ಸಾಲಿನಲ್ಲಿ ಡೀಸೆಲ್, ತಾಳೆ ಎಣ್ಣೆ, ರಾಕ್ ಫಾಸ್ಫೇಟ್, ಇಂಡಸ್ಟ್ರಿಯಲ್ ಸಾಲ್ಟ್, ಬಿಟುಮಿನ್‌ಗಳ (ಡಾಂಬರು) ಆಮದು ಮತ್ತು ಮೊಲಾಸಿಸ್, ಕಾಸ್ಟಿಕ್ ಸೋಡಾ ಉತ್ಪನ್ನಗಳ ರಫ್ತು ಮಾಡಲಾಗಿದೆ. ಒಟ್ಟು 4,47,026 ಟನ್ ಉತ್ಪನ್ನಗಳ ಆಮದು, 4,66,293 ಟನ್ ರಫ್ತು ಆಗಿದೆ.

‘ವಾಣಿಜ್ಯ ಬಂದರು ಕಳೆದ ಬಾರಿಗಿಂತ ಶೇ 24 ರಷ್ಟು ಹೆಚ್ಚು ಆದಾಯ ಸಂಗ್ರಹಿಸಿದೆ. ಬಿಟುಮಿನ್ಮತ್ತು ಕೈಗಾರಿಕಾ ಉಪ್ಪು ಆಮದು ಪ್ರಮಾಣದಲ್ಲಿ ಭಾರಿ ಹೆಚ್ಚಳ ಆಗಿತ್ತು. ಮೊಲಾಸಿಸ್ ರಫ್ತಿನ ಪ್ರಮಾಣ ಕಳೆದ ಬಾರಿಗಿಂತ 1 ಲಕ್ಷ ಟನ್ ಹೆಚ್ಚಳವಾಗಿದೆ. ಅಲ್ಲದೆ ಹಡಗುಗಳ ನಿರಂತರ ಆಗಮನದಿಂದ ವರ್ಷದ ಬಹುತೇಕ ಎಲ್ಲ ತಿಂಗಳಿನಲ್ಲೂ ವಾಣಿಜ್ಯ ಚಟುವಟಿಕೆ ನಡೆದಿತ್ತು’ ಎನ್ನುತ್ತಾರೆ ಬಂದರು ಅಧೀಕ್ಷಕ ಸುರೇಶ್ ಶೆಟ್ಟಿ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಬಂಟ್ವಾಳ		ಚನ್ನಗಿರಿ			
ಕೋಕ	12500-25000	ರಾಶಿ	43179-46100	ಬಿಳಿಗೋಟು	24299-31599
ಹೊಸತು	22500-40000	ಶಿರಸಿ		ಚಾಲಿ	33019-35652
ಹಳತು	48000-54500	ಬೆಟ್ಟೆ	32299-41266	ಕೆಂಪುಗೋಟು	26219-33699
				ರಾಶಿ	41899-44289

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

ದಪ್ಪ	₹800-1300
ಮಧ್ಯಮ	₹500-800
ಸಣ್ಣ	₹300-500

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ತಿಪಟೂರು	₹9000-10000
ತುರುವೇಕೆರೆ	₹9400-9400

ಮುಂಬೈ ಧಾರಣೆ

ಶೇಂಗಾ

1-4-2023

ಜಾವಾ 70/80(ಹೊಸ)	11750-11800
ಜಾವಾ 80/90(ಹೊಸ)	11150-11200
ದಪ್ಪ ಮಧ್ಯಪ್ರದೇಶ(ಹೊಸ)	11100-11150
ದಪ್ಪ ಗುಜರಾತ್(ಹೊಸ)	12000-12050

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1690 (1690)
ಒಂದು ವಾರದ ಡೆಲಿವರಿ	1685 (1685)
ಸೋಯಾ ಕಚ್ಚಾ	960 (950)
ಪಾಮ್ ವಾರದ ಡೆಲಿವರಿ	968 (953)
ಸೂರ್ಯಕಾಂತಿ ಎಣ್ಣೆ ಕಚ್ಚಾ	950 (940)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59,350 (59,550)
ಬೆಳ್ಳಿ ಕೆ.ಜಿ 71,700 (71,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕಲ್ಲಿದ್ದಲು ಉತ್ಪಾದನೆ ದಾಖಲೆ

ನವದೆಹಲಿ (ಪಿಟಿಐ): 2022–23ನೇ ಹಣಕಾಸು ವರ್ಷದಲ್ಲಿ ದೇಶದಲ್ಲಿ 89.2 ಕೋಟಿ ಟನ್‌ಗಳಷ್ಟು ದಾಖಲೆ ಪ್ರಮಾಣದಲ್ಲಿ ಕಲ್ಲಿದ್ದಲು ಉತ್ಪಾದನೆ ಆಗಿದೆ ಎಂದು ಕೇಂದ್ರ ಕಲ್ಲಿದ್ದಲು ಸಚಿವ ಪ್ರಲ್ಹಾದ ಜೋಶಿ ಅವರು ಶನಿವಾರ ತಿಳಿಸಿದ್ದಾರೆ.

2021–22ನೇ ಹಣಕಾಸು ವರ್ಷದಲ್ಲಿ 77.8 ಕೋಟಿ ಟನ್ ಕಲ್ಲಿದ್ದಲು ಉತ್ಪಾದನೆ ಆಗಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಉತ್ಪಾದನೆ ಶೇ 14.65ರಷ್ಟು ಹೆಚ್ಚಾಗಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಲ್ಲಿದ್ದಲು ವಲಯಕ್ಕೆ ಇದೊಂದು ಐತಿಹಾಸಿಕ ಕ್ಷಣ. ಈ ದಾಖಲೆಯ ಪ್ರಮಾಣದ ಬೆಳವಣಿಗೆಗೆ ಕಾರಣರಾದ ಎಲ್ಲರಿಗೂ ಅಭಿನಂದಿಸುತ್ತೇನೆ. ಎಂದು ಹೇಳಿದ್ದಾರೆ. ದೇಶವು ಸಾಕಷ್ಟು ಕಲ್ಲಿದ್ದಲು ಹೊಂದಿದ್ದು, 2024–25ರಲ್ಲಿ ರಫ್ತು ಮಾಡಲು ಆರಂಭಿಸಲಿದೆ ಎಂದು ಈಚೆಗಷ್ಟೇ ಅವರು ಹೇಳಿದ್ದರು.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹61,350
ಒಡವೆ ಚಿನ್ನ 1ಗ್ರಾಂ	₹5,645
ಬೆಳ್ಳಿ ಕೆ.ಜಿಗೆ	₹73,700

ವಾಣಿಜ್ಯ ಬಳಕೆ ಎಲ್‌ಪಿಜಿ ₹ 83 ಇಳಿಕೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಶನಿವಾರ ಇಳಿಕೆ ಮಾಡಿವೆ.

ಬೆಂಗಳೂರಿನಲ್ಲಿ ಪ್ರತಿ ಸಿಲಿಂಡರ್‌ಗೆ ₹ 83ರಷ್ಟು ಕಡಿಮೆ ಆಗಿದೆ.

‘19 ಕೆ.ಜಿಯ ಸಿಲಿಂಡರ್ ಬೆಲೆಯು ₹2,190 ಇದ್ದಿದ್ದು ₹2,107ಕ್ಕೆ ಇಳಿಕೆ ಆಗಿದೆ’ ಎಂದು ಹೋಟೆಲ್ ಉದ್ಯಮದ ಮೂಲಗಳು ತಿಳಿಸಿವೆ.

‘ಅದಾನಿ ಸಮೂಹದ ವಿದೇಶಿ ವಹಿವಾಟು: ಸೆಬಿ ತನಿಖೆ’

ಮುಂಬೈ (ರಾಯಿಟರ್ಸ್): ಅದಾನಿ ಸಮೂಹವು ವಿದೇಶದ ಮೂರು ಕಂಪನಿಗಳೊಂದಿಗೆ ವಹಿವಾಟು ನಡೆಸುತ್ತಿದ್ದು, ನಿಯಮಗಳನ್ನು ಉಲ್ಲಂಘಿಸಿರುವ ಸಾಧ್ಯತೆಯ ಕುರಿತು ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ತನಿಖೆ ನಡೆಸುತ್ತಿದೆ. ಗೌತಮ್ ಅದಾನಿ ಅವರ ಸಹೋದರ ವಿನೋದ್ ಅವರು ಈ ಕಂಪನಿಗಳೊಂದಿಗೆ ನಂಟು ಹೊಂದಿದ್ದಾರೆ ಎಂದು ಮೂಲಗಳು ಹೇಳಿವೆ.

ವಿನೋದ್ ಅದಾನಿ ಅವರು ಮಾರಿಷಸ್ ಮೂಲದ ಕ್ರುನಾಲ್ ಟ್ರೇಡ್ ಆ್ಯಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್, ಗಾರ್ಡೇನಿಯಾ ಟ್ರೇಡ್ ಆ್ಯಂಡ್ ಇನ್‌ವೆಸ್ಟ್‌ಮೆಂಟ್ಸ್ ಲಿಮಿಟೆಡ್ ಹಾಗೂ ದುಬೈನ ಎಲೆಕ್ಟ್ರೋಜೆನ್ ಇನ್ಫ್ರಾ ಕಂಪನಿಗಳೊಂದಿಗೆ ನಂಟು ಹೊಂದಿದ್ದಾರೆ. ಈಮೂರು ಕಂಪನಿಗಳು ಅದಾನಿ ಸಮೂಹದ, ಷೇರುಪೇಟೆಯಲ್ಲಿ ನೋಂದಣಿ ಆಗದೇ ಇರುವ ಕೆಲವು ಕಂಪನಿಗಳೊಂದಿಗೆ ಕಾನೂನುಬಾಹಿರವಾಗಿ ಕೆಲವು ಹೂಡಿಕೆ ಒಪ್ಪಂದಗಳನ್ನು ಮಾಡಿಕೊಂಡಿದೆ ಎಂದು ಮೂಲಗಳು ತಿಳಿಸಿವೆ.

ಈ ಕಂಪನಿಗಳು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ತನಿಖೆ ನಡೆಸುತ್ತಿರುವ ಬಗ್ಗೆ ಸೆಬಿ ಸಹ ಪ್ರತಿಕ್ರಿಯೆ ನೀಡಿಲ್ಲ.

ವಿನೋದ್ ಅದಾನಿ ಅವರು ಪ್ರತಿಕ್ರಿಯೆಗೆ ಲಭ್ಯವಾಗಿಲ್ಲ. ವಿನೋದ್ ಅವರು ದುಬೈನಲ್ಲಿ ಹೊಂದಿರುವ ಅದಾನಿ ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಡಿಎಂಸಿಸಿ ಕಡೆಯಿಂದಲೂ ಪ್ರತಿಕ್ರಿಯೆ ದೊರೆತಿಲ್ಲ.

‘ಅದಾನಿ ಸಮೂಹ: ಕಾರೈಕಲ್ ಬಂದರು ಸ್ವಾಧೀನ ಪೂರ್ಣ’

ನವದೆಹಲಿ (ಪಿಟಿಐ): ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಅನುಮೋದನೆ ದೊರೆತ ಹಿನ್ನೆಲೆಯಲ್ಲಿ ಪುದುಚೇರಿಯ ಕಾರೈಕಲ್ ಬಂದರು ಸ್ವಾಧೀನಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗಿದೆ ಎಂದು ಅದಾನಿ ಬಂದರುಗಳು ಮತ್ತು ವಿಶೇಷ ಆರ್ಥಿಕ ವಲಯ ನಿಯಮಿತ (ಎಪಿಎಸ್‌ಇಝಡ್) ಶನಿವಾರ ತಿಳಿಸಿದೆ.

ಒಟ್ಟು ₹1,485 ಕೋಟಿ ಮೊತ್ತಕ್ಕೆ ಈ ಬಂದರನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಬಂದರು ಒಟ್ಟು ಐದು ದಕ್ಕೆಗಳನ್ನು ಒಳಗೊಂಡಿದ್ದು, ಮೂರು ರೈಲು ಮಾರ್ಗಗಳ ಸಂಪರ್ಕ ಹೊಂದಿದೆ. ವಾರ್ಷಿಕ 21.5 ಕೋಟಿ ಟನ್ ಸರಕು ನಿರ್ವಹಣಾ ಸಾಮರ್ಥ್ಯ ಹೊಂದಿದೆ ಎಂದು ಎಪಿಎಸ್‌ಇಝಡ್ ತಿಳಿಸಿದೆ.

‘ಭಾರತ–ಮಲೇಷ್ಯಾ ಮಧ್ಯೆ ರೂಪಾಯಿಯಲ್ಲಿ ವಹಿವಾಟು’

ನವದೆಹಲಿ (ಪಿಟಿಐ): ಭಾರತ ಮತ್ತು ಮಲೇಷ್ಯಾ ದೇಶಗಳು ಇತರೆ ಕರೆನ್ಸಿಗಳ ಜೊತೆಗೆ ಭಾರತದ ರೂಪಾಯಿ ಮೂಲಕವೂ ವ್ಯಾಪಾರ–ವಹಿವಾಟು ನಡೆಸಬಹುದು ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಶನಿವಾರ ತಿಳಿಸಿದೆ.

ಪೋಪ್ ಫ್ರಾನ್ಸಿಸ್ ಆಸ್ಪತ್ರೆಯಿಂದ ಡಿಸ್ಚಾರ್ಜ್: ವ್ಯಾಟಿಕನ್‌ಗೆ ಪ್ರಯಾಣ

ರೋಮ್ (ಎಎಫ್‌ಪಿ): ಉಸಿರಾಟದ ಸಮಸ್ಯೆಯಿಂದ (ಬ್ರಾಂಕೈಟಿಸ್) ಬಳಲುತ್ತಿದ್ದ ಪೋಪ್ ಫ್ರಾನ್ಸಿಸ್ ಅವರು ಚಿಕಿತ್ಸೆ ಪಡೆದು ಶನಿವಾರ ವ್ಯಾಟಿಕನ್‌ಗೆ ತೆರಳಿದರು.

ಆಸ್ಪತ್ರೆಯಿಂದ ಹೊರಗೆ ಬರುತ್ತಿದ್ದಂತೆಯೇ ‘ನಾನು ಇನ್ನೂ ಜೀವಂತವಾಗಿದ್ದೇನೆ’ ಎಂದು 84 ವರ್ಷದ ಪಾದ್ರಿ ತಮ್ಮ ಹಿತೈಶಿಗಳಿಗೆ ತಿಳಿಸಿದ್ದಾರೆ.

ಉಸಿರಾಟ ಸಮಸ್ಯೆಯಿಂದ ಬಳಲುತ್ತಿದ್ದ ಫ್ರಾನ್ಸಿಸ್ ಅವರನ್ನು ಬುಧವಾರದಂದು ರೋಮ್‌ನ ಗಿಮೆಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮೂರು ದಿನದಿಂದ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು.

ಕ್ರಿಶ್ಚಿಯನ್ನರ ಪವಿತ್ರ ವಾರ (ಏ. 2ರಿಂದ 8ರವರೆಗೆ) ಹಾಗೂ ಈಸ್ಟರ್ ಹಬ್ಬದ (ಏ.9) ಆಚರಣೆಗೆ ಸಿದ್ಧತೆ ನಡೆಸಲು, ಫ್ರಾನ್ಸಿಸ್ ಅವರು ಆಸ್ಪತ್ರೆಯಿಂದ ಡಿಸ್‌ಚಾರ್ಜ್ ಆದ ತಕ್ಷಣವೇ ವ್ಯಾಟಿಕನ್‌ಗೆ ತೆರಳಿದ್ದಾರೆ.



ಪೋಪ್ ಫ್ರಾನ್ಸಿಸ್ ಅವರು ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಬಳಿಕ ತಮ್ಮ ಹಿತೈಶಿಗಳೊಂದಿಗೆ ಮಾತುಕತೆ ನಡೆಸಿದರು –ಎಎಫ್‌ಪಿ ಚಿತ್ರ

ಮುಕುಂದ್–ವಿಷ್ಣುಗೆ ‘ಮೈಸೂರು ಓಪನ್’ ಗರಿ

ಐಟಿಎಫ್ ಟೆನಿಸ್ ಟೂರ್ನಿ: ಸಿಂಗಲ್ಸ್ ವಿಭಾಗದ ಫೈನಲ್ ಪಂದ್ಯ ಇಂದು

● ಮೋಹನ ಕುಮಾರ್ ಸಿ.

ಮೈಸೂರು: ಸೊಗಸಿನ ಆಟವಾಡಿದ ಭಾರತದ ಮುಕುಂದ್ ಶಶಿಕುಮಾರ್-ವಿಷ್ಣುವರ್ಧನ್ ಅವರು ಐಟಿಎಫ್-ಮೈಸೂರು ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದರು.

ಚಾಮರಾಜಪುರಂನ ಮೈಸೂರು ಟೆನಿಸ್ ಕ್ಲಬ್ (ಎಂಟಿಸಿ)ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಅನುಭವಿ ಜೋಡಿ ಮುಕುಂದ್-ವಿಷ್ಣು ಅವರು ಭಾರತದವರೇ ಆದ ಋತ್ವಿಕ್ ಚೌಧರಿ-ನಿಕಿ ಪೂಣಚ್ಚ ಜೋಡಿಯನ್ನು 6-3, 6-4ರಿಂದ ಮಣಿಸಿದರು.

ಸಿಂಗಲ್ಸ್ ಕ್ವಾರ್ಟರ್ ಫೈನಲ್‌ನಲ್ಲಿ ನಿರಾಸೆ ಅನುಭವಿಸಿದ್ದ ಮುಕುಂದ್ ಅವರಿಗೆ ವಿಷ್ಣು, ಡಬಲ್ಸ್‌ನಲ್ಲಿ ಪ್ರಶಸ್ತಿ ಗೆಲ್ಲಲು ಜೊತೆಯಾದರು. ಮೊದಲ ಸೆಟ್ ಸುಲಭವಾಗಿ ಗೆದ್ದ ಜೋಡಿಗೆ ಎರಡನೇ ಸೆಟ್‌ನಲ್ಲಿ ಋತ್ವಿಕ್-ನಿಕಿ ಉತ್ತಮ ಪೈಪೋಟಿ ನೀಡಿದರು. 1 ಗಂಟೆ 10 ನಿಮಿಷಗಳಲ್ಲಿ ಪಂದ್ಯ ಗೆದ್ದು ಟ್ರೋಫಿಗೆ ಮುತ್ತಿಕ್ಕಿದರು.



ಮೈಸೂರಿನಲ್ಲಿ ಎಂಟಿಸಿ ಅಂಗಳದಲ್ಲಿ ಶನಿವಾರ ಐಟಿಎಫ್ ಮೈಸೂರು ಓಪನ್ ಟೆನಿಸ್ ಟೂರ್ನಿಯ ಡಬಲ್ಸ್ ಪ್ರಶಸ್ತಿ ಗೆದ್ದ ವಿಷ್ಣುವರ್ಧನ್– ಮುಕುಂದ್ ಶಶಿಕುಮಾರ್

‘11 ವರ್ಷದ ಹಿಂದೆ ಇಲ್ಲಿಯೇ ಜೂನಿಯರ್ ಐಟಿಎಫ್ ಗೆದ್ದಿದ್ದೆ. ಡಬಲ್ಸ್‌ನಲ್ಲಿ ಮತ್ತೆ ಪ್ರಶಸ್ತಿ ಗೆದ್ದಿರುವುದು ಸಂತಸ ತಂದಿದೆ. ಮುಕುಂದ್ ಅವರ ತಾಯಿ ಪಂದ್ಯ ನೋಡಲು ಬಂದಿದ್ದರು. ಜೀವದ ಗೆಳೆಯನ ಪೋಷಕರ ಎದುರು ಪ್ರಶಸ್ತಿ ಪಡೆದದ್ದು, ಜೀವನದ ಅತ್ಯಮೂಲ್ಯ ಕ್ಷಣ’ ಎಂದು ವಿಷ್ಣುವರ್ಧನ್ ‘ಪ್ರಜಾವಾಣಿ’ ಜೊತೆ ಸಂತಸ ಹಂಚಿಕೊಂಡರು.

ಇದಕ್ಕೂ ಮೊದಲು ನಡೆದಿದ್ದ ಸೆಮಿಫೈನಲ್ ನಲ್ಲಿ ಮುಕುಂದ್- ವಿಷ್ಣು ಜೋಡಿ 6-4, 7-5ರಲ್ಲಿ ಆಸ್ಟ್ರೇಲಿಯಾದ ಎಲಿಸ್ ಬ್ಲೇಕ್- ವ್ಲಾಡಿಸ್ಲಾವ್ ಆರ್ಲವ್ ಅವರನ್ನು ಮಣಿಸಿ ಫೈನಲ್ ಪ್ರವೇಶಿಸಿತ್ತು.

ಪ್ರಜ್ವಲ್‌ಗೆ ನಿರಾಸೆ: ತವರಿನಲ್ಲಿ ಪ್ರಶಸ್ತಿ ಗೆಲ್ಲುವ ಭರವಸೆ ಮೂಡಿಸಿದ್ದ ಎಸ್.ಡಿ.ಪ್ರಜ್ವಲ್ ದೇವ್, ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ 5-7, 6-7ರಲ್ಲಿ ಬ್ರಿಟನ್‌ನ ಜಾರ್ಜ್ ಲೊಫ್ಹಗೆನ್ ವಿರುದ್ಧ ಮಣಿದರು.

ಜಿದ್ದಾಜಿದ್ದಿನಿಂದ ಕೂಡಿದ ಮೊದಲ ಸೆಟ್‌ನಲ್ಲಿ ಜಾರ್ಜ್ ಲೊಫ್ಹಗೆನ್ ಪಾರಮ್ಯ ಮೆರೆದರು. ಪ್ರಜ್ವಲ್ ಅವರ ಬಲವಾದ ಸರ್ವ್‌ಗಳನ್ನು ಅವರು ದಿಟ್ಟವಾಗಿ ಎದುರಿಸಿದರು. ಎರಡನೇ ಸೆಟ್‌ನಲ್ಲಿ ಪ್ರಜ್ವಲ್ ತಿರುಗೇಟು ನೀಡಿದರೂ ಬ್ರಿಟನ್‌ನ ಅನುಭವಿ ಜಾರ್ಜ್ ಎರಡು ಗಂಟೆಗಳಲ್ಲಿ ಪಂದ್ಯ ಗೆದ್ದು, ಫೈನಲ್ ಪ್ರವೇಶಿಸಿದರು.

ಭಾನುವಾರ ನಡೆಯುವ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ಆಸ್ಟ್ರೇಲಿಯಾದ ಎಲಿಸ್ ಬ್ಲೇಕ್ ವಿರುದ್ಧ ಜಾರ್ಜ್ ಲೊಫ್ಹಗೆನ್ ಸೆಣಸಲಿದ್ದಾರೆ.

ಕುಶ್‌ಗೆ 3ನೇ ಸ್ಥಾನ

ಮೆಲ್ಬರ್ನ್ (ಪಿಟಿಐ): ಭಾರತದ ಯುವ ಚಾಲಕ ಕುಶ್ ಮೈನಿ ಅವರು ಮೆಲ್ಬರ್ನ್‌ನಲ್ಲಿ ಶನಿವಾರ ನಡೆದ ಫಾರ್ಮುಲಾ 2 ರೇಸ್‌ನಲ್ಲಿ ಮೂರನೇ ಸ್ಥಾನ ಪಡೆದರು. ಕ್ಯಾಂಪಸ್ ರೇಸಿಂಗ್ ತಂಡವನ್ನು ಪ್ರತಿನಿಧಿಸಿದ ಕುಶ್, ಫಾರ್ಮುಲಾ 2 ರೇಸ್‌ನಲ್ಲಿ ‘ಪೋಡಿಯಂ ಫಿನಿಷ್’ ಮಾಡಿದ್ದು ಇದೇ ಮೊದಲು.

ಗ್ರಿಡ್‌ನಲ್ಲಿ ಮೂರನೆಯವರಾಗಿ ಸ್ಪರ್ಧೆ ಆರಂಭಿಸಿದ್ದ ಮೈನಿ, ಹಲವು ಲ್ಯಾಪ್‌ಗಳವರೆಗೆ ಅದೇ ಸ್ಥಾನ ಕಾಪಾಡಿಕೊಂಡಿದ್ದರು. ಆ ಬಳಿಕ ಡಿಎಎಂಎಸ್ ತಂಡದ ಆರ್ಥರ್ ಲೆಕ್ಲರ್ಕ್ ಅವರು ಮೈನಿ ಅವರನ್ನು ಹಿಂದಿಕ್ಕಿದರು. ಆದರೆ ಅಂತಿಮ ಕೆಲವು ಲ್ಯಾಪ್‌ಗಳ ರೇಸ್ ಬಾಕಿಯಿರುವಾಗ ಮೈನಿ ಮತ್ತೆ ಮೂರನೇ ಸ್ಥಾನ ಪಡೆದರು.

ಎಂಪಿ ಮೋಟರ್‌ಸ್ಪೋರ್ಟ್ ತಂಡದ ಡೆನಿಸ್ ಹಾಗೆರ್ ಮತ್ತು ಹೈಟೆಕ್ ಪಲ್ಸ್ ಎಯ್ಟ್ ತಂಡದ ಜಾಕ್ ಕ್ರಾಫರ್ಡ್ ಕ್ರಮವಾಗಿ ಮೊದಲ ಎರಡು ಸ್ಥಾನ ಪಡೆದುಕೊಂಡರು. ಎಂಪಿ ಮೋಟರ್‌ಸ್ಪೋರ್ಟ್ ನ, ಭಾರತದ ಜೆಹಾನ್ ದಾರೂವಾಲಾ 17ನೇ ಸ್ಥಾನ ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಟ್ರಂಪ್‌ಗೆ ₹ 32 ಕೋಟಿ ದೇಣಿಗೆ

ವಾಷಿಂಗ್ಟನ್ (ಪಿಟಿಐ): 2024ರಲ್ಲಿ ನಡೆಯುವ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಸಿದ್ಧತೆ ನಡೆಸಿರುವ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 24 ಗಂಟೆಗಳಲ್ಲಿ 4 ಮಿಲಿಯನ್ ಡಾಲರ್ (₹32.87 ಕೋಟಿ) ನಿಧಿ ಸಂಗ್ರಹಿಸಿದ್ದಾರೆ.

ನೀಲಿಚಿತ್ರ ತಾರೆಗೆ ಹಣಸಂದಾಯ ಮಾಡಿದ ಪ್ರಕರಣದಲ್ಲಿ ಮ್ಯಾನ್ಹಟನ್‌ನ ಗ್ರ್ಯಾಂಡ್ ಜ್ಯೂರಿಯು ಟ್ರಂಪ್ ವಿರುದ್ಧ ದೋಷಾರೋಪ ಹೊರಿಸಿದ 24 ಗಂಟೆಗಳ ಅವಧಿಯಲ್ಲಿ ಈ ನಿಧಿ ಸಂಗ್ರಹವಾಗಿದೆ ಎಂದು ಟ್ರಂಪ್ ಕಚೇರಿಯ ಹೇಳಿಕೆ ತಿಳಿಸಿದೆ.

ಶೇ 25ರಷ್ಟು ದೇಣಿಗೆಯು ಇದೇ ಮೊದಲ ಬಾರಿಗೆ ದೇಣಿಗೆ ನೀಡುತ್ತಿರುವವರಿಂದ ಬಂದಿದೆ. ಈ ನೆರವು ಪಡೆಯುವ ವಿಷಯದಲ್ಲಿ ಟ್ರಂಪ್ ಮುಂಚೂಣಿಯಲ್ಲಿ ಇದ್ದಾರೆ ಎಂಬುದನ್ನು ದೃಢಪಡಿಸಿದೆ ಎಂದು ಹೇಳಿಕೆ ತಿಳಿಸಿದೆ.

15 ಪ್ರಾಚೀನ ಕಲಾಕೃತಿಗಳ ಭಾರತಕ್ಕೆ ಮರಳಿಸಲು ಕ್ರಮ

ನ್ಯೂಯಾರ್ಕ್ (ಪಿಟಿಐ): ಅಕ್ರಮವಾಗಿ ಸಾಗಣೆ ಮಾಡಿ ಮಾರಲಾಗಿದೆ ಎಂದು ಗುರುತಿಸಲಾದ 15 ಕಲಾಕೃತಿಗಳನ್ನು ಭಾರತಕ್ಕೆ ಮರಳಿಸಲು ಇಲ್ಲಿನ ಪ್ರತಿಷ್ಠಿತ ಮೆಟ್ರೊಪಾಲಿಟನ್ ಕಲಾ ಸಂಗ್ರಹಾಲಯವು ನಿರ್ಧರಿಸಿದೆ.

ಈ ಕುರಿತ ಹೇಳಿಕೆಯಲ್ಲಿ, ಭಾರತ ಸರ್ಕಾರಕ್ಕೆ ಈ ಕಲಾಕೃತಿಗಳನ್ನು ಹಸ್ತಾಂತರಿಸಲಾಗುವುದು. ಈ ಕಲಾಕೃತಿಗಳು 1, 11ನೇ ಶತಮಾನದ ಅವಧಿಯವು. ಟೆರ್ರಾಕೊಟಾ, ತಾಮ್ರ ಮತ್ತು ಶಿಲೆಯಲ್ಲಿ ರಚಿಸಲಾದವು ಎಂದು ತಿಳಿಸಿದೆ.

ಸದ್ಯ ಜೈಲಿನಲ್ಲಿರುವ ಸುಭಾಷ್ ಕಪೂರ್ ಎಂಬಾತ ಈ ಕಲಾಕೃತಿಗಳನ್ನು ಮಾರಾಟ ಮಾಡಿದ್ದ. ಪ್ರಾಚೀನ ಕಲಾಕೃತಿಗಳನ್ನು ಜವಾಬ್ದಾರಿಯಿಂದ ಸ್ವಾಧೀನಕ್ಕೆ ಪಡೆಯಲು ಸಂಗ್ರಹಾಲಯ ಸಿದ್ಧವಾಗಿದೆ. ಶಂಕಿತ ವಿತರಕರಿಂದ ಪಡೆದ ಕಲಾಕೃತಿಗಳ ಇತಿಹಾಸವನ್ನು ಕುರಿತು ಸಂಗ್ರಹಾಲಯ ಅಧ್ಯಯನ ನಡೆಸಲಿದೆ ಎಂದು ಹೇಳಿಕೆ ತಿಳಿಸಿದೆ.

ಹಿಂದೂ ಫೋಬಿಯಾ ಖಂಡಿಸಿ ನಿರ್ಣಯ

ವಾಷಿಂಗ್ಟನ್ (ಪಿಟಿಐ): ಹಿಂದೂಫೋಬಿಯಾವನ್ನು ಖಂಡಿಸುವ ನಿರ್ಣಯವನ್ನು ಜಾರ್ಜಿಯಾದ ಶಾಸನಸಭೆ ಅಂಗೀಕರಿಸಿದೆ. ಶಾಸನಸಭೆಯಲ್ಲಿ ಇಂಥ ನಿರ್ಣಯ ಅಂಗೀಕರಿಸಿದ ಅಮೆರಿಕದ ಮೊದಲ ರಾಜ್ಯವಾಗಿದೆ.

ಹಿಂದೂಫೋಬಿಯಾ ಮತ್ತು ಹಿಂದೂ ವಿರೋಧಿ ಧರ್ಮಾಂಧತೆಯನ್ನು ನಿರ್ಣಯದಲ್ಲಿ ಖಂಡಿಸಲಾಗಿದೆ. ಹಿಂದುತ್ವವು ವಿಶ್ವದ ಅತಿದೊಡ್ಡ ಮತ್ತು ಹಳೆಯದಾದ ಧರ್ಮವಾಗಿದೆ. ವಿಶ್ವದ 100ಕ್ಕೂ ಹೆಚ್ಚು ದೇಶಗಳಲ್ಲಿ ಈ ಧರ್ಮವನ್ನು ಪಾಲಿಸುವವರಿದ್ದಾರೆ. ವೈವಿಧ್ಯ ಸಂಪ್ರದಾಯ, ನಂಬಿಕೆಯನ್ನು ಈ ಧರ್ಮ ಪ್ರೋತ್ಸಾಹಿಸಲಿದೆ ಎಂದು ತಿಳಿಸಿದೆ.

ಭಾರತ ಮೂಲದ ವ್ಯಕ್ತಿಗೆ ಜೈಲು

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ವೆಸ್ಟ್ ಮಿಡ್‌ಲೆಂಡ್ಸ್‌ನಲ್ಲಿ, ಮಾದಕ ವಸ್ತು ಖರೀದಿಗೆ ಹಣ ನೀಡುವಂತೆ ಪೋಷಕರಿಗೆ ಕಿರುಕುಳ ನೀಡುತ್ತಿದ್ದ ಭಾರತ ಮೂಲದ ವ್ಯಕ್ತಿಯೊಬ್ಬನಿಗೆ ಎರಡು ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ.

ದೇವನ್ ಪಟೇಲ್ (49) ಎಂಬಾತ ಶಿಕ್ಷೆಗೊಳಗಾದ ವ್ಯಕ್ತಿ. ಪೋಷಕರನ್ನು ಭೇಟಿ ಮಾಡಬಾರದೆಂದು ಈ ಹಿಂದೆ ಕೋರ್ಟ್ ದೇವನ್‌ಗೆ ಆದೇಶಿಸಿದ್ದರೂ, ಈತ ಹಣ ಪಡೆಯಲು ತನ್ನ ಪೋಷಕರನ್ನು ಭೇಟಿಯಾಗಿ ಭಾವನಾತ್ಮಕವಾಗಿ ಕಿರುಕುಳ ನೀಡುತ್ತಿದ್ದ.

‘ಫಿನ್ಲೆಂಡ್‌ಗೆ ಸದ್ಯದಲ್ಲೇ ನ್ಯಾಟೊ ಸದಸ್ಯತ್ವ’

ಬ್ರಸೆಲ್ಸ್ (ಎಎಫ್‌ಪಿ): ಫಿನ್ಲೆಂಡ್ ಇನ್ನು ಕೆಲವೇ ದಿನಗಳಲ್ಲಿ ಔಪಚಾರಿಕವಾಗಿ ನ್ಯಾಟೊ ಸದಸ್ಯತ್ವ ಹೊಂದಲಿದೆ ಎಂದು ನ್ಯಾಟೊ ಮುಖ್ಯಸ್ಥ ಜೇನ್ಸ್ ಸ್ಟೋಲ್ಟೆನ್‌ಬರ್ಗ್ ಶುಕ್ರವಾರ ಹೇಳಿದ್ದಾರೆ.

ನ್ಯಾಟೊ ಸೇರಲು ಎದುರಾಗಿದ್ದ ಅಂತಿಮ ಅಡಚಣೆ ನಿವಾರಿಸಿದ ಫಿನ್ಲೆಂಡ್ ಅಧ್ಯಕ್ಷರನ್ನು ಅಭಿನಂದಿಸಿರುವ ಸ್ಟೋಲ್ಟೆನ್‌ಬರ್ಗ್ ‘ಮುಂಬರುವ ದಿನಗಳಲ್ಲಿ ನ್ಯಾಟೊ ಪ್ರಧಾನ ಕಚೇರಿ ಮೇಲೆ ಫಿನ್ಲೆಂಡ್ ಧ್ವಜ ಹಾರುವುದನ್ನು ಎದುರು ನೋಡುತ್ತೇನೆ. ನಾವೆಲ್ಲರೂ ಒಗ್ಗಟ್ಟಾಗಿದ್ದು, ಸುರಕ್ಷಿತವಾಗಿದ್ದೇವೆ’ ಎಂದು ಟ್ವೀಟ್ ಮಾಡಿದ್ದಾರೆ.

ಬ್ಯಾಡ್ಮಿಂಟನ್: ಫೈನಲ್‌ಗೆ ಸಿಂಧು

ಮ್ಯಾಡ್ರಿಡ್ (ಪಿಟಿಐ): ಚುರುಕಿನ ಆಟವಾಡಿದ ಪಿ.ವಿ.ಸಿಂಧು ಅವರು ಮ್ಯಾಡ್ರಿಡ್ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಶನಿವಾರ ನಡೆದ ಮಹಿಳೆಯರ ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಅವರು 24–22, 22–20 ರಲ್ಲಿ ಸಿಂಗಪುರದ ಯಿಯೊ ಜಿಯಾ ಮಿನ್ ವಿರುದ್ಧ ಗೆದ್ದರು. ಹೈದರಾಬಾದ್‌ನ ಆಟಗಾರ್ತಿ ಈ ವರ್ಷ ಆಡಿದ ಟೂರ್ನಿಗಳಲ್ಲಿ ಫೈನಲ್ ಪ್ರವೇಶಿಸಿದ್ದು ಇದೇ ಮೊದಲು.

ಈ ಸೆಣಸಾಟ 48 ನಿಮಿಷ ನಡೆಯಿತು. ಮೊದಲ ಗೇಮ್‌ನಲ್ಲಿ 15–20 ರಿಂದ ಹಿನ್ನಡೆಯಲ್ಲಿದ್ದ ಸಿಂಧು ಆ ಬಳಿಕ ಅಮೋಘ ರೀತಿಯಲ್ಲಿ ಮರುಹೋರಾಟ ನಡೆಸಿ ಗೇಮ್ ಗೆದ್ದರು. ಎರಡನೇ ಗೇಮ್‌ನಲ್ಲಿ ಇಬ್ಬರೂ 17–17 ರಲ್ಲಿ ಸಮಬಲ ಸಾಧಿಸಿದ್ದರು. ಆ ಬಳಿಕ ಸಿಂಧು ಎಚ್ಚರಿಕೆಯಾಗಿ ಆಟವಾಡಿ ಫೈನಲ್‌ಗೆ ಲಗ್ಗೆಯಿಟ್ಟರು. ಸ್ಪೇನ್‌ನ ಕರೊಲಿನಾ ಮರಿನ್- ಇಂಡೊನೇಷ್ಯಾದ ಗ್ರೆಗೊರಿಯಾ ತನ್‌ಜುಂಗ್ ನಡುವಣ ಸೆಮಿ ಪಂದ್ಯದ ವಿಜೇತರನ್ನು ಸಿಂಧು ಅವರು ಫೈನಲ್‌ನಲ್ಲಿ ಎದುರಿಸಲಿದ್ದಾರೆ.



ಪಿ.ವಿ.ಸಿಂಧು

ಹಾಕಿ: ಸೋಮಯ್ಯ ಹ್ಯಾಟ್ರಿಕ್ ಗೋಲು

ನಾಪೋಕ್ಲು (ಕೊಡಗು): ಕುಪ್ಪಂಡ ಸೋಮಯ್ಯ ಗಳಿಸಿದ ಹ್ಯಾಟ್ರಿಕ್ ಗೋಲುಗಳ ಬಲದಿಂದ ಕುಪ್ಪಂಡ ತಂಡದವರು ಇಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿಯಲ್ಲಿ ಶನಿವಾರ ಭರ್ಜರಿ ಜಯ ಸಾಧಿಸಿದರು.

ಚೆರಿಯಪರಂಬುವಿನ ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಕುಪ್ಪಂಡ ತಂಡದವರು 5-2ರಿಂದ ಚೇರುಮಂದಂಡ ತಂಡದವರನ್ನು ಮಣಿಸಿದರು.

ಇತರ ಪಂದ್ಯಗಳಲ್ಲಿ ಚೊಟ್ಟೆಯಂಡಮಾಡ 4-0ರಲ್ಲಿ ಪಾಲೆಯಡ ವಿರುದ್ಧ, ಕಂಬೀರಂಡ 4-0ರಲ್ಲಿ ಬೊಳಕಾರಂಡ ಎದುರು, ಕರಿನೆರವಂಡ 2-1 ರಲ್ಲಿ ಕೊಕ್ಕಂಡ ತಂಡದ ವಿರುದ್ಧ ಗೆದ್ದವು.

ಕೂತಂಡ ತಂಡದವರು 3-0ರಲ್ಲಿ ಮಾತ್ರಂಡ ವಿರುದ್ಧ, ಬೊವ್ವೇರಿಯಂಡ 2-0ರಲ್ಲಿ ಕುಂಡ್ಯೋಳಂಡ ವಿರುದ್ಧ, ಮಾಚಿಮಂಡ 3-2ರಲ್ಲಿ ಮಣವಟ್ಟಿರ ವಿರುದ್ಧ, ಪುಟ್ಟಿಚಂಡ 1-0 ರಲ್ಲಿ ಬೊಟ್ಟೋಳಂಡ ವಿರುದ್ಧ, ನಾಳಿಯಂಡ 2-0ರಲ್ಲಿ ಚಪ್ಪಂಡ ವಿರುದ್ಧ ಜಯಿಸಿದವು.

ಪಳಗಂಡ ತಂಡದವರು 5-0ರಲ್ಲಿ ಚೋಕಿರ ತಂಡದವರ ವಿರುದ್ಧ, ಬೊಳ್ಳಂಡ 3-1ರಲ್ಲಿ ಅಜ್ಜಮಾಡ ತಂಡದ ವಿರುದ್ಧ, ಮುಕ್ಕಾಟಿರ (ಕಡಗದಾಳು) 5-1ರಲ್ಲಿ ಮಂಡೇಡ ತಂಡದ ವಿರುದ್ಧ ಗೆದ್ದವು. ಮುಕ್ಕಾಟಿರ (ಹರಿಹರ ತಂಡವು) 2-1 ಅಂತರದಿಂದ ನಾಪಂಡ ತಂಡವನ್ನು ಸೋಲಿಸಿತು.

ಗಾಲ್ಫ್: ಕೇದಾರನಾಥ್, ಜಯಂತಿಗೆ ಪ್ರಶಸ್ತಿ

ಬೆಂಗಳೂರು: ಕೇದಾರನಾಥ್ ಮುದ್ದಾ ಅವರು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ಶುಕ್ರವಾರ ನಡೆದ ಬಿಜಿಸಿ ಸೀನಿಯರ್ ಸಿಟಿಜನ್ ಗಾಲ್ಫ್ ಟೂರ್ನಿಯಲ್ಲಿ 60–65 ವರ್ಷದೊಳಗಿನ ಪುರುಷರ ವಿಭಾಗದ ಪ್ರಶಸ್ತಿ ಜಯಿಸಿದರು. ಈ ವಿಭಾಗದ ಸ್ಪರ್ಧೆಯಲ್ಲಿ ಅವರು 37 ಅಂಕ ಗಳಿಸಿದರು. ಗಣಪ ಶ್ರೀನಿವಾಸರಾವ್ ಹಾಗೂ ಬಿ. ಪ್ರದೀಪ್ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಪಡೆದರು.

ಮಹಿಳೆಯರ 60 ವರ್ಷ ಮತ್ತು ಅದಕ್ಕಿಂತ ಮೇಲ್ಪಟ್ಟವರ ಸ್ಪರ್ಧೆ ಯಲ್ಲಿ ಜಯಂತಿ ರವಿ ಮೊದಲ ಸ್ಥಾನ ಗಳಿಸಿದರು. ಅವರು 41 ಅಂಕ ಗಳಿಸಿದರು.

ಫಲಿತಾಂಶಗಳು: ಪುರುಷರು: 60–65 ವರ್ಷ: ಕೇದಾರನಾಥ್ ಮುದ್ದಾ –1, ಗಣಪ ಶ್ರೀನಿವಾಸರಾವ್ –2, ಬಿ ಪ್ರದೀಪ್ –3. 66–70 ವರ್ಷ: ಬಿ. ತ್ಯಾಗರಾಜನ್ –1, ವಿ.ಟಿ. ಆನಂದ್ –2. 71–75 ವರ್ಷ: ಮೋತಿಲಾಲ್ ಕಟಾರೆ –1, ಡಿ.ಪಿ. ನಾಗನಂದ–2, ಕೆ.ಎಂ. ನಾಯರ್ –3. 76–80 ವರ್ಷ: ಸುಭಾಷ್ ಗುಪ್ತಾ–1, ಕೆ.ಆರ್. ಶೇಷಾದ್ರಿ –2, 81 ವರ್ಷ ಮೇಲ್ಪಟ್ಟವರು: ರಾಜಾ ವಿಶ್ವನಾಥ್ –1, ಪಿ.ಜಿ. ಕೆ ಮೂರ್ತಿ –2.

ಮಹಿಳೆಯರು: 60 ವರ್ಷ ಮೇಲಿನವರು: ಜಯಂತಿ ರವಿ –1, ಆಶಾ ಪಾಟೀಲ –2.



ಸಂವಾದ ಕಾರ್ಯಕ್ರಮದಲ್ಲಿ (ಎಡದಿಂದ) ವೀರೇನ್ ರಸ್ಕಿನಾ, ಪ್ಯಾಡಿ ಅಪ್ಟನ್, ರಾಹುಲ್ ದ್ರಾವಿಡ್ ಪಾಲ್ಗೊಂಡರು

‘ಕ್ರೀಡೆಯಲ್ಲಿ ಭವಿಷ್ಯ; ಒತ್ತಡ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ರೀಡೆಯಲ್ಲಿ ಭವಿಷ್ಯ ರೂಪಿಸಿಕೊಳ್ಳಲು ಬಯಸುವ ಮಕ್ಕಳ ಮೇಲೆ ಪೋಷಕರು ಅತಿಯಾದ ಒತ್ತಡ ಹೇರಬಾರದು ಎಂದು ಭಾರತ ಕ್ರಿಕೆಟ್ ತಂಡದ ಕೋಚ್ ರಾಹುಲ್ ದ್ರಾವಿಡ್ ಮತ್ತು ಹಾಕಿ ತಂಡದ ಮಾಜಿ ನಾಯಕ ವೀರೇನ್ ರಸ್ಕಿನಾ ಹೇಳಿದರು.

ಇನ್ಫೊಸಿಸ್ ಫೌಂಡೇಷನ್–ಪ್ರಕಾಶ್ ಪಡುಕೋಣೆ ಬ್ಯಾಡ್ಮಿಂಟನ್ ಅಕಾಡೆಮಿ ಆಯೋಜಿಸಿದ್ದ ವಾರ್ಷಿಕ ‘ಸ್ಪೋರ್ಟ್ಸ್ ಕಾನ್‌ಕ್ಲೇವ್’ನಲ್ಲಿ ಅವರು ಮಾತನಾಡಿದರು. ‘ಕ್ರೀಡೆಯಲ್ಲಿ ಮುಂದು ವರಿಯುವಂತೆ ಹೆತ್ತವರು ನನ್ನ ಮೇಲೆ ಒತ್ತಡ ಹೇರಿರಲಿಲ್ಲ. ತಂಡವಾಗಿ ಆಡುವ ಕ್ರೀಡೆಯಲ್ಲಿ ತೊಡಗಿಸಿಕೊಳ್ಳಬೇಕು ಎಂಬುದು ಬಯಕೆಯಾಗಿತ್ತು. ಆದ್ದರಿಂದ ಚಿಕ್ಕವನಿದ್ದಾಗ ಹಾಕಿ, ಫುಟ್ ಬಾಲ್ ಮತ್ತು ಕ್ರಿಕೆಟ್ ಆಡುತ್ತಿದ್ದೆ. ಆ ಬಳಿಕ ಕ್ರಿಕೆಟ್‌ನತ್ತ ಮಾತ್ರ ಗಮನ ಕೇಂದ್ರೀಕರಿಸಿದೆ’ ಎಂಬುದನ್ನು ದ್ರಾವಿಡ್ ನೆನಪಿಸಿಕೊಂಡರು.

‘ಹಿನ್ನಡೆ ಎದುರಾದಾಗ ಕುಗ್ಗದೆ ಪುಟಿದೆದ್ದು ನಿಲ್ಲುವ ಛಲವನ್ನು ಕ್ರೀಡಾಪಟುಗಳು ಬೆಳೆಸಿಕೊಳ್ಳಬೇಕು. ವೇಟ್‌ಲಿಫ್ಟರ್ ಮೀರಾಬಾಯಿ ಅವರು 2016ರ ಒಲಿಂಪಿಕ್ಸ್‌ನಲ್ಲಿ ಭಾರ ಎತ್ತಲು ಎಲ್ಲ ಪ್ರಯತ್ನಗಳಲ್ಲೂ ವಿಫಲರಾಗಿದ್ದರು. ಆ ಬಳಿಕ ಕಠಿಣ ಪರಿಶ್ರಮ ನಡೆಸಿದರಲ್ಲದೆ ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಬೆಳ್ಳಿ ಗೆದ್ದರು. ಅಂತಹ ಛಲ ಕ್ರೀಡಾಪಟುಗಳಲ್ಲಿ ಇರಬೇಕು’ ಎಂದು ರಸ್ಕಿನಾ ಹೇಳಿದರು.

ಕ್ರೀಡಾಪಟುಗಳು, ಪೋಷಕರು ಮತ್ತು ಕೋಚ್‌ಗಳು ಸೇರಿದಂತೆ 700ಕ್ಕೂ ಅಧಿಕ ಮಂದಿ ಪಾಲ್ಗೊಂಡರು.

ವಿವಿಧ ವಿಷಯಗಳಲ್ಲಿ ನಡೆದ ಸಂವಾದದಲ್ಲಿ ಮೆಂಟಲ್ ಕಂಡೀಷನಿಂಗ್ ಕೋಚ್ ಪ್ಯಾಡಿ ಅಪ್ಟನ್, ಇನ್ಫೊಸಿಸ್ ಫೌಂಡೇಷನ್‌ನ ಅಧ್ಯಕ್ಷೆ ಸುಧಾಮೂರ್ತಿ, ಬ್ಯಾಡ್ಮಿಂಟನ್ ಆಟಗಾರ್ತಿ ಅಪರ್ಣಾ ಪೋಪಟ್ ಭಾಗವಹಿಸಿದರು.

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 2 ಏಪ್ರಿಲ್ 2023



ಮತ್ತೆ ತುಘಲಕ್ 11

10



ಇದು ಚುನಾವಣೆಯ ಕಾಲ. ನಾಯಕರ ಆರೋಪ ಪ್ರತ್ಯಾರೋಪ, ಕೆಸರೆಚಾಟದ ಕಾಲ. ಇದುವರೆಗೆ ಪಕ್ಷ'ನಿಷ್ಠ'ರಾಗಿದ್ದವರ ಪಕ್ಷಾಂತರದ ಕಾಲ. ತಂತ್ರ, ಷಡ್ಯಂತ್ರ ಎಲ್ಲವೂ ಸಹಜವಾಗಿ ಅನಾವರಣಗೊಳ್ಳುವ ಪರ್ವಕಾಲ. ಅತ್ಯಾಧುನಿಕ ತಂತ್ರಜ್ಞಾನ ಆಧರಿಸಿದ ಹೊಸ ರೀತಿಯ ತಂತ್ರಗಾರಿಕೆ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಪ್ರಾಯೋಗಿಕವಾಗಿ ಬಳಕೆಯಾದರೆ ಆಶ್ಚರ್ಯಪಡುವಂತಿಲ್ಲ. ಡೀಪ್‌ಫೇಕ್ ಇಂತಹ ಒಂದು ತಂತ್ರಜ್ಞಾನ. ಈ ಕುರಿತು ಒಂದು ವಿಶ್ಲೇಷಣೆ...

ಡೀಪ್‌ಫೇಕ್ ಹೇಳುವ ಕಟ್ಟುಕಥೆ!

ಎಂ.ಆರ್. ಸತ್ಯಪ್ರಕಾಶ್

ಚಿತ್ರದುರ್ಗದಲ್ಲಿ ಪಕ್ಷವೊಂದರ ಸಂಭಾವ್ಯ ಅಭ್ಯರ್ಥಿಯೊಬ್ಬರು ಪ್ರಬಲ ಸಮುದಾಯವೊಂದರ ಬಗ್ಗೆ ಹಗುರವಾಗಿ ಮಾತನಾಡಿದರೆನ್ನಲಾದ ಆಡಿಯೊ ಕ್ಲಿಪ್ ಇತ್ತೀಚೆಗೆ ಸದ್ದು ಮಾಡಿತ್ತು. 'ಸಾಮಾಜಿಕ ಜಾಲತಾಣಗಳ ಮೂಲಕ ನನ್ನದೇ ಧ್ವನಿ ಹೋಲುವ ನಕಲಿ ಆಡಿಯೊ ಬಳಸಿಕೊಂಡು ಸಮುದಾಯವೊಂದರ ಬಗ್ಗೆ ಹಗುರವಾಗಿ ಮಾತನಾಡಿದ್ದಾಗಿ ಕಿಡಿಗೇಡಿಗಳು ಅಪಪ್ರಚಾರ ಮಾಡಿದ್ದಾರೆ. ಈ ಕುರಿತು ಪೊಲೀಸರಿಗೆ ದೂರು ನೀಡಿರುವೆ' ಎಂದು ಅವರು ಸ್ಪಷ್ಟೀಕರಣ ನೀಡಿದ್ದಾರೆ. ಪ್ರಕರಣದ ಸತ್ಯಾಸತ್ಯತೆ ಏನೇ ಇದ್ದರೂ ಇಂಥ ನಕಲಿ ಆಡಿಯೊ, ವಿಡಿಯೊ, ಮಾರ್ಫ್ ಮಾಡಲಾದ ಚಿತ್ರಗಳು ರಾಜಕಾರಣದಲ್ಲಿ ಎದುರಾಳಿಗಳನ್ನು ಹಣಿಯಲು ಬಳಸಲಾಗುವ ಯೋಜಿತ ಪ್ರಚಾರದ ಸಾಮಾನ್ಯ ತಂತ್ರಗಳು ಎನ್ನುವುದಂತೂ ಸತ್ಯ.

ಯೋಜಿತ ಪ್ರಚಾರದ ಪರಿಕಲ್ಪನೆ ಇಂದು ನೆನ್ನೆಯದಲ್ಲ. ಇತಿಹಾಸದುದ್ದಕ್ಕೂ ಪರಿಣಾಮಕಾರಿ ಸಂವಹನ ಮತ್ತು ಯೋಜಿತ ಪ್ರಚಾರ ಕುರಿತ ಹಲವಾರು ಕೃತಿಗಳು, ಸಿದ್ಧಾಂತಗಳು ಬಂದು ಹೋಗಿವೆ. ಅಧಿಕೃತ ಇತಿಹಾಸದ ಸೋಗಿನಲ್ಲಿರುವ ಅಸಂಖ್ಯ ಕಟ್ಟುಕಥೆಗಳ ನಿದರ್ಶನಗಳು ಜಗತ್ತಿನಾದ್ಯಂತ ಕಾಣಸಿಗುತ್ತವೆ. ಅರಿಸ್ಟಾಟಲ್‌ನಿಂದ ಹಿಡಿದು ಪ್ರಶಾಂತ್ ಕಿಶೋರ್‌ವರೆಗೂ ಎಲ್ಲ ಕಾಲದಲ್ಲಿಯೂ ರಾಜಕೀಯ ಪಂಡಿತರು ಅಧಿಕಾರದ ಮೇಲೆ ಬಿಗಿಹಿಡಿತ ಸಾಧಿಸುವ ನಿಟ್ಟಿನಲ್ಲಿ ಜನರ ಮನವೊಲಿಸಲು ತಂತ್ರಗಾರಿಕೆ ಹೆಣೆಯುವುದರತ್ತ ಗಮನಹರಿಸಿದವರೇ.

ಅರಿಸ್ಟಾಟಲ್ ತನ್ನ ರೆಟಾರಿಕ್ ಸಿದ್ಧಾಂತದಲ್ಲಿ ಸಂವಹನಕಾರ ಎಷ್ಟು ಪರಿಣಾಮಕಾರಿಯಾಗಿ ಉದ್ದೇಶಪೂರ್ವಕ ಸಂದೇಶವನ್ನು ಜನರಿಗೆ ತಲುಪಿಸಿ ಅವರ ಮನವೊಲಿಸಲು ಪ್ರಯತ್ನಿಸುತ್ತಾನೆ ಎಂಬುದನ್ನು ವಿವರಿಸುತ್ತಾನೆ. ಮೆಕಿಯಾವೆಲ್ಲಿ 'ಪ್ರಿನ್ಸ್' ಕೃತಿಯಲ್ಲಿ ರಾಜನೊಬ್ಬ ಆಡಳಿತ ಯಂತ್ರದ ಮೇಲೆ ಸ್ಥಿರವಾದ ಹಿಡಿತ ಸಾಧಿಸಲು ಕೆಲವೊಮ್ಮೆ ತೆಗೆದುಕೊಳ್ಳುವ ನಿರ್ಧಾರಗಳು ಅನೈತಿಕವಾಗಿದ್ದರೂ, ಅರಾಜಕತೆ ಸೃಷ್ಟಿಸಿದರೂ ಚಿಂತೆಯಿಲ್ಲ ಎನ್ನುತ್ತಾನೆ.

ಇನ್ನು ಆಧುನಿಕ ಇತಿಹಾಸಕ್ಕೆ ಬಂದರೆ, ಅಮೆರಿಕದ ರಾಜಕೀಯ ತಜ್ಞ ವಾಲ್ಟರ್ ಲಿಪ್‌ಮನ್, ಕೆಲವೇ ವ್ಯಕ್ತಿಗಳ ವೈಯುಕ್ತಿಕ ಹಿತಾಸಕ್ತಿಗಳು, ಸ್ಟಿರಿಯೊಟೈಪ್‌ಗಳು, ಮತ್ತು ಮಿಥ್‌ಗಳು ಸಾರ್ವಜನಿಕ ಅಭಿಪ್ರಾಯವನ್ನು ರೂಪಿಸುವಲ್ಲಿ ಬಳಕೆಯಾಗುವ ಬಗೆಯನ್ನು ವಿವರಿಸುವ 'ಪಬ್ಲಿಕ್ ಒಪೀನಿಯನ್' ಕೃತಿಯನ್ನೇ ರಚಿಸಿದ್ದಾನೆ. ಈ ಹೊತ್ತಿಗೂ ರಾಜಕೀಯ ಸಂವಹನದ ಬಹುಮುಖ್ಯವಾದ ಕೃತಿಯೆಂದು ಇದನ್ನು ಗುರುತಿಸಲಾಗುತ್ತದೆ.

ಹಿಟ್ಲರ್‌ನ ರಕ್ತಸಿಕ್ತ ನಾಜಿ ಆಡಳಿತದಲ್ಲಿ ಯೆಹೂದ್ಯರ ನರಮೇಧ ನಡೆಯುವಾಗ ದೇಶದ ಮುಖ್ಯವಾಹಿನಿಯ ಅಂದಿನ ನಾಗರಿಕ ಸಮಾಜ ವಿಲಕ್ಷಣ ಮೌನ ವಹಿಸಿದ್ದು, ಮಾನವೀಯತೆಯ ಅತಃಕರಣವನ್ನು ಸೈತಾನನಿಗೆ ಅಡವಿಟ್ಟ ಐತಿಹಾಸಿಕ ಕಟುಸತ್ಯ. ಒಂದೆಡೆ, ನಾಜಿ ಕಾನ್ಸನ್ಟ್ರೇಷನ್ ಕ್ಯಾಂಪ್‌ಗಳ ಬಂಕರ್‌ಗಳಲ್ಲಿ ಇಲಿಗಳ ಹಾಗೆ ಬಂಧಿಸಲ್ಪಟ್ಟ ಮುಗ್ಧ ಯೆಹೂದ್ಯರು ಅನ್ನ ನೀರಿಲ್ಲದೆ ನರಕಯಾತನೆ ಅನುಭವಿಸುತ್ತಾ, ಸಾವಿಗಾಗಿ ಕಾಯುತ್ತಿದ್ದರೆ, ಇನ್ನೊಂದೆಡೆ ಹಿಟ್ಲರ್‌ನ ಆತ್ಮರತಿಯ ಪ್ರವಾಹದ ಎದುರು ಈಜಲು ಪ್ರಯತ್ನಿಸುತ್ತಿದ್ದ ಸ್ವಚ್ಛ ಮನಸ್ಸಿನ ಜವಾಬ್ದಾರಿಯುತ ಜರ್ಮನ್ನರು ಭೀತಿಯ ನಿಶ್ಶಬ್ದದ ಸುರುಳಿಯಲ್ಲಿ ಮೂಲೆಗುಂಪಾಗುವ ಒತ್ತಡಕ್ಕೆ ಸಿಲುಕಿ ಬಹುಸಂಖ್ಯಾತರ ಒಪ್ಪಿತ ಅಭಿಪ್ರಾಯಕ್ಕೆ ಜೋತುಬೀಳಬೇಕಾಯಿತು ಎಂದು ಜರ್ಮನಿಯ ರಾಜಕೀಯ ತಜ್ಞೆ ಎಲಿಜಬೆತ್ ನೋಯೆಲ್ ನ್ಯೂಮನ್ ವಿಶ್ಲೇಷಿಸಿದ್ದಾರೆ.

ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸ್ಪಷ್ಟ ಬಹುಮತ ಹೊಂದಿದ ಸರ್ಕಾರ ಸರ್ವಜನರ ಕಲ್ಯಾಣಕ್ಕಾಗಿ ಧರ್ಮನಿರಪೇಕ್ಷ ಮತ್ತು ಜಾತ್ಯತೀತ ಆಡಳಿತ ನೀಡುವುದೆಂಬ ಯಾವ ಭರವಸೆಯನ್ನೂ ಇರಿಸಿಕೊಳ್ಳುವಂತಿಲ್ಲ. ಪ್ರಬಲ ಬಹುಮತ ಹೊಂದಿದ ಪ್ರಜಾತಾಂತ್ರಿಕ ಸರ್ಕಾರ ನಿರಂಕುಶ ಧೋರಣೆಯತ್ತ ಹೊರಳುವುದಕ್ಕೆ ಹೆಚ್ಚು ಸಮಯ ಬೇಕಾಗುವುದಿಲ್ಲ. ಇದಕ್ಕೆ ಇತಿಹಾಸವೇ ಸಾಕ್ಷಿ. ಅದೇ ರೀತಿ ಆಡಳಿತ ಪಕ್ಷ ಪ್ರಬಲವಾಗಿದ್ದ ಮಾತ್ರಕ್ಕೆ ಪ್ರತಿರೋಧ ಇರುವುದಿಲ್ಲವೆಂದೂ ಅಲ್ಲ. ಅಲ್ಲಲ್ಲಿ ಪ್ರತಿರೋಧದ ಕಿಚ್ಚು ಹೊತ್ತಿಕೊಳ್ಳುತ್ತಲೇ ಇರುತ್ತದೆ. ಆದರೆ ಸಣ್ಣ ಕಿಡಿ ಜ್ವಾಲಾಮುಖಿಯಾಗಿ ಪುಟಿದೇಳುವ ಮುನ್ನವೇ ಹುಸಿನುಡಿಯ ನಿರಂತರ ದಾಳಿಯ ಮೂಲಕ ಅದನ್ನು ನಂದಿಸಲಾಗುತ್ತದೆ. ಇದಕ್ಕೆ ಇತ್ತೀಚಿನ ದಿನಗಳಲ್ಲಿ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಹಲವು ತಂತ್ರಗಳಿವೆ. ನಕಲಿ ಚಿತ್ರಗಳು, ಪೋಸ್ಟ್‌ಗಳು, ವಿಡಿಯೊಗಳು, ಕಾಸಿಗಾಗಿ ಟ್ವೀಟ್‌ಗಳು, ಖರೀದಿಸಿದ ಟ್ವಿಟರ್ ಟ್ರೆಂಡ್‌ಗಳು, ಹಣತೆತ್ತು ಸೃಷ್ಟಿಸುವ ವೈರಲ್ ವಿಷಯಗಳು, ಎ.ಐ. ಅನಾಲಿಟಿಕ್ಸ್ ಆಧಾರಿತ ಯೋಜಿತ ಮಾರ್ಕೆಟಿಂಗ್ ಅಭಿಯಾನಗಳು, ಹೀಗೆ ಹತ್ತು ಹಲವು ಡಿಜಿಟಲ್ ಮಾರುಕಟ್ಟೆ ತಂತ್ರಗಳನ್ನು ರಾಜಕೀಯ ಪಕ್ಷಗಳು ಬಳಸುತ್ತಲಿವೆ.

ಮುಖ್ಯವಾಹಿನಿ ಮಾಧ್ಯಮದ ಜೊತೆಗೆ ಸಾಮಾಜಿಕ ಜಾಲತಾಣಗಳನ್ನು ಬಳಸುತ್ತಾ, ಸದಾ ಚುನಾವಣಾ ಪ್ರಚಾರದ ಧಾವಂತದಲ್ಲಿರುವ ರಾಜಕೀಯ ಪಕ್ಷಗಳು, ರಾಜಕಾರಣಿಗಳು ಇತ್ತೀಚೆಗೆ ಜನಪ್ರಿಯರಾಗುತ್ತಿದ್ದಾರೆ. 13ನೇ ಪುಟಕ್ಕೆ...





ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಐವರ್ನಾಡು ಗ್ರಾಮದ ಯುವ ರೈತ ಸಿ.ಕೆ. ನವೀನ್‌ಚಂದ್ರ ಬೆಳೆದ ಮುತ್ತಿನ ಮಸ್ಸೆಲ್ಸ್‌ನೊಂದಿಗೆ...



ಮುತ್ತು ಬೆಳೆದಾವ...

ಗಣೇಶ ಚಂದನಶಿವ

ಮುತ್ತು (Pearl) ಆಭರಣಪ್ರಿಯರ ಅಚ್ಚುಮೆಚ್ಚು. ಇದನ್ನು ನಮ್ಮ ಮನೆ ಅಂಗಳದಲ್ಲಿ ನಾವೇ ಬೆಳೆದರೆ ಹೇಗಿರುತ್ತದೆ?

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಐವರ್ನಾಡು ಎಂಬ ಊರಿನ ಯುವರೈತ ಸಿ.ಕೆ. ನವೀನ್‌ಚಂದ್ರ ಅವರು 'ಸಿಹಿ ನೀರಲ್ಲಿ ಮುತ್ತು ಕೃಷಿ' ಆರಂಭಿಸಿ, ಆದಾಯದ ಜೊತೆಗೆ ಜನಪ್ರಿಯತೆಯನ್ನೂ ಗಳಿಸುತ್ತಿದ್ದಾರೆ. ಜಪಾನ್, ಚೀನಾ, ವಿಯೆಟ್ನಾಂನಲ್ಲಿ ದೊಡ್ಡಮಟ್ಟದಲ್ಲಿ ಇರುವ ಸಿಹಿ ನೀರು ಮುತ್ತು ಕೃಷಿ, ಈಗ ಕರ್ನಾಟಕದಲ್ಲಿಯೂ ಕೃಷಿಕರನ್ನು ಆಕರ್ಷಿಸುತ್ತಿದೆ.

ಸ್ನಾತಕೋತ್ತರ ಪದವೀಧರರಾಗಿರುವ ಸಿ.ಕೆ. ನವೀನ್‌ಚಂದ್ರ ಕೃಷಿ ಚಟುವಟಿಕೆಯಲ್ಲದೆ, ಮೊಲ, ಕೋಳಿ ಸಾಕಾಣಿಕೆಯ ಜೊತೆಗೆ ಉಪ ಕೃಷಿಯನ್ನಾಗಿ ಮುತ್ತು ಬೆಳೆಯುತ್ತಿದ್ದಾರೆ. ತಮ್ಮ ತೋಟದಮನೆ ಆವರಣದಲ್ಲಿ ಐದು ಸಾವಿರ ಲೀಟರ್ ಸಾಮರ್ಥ್ಯದ ಹೊಂಡ ನಿರ್ಮಿಸಿದ್ದಾರೆ. ಆರಂಭದಲ್ಲಿ ಅದರಲ್ಲಿ ಅರ್ಧ ನೀರು ತುಂಬಿಸಿ ಪಾಚಿ ಬೆಳೆಸಿದ್ದಾರೆ. ಆ ನಂತರ ಪೂರ್ತಿ ನೀರು ತುಂಬಿಸಿ, ಮಸ್ಸೆಲ್ಸ್ ಅಂದರೆ ಚಿಪ್ಪು (ಕಪ್ಪೆಚಿಪ್ಪು) ಅಥವಾ ಸಿಂಪಿಗಳನ್ನು (ಮಸ್ಸೆಲ್ಸ್–mussels) ಅದರಲ್ಲಿ ಬಿಟ್ಟಿದ್ದಾರೆ. ಮಸ್ಸೆಲ್ಸ್‌ನ ಒಳಗಿನ ಜೀವಿಯಿಂದಲೇ ಮುತ್ತು ಉತ್ಪಾದನೆಯಾಗುತ್ತದೆ.

> ಉಪ್ಪು ನೀರಿನ ತಾಣವಾದ ಕರಾವಳಿಯಲ್ಲಿ ಸಿಹಿ ನೀರಿನಲ್ಲಿ ಬೆಳೆಯುವ ಮುತ್ತೆ? ವಿದೇಶಗಳಲ್ಲಿ ಸಾಮಾನ್ಯವಾಗಿದ್ದ ಮುತ್ತಿನ ಕೃಷಿಯನ್ನು ರಾಜ್ಯದಲ್ಲೂ ಪರಿಚಯಿಸಿದ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನ ಐವರ್ನಾಡಿನ ಯುವರೈತ ಸಿ.ಕೆ. ನವೀನ್‌ಚಂದ್ರ ಯಶೋಗಾಥೆ ಇದು...

ಈ ಕೃಷಿಯ ಆಸಕ್ತಿ ಬಗ್ಗೆ ಅವರು ಹೇಳುವುದು ಹೀಗೆ... 'ಒಳನಾಡು ಮೀನುಗಾರಿಕೆ, ಸಮುದ್ರ ಪಾಚಿ ಕೃಷಿ ಮತ್ತು ಮುತ್ತು ಕೃಷಿಯ ಬಗ್ಗೆ ಸಚಿವರಾಗಿದ್ದ ನಮ್ಮ ಶಾಸಕರು ನಮಗೆಲ್ಲ ಮಾಹಿತಿ ನೀಡಿದರು. ನನಗೆ ಆಸಕ್ತಿ ಹುಟ್ಟಿತು. ಬೆಂಗಳೂರಿನ ಕೃಷಿ ಮೇಳಕ್ಕೆ ಹೋಗಿದ್ದೆ. ಅಲ್ಲಿ ಒಳನಾಡು ಮೀನುಗಾರಿಕಾ ಘಟಕದ ಪ್ರದರ್ಶನ ಮಳಿಗೆಯಲ್ಲಿ ಮುತ್ತು ಕೃಷಿಯ ಮಾಹಿತಿ ನೀಡಲಾಗುತ್ತಿತ್ತು. ಅಲ್ಲಿ ಇನ್ನಷ್ಟು ಮಾಹಿತಿ ಸಂಗ್ರಹಿಸಿ, ಬೆಂಗಳೂರಿನ ಜಿಕೆವಿಕೆಯಲ್ಲಿ ಐದು ದಿನಗಳ ತರಬೇತಿ ಪಡೆದು ಈ ಕೃಷಿ ಆರಂಭಿಸಿದೆ.

ಸಿಹಿ ನೀರಲ್ಲಿ ಮುತ್ತು ಕೃಷಿ ಮಾಡಲು ತಾಂತ್ರಿಕ ಜ್ಞಾನವೂ ಬೇಕು. ಹೊಂಡದಲ್ಲಿ ಹಾಗೇ ಮಸ್ಸೆಲ್ಸ್‌ಗಳನ್ನು ಬಿಟ್ಟರೆ ಅವು ತಳಕ್ಕೆ ಹೋಗುತ್ತವೆ. ಹೀಗಾದರೆ ಅವುಗಳ ಮೇಲೆ ನಿಗಾ ಇಡಲು ಆಗುವುದಿಲ್ಲ. ಈ ಕಾರಣಕ್ಕಾಗಿಯೇ ಪ್ಲಾಸ್ಟಿಕ್ ಟ್ರೇಗಳಲ್ಲಿ ಅವುಗಳನ್ನು ಹಾಕಬೇಕು ಮತ್ತು ಆ ಟ್ರೇಗಳು ತೇಲುವಂತೆ ಮಾಡಬೇಕು.

'ಸರ್ಜರಿ' ಎಂಬುದು ಈ ಕೃಷಿಯಲ್ಲಿ ಬಹುಮುಖ್ಯ ಪ್ರಕ್ರಿಯೆ. ಮಸ್ಸೆಲ್ಸ್‌ಗಳಿಗೆ ಸರ್ಜರಿ ಮಾಡಬೇಕು. ಅಂದರೆ ಚಿಪ್ಪುಗಳನ್ನು ಸ್ವಲ್ಪ ಓಪನ್ ಮಾಡಿ (ಗರಿಷ್ಠ 10 ಮಿಲಿ ಮೀಟರ್) ಅದರಲ್ಲಿ ನ್ಯೂಕ್ಲೀ (nuclei) ಎಂಬ ವಸ್ತುವನ್ನು ಅಳವಡಿಸಬೇಕು. ಹೀಗೆ ಓಪನ್ ಮಾಡಿ ಹೊರವಸ್ತು ಅಳವಡಿಕೆಗೆ ಸರ್ಜರಿ ಎಂದು ಕರೆಯಲಾಗುತ್ತದೆ. ಸರ್ಜರಿ ಮಾಡಿದ ನಂತರ ಒಂದು ದಿನ ಅದರ ಮೇಲೆ ನಿಗಾ ವಹಿಸಬೇಕು. ಒಂದು ದಿನದ ನಂತರ ಆ ಚಿಪ್ಪು ಬಾಯಿ ಬಿಟ್ಟಿದ್ದರೆ ಅದರಲ್ಲಿಯ ಜೀವಿ ಸತ್ತಿದೆ ಎಂದರ್ಥ. ಅಂತಹದ್ದನ್ನು ತೆಗೆದು ಹೊರಗೆ ಎಸೆಯಬೇಕು. ಶೇ 10ರಷ್ಟು ಹೀಗೆ ಸಾಯುವ ಸಾಧ್ಯತೆ ಇರುತ್ತದೆ.

ಈ ಸರ್ಜರಿಗೆ ಒಂದಿಷ್ಟು ವೈಜ್ಞಾನಿಕ ಪ್ರಕ್ರಿಯೆ ಅನುಸರಿಸಬೇಕು. ಒಂದು ಟ್ರೇನಲ್ಲಿ ನೀರು ಹಾಕಿ, ಅದರಲ್ಲಿ ಲವಂಗದ ಒಂದು ಹನಿ ಎಣ್ಣೆ ಹಾಕಿ, ಒಂದು ತಾಸು ಈ ಮಸ್ಸೆಲ್ಸ್‌ಗಳನ್ನು ಹಾಗೇ ಇಡಬೇಕು. ಇದು ಆ ಜೀವಿಗೆ ಅರಿವಳಿಕೆ ಕೊಟ್ಟಂತೆ. ಒಂದು ತಾಸಿನ ನಂತರ ಸ್ವಲ್ಪ ತೆರೆದು ಅದರಲ್ಲಿ ನ್ಯೂಕ್ಲೀ (nuclei) ವಸ್ತುವನ್ನು ಅಳವಡಿಸಿ ಅದನ್ನು ಮತ್ತೆ ಮುಚ್ಚಬೇಕು. ನಾವು ಹೀಗೆ ಮಾಡುವುದರಿಂದ ಅದರ ಒಳಗಿನ ಜೀವಿಗೆ ಜ್ವರ ಬರುವ ಸಾಧ್ಯತೆ ಇರುತ್ತದೆ. 12ನೇ ಪುಟಕ್ಕೆ...

ಸ್ವಾಮಿ ನಮ್ಮಯ ದೇವಿ ಬಂದಾಳ...

ತಳಸಮುದಾಯದವರು ಜನಿವಾರ ಧಾರಣೆ ಮಾಡುವುದು ತುಮಕೂರು ಜಿಲ್ಲೆ ಉಜ್ಜನಿ ಚೌಡೇಶ್ವರಿ ದೇವಿ ಜಾತ್ರೆಯ ವೈಶಿಷ್ಟ್ಯ. ಜಾತ್ರೆ ಮುಗಿಯುತ್ತಿದ್ದಂತೆ ಅವರೆಲ್ಲಾ ಜನಿವಾರ ತೆಗೆದುಹಾಕಿ ಮತ್ತೆ ತಮ್ಮ ಹಟ್ಟಿಯ ಮನೆಗಳಿಗೇ ಹೋಗುತ್ತಾರೆ. ಹೀಗೆ ಸಂಪ್ರದಾಯದ ಆಚರಣೆ ಮಾಡಿ ಮಂತ್ರ ಹೇಳುವುದನ್ನೇ 'ಸೌಹಾರ್ದ' ಎನ್ನುವುದು ಸರಿಯೇ ಎಂಬ ಪ್ರಶ್ನೆಯೂ ಸದಾ ಕೇಳಿಬರುತ್ತದೆ. ಇಂತಹ ವಾದ–ವಿವಾದಗಳು ಈ ಜಾತ್ರೆಯ ಸಾಮಾಜಿಕ ಆಯಾಮದ ಚರ್ಚೆಗೆ ಇಂಬು ನೀಡಿದರೆ, ಇಲ್ಲಿ ನಡೆಯುವ ದೇವರು ತಬ್ಬುವ ಆಚರಣೆ ಸಾಂಸ್ಕೃತಿಕ ಸಿರಿವಂತಿಕೆಯನ್ನು ಢಾಳಾಗಿ ಎತ್ತಿ ತೋರುತ್ತದೆ.

ಶಿವರಾಜ್ ಬ್ಯಾಡರಹಳ್ಳಿ

ಅರೆರೆ... ಅದೋ ಅಲ್ಲಿ ನಿಗಿನಿಗಿ ಕೆಂಡಗಳ ನಡುವೆ ಪಟಪಟ ಹೆಜ್ಜೆ ಹಾಕುತ್ತಾ ಕೆಲವರು ಹಾದುಹೋದರು... ಏಳು ಜನ ಗುಡ್ಡರ ಓಟವದು. ಈ ಗುಡ್ಡರೆನಿಸಿಕೊಂಡ ತಳಸಮುದಾಯದ ಮಂದಿಗೂ ಜನಿವಾರ ಬಿತ್ತು. ಹೆಬ್ಬಾರೆಗಳು ಪರಸ್ಪರ ತಬ್ಬಿಕೊಂಡರು. ಇಲ್ಲಿ ದೇವರುಗಳೂ ಜಾತಿ ಗೋಡೆಯ ಮರೆತು ತಬ್ಬಿ ಆನಂದಿಸಿದರು. ಸಾವಿರಾರು ಜನ ಕಣ್ತುಂಬಿಕೊಂಡರು.

ಸೂಕ್ಷ್ಮವಾಗಿ ಹಾಗೇ ಉಳಿದಿರುವ ಜಾತಿಯ ಗೆರೆಗಳ ನಡುವೆಯೂ ಈ ಜಾತ್ರೆಯ ಹೊತ್ತಿನಲ್ಲಿ ಅವು ಸ್ವಲ್ಪ ಮಾಸುತ್ತವೆ. ಅಷ್ಟರಮಟ್ಟಿಗೆ ಸವರ್ಣೀಯರು–ತಳಸಮುದಾಯದವರು ಒಂದಾಗಿಯೇ ಇರುತ್ತಾರೆ.

ಇದು ತುಮಕೂರು ಜಿಲ್ಲೆ ಕುಣಿಗಲ್ ತಾಲ್ಲೂಕು ಉಜ್ಜನಿ ಗ್ರಾಮದಲ್ಲಿ ನೆಲೆಸಿರುವ ದೇವತೆ ಉಜ್ಜನಿ ಚೌಡಮ್ಮನ ಜಾತ್ರೆಯ ಝಲಕ್. ಪ್ರಕೃತಿಯ ಮಡಿಲಲ್ಲಿ ನೆಲೆಸಿರುವ ಈ ಊರಿನ ಪೂರ್ವಕ್ಕೆ ರಾಮಗಿರಿ ಬೆಟ್ಟವೂ ಪಶ್ಚಿಮಕ್ಕೆ ಹೇಮಗಿರಿ ಬೆಟ್ಟವೂ ಇದ್ದು, ಮಧ್ಯದಲ್ಲಿ ವಿಸ್ತಾರವಾದ ಕಾನನದ ನಡುವೆ ಕೇಕೆಹಾಕಿ ನಗುವ ಪಕ್ಷಿ ಸಂಕುಲದ ನಡುವೆ, ಸಿದ್ಧರು ಓಡಾಡಿದ ಈ ಭೂಮಿಯಲ್ಲಿ ಚೌಡಮ್ಮ ನೆಲೆ ನಿಂತಿದ್ದಾಳೆ.

ದಲಿತರು ಬ್ರಾಹ್ಮಣರಾದರು: ಈ ಜಾತ್ರೆಯ ಹಿನ್ನೆಲೆ ಮಾರಿ ಪುರಾಣದ ಕತೆಯಂತೆಯೇ ಇದೆ. ಅದಕ್ಕೆ ಮತ್ತೆ ಬರೋಣ. ಈ ಜಾತ್ರೆಯ ಆಚರಣೆಗಳನ್ನು ಹೇಳುವುದಾದರೆ, ಪ್ರತಿ ವರ್ಷ ಈ ಊರಿನ 5ರಿಂದ 7 ಜನ ತಳಸಮುದಾಯದರು (ದೇವರ ಗುಡ್ಡರು) ಜನಿವಾರ ಧಾರಣೆಗೆ ಸಜ್ಜಾಗುತ್ತಾರೆ. ಜಾತ್ರೆಯ ಕಂಬ ನೆಡುವ ದಿನ ಜೋಯಿಸರು ಹೋಮ ಹವನ ಮಾಡುತ್ತಾರೆ. ಹೆಬ್ಬಾರಮ್ಮನ (ದೇವತೆ) ಗುಡ್ಡರಾದ (ಮಕ್ಕಳು) ಆರು ಜನ ದಲಿತರು ಬಹು ಮಡಿಯಿಂದ ಬಾಯಿಗೆ ಬಟ್ಟೆ, ತಲೆಗೆ ಪೇಟವನ್ನು ಸುತ್ತಿಕೊಂಡು ಚೌಡಮ್ಮನ ಗುಡಿ ಬಳಿ ಬಂದು ಅಲ್ಲಿನ ಪೂಜಾರಿಯಿಂದ ಜನಿವಾರ ಧಾರಣೆ ಮಾಡಿಸಿಕೊಳ್ಳುತ್ತಾರೆ. ಆ ಕ್ಷಣದಿಂದ ದಲಿತ ಗುಡ್ಡರು ಬ್ರಾಹ್ಮಣರಾದರು ಎಂದರ್ಥ. ಬಹುಶಃ ಆರ್ಯರ ಆಗಮನದ ನಂತರ ದ್ರಾವಿಡ ಮಾತೃದೇವತೆಗೆ ಯಜ್ಞದ ವಿಧಿ ವಿಧಾನಗಳು ಸೇರಿಕೊಂಡಿರಬಹುದು ಎನಿಸುತ್ತದೆ. ಇಲ್ಲಿನ ದಲಿತರು ಜನಿವಾರ ಧರಿಸಿಕೊಂಡರೂ ಆಚರಣೆಗೆ ಮಾತ್ರ ಸೀಮಿತ.

ಇಂದಿನಿಂದ ಆರಂಭವಾಗಿ ಮುಂದಿನ ಭಾನುವಾರದವರೆಗೆ ಚೌಡಮ್ಮನ ಆಚರಣೆಗಳು ನಡೆಯುತ್ತಿರುತ್ತವೆ. ಭಾನುವಾರ ಬಾಬಯ್ಯನ ಜಲ್ದಿ ಸೋಮವಾರ ಆರತಿ, ಮಂಗಳವಾರ ಕೊಂಡದ ಸೌದೆ, ಮಡೆ ಒಯ್ಯುವುದು, ಬುಧವಾರ ಮುಂಜಾನೆ ಅಗ್ನಿಕೊಂಡ, ದೇವರ ಮೆರೆದಾಟ, ದೇವರ ತಬ್ಬಾಟ, ರಥೋತ್ಸವ, ಪಲ್ಲಕ್ಕಿ ಹೀಗೆ ಹಲವು ಆಚರಣೆಗಳಿಂದ ಚೌಡಮ್ಮನ ಹಬ್ಬ ಕಳೆಗಟ್ಟುತ್ತದೆ. ಹಬ್ಬದ ದಿನಾಂಕ ಘೋಷಣೆಯಾದ ಮೇಲೆ ಇಡೀ ಊರಲ್ಲಿ ಕಂಟು ಮುಂಟು ನಡೆಯುವುದಿಲ್ಲ. ತಳಸಮುದಾಯದವರ ದೇವತೆ ಹೆಬ್ಬಾರೆ ಕಣ್ಣು ಬಿಚ್ಚುವವರೆಗೆ ಹದಿಮೂರು ದಿನಗಳ ಕಾಲ ವಿಶೇಷ ಭಕ್ತಿಯಿಂದ ಚೌಡಮ್ಮನ ಆಚರಣೆಗಳು ಬಹು ವಿಶಿಷ್ಟ ರೀತಿಯಲ್ಲಿ ನಡೆಯುತ್ತವೆ.

ಬುಧವಾರ ಮುಂಜಾನೆ ನಡೆಯುವ ಕೊಂಡ ಉರಿಸುವ ವಿಧಿ ಬಹು ಆಕರ್ಷಣೆಯ ಮತ್ತು ದೇವತೆಯ ಶಕ್ತಿಯ ಪ್ರತೀಕ. ಬೆಳ್ಳಿಕರಗದ ನಂತರ ಉಜ್ಜನಿ ಚೌಡಮ್ಮನ ಉತ್ಸವಮೂರ್ತಿ ಹೊತ್ತ ಗುಡ್ಡ, ನಂತರ ಹೆಬ್ಬಾರೆ ಹೊತ್ತಗುಡ್ಡರು ಮತ್ತು ನಾಲ್ಕು ಜನ ಬರೀ ಕೈಲಿ ಓಡುತ್ತಾರೆ. ಈ ದೃಶ್ಯವನ್ನು ನೋಡಲು ಕಾತರದಿಂದ ಲಕ್ಷಾಂತರ ಭಕ್ತರು ಕಾಯುತ್ತಿರುತ್ತಾರೆ. ಗುಡ್ಡರು ಆವೇಶದಿಂದ ಬಂದು ಮೈದುಂಬಿ ದೇವಸ್ಥಾನ ಒಳ ಹೋಗಲು ಪ್ರಯತ್ನಿಸುತ್ತಾರೆ. ಜನಿವಾರ ಧರಿಸಿದ್ದಾಗ್ಯೂ ಒಳಗೆ ಪ್ರವೇಶಿಸಲು ಬಿಡುವುದಿಲ್ಲ. ಇದು ತಳಸಮುದಾಯದವರು ಬ್ರಾಹ್ಮಣರಂತೆ ಆಚರಣೆ ಮಾಡಲು ಮಾತ್ರ ಬಳಕೆ ಆಗುತ್ತಿರುವುದರ ಪ್ರತೀಕದಂತೆ ಕಾಣುತ್ತದೆ. ಆದರೆ ಅಲ್ಲಿಯ ಮಹಾ ಭಕ್ತಿವಂತ ಸಮುದಾಯ ಇದನ್ನು ಒಂದು ಆಚರಣೆಯಾಗಿ ಪಾಲಿಸಬೇಕಾದ ಕರ್ತವ್ಯವೆಂದು ತಿಳಿಯುತ್ತಾ ಭಕ್ತಿಯ ಪರವಶತೆಯಲ್ಲಿ ಮಿಂದೇಳುತ್ತದೆ.

ದೇವರ ತಬ್ಬಾಟ: ಹಿರಿಯಳಾದ ನಿಡಸಾಲೆ ಚೌಡಮ್ಮನಿಗೆ ಮುಂಗೊಂಡ, ಮುಂದಲ ಆರತಿ, ಎರಡನೇ ಸ್ಥಾನ ಉಜ್ಜನಿ ಚೌಡಮ್ಮನಿಗೆ. ಕೊಂಡ ಮುಗಿದ ನಂತರ ಮೆರವಣಿಗೆ ಮುಗಿಸಿ ನಿಡಸಾಲೆ ಚೌಡಮ್ಮ ಹೊರಡುವಾಗ (ಬುಧವಾರ) ಇಬ್ಬರೂ ಚೌಡಮ್ಮನ ಪೂಜೆಗಳು ಮತ್ತು ಹೆಬ್ಬಾರೆಗಳು ತಬ್ಬಾಡುವುದನ್ನು ನೋಡುವುದೇ ಒಂದು ಚಂದ. ಜಾತಿ ಗೋಡೆಗಳ ಬಿಟ್ಟು ಒಟ್ಟಾಗಿ ಬಾಳುವ ಈ ಆಟ 'ದೇವರ ತಬ್ಬಾಟ' ಅಂತಲೇ ಪ್ರಸಿದ್ಧಿ. 11ನೇ ಪುಟಕ್ಕೆ...




ಚೌಡಮ್ಮನ ಸನ್ನಿಧಿಯಲ್ಲಿ ಕೆಂಡ ಹಾಯಲು ಸಿದ್ಧಪಡಿಸಲಾದ ಕಟ್ಟಿಗೆಯ ರಾಶಿಯ ಮುಂದೆ ಭಕ್ತಸ್ತೋಮ.



ಚೌಡಮ್ಮ ದೇವಿ

ಮತ್ತೆ ತುಘಲಕ್




ಎಂ.ಎಸ್.ಸತ್ಯು –ಚಿತ್ರ: ಎಂ.ಎಸ್.ಮಂಜುನಾಥ್

ಪ್ರತಿಭಾ ನಂದಕುಮಾರ್

ರಂಗಭೂಮಿ

'ತುಘಲಕ್' ಗಿರೀಶ ಕಾರ್ನಾಡರ ಎರಡನೇ ನಾಟಕ; 1964ರಲ್ಲಿ ರಚಿಸಿದ್ದು. ಇದರ ಮೊತ್ತಮೊದಲ ಪ್ರಯೋಗ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ವಿದ್ಯಾರ್ಥಿಗಳ ಪ್ರೊಡಕ್ಷನ್ ಆಗಿ ಉರ್ದುವಿನಲ್ಲಿ ಪ್ರದರ್ಶನಗೊಂಡಿತು ಎಂದು ವಿಕಿಪೀಡಿಯ ಹೇಳುತ್ತದೆ. ಎಂ.ಎಸ್. ಸತ್ಯು ಅವರು ಹೇಳುವಂತೆ ಕಾರ್ನಾಡರು ಇದನ್ನು ಮೊತ್ತಮೊದಲು ದೆಹಲಿಯ ಕನ್ನಡ ಭಾರತಿಗೆ ಕೊಟ್ಟರು. ಕನ್ನಡ ಭಾರತಿಯಲ್ಲಿ ನಡೆದ ನಾಟಕದ ಕನ್ನಡರೂಪದ ಮೊದಲ ಪ್ರಯೋಗಕ್ಕೆ ಪ್ರಭಾಕರ ರಾವ್ ನಿರ್ದೇಶನ ಮಾಡಿದ್ದರು. ಬಿ.ವಿ. ಕಾರಂತರು ಕೂಡ ಅದರಲ್ಲಿ ಭಾಗಿಯಾಗಿದ್ದರು. ಮೊದಲ ಸಲ ತುಘಲಕ್‌ನ ಪಾತ್ರ ವಹಿಸಿದವರು ನಾರಾಯಣ ರಾವ್. ದೆಹಲಿಯ ಪುರಾನಾ ಕಿಲ್ಲಾದಲ್ಲಿ 1972ರಲ್ಲಿ ಅದ್ಭುತ ವೇಷಭೂಷಣಗಳ ಸಹಿತ ಮಾಡಿದ ಪ್ರಯೋಗ ಅತ್ಯಂತ ಜನಪ್ರಿಯವಾಯಿತು. ಅಲ್ಲಿಂದ ತುಘಲಕ್ ಹಲವಾರು ಭಾಷೆಗಳಿಗೆ ಅನುವಾದಗೊಂಡು ಅವುಗಳಲ್ಲೇ ಹಲವು ಥರದ ವಿಶ್ಲೇಷಣೆಗಳಿಗೆ ಒಡ್ಡಿಕೊಂಡು ಭಾರತದ ರಂಗಭೂಮಿಯಲ್ಲಿ ಕ್ಲಾಸಿಕ್‌ನ ಸ್ಥಾನವನ್ನು ಪಡೆದುಕೊಂಡಿತು.



ದೆಹಲಿಯ ಪುರಾನಾ ಖಿಲ್ಲಾದಲ್ಲಿ 'ತುಘಲಕ್' ನಾಟಕ ಮೊದಲ ಪ್ರದರ್ಶನ (1972) ಕಂಡಾಗ


ಭಿನ್ನ ಪ್ರಯೋಗಗಳ ಬಗ್ಗೆಯೇ ಒಂದು ಗಂಭೀರ ಅಕಾಡೆಮಿಕ್ ಅಧ್ಯಯನವನ್ನು ಮಾಡುವಷ್ಟು ಮಹತ್ವವನ್ನು ಈ ನಾಟಕ ಪಡೆದುಕೊಂಡಿತು. ಇದರ ಒಂದೇ ಒಂದು ಉದಾಹರಣೆ ಯೂನಿವರ್ಸಿಟಿ ಆಫ್ ವಿಸ್ಕಾನ್ಸಿನ್ - ಮ್ಯಾಡಿಸನ್‌ನ ಇಂಗ್ಲಿಷ್ ಮತ್ತು ಇಂಟರ್ ಡಿಸಿಪ್ಲಿನರಿ ಥಿಯೇಟರ್ ಸ್ಟಡೀಸ್‌ನ ಪ್ರೊಫೆಸರ್ ಆದ ಅಪರ್ಣಾ ಧಾರವಾಡಕರ್ ಅವರು ಬರೆದ ಟಿಪ್ಪಣಿ. 'ವಸಾಹತುಶಾಹಿ ಮತ್ತು ನವವಸಾಹತುಶಾಹಿ ಇತಿಹಾಸಶಾಸ್ತ್ರದ ಇತ್ತೀಚಿನ ಆ್ಯಂಟಿ-ಓರಿಯೆಂಟಲಿಸ್ಟ್ ಮತ್ತು ಸಬಾಲ್ಟರ್ನ್ ವಿಮರ್ಶೆಗಳು ಐತಿಹಾಸಿಕ ಬರವಣಿಗೆಯಲ್ಲಿ 'ನಿಜ' ಮತ್ತು 'ಕಾಲ್ಪನಿಕ' ವಿಧಾನಗಳ ಪರಸ್ಪರ ಅವಲಂಬನೆಯನ್ನು ಅಲಕ್ಷಿಸುತ್ತವೆ. ಅಂತಹ ಪರಸ್ಪರ ಅವಲಂಬನೆಯನ್ನು ಗುರುತಿಸಲು ಮತ್ತು ವಸಾಹತೋತ್ತರ ಐತಿಹಾಸಿಕ ಕಾದಂಬರಿಗಳ ಪಠ್ಯ, ರಾಜಕೀಯ ಮತ್ತು ಸಾಂಸ್ಕೃತಿಕ ಸಂದರ್ಭಗಳನ್ನು ಗುರುತಿಸಲು, ಭಾರತದಲ್ಲಿ ಹದಿನಾಲ್ಕನೆಯ ಶತಮಾನದ ಇಸ್ಲಾಮಿಕ್ ಆಡಳಿತಗಾರನ ಸಮಕಾಲೀನ ಕನ್ನಡ ನಾಟಕ, ಕಾರ್ನಾಡರ 'ತುಘಲಕ್' (1964) ಉತ್ತಮ ಉದಾಹರಣೆ' ಎನ್ನುತ್ತಾರೆ ಅವರು.

'ತುಘಲಕ್‌ನ ಧಾರ್ಮಿಕ ಅಸಾಂಪ್ರದಾಯಿಕತೆಯನ್ನು ನಿರಾಕರಿಸಿದ ಮಧ್ಯಕಾಲೀನ ಮುಸ್ಲಿಂ ಇತಿಹಾಸಕಾರರು ಮತ್ತು ಹತ್ತೊಂಬತ್ತನೇ ಶತಮಾನದ ಪ್ರಾಚ್ಯವಾದಿಗಳು ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಗೆ ಸಮರ್ಥನೆಯಾಗಿ ಭಾರತದಲ್ಲಿ ಇಸ್ಲಾಮಿಕ್ ಆಳ್ವಿಕೆಯ ಪ್ರಕ್ಷುಬ್ಧತೆಯನ್ನು ಪರಿಗಣಿಸಿದ ಸಂಕೀರ್ಣ ಐತಿಹಾಸಿಕ ನಿರೂಪಣೆಯನ್ನೇ ಕಾರ್ನಾಡರು ಈ ನಾಟಕಕ್ಕೆ ಬಳಸಿಕೊಂಡಿದ್ದಾರೆ. ಧಾರ್ಮಿಕ ವ್ಯತ್ಯಾಸವನ್ನು ತನ್ನ ಕೇಂದ್ರವನ್ನಾಗಿ ಇಟ್ಟುಕೊಂಡ 'ತುಘಲಕ್', ಭಾರತದ ಸ್ವಾತಂತ್ರ್ಯಾನಂತರದ ಬಿಕ್ಕಟ್ಟನ್ನು ಮರುನಿರೂಪಿಸುತ್ತದೆ' ಎಂದೂ ಅಭಿಪ್ರಾಯಪಡುತ್ತಾರೆ.

ಅಪರ್ಣಾ ಧಾರವಾಡಕರ್ ಅವರ ಈ ಒಂದು ಟಿಪ್ಪಣಿ, ಪ್ರಸ್ತುತ ಖ್ಯಾತ ನಾಟಕಕಾರ ಎಸ್. ಸುರೇಂದ್ರನಾಥ್ ಅವರು ರಂಗಶಂಕರದಲ್ಲಿ ಪ್ರಸ್ತುತಪಡಿಸುತ್ತಿರುವ 'ತುಘಲಕ್'ನ ಮತ್ತೊಂದು ಹೊಸ ಪ್ರಯೋಗಕ್ಕೆ ನೇರವಾಗಿ ಅನ್ವಯವಾಗುತ್ತದೆ. 'ಗಿರೀಶರ 'ತುಘಲಕ್' ನಾಟಕ ಯಾವತ್ತಿಗೂ ಅಪ್ರಸ್ತುತ ಆಗುವುದಿಲ್ಲ. ಅದು ಸದಾ ಪ್ರಸ್ತುತವೇ. ನಾನು ಅದನ್ನು ಚರಿತ್ರೆಯ ಚೌಕಟ್ಟಿನಿಂದ ತೆಗೆದು ಇವತ್ತಿಗೆ ಹತ್ತಿರವಾಗಿಸಿದ್ದೇನೆ. ನಾಟಕದಲ್ಲಿ ಏನೊಂದೂ ಬದಲಾವಣೆ ಮಾಡದೇ ಒಂದೆರಡು ಮಾತುಗಳನ್ನು ತೆಗೆದುಹಾಕಿದರೆ ಅದು ಹಠಾತ್ತಾಗಿ ಸಮಕಾಲೀನ ನಾಟಕ ಆಗಿಬಿಡುತ್ತದೆ. ತುಘಲಕ್‌ನ ತಳಮಳಗಳನ್ನು ಇವತ್ತಿಗೆ ಅನ್ವಯಿಸಲು ಬಹಳ ಕಷ್ಟಪಡಬೇಕಾಗಿಲ್ಲ' ಎನ್ನುತ್ತಾರೆ ಸುರೇಂದ್ರನಾಥ್.

'ಕಾರ್ನಾಡರು ಅದ್ಭುತ ಸಂಭಾಷಣೆ ಬರೆದಿದ್ದಾರೆ. ಹಿಂಸೆ ಬಗ್ಗೆ ಒಂದು ಮಾತು ಬರುತ್ತದೆ. ತುಘಲಕ್ ಹೇಳುತ್ತಾನೆ: 'ಶಿಯಾಬುದ್ದೀನನ ತಾಣದಲ್ಲಿ ನನಗೆ ಒಂದು ದರ್ಶನ - ವಿಷನ್ - ಸಿಕ್ಕಿತು. ಆಗ ಅದನ್ನು ಒಪ್ಪಲು ನಾನು ಸಿದ್ಧನಿರಲಿಲ್ಲ, ಆದರೆ, ಈಗ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಹಿಂಸೆಯ ಬೇರು ನನ್ನ ತಲೆಯಲ್ಲಿಲ್ಲ, ನನ್ನ ರಕ್ತದಲ್ಲಿದೆ. ನನ್ನ ಧಮನಿಯಲ್ಲಿದೆ. ನಾನು ಯಾರು ಅಂತ ಗೊತ್ತಾಗಲು ನನಗೆ ಹಿಂಸೆ ಬೇಕು' ಎಂದು. ಈ ಸಂಭಾಷಣೆ ಕೇಳಿದವರಿಗೆ ಇದು ಹೇಗೆ ಸಮಕಾಲೀನ ಅನ್ನೋದು ಗೊತ್ತಾಗುತ್ತೆ. ಸ್ವಲ್ಪ ಸ್ಟ್ರೆಸ್ ಬದಲಿಸಿ ಪ್ರಸ್ತುತಪಡಿಸಿದ ತಕ್ಷಣ ನಾಟಕ ಆಟೊಮ್ಯಾಟಿಕಲಿ ಇವತ್ತಿಗೆ ಬಂದು ಕೂತುಕೊಳ್ಳುತ್ತೆ' ಎಂದು ಅವರು ಹೇಳುತ್ತಾರೆ.

ಸುರೇಂದ್ರನಾಥ್ ಅವರ ಈ ಪ್ರಯೋಗಕ್ಕೆ ರಂಗ ವಿನ್ಯಾಸ ಮತ್ತು ವೇಷಭೂಷಣ ರೂಪಿಸಿರುವವರು ಹಿರಿಯ ನಾಟಕಕಾರ ನಟ ಎಂ.ಎಸ್. ಸತ್ಯು ಅವರು. ತಮ್ಮ ತೊಂಬತ್ತೆರಡನೆ ವಯಸ್ಸಿನಲ್ಲಿ ನಾಟಕದ ಹೊಸ ವ್ಯಾಖ್ಯಾನಗಳಿಗೆ ಅವರು ತೆರೆದುಕೊಳ್ಳುವ ರೀತಿಯೇ ಸಂಭ್ರಮಕ್ಕೆ ಕಾರಣ. 'ತುಘಲಕ್ ಒಂದು ಒಳ್ಳೆಯ ನಾಟಕ. ತುಘಲಕ್ ತನ್ನ ಕಾಲವನ್ನೂ ಮೀರಿ ಬದುಕಿದ ವ್ಯಕ್ತಿ ಮತ್ತು ಪಾತ್ರ. ಅವನೊಬ್ಬ ಗ್ರೇಟ್ ವಿಷನರಿ - ಮಹಾ ದಾರ್ಶನಿಕ. ಆದರೆ, ಅವನೇ ಮಾಡಿದ ಕೆಲವು ಮೂರ್ಖ ಕೆಲಸಗಳು ಅವನ ಕನಸುಗಳನ್ನು ಹಾಳು ಮಾಡಿದವು. ಅವನು ದೆಹಲಿಯ ಎಲ್ಲಾ ಜನರನ್ನು ತುಘಲಕಾಬಾದ್‌ಗೆ ಶಿಫ್ಟ್ ಮಾಡುವ ತನ್ನ ಉದ್ದೇಶ ವಿಫಲವಾದಾಗ ಅವರನ್ನು ಮತ್ತೆ ದೆಹಲಿಗೆ ವಾಪಸ್ಸು ಕರೆದುಕೊಂಡು ಹೋಗುವುದು ಮೂರ್ಖತನವೇ ಸರಿ. ಆದರೆ, ಅವನ ಐಡಿಯಾ ಇದೆಯಲ್ಲಾ, ಅದು ಬಹಳ ಇಂಟರೆಸ್ಟಿಂಗ್' ಎನ್ನುತ್ತಾರೆ ಈ ರಂಗಭೀಷ್ಮ. ಸುರೇಂದ್ರನಾಥ್ ನಾಟಕವನ್ನು ಸಮಕಾಲೀನಗೊಳಿಸಿರುವ ಕಾರಣ ಸತ್ಯು ರಂಗ ವಿನ್ಯಾಸ ಮತ್ತು ವೇಷಭೂಷಣವನ್ನು ಸಮಕಾಲೀನವಾಗಿಯೇ ರೂಪಿಸಿದ್ದಾರೆ. 'ಕೋಟೆ ಇತ್ಯಾದಿ ಇಟ್ಟುಕೊಂಡಿದ್ದೀನಿ. ಆದರೆ, ವೇಷಭೂಷಣವನ್ನು ಇವತ್ತಿನ ಕಾಲದಂತೆ ಮಾಡಿದ್ದೀನಿ' ಎಂದು ಅವರು ವಿವರಿಸುತ್ತಾರೆ.



ಸುರೇಂದ್ರನಾಥ್

ಬೆಕೆಟ್ ಸ್ಫೂರ್ತಿ: 'ತುಘಲಕ್' ನಾಟಕ ಚಾರಿತ್ರಿಕ ವ್ಯಕ್ತಿ ಮತ್ತು ಘಟನೆಗಳನ್ನು ಆಧರಿಸಿದ್ದರೂ ಕಾರ್ನಾಡರು ಅವುಗಳನ್ನು ತಮ್ಮ ದೃಷ್ಟಿಯ ಮೂಸೆಯಲ್ಲಿ ಕರಗಿಸಿ ನಾಟಕ ರಚನೆ ಮಾಡಿರುವುದು ತಿಳಿದ ಸಂಗತಿ. ಒಂದು ಸಂಗತಿ ಮಾತ್ರ ತಿಳಿದಿರಲಿಲ್ಲ. ಅದನ್ನು ಎಂ.ಎಸ್. ಸತ್ಯು ಅವರು ಈಗ ಹೇಳಿದರು. 'ನಿಜವಾಗಿ ಗಿರೀಶನಿಗೆ ಈ ನಾಟಕ ಬರೆಯಲು ಸ್ಫೂರ್ತಿ 1959ರಲ್ಲಿ ಪ್ರಕಟವಾದ ಷಾನ್ ಅನೋಯ್‌ನ (Jean Anouilh) ಫ್ರೆಂಚ್ ನಾಟಕ 'ಬೆಕೆಟ್'. ಅದೊಂದು ಜಗತ್ಪ್ರಸಿದ್ಧ ನಾಟಕ. ಆದರೆ, ಗಿರೀಶ ಅದನ್ನು ಎಲ್ಲೂ ಹೇಳಿಕೊಂಡಿಲ್ಲ. ಸಾಮಾನ್ಯವಾಗಿ ನಾಟಕಕಾರರು ತಮ್ಮ ನಾಟಕಗಳಿಗೆ ಮೂಲಸ್ಫೂರ್ತಿ ಯಾವುದು ಅಂತ ಹೇಳಿಕೊಳ್ಳುವುದೇ ಇಲ್ಲ. ಹಿಂದೆ ಜಿ.ಬಿ. ಜೋಶಿಯವರು ಬರೆದ 'ನಾನೇ ಬಿಜ್ಜಳ'ದ ಥೀಮ್ ತಗೊಂಡು ಗಿರೀಶ ಒಂದು ನಾಟಕ ಬರೆದರು. ಆದರೆ, ಎಲ್ಲೂ ಅವರು ಜೋಶಿಯವರ ನಾಟಕವನ್ನು ಪ್ರಸ್ತಾಪ ಮಾಡಲಿಲ್ಲ' ಎಂದು ಸತ್ಯು ವಿವರಿಸುತ್ತಾರೆ. ಸತ್ಯು ಅವರಿಗೆ ಇಷ್ಟವಾದ 'ತುಘಲಕ್' ಪ್ರಯೋಗ ಅಂದರೆ ಸಮುದಾಯದವರು ಮಾಡಿದ ಪ್ರಯೋಗ. 'ಕೇರಳದಿಂದ ಬಂದಿದ್ದ ಡಾ. ಸಾಮ್ ಕುಟ್ಟಿ ಪಟ್ಟಾಂಕಾರಿ ಅವರ ನಿರ್ದೇಶನ ಬಹಳ ವಿಭಿನ್ನವಾಗಿತ್ತು' ಎಂದು ಹೇಳುತ್ತಾರೆ.

'ತುಘಲಕ್' ಪ್ರಯೋಗದ ಬಗ್ಗೆ ಸುರೇಂದ್ರನಾಥ್ ಕೊಡುವ ಒಳನೋಟಗಳು ಇವು: 'ಇದರಲ್ಲಿ ಮುಖ್ಯವಾಗಿ ಎರಡು ಪಾರ್ಟಿಗಳಿವೆ. ಒಂದು ಅರಮನೆಯ ಒಳಗಿರುವವರು, ಇನ್ನೊಂದು ಅರಮನೆಯ ಹೊರಗಿರುವವರು. ಅರಮನೆಯ ಒಳಗಿರುವವರ ನಿರ್ಧಾರಗಳು ಮತ್ತು ವರ್ತನೆಗಳು, ಅರಮನೆಯ ಹೊರಗಿರುವವರ ಮೇಲೆ ಹೇಗೆ ಪರಿಣಾಮ ಬೀರುತ್ತವೆ ಎನ್ನುವುದು ಮತ್ತು ಅವರು ಹೇಗೆ ವರ್ತಿಸುತ್ತಾರೆ ಅನ್ನುವುದು ಪ್ರಮುಖ ಅಂಶ. ನಾಟಕದಲ್ಲಿ ಹದಿಮೂರು ದೃಶ್ಯಗಳಿವೆ. ಅವುಗಳನ್ನು ತೋರಿಸಲು ನನಗೊಂದು ತಟಸ್ಥ ಜಾಗ ಬೇಕಿತ್ತು. ಅದಕ್ಕೆ ಸತ್ಯು ಅವರ ವಿನ್ಯಾಸ ಅದ್ಭುತವಾಗಿದೆ. ಅವರು ಇದುವರೆಗೆ ನನ್ನ ಹತ್ತು ನಾಟಕಗಳಿಗೆ ರಂಗ ಮತ್ತು ವೇಷಭೂಷಣ ವಿನ್ಯಾಸ ಮಾಡಿದ್ದಾರೆ. ನಾನು ಸಾಮಾನ್ಯವಾಗಿ 16x16 ಅಡಿ ರಂಗ ವಿನ್ಯಾಸಕ್ಕೆ ಕಟ್ಟುಬೀಳುವುದನ್ನು ಅವರು ಒಪ್ಪಿಕೊಂಡಿದ್ದಾರೆ. ಪ್ರೇಕ್ಷಕರ ನೋಟ ಅಲ್ಲಿಗೆ ಮೀಸಲಾಗಿರುತ್ತದೆ.'

ಸುರೇಂದ್ರನಾಥ್ ಅವರ ಎಲ್ಲಾ ರಂಗಪ್ರಯೋಗಗಳನ್ನೂ ಪ್ರೇಕ್ಷಕರು ಸ್ವಾಗತಿಸಿ ಒಪ್ಪಿಕೊಂಡಿದ್ದಾರೆ. ಏನೇನೂ ರಂಗ ಚೌಕಟ್ಟು (ಸ್ಟ್ರಕ್ಚರ್) ಇಲ್ಲದ 'ಕಾಂತಾ ಮತ್ತು ಕಾಂತಾ' ಆಗಲೀ ಎಲ್ಲೂ ಬ್ರೇಕ್ ಇಲ್ಲದ 'ನಡುರಾತ್ರಿಯ ಪುಳಕ' ಆಗಲೀ ನಾಲ್ಕು ಕಾಲೇಜು ಹುಡುಗರ ಬದುಕಿನ ಕುರಿತಾದ 'ಮರ್ಯಾದೆ ಪ್ರಹಸನ' ಆಗಲೀ ಪ್ರತಿಯೊಂದು ಪ್ರಯೋಗವನ್ನು ಜನ ಬಂದು ನೋಡಿ, ಮೆಚ್ಚಿಕೊಂಡಿದ್ದಾರೆ. ಕುತೂಹಲಕಾರಿಯಾದ ಈ ಪ್ರಯೋಗದ ಬಗ್ಗೆ ನಿರೀಕ್ಷೆ ಹೆಚ್ಚಿದೆ.

'ಇದುವರೆಗೆ 'ತುಘಲಕ್' ಬಗ್ಗೆ ಇದ್ದ ಒಂದು ಪರಿಕಲ್ಪನೆಯನ್ನು ನಾನು ಬದಲಿಸಿದ್ದೇನೆ. ಇವತ್ತಿನ ಪರಿಕರಗಳನ್ನು ಬಳಸಿಕೊಂಡು ಸಮಕಾಲೀನಗೊಳಿಸಿ ನಾಟಕಕ್ಕೆ ಬೇರೊಂದು ಶೇಡ್ ಕೊಟ್ಟಿರುವೆ ಅಷ್ಟೆ. ಇನ್ನು ಏನೇ ವಿವರಣೆ ಕೊಟ್ಟರೂ ಪ್ರಯೋಗದ ಹೊಸತನವನ್ನು ಬಿಟ್ಟುಕೊಡುವಂತಾಗುತ್ತದೆ. ಬನ್ನಿ ನಾಟಕ ನೋಡಿ' ಎನ್ನುತ್ತಾರೆ ಸುರೇಂದ್ರನಾಥ್. ಅವರು ಬಿಟ್ಟುಕೊಟ್ಟ ಒಂದೇ ಅಂಶ ಅಂದರೆ ತುಘಲಕ್ ಕೋಟು ಸೂಟಿನಲ್ಲಿರುತ್ತಾನೆ ಎನ್ನುವುದು!

(ಬೆಂಗಳೂರಿನ ರಂಗಶಂಕರದಲ್ಲಿ ಏಪ್ರಿಲ್ 4, 5 ಮತ್ತು 6 ರಂದು ಪ್ರತಿದಿನ ರಾತ್ರಿ 7ಕ್ಕೆ ತುಘಲಕ್ ನಾಟಕದ ಪ್ರಯೋಗ ನಡೆಯಲಿದೆ)

ಮುನ್ನೋಟ 02-04-2023 ರಿಂದ 08-04-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ನಿಮ್ಮ ಮಿತ್ರರ ಉಪಾಯಗಳಿಂದ ಕೆಲವು ಸಂಕಟಗಳಿಂದ ಪಾರಾಗುವಿರಿ. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟಿರಲಿದೆ. ವಿದ್ಯಾರ್ಥಿಗಳಿಗೆ ಉತ್ತಮ ಯೋಗವಿದೆ. ಸ್ಥಿರಾಸ್ತಿಯ ವಿಚಾರದಲ್ಲಿ ಮುನ್ನಡೆಯಿದೆ. ರಕ್ತದ ತೊಂದರೆ ಅಥವಾ ತಲೆನೋವು ಕಾಡಬಹುದು. ಹೈನುಗಾರರಿಗೆ ಅಭಿವೃದ್ಧಿ ಇದೆ. ಕ್ರೀಡಾಪಟುಗಳು ಅನಿರೀಕ್ಷಿತ ಪ್ರಗತಿಯನ್ನು ಕಾಣಬಹುದು. ಮನೆಯಲ್ಲಿ ದೇವತಾ ಕಾರ್ಯಗಳನ್ನು ಹಮ್ಮಿಕೊಳ್ಳುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುತ್ತದೆ. ಕೆಲಸ ಕಾರ್ಯಗಳಲ್ಲಿ ವೃಥಾ ಕಾಲಹರಣ ಮಾಡದಿರಿ. ವಿಶೇಷ ತೀರ್ಮಾನಗಳನ್ನು ತೆಗೆದುಕೊಳ್ಳುವಾಗ ಸಾಕಷ್ಟು ವಿಚಾರ ಮಾಡಿರಿ. ಕೃಷಿಯಿಂದ ಹೆಚ್ಚಿನ ಆದಾಯ ಬರುತ್ತದೆ. ಭೂಮಿ ವ್ಯಾಪಾರ ಮಾಡುವವರಿಗೆ ಹೆಚ್ಚಿನ ಲಾಭವಿರುತ್ತದೆ. ಉದರ ಸಂಬಂಧಿ ಕಾಯಿಲೆ ಕಾಡಬಹುದು. ಸಂಗಾತಿಗೆ ಸ್ಥಿರ ಆಸ್ತಿ ಒದಗುವ ಯೋಗವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವೃತ್ತಿಯಲ್ಲಿ ನಿಮ್ಮ ನಾಯಕತ್ವದ ಗುಣ ಅನಾವರಣಗೊಂಡು ಮೆಚ್ಚುಗೆ ಸಿಗುತ್ತದೆ. ಹೊರ ಗುತ್ತಿಗೆ ವ್ಯವಹಾರಸ್ಥರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ಭೂಮಿ ಖರೀದಿಯ ವಿಷಯದಲ್ಲಿ ಎಚ್ಚರವಿರಲಿ. ಷೇರು ವ್ಯವಹಾರಗಳು ಅಷ್ಟು ಲಾಭ ತರುವುದಿಲ್ಲ. ಹಣದ ಒಳಹರಿವು ಉತ್ತಮವಾಗಿದೆ. ಸರ್ಕಾರಿ ಕೆಲಸದಲ್ಲಿರುವವರಿಗೆ ಹೆಚ್ಚು ಅನುಕೂಲಕರ. ನಿಮ್ಮ ಸಂಗಾತಿಯ ಆರೋಗ್ಯದ ಬಗ್ಗೆ ನಿಗಾ ಇರಲಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಹಂಗಾಮಿ ನೌಕರರಿಗೆ ನೌಕರಿ ಕಾಯಂ ಆಗಬಹುದು. ಧನದಾಯವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ. ನಿಮ್ಮ ಚಾಣಾಕ್ಷತನ ವೃತ್ತಿಯಲ್ಲಿ ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ. ಸಿದ್ಧ ಉಡುಪು ಮಾರಾಟಗಾರರಿಗೆ ಹೆಚ್ಚಿನ ವ್ಯವಹಾರವಿರುತ್ತದೆ. ಬಣ್ಣ ತಯಾರಕರಿಗೆ ವ್ಯಾಪಾರ ವಿಸ್ತರಣೆಯ ಯೋಗವಿದೆ. ಕೆಲವರಿಗೆ ಕಾಲು ಅಥವಾ ಬೆನ್ನು ನೋವು ಕಾಡಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಯಾವುದೇ ಕೆಲಸ ಆರಂಭಿಸಿದ ನಂತರ ಅದರೊಡನೆ ಇರುವುದು ಮುಖ್ಯ. ಧನಾದಾಯವು ನಿಮ್ಮ ಅಗತ್ಯ ಪೂರೈಸುವಷ್ಟು ಇರುತ್ತದೆ. ಅವಶ್ಯಕತೆಗಿಂತ ಹೆಚ್ಚು ಖರ್ಚು ಮಾಡುವುದು ಬೇಡ. ಕಾನೂನು ವಿದ್ಯಾರ್ಥಿಗಳಿಗೆ ಉತ್ತಮ ಏಳಿಗೆಯಿದೆ. ಹಿರಿಯರಿಂದ ಧನ ಸಹಾಯ ಸಿಗುತ್ತದೆ. ಧಾರ್ಮಿಕ ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿ ಹೊಂದುವಿರಿ. ಆಸ್ತಿ ಕೊಳ್ಳುವ ವಿಚಾರದಲ್ಲಿ ಉತ್ತಮ ಬೆಳವಣಿಗೆಯಿದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಅತಿಯಾದ ಆತ್ಮಗೌರವ ನಿಮ್ಮನ್ನು ಕಾಡಬಹುದು. ಕಾರ್ಯ ಸಾಧನೆಗಾಗಿ ಸಾಕಷ್ಟು ಶ್ರಮಪಡಬೇಕಾದೀತು. ಧನಾದಾಯವು ಸಾಮಾನ್ಯ ಮಟ್ಟದಲ್ಲಿ ಇರುತ್ತದೆ. ದ್ರವರೂಪದ ವಸ್ತುಗಳನ್ನು ಮಾರಾಟಗಾರರಿಗೆ ಏಳಿಗೆಯಿದೆ. ಗೃಹ ನಿರ್ಮಾಣಕ್ಕೆ ಆರ್ಥಿಕ ಸಹಾಯ ದೊರೆಯುತ್ತದೆ. ಹೊಸ ಉದ್ಯೋಗಕ್ಕೆ ಆತುರದ ನಿರ್ಧಾರಗಳು ಖಂಡಿತಾ ಬೇಡ. ಸಾಲದ ವ್ಯವಹಾರಗಳು ಸದ್ಯಕ್ಕೆ ಬೇಡ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನಿಮ್ಮ ಯಶಸ್ಸನ್ನು ನಿಮ್ಮ ಸಹವರ್ತಿಗಳು ಅಥವಾ ನಿಮ್ಮ ಪಾಲುದಾರರು ತಡೆಹಿಡಿಯುವರು. ವೈದ್ಯಕೀಯ ವಿದ್ಯಾರ್ಥಿಗಳಿಗೆ ಯಶಸ್ಸು ದೊರೆಯುತ್ತದೆ. ಪ್ರಭಾವಿತ ವ್ಯಕ್ತಿಗಳನ್ನು ಸಂಧಿಸುವ ಅವಕಾಶ ದೊರೆಯಲಿದೆ. ವಕೀಲರಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ ಹಾಗೂ ಹೆಚ್ಚು ಸಂಪಾದನೆ ಇರುತ್ತದೆ. ಹಣದ ಒಳ ಹರಿವು ಮಂದಗತಿಯಲ್ಲಿರುತ್ತದೆ. ಸರ್ಕಾರಿ ಕೆಲಸಗಳಲ್ಲಿ ಸ್ವಲ್ಪಮಟ್ಟಿನ ಹಿನ್ನಡೆಯಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ವ್ಯವಹಾರದಲ್ಲಿ ಸಾಕಷ್ಟು ಪೈಪೋಟಿ ಎದುರಿಸಬೇಕಾಗಬಹುದು. ನಿಮ್ಮನ್ನು ಕೆಣಕಲೆಂದೇ ಬರುವವರ ಬಗ್ಗೆ ತಾಳ್ಮೆಯಿಂದಿರಿ. ಷೇರುಪೇಟೆ ವ್ಯವಹಾರಗಳಿಂದ ಕೆಲವರಿಗೆ ಹೆಚ್ಚಿನ ಸಂಪಾದನೆಯಾಗಬಹುದು. ತಾಂತ್ರಿಕ ತಜ್ಞರಿಗೆ ಕೆಲಸಗಳು ಬಾಕಿಯಾಗಬಹುದು. ಕಬ್ಬಿಣ ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಿದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಹಣಕಾಸಿನ ವ್ಯವಹಾರಗಳಲ್ಲಿ ಸಾಕಷ್ಟು ಎಚ್ಚರ ವಹಿಸಿರಿ. ನಿಮ್ಮ ಸಾಮರ್ಥ್ಯವನ್ನು ಒರೆಗೆ ಹಚ್ಚಿ ಕೆಲಸ ಮಾಡಿದಲ್ಲಿ ಒಳ್ಳೆಯ ಹೆಸರು ಬರುತ್ತದೆ. ನಿಮ್ಮ ಯೋಜನಾಬದ್ಧ ಕೆಲಸಗಳಿಂದ ಪ್ರಗತಿಯನ್ನು ಕಾಣಬಹುದು. ಹಣದ ಒಳ ಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಸರ್ಕಾರಿ ವ್ಯವಹಾರಗಳಲ್ಲಿ ಸಾಕಷ್ಟು ಪ್ರಗತಿ ಕಾಣಬಹುದು. ನಯವಂಚನೆ ಮಾತುಗಳಿಗೆ ಬೆರಗಾಗದಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಸಂತೋಷವಾಗುತ್ತದೆ. ಕೆಲವರಿಗೆ ಷೇರು ವ್ಯವಹಾರಗಳಿಂದ ಲಾಭ. ವಿದ್ಯಾರ್ಥಿಗಳಿಗೆ ಶ್ರಮಕ್ಕೆ ತಕ್ಕ ಫಲ ದೊರೆಯುತ್ತದೆ. ಮಹಿಳಾ ರಾಜಕಾರಣಿಗಳಿಗೆ ಹೆಚ್ಚಿನ ಮನ್ನಣೆ ದೊರೆಯುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ. ಆಸ್ತಿ ವಿಚಾರಗಳಲ್ಲಿ ಪ್ರಗತಿ ಕಾಣಬಹುದು. ಬೆಂಕಿಯ ಜತೆ ಕೆಲಸ ಮಾಡುವವರು ಹೆಚ್ಚು ಎಚ್ಚರ ವಹಿಸಬೇಕು.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ನಿಮ್ಮ ಕೆಲವು ಗೊಂದಲಗಳಿಗೆ ಉತ್ತಮ ಮಾರ್ಗದರ್ಶನ ಪಡೆಯುವುದು ಒಳ್ಳೆಯದು. ಹೋಟೆಲ್ ಉದ್ಯಮದವರಿಗೆ ಉತ್ತಮ ವ್ಯವಹಾರ ನಡೆಯುತ್ತದೆ. ಮನೆಯವರೊಡನೆ ಕಿರುಪ್ರವಾಸ ಹೋಗಿ ಬರುವ ಸಾಧ್ಯತೆ ಇದೆ. ಕುಟುಂಬದಲ್ಲಿ ಹೊಸ ಜವಾಬ್ದಾರಿಗಳು ಹೆಗಲೇರಲಿವೆ. ಧನಾದಾಯ ನಿರೀಕ್ಷಿತ ಮಟ್ಟದಲ್ಲಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಅತಿಯಾದ ಆತ್ಮವಿಶ್ವಾಸ ಸ್ವಲ್ಪ ತೊಂದರೆ ಕೊಡಬಹುದು. ಹಣದ ಒಳಹರಿವಿನಲ್ಲಿ ಏರಿಳಿತವಿರುತ್ತದೆ. ವಿದೇಶಗಳಿಗೆ ಬಟ್ಟೆ ಹಾಗೂ ಔಷಧಿ ರಫ್ತು ಮಾಡುವವರಿಗೆ ಉತ್ತಮ ಮಾರುಕಟ್ಟೆ ದೊರೆಯಲಿದೆ. ರಿಯಲ್‌ಎಸ್ಟೇಟ್ ವ್ಯವಹಾರಸ್ಥರಿಗೆ ಅಭಿವೃದ್ಧಿ ಇರುತ್ತದೆ. ಮಕ್ಕಳು ಹೆಚ್ಚು ಹಣ ಖರ್ಚು ಮಾಡಿಸುವರು. ಕುಟುಂಬದಲ್ಲಿ ಸ್ಥಿರತೆ ಕಾಣಬಹುದು. ಆಭರಣ ಮಾರಾಟಗಾರರಿಗೆ ಉತ್ತಮ ವ್ಯವಹಾರವಾಗಲಿದೆ.

ಪದಬಂಧ 2783



ಮೇಲಿಂದ ಕೆಳಕ್ಕೆ

2. ತಲೆ 'ಧಿಮ್' ಎಂದಾಗ ತೋರುವ ಅಹಂಕಾರ 3
3. ಒಂದೇ ಸಮನೆ ತಡೆಯಿಲ್ಲದೆ ಸಾಗಿದ್ದು 4
4. ವ್ಯಂಜನಗಳಿಗೆ ಸ್ವರಗಳನ್ನು ಸೇರಿಸಿದಾಗ ಮೂಡುವ ಲೆಕ್ಕ 4
6. ಮತ್ತು ಬಂದಾಗ ಚಾತುರ್ಯದ ಕೈಚಳಕ 4
8. ಸರಸ್ವತಿಯ ಮಸ್ತಿಷ್ಕದಿಂದ ಹೊರಹೊಮ್ಮಿದ ಉತ್ತುಂಗದ ರಸ ರಾಗ 4
11. ಉತ್ತರ ಭಾರತದ ಅಕ್ಕಸಾಲಿಗ 3
13. ಭಜನೆಯಲ್ಲಿ ಮುರಾರಿಯ ಮತ್ತೊಂದು ನಾಮ 3
15. ಲಯಬದ್ಧವಾಗಿ ಗಾಳಿ ಬೀಸುವ ದ್ವೀಪ 3
17. ವಿಷ್ಣು ಶಿವ ಸಮ್ಮಿಲನದ ಪಟ್ಟಣ 4
19. ಅಷ್ಟು ಇಷ್ಟು ಎಣಿಕೆಯಲ್ಲಿ ಹೀಗೂ ಆಗಬಹುದು 4
20. ಒಂದರ ಪಕ್ಕ ಒಂದನ್ನು ನೆಟ್ಟ ತಿಮ್ಮಕ್ಕನ ವೃಕ್ಷಗಳು 4
21. ಕನ್ನಡಕ್ಕೆ ವರವಾಗಿ ಬಂದ ಮೇರು ನಟ 4
23. ಭಕ್ತಿಯಿಂದ ನಮಸ್ಕರಿಸು 3

ಎಡದಿಂದ ಬಲಕ್ಕೆ

1. ದೈವದ ಸಮ್ಮುಖ 3
4. ಕಾಯಕವೇ ಕೈಲಾಸವೆಂಬಲ್ಲಿ ದೇಹ ಸಿದ್ಧ 2
5. ಮನ್ಮಥನ ವಿಧ್ವಂಸಕ ಅಸ್ತ್ರ 3
7. ಬಣ್ಣ ಬಣ್ಣದ ಚಿತ್ತಾರದ ಬಣ್ಣನೆ 4
8. ಇನ್ನಷ್ಟು ಬೇಕು ಎನ್ನಲಾರೆ 2
9. ರೈತನನ್ನು ಎಳೆದಾಗ ಮೊಸರು ಬಜ್ಜಿ ಸಿಗುತ್ತದೆ 3
10. ಭಾರತದ ಇತಿಹಾಸದಲ್ಲಿ ಪರಾಕ್ರಮಕ್ಕೆ ಹೆಸರಾದ ರಾಜಸ್ಥಾನದ ಪಂಗಡ 4
12. ಚಿಪ್ಪಿನಲ್ಲಿ ಸಿಗುವ ಹೊಳಪಿನ ಮುತ್ತಿನ ಚುಂಬನ ಹಿಂದುಮುಂದಾಗಿದೆ 2
14. ಮಿತಿಮೀರಿದ ವ್ಯವಸ್ಥೆ ಕಾನೂನಿಗೆ ವಿರೋಧ 4
16. ಆಯುಧ ಅಥವಾ ಹಣವಿಲ್ಲದ ಖಾಲಿ ಕೈ 4
18. ತೀರದ ಬಾಯಾರಿಕೆ 2
20. ರಾಸಾಯನಿಕಗಳನ್ನು ಬಳಸದೆ ಭೂಮಿಯ ಸಾರದಿಂದ ನಡೆಸುವ ಕೃಷಿ 4
22. ಸೂರ್ಯ ತೊಟ್ಟ ಕುಪ್ಪಸ 3
24. ಮಧ್ಯ ಮಧ್ಯೆ ಕುಡಿಯುವುದು ಆರೋಗ್ಯಕ್ಕೆ ಹಾನಿಕರ 4
25. ವಿರಳವಾಗಿ ಹೆಜ್ಜೆಯ ಮೇಲೊಂದು ಹೆಜ್ಜೆಯ ಹಾಕುತ ಬರುವ ಹಣದೇವತೆ 3
26. ಸ್ವಲ್ಪದಲ್ಲೇ ಬರುವ ಮೈ ತಾಪ 2
27. ನಡೆಯಲು ಒಳ್ಳೆಯ ಹಾದಿ 3

ಪದಬಂಧ ಉತ್ತರ -2782

ಮೇಲಿಂದ ಕೆಳಕ್ಕೆ

1.ಪದಸಂಪದ 2.ಮಹಾಬಲಿ 3.ನವದ್ವಾರ 4.ಕರಗ 6.ಯುಗಾದಿ 7.ಜಾಗರಣೆ 8.ಮತಯಾಚನೆ 9.ಮೊನಚು 10.ರಹದಾರಿ 11.ನಡುಕ 13.ನಾಯಕ 15.ಹೋಳಿಹುಣ್ಣಿಮೆ 16.ಮಣಭಾರ 17.ದಾಮೋದರ 18.ಸಕ್ರಮ

ಎಡದಿಂದ ಬಲಕ್ಕೆ

1. ಪದನಾಮ 3.ನಯವಂಚಕ 5.ದ್ವಾಪರಯುಗ 7.ಜಾಲಿಮರ 9.ಮೊದಲಿಗ 10.ರಜಾದಿನ 12.ಚುನಾವಣೆ 14.ದಾರಿಹೋಕ 16.ಮನೆದಾರಿ 18.ಸಕಲಗುಣ 19.ಮನಮಂದಿರ 20.ರಮಾರಮೆ



ದೇವಿ

10ನೇ ಪುಟದಿಂದ..

ಉಜ್ಜನಿಯಲ್ಲಿ ಸವರ್ಣೀಯರು ತಳಸ ಮುದಾಯದವರು ಕೂಡಿ ಮಾಡುವ ಹಬ್ಬವಿದು. ಮಾರಿ ಪುರಾಣ ಹೋಲುವ ಹೆಬ್ಬಾರಮ್ಮನ ಕತೆ ಪ್ರಚಲಿತದಲ್ಲಿದೆ. ಬ್ರಾಹ್ಮಣ ಕನ್ಯೆ ಹೆಬ್ಬಾರಮ್ಮ ಒಡ್ಡುವ ಸವಾಲನ್ನು ಒಬ್ಬ ದಲಿತ ಹುಡುಗ ಸ್ವೀಕರಿಸಿ ಗೆಲ್ಲುತ್ತಾನೆ. ಮದುವೆಯೂ ಆಗುತ್ತದೆ. ಕಾಲಾನಂತರದಲ್ಲಿ ಹೆಬ್ಬಾರಮ್ಮನಿಗೆ ತಾನು ತಳಸಮುದಾಯದ ಹುಡುಗನನ್ನು ಮದುವೆಯಾಗಿ ಮೋಸ ಹೋದೆ ಎಂದು ತಿಳಿದು ಸಾಯಲು ನಿಶ್ಚಯಿಸುತ್ತಾಳೆ. ಚೌಡಮ್ಮನ ಧ್ಯಾನದಿಂದ ಇರುವಾಗ ಮಾಡಿದ ತನ್ನ ತಪ್ಪಿಗೆ ಗಂಡ ಕ್ಷಮೆ ಕೋರುತ್ತಾನೆ.

ಇದಕ್ಕೆ ಪ್ರಾಯಶ್ಚಿತ್ತ ಏನು ಎಂದು ಕೇಳಿದಾಗ ಪ್ರತಿವರ್ಷ ನಡೆಯುವ ಚೌಡಮ್ಮನ ಹಬ್ಬದಲ್ಲಿ ತನ್ನ ಐದು ಜನ ಮಕ್ಕಳಿಗೂ ಹಬ್ಬಕ್ಕೆ ಹದಿನೈದು ದಿನ ಮುಂಚೆಯೇ ಜನಿವಾರ ಧಾರಣೆ ಮಾಡಬೇಕು. ಕೊಂಡದ ದಿವಸ ತನ್ನನ್ನು ಸಂಕೇತಿಸುವ ಹೆಬ್ಬಾರೆಯನ್ನು ಹೊತ್ತುಕೊಂಡು ಓಡಬೇಕು ಎಂದು ಹೇಳಿ ಉರಿಯುತ್ತಿದ್ದ ಕೊಂಡದಲ್ಲಿ ಹೆಬ್ಬಾರಮ್ಮ ಬಿದ್ದು ಸಾಯುತ್ತಾಳೆ... ಹೀಗೆ ಸಾಗುತ್ತದೆ ಈ ಕಥೆ.

ಈ ಕಥನದಿಂದ ಈ ಹಬ್ಬಕ್ಕೆ, ಜಾತ್ರೆಗೆ ಒಂದು ಚಾರಿತ್ರಿಕ ಕಾರಣ, ಪುರಾಣಗಳು ಹೆಣೆದುಕೊಂಡಿದ್ದು ಹೆಬ್ಬಾರಮ್ಮ ಕೊಟ್ಟ ಶಾಪದಿಂದ ಎಂಬ ನಂಬಿಕೆಯಿದೆ. ಈ ಕಥೆಯು ವರ್ಣ ಸಂಕರದ ಅಪಾಯವನ್ನು ಸೂಚಿಸುವಂತಿದೆ. ತಳವರ್ಗದ ಯುವಕನೊಬ್ಬ ತನ್ನ ಬುದ್ಧಿಶಕ್ತಿಯ ಪ್ರತಿಭೆಯಿಂದ ಸವಾಲನ್ನು ಗೆದ್ದಾಗಲೂ ಜಾತಿ ಅಡ್ಡಬಂದು ಮೇಲುವರ್ಗದ ಹೆಣ್ಣು ಮಗಳನ್ನು ಮದುವೆಯಾದರೆ ಆಗಬಹುದಾದ ಪರಿಣಾಮದ ಪ್ರತೀಕವಾಗಿಯೂ ನೋಡಬಹುದು. ಬಹುಶಃ ಹತ್ತು ಹನ್ನೊಂದನೇ ಶತಮಾನದ ನಂತರ ಕರ್ನಾಟಕವೂ ಸೇರಿದಂತೆ ಭಾರತದಲ್ಲಿ ವರ್ಣಸಂಕರದ ಜಾಗೃತಿ ಆರಂಭಗೊಂಡಿತು. 1429ರ ಕಾಲದ ಶಾಸನವೊಂದು ಉಜ್ಜನಿಯ ಊರ ಮಧ್ಯಭಾಗದಲ್ಲಿದ್ದು ಶಾಸನದ ಸಾಲುಗಳು ಕೆಲವು ವಿವರಣೆಗಳನ್ನು ನೀಡಲಾಗಿದೆ. ವಿಜಯನಗರದ ಅರಸ ವೀರ ಪ್ರತಾಪ ಮಹಾರಾಜ, ವಿಜಯ ಬುಕ್ಕರಾಯ ಒಡೆಯರ ಕುಮಾರರ ಆಳ್ವಿಕೆಗೆ ಉಜ್ಜನಿಯು ಸೇರಿತ್ತು ಎಂಬ ಉಲ್ಲೇಖವಿದೆ.

ಚೌಡಮ್ಮನ ಮೂಲದ ಕತೆ: ಉಜ್ಜನಿಯ ರಾಜನಾದ ವಿಕ್ರಮಾದಿತ್ಯನು ತನ್ನ ಆಪ್ತ ಮಂತ್ರಿ ಭಟ್ಟಿಯ ಜೊತೆಯಲ್ಲಿ ಬೇಟೆಗಾಗಿ ಮತ್ತು ತನ್ನ ಪ್ರಜೆಗಳ ಕ್ಷೇಮ ವಿಚಾರಕ್ಕಾಗಿ ದಕ್ಷಿಣಾಭಿಮುಖವಾಗಿ ಬರುತ್ತಿದ್ದ. ಒಂದು ದಟ್ಟವಾದ ಕಾಡಿನಲ್ಲಿ ಬೇಟೆಯಾಡುತ್ತಾ ಬಂದ. ಒಂದು ಜಾಗದಲ್ಲಿ ರಾಜನ ನಾಯಿಗಳು ಮೊಲವನ್ನು ಕಂಡು ಗಾಬರಿಗೊಂಡು ಹಿಮ್ಮುಖವಾದವು. ಆಶ್ಚರ್ಯಗೊಂಡ ಪರಿವಾರ ಓಡಿ ನೋಡಲಾಗಿ ಮೊಲಗಳೇ ನಾಯಿಯನ್ನು ಬೆನ್ನಟ್ಟಿ ಹೋಗುತ್ತಿರುವುದು ಕಾಣಿಸಿತು. ಇದರಿಂದ ರಾಜನಿಗೆ ಕುತೂಹಲ ಮೂಡಿತು. ರಾಜ ತನ್ನ ವಶವಾಗಿದ್ದ ಬೇತಾಳವನ್ನು ಕೇಳಿದ. ಅದು ತ್ರಿಪುರಾಪುರಿಯ ರಾಜನ ಮಗಳು ಶ್ರೀಕೃಷ್ಣನ ಮಡದಿ, ಮಹಿಷಾಸುರನನ್ನು ಮರ್ದಿಸಿದ ಚಾಮುಂಡಿಯೂ ಆದ ಚೌಡಮ್ಮ ಇಲ್ಲಿ ನೆಲೆಗೊಂಡಿದ್ದಾಳೆ. ಅವಳ ಪ್ರಭಾವದಿಂದ ಈ ರೀತಿ ಆಗುತ್ತಿದೆ ಎಂದು ಚೌಡಮ್ಮನ ಕಥನವನ್ನು ವಿವರಿಸುತ್ತದೆ.

'ತ್ರಿಪುರಾಪುರಿ' ಪಟ್ಟಣವು ಆಕಾಶದೆತ್ತರದಲ್ಲಿ ಇತ್ತಂತೆ. ಅಲ್ಲಿಗೊಬ್ಬ ರಾಜ. ರಾಜನಿಗೆ ಏಳು ಜನ ಹೆಣ್ಣುಮಕ್ಕಳು. ಅವರು ಎಂದೂ ಗಂಡಸರನ್ನು ನೋಡಿರಲಿಲ್ಲ. ಆಗ ಕೃಷ್ಣ ಇವರಿಗೆ ಗಂಡಸರ ದರ್ಶನ ಮಾಡಿಸಬೇಕು ಎಂದು ಉಪಾಯ ಮಾಡಿದ. ಒಂದುದಿನ ಕೃಷ್ಣ, ಬುಡುಬುಡಿಕೆ ಮಂತ್ರಗಾರನಂತೆ 'ತ್ರಿಪುರಾಪುರಿ ಪಟ್ಟಣ ನಾಶವಾಗಿಬಿಡುತ್ತೆ' ಎಂದು ಸಾರುತ್ತಾ, ಇದರಿಂದ ಪಾರಾಗಬೇಕಾದರೆ ಏಳು ಜನ ಹೆಣ್ಣು ಮಕ್ಕಳಾದ ನೀವು ಕಲ್ಲು ನೀರು ಕರಗುವ ಸಮಯದಲ್ಲಿ ಮೂಡಲ ದಿಕ್ಕಿನಲ್ಲಿರುವ ಕೆರೆಯಲ್ಲಿ ಸ್ನಾನಮಾಡಿ ಬಂದು ನಿಂತರೆ ನಿಮ್ಮ ಮುಂದೆ ಅರಳಿ ಸಸಿ ಬೆಳೆದು ನಿಂತಿರುತ್ತದೆ. ಅದಕ್ಕೆ ನೀವು ಪೂಜೆ ಮಾಡಿ ನಿರ್ವಾಣದಲ್ಲಿ ಮರವನ್ನು ತಬ್ಬಿಕೊಳ್ಳಬೇಕು ಹೀಗೆ ಮಾಡಿದರೆ ಬರುವ ಕಷ್ಟದಿಂದ ಪಾರಾಗಬಹುದು. ತಪ್ಪಿದರೆ ಪಟ್ಟಣ ನಾಶವಾಗುತ್ತದೆ ಎಂದು ಹೇಳಿದ.

ಆ ಹೆಣ್ಣು ಮಕ್ಕಳು ಪಟ್ಟಣ ನಾಶವಾದರೆ ತನ್ನ ತಂದೆ ರಾಜನಿಗೆ ಉಳಿಗಾಲವಿಲ್ಲವೆಂದು ತಿಳಿದು ಕೃಷ್ಣ ಹೇಳಿದ ಮಾತನ್ನು ಪಾಲಿಸಲು ಮನಸ್ಸನ್ನು ಮಾಡಿದರು. ಕೃಷ್ಣ ಹೇಳಿದಂತೆಯೇ ಬೆತ್ತಲೆಯಾಗಿ ಅರಳಿ ಸಸಿಗೆ ಪೂಜೆ ಸಲ್ಲಿಸುತ್ತಾ ಇರಬೇಕಾದರೆ ಸಸಿಯು ಮರವಾಯಿತು. ಆದರೂ ಆಜ್ಞೆಯಂತೆ ಮರವನ್ನು ತಬ್ಬುತ್ತಿದ್ದಂತೆ ಆ ಮರವೇ ಕೃಷ್ಣನ ರೂಪಾಂತರವಾಯಿತು. ಕೃಷ್ಣನನ್ನು ನೋಡಿದ ಅವರು ಒಮ್ಮೆಲೆ ಅವಮಾನಿತರಾಗಿ ಎಲ್ಲರೂ ತಮ್ಮ ಪಟ್ಟಣವಾದ ತ್ರಿಪುರಾಪುರಿಗೆ ಹೋಗಲು ಆಗದೆ ಭೂಮಿಯಲ್ಲಿ ನೆಲೆಸಿದರು ಅವರಲ್ಲಿ ಮೊದಲನೆಯವಳು ನಿಡಸಾಲೆಯಲ್ಲಿಯೂ, ಎರಡನೆಯವಳು ಉಜ್ಜನಿಯಲ್ಲೂ ನೆಲೆ ನಿಂತಳು ಎನ್ನುವುದು ಜನಪದ ಕಥೆ. ಕಥೆಗಳು ಏನೇ ಹೇಳಲಿ, ಇಲ್ಲಿನ ಆಚರಣೆಗಳು ಮಾತ್ರ ಜನಾಕರ್ಷಣೆಗೆ, ಚರ್ಚೆಗೆ ವಸ್ತುವಾಗಿರುವುದನ್ನು ಅಲ್ಲಗಳೆಯುವಂತಿಲ್ಲ. ❖

ಹೋಮಿಯೋಪಥಿ ಎಂಬುದು ಸಂಜೀವಿನಿ

ಪ್ರತಿಕ್ರಿಯೆ

ಹೋಮಿಯೋಪಥಿ ಪದ್ಧತಿ ಕುರಿತು ನಾಗೇಶ ಹೆಗಡೆಯವರು ಬರೆದ ಲೇಖನ ತಪ್ಪು ಅಭಿಪ್ರಾಯ ಮೂಡಿಸುವಂತಿದೆ. ಹೋಮಿಯೋಪಥಿ ಚಿಕಿತ್ಸೆ ಜಗತ್ತಿನಾದ್ಯಂತ ಎರಡನೇ ಸ್ಥಾನದಲ್ಲಿರುವ ವೈದ್ಯಕೀಯ ಪದ್ಧತಿ. ಇಂದಿಗೂ 80ಕ್ಕೂ ಹೆಚ್ಚಿನ ರಾಷ್ಟ್ರಗಳ ಕೋಟ್ಯಂತರ ರೋಗಿಗಳ ಪಾಲಿಗೆ ಸಂಜೀವಿನಿ. ಭಾರತದ ಸಂಸತ್ತಿನಲ್ಲೇ ಹೋಮಿಯೋಪಥಿ ಪರಿಪೂರ್ಣ ವೈಜ್ಞಾನಿಕ ಪದ್ಧತಿ ಎಂದು ಅನುಮೋದಿಸಲಾಗಿದೆ. 20 ಕೋಟಿಗೂ ಅಧಿಕ ಭಾರತೀಯರು ಈ ಪದ್ಧತಿಯ ಮೇಲೆ ಅವಲಂಬಿತರಾಗಿದ್ದಾರೆ.

ಹೋಮಿಯೋಪಥಿ ಎಲ್ಲದಕ್ಕೂ ಮೂಲವಾದ ಜೀವವನ್ನು ವೈಜ್ಞಾನಿಕವಾಗಿ ಮತ್ತು ಸಮಗ್ರವಾಗಿ ಅರ್ಥ ಮಾಡಿಕೊಳ್ಳುವ ಪದ್ಧತಿ. ಅದು ದೇಹ, ಮನಸ್ಸು, ಬುದ್ಧಿಯನ್ನು ಒಂದು ಘಟಕವೆಂದು ಪರಿಗಣಿಸುತ್ತದೆ. ಯಾವುದೇ ಪದಾರ್ಥ ಆರೋಗ್ಯವಂತ ವ್ಯಕ್ತಿಯಲ್ಲಿ ಕೆಲವು ರೋಗೋತ್ಪನ್ನಗಳನ್ನು ಉಂಟು ಮಾಡಬಲ್ಲುದಾದರೆ ಅದೇ ಪದಾರ್ಥ ಅತ್ಯಲ್ಪ ಪ್ರಮಾಣದಲ್ಲಿ ಅದೇ ರೋಗ ಲಕ್ಷಣವುಳ್ಳ ರೋಗಿಯಲ್ಲಿ ನಿವಾರಕವಾಗಿ ಕೆಲಸ ಮಾಡುತ್ತದೆ ಎಂಬುದು ಹೋಮಿಯೋಪಥಿ ಸಿದ್ಧಾಂತ.

ಸೂರ್ಯನ ಅಡಿಯಲ್ಲಿರಬಹುದಾದ ನಿಸರ್ಗದ ಎಲ್ಲ ರೋಗ ನಿವಾರಕಗಳು ಹೋಮಿಯೋಪಥಿಯಲ್ಲಿ ಔಷಧಿಗಳಾಗಿ ಬಳಕೆಯಾಗುತ್ತವೆ. ಇದರಲ್ಲಿ ಸಸ್ಯ, ಪ್ರಾಣಿ ಹಾಗೂ ಖನಿಜಗಳೂ ಸೇರಿವೆ. ಈ ಪದ್ಧತಿಯಲ್ಲಿ ಎಲ್ಲ ಕಚ್ಚಾವಸ್ತುಗಳು ಮೂಲ ಸೊಗಡನ್ನು ಕಳೆದುಕೊಂಡು ಕೇವಲ ರೋಗನಿವಾರಕ ಸಾಮರ್ಥ್ಯದ ಧಾತುಗಳಾಗಿ ಪರಿವರ್ತಿತವಾಗಿರುತ್ತವೆ. ಹೋಮಿಯೋಪಥಿ ತನ್ನದೇ ಆದ ಸ್ಥಿರತೆ ಯೋಗ್ಯತೆ ಮತ್ತು ಅರ್ಹತೆಯಿಂದಾಗಿ ಜನಮಾನ್ಯವಾಗಿದೆಯೇ ಹೊರತು ಕೃಪಾಪೋಷಿತವಾಗಿಲ್ಲ. ಬೇರೆ ಪದ್ಧತಿಗಳಿಂದಲೇ ಎಲ್ಲ ರೋಗಗಳು ಗುಣಮುಖವಾಗುವುದಾದರೆ ಕೊನೆಯಲ್ಲಾದರೂ ಹೋಮಿಯೋಪಥಿ ಚಿಕಿತ್ಸೆಗೆ ಬರುವ ಅಗತ್ಯವೇನಿದೆ?

'ಜಗತ್ತಿನಲ್ಲಿ ಯುದ್ಧಗಳಿಂದ ಮೃತಪಟ್ಟವರಿಗಿಂತ ಔಷಧಗಳ ದುಷ್ಪರಿಣಾಮಗಳಿಂದ ಸತ್ತವರೇ ಹೆಚ್ಚು' ಎಂಬ ಮಾತು ಸತ್ಯವಲ್ಲವೇ? ಆಧುನಿಕ ವೈದ್ಯಪದ್ಧತಿಯ ಕ್ಲಿನಿಕಲ್ ಟ್ರಯಲ್‌ನಲ್ಲಿ ಎಷ್ಟೊಂದು ಜನ ಪ್ರಾಣ ಕಳೆದುಕೊಂಡಿಲ್ಲ? ಇಂಥ ಪ್ರಕರಣಗಳು ಹೋಮಿಯೋಪಥಿಯಲ್ಲಿ ಇಲ್ಲವೇ ಇಲ್ಲ. ಭಾರತದಲ್ಲಿ ಶ್ರೀಸಾಮಾನ್ಯನಿಗೆ ವೈದ್ಯಕೀಯ ವೆಚ್ಚ ಗಗನ ಕುಸುಮವಾಗಿರುವಾಗ ಸುಲಭವಾಗಿ ಸಿಗುವುದು ಹೋಮಿಯೋಪಥಿ ಮಾತ್ರ.

ಆಧುನಿಕ ವೈದ್ಯವಿಜ್ಞಾನ ವಿಶೇಷತಜ್ಞರನ್ನು ಸೃಜಿಸಿ ಮನುಷ್ಯನನ್ನು ಬಿಡಿಬಿಡಿಭಾಗಗಳಾಗಿ ನೋಡುತ್ತಿದೆಯೇ ಹೊರತು ಸಮಗ್ರವಾಗಿ ನೋಡಿಲ್ಲ. ಹೀಗಾಗಿ ವೈದ್ಯ ವಿಜ್ಞಾನ ಪರಿಪೂರ್ಣ ಎಂದು ಹೇಳಲಾಗದು. ಆದರೆ, ಹೋಮಿಯೋಪಥಿ ಮಾನವೀಯ ಮೌಲ್ಯ ಒಳಗೊಂಡ ಸಮಗ್ರ ಪದ್ಧತಿ.

ಡಾ.ಬಿ.ಟಿ.ರುದ್ರೇಶ್, ಅಧ್ಯಕ್ಷ, ಕರ್ನಾಟಕ ಹೋಮಿಯೋಪಥಿ ಮಂಡಳಿ, ಬೆಂಗಳೂರು

ಅನುಭವಾಧಾರಿತ ವೈದ್ಯಪದ್ಧತಿ

ಹೋಮಿಯೋಪಥಿ ವಿಜ್ಞಾನವಲ್ಲ. ಆದರೆ, ಅದು ನಂಬಿಕೆಯನ್ನು ಆಧರಿಸಿದ್ದಲ್ಲ. ಅದನ್ನು, ಅನುಭವಾಧಾರಿತ (ಪ್ರಾಗ್ಮ್ಯಾಟಿಕ್) ವೈದ್ಯಪದ್ಧತಿ ಎನ್ನುವುದು ವೈಜ್ಞಾನಿಕ ದೃಷ್ಟಿಯ ನಿರಪೇಕ್ಷತೆಗೆ ಹೊಂದಿಕೊಳ್ಳುವ ಅಭಿಪ್ರಾಯ. ಹೋಮಿಯೋಪಥಿ ವಿಷಯದಲ್ಲಿ 'ಹುಸಿ ನಂಬಿಕೆ' ಎಂಬುದೂ ಸರಿಯಲ್ಲ. ಆಕಾಶಕ್ಕೆ ಕಲ್ಲು ಹೊಡೆದರೆ ಹಣ್ಣು ಉದುರುತ್ತದೆ ಎಂದರೆ ಹುಸಿನಂಬಿಕೆ. ಹಣ್ಣಿನ ಮರಕ್ಕೆ ಗುರಿಯಿಟ್ಟು ಕಲ್ಲು ಹೊಡೆದರೆ ಹಣ್ಣು ಉದುರುತ್ತದೆ ಎಂಬುದು ಅನುಭವ ಮೂಲದ ನಂಬಿಕೆ. ಹುಸಿ ನಂಬಿಕೆ ಎನ್ನುವ ಮುನ್ನ ಈ ವ್ಯತ್ಯಾಸ ತಿಳಿಯಬೇಕಿತ್ತು. ಹಾಗೆಯೇ ಹಾನಿಮನ್ ವ್ಯಕ್ತಿ ವಿವರಗಳಲ್ಲಿ ಅಗೌರವ-ನಿಂದನೆಯ ಛಾಯೆ ಇದೆ.

ಹೋಮಿಯೋಪಥಿಯಲ್ಲಿ ರೋಗ ನಿದಾನದ ಉಪಯುಕ್ತತೆಗೆ ಮಹತ್ವವಿದೆ. ಇದನ್ನು ತಿಳಿಯದವರು ಅಥವಾ ಉಪೇಕ್ಷಿಸುವವರು ಅದರ ಬಡಜನ ಸ್ನೇಹಿ ವೆಚ್ಚವನ್ನು ಮುಖ್ಯವೆಂದು ಪರಿಗಣಿಸದೆ, ಅದರ 'ವಿಷಕಾರಕ' ಮತ್ತು 'ಅಪಾಯಕಾರಿ' ಅಂಶಗಳ ಕುರಿತು ದೊಡ್ಡ ಗಂಟಲಿನಲ್ಲಿ ಹೇಳುತ್ತಾರೆ. ಈ ಪದ್ಧತಿಯ ಅಪಬಳಕೆಯಲ್ಲಿರುವ ಸಂದಿಗ್ಧತೆ, ಅಪಾಯ ಎಲ್ಲಾ ವೈದ್ಯ ಪದ್ಧತಿಯಲ್ಲೂ ಇರುವಂಥದ್ದೇ. ಲಾಭಕ್ಕಾಗಿ ಏನು ಬೇಕಾದರೂ ಮಾಡಲು ಹಿಂಜರಿಯದ ಔಷಧ ಮತ್ತು ಪರೀಕ್ಷಾ ಉಪಕರಣ ಕಂಪನಿಗಳ ಲಾಭಬಡುಕ ಮನೋಭಾವದ ಮುಂದೆ ವೈಜ್ಞಾನಿಕತೆಯ ಪ್ರಶ್ನೆ ಹಿಂದೆ ಸರಿದುಬಿಡುತ್ತದೆ ಅಲ್ಲವೇ?

ವಿ.ಎನ್. ಲಕ್ಷ್ಮೀನಾರಾಯಣ, ಮೈಸೂರು

ನಂಬಿಕೆ ಇಟ್ಟವರಿಗೆ ಆಘಾತ

'ಹೋಮಿಯೋಪಥಿ, ಹುಸಿನಂಬಿಕೆಗಳಿಗೆ ಹೊಸ ಪೆಟ್ಟು' ಲೇಖನದಿಂದ ಹೋಮಿಯೋಪಥಿ ಚಿಕಿತ್ಸೆಯಲ್ಲಿ ನಂಬಿಕೆ ಇಟ್ಟಿರುವ ನನ್ನಂತಹ ಅನೇಕರಿಗೆ ಆಘಾತವಾಗಿದೆ. ನಾನು ಹೋಮಿಯೋಪಥಿ ಚಿಕಿತ್ಸೆ ಪಡೆದು ಗುಣಮುಖನಾಗಿದ್ದೇನೆ. ಸುಮಾರು ಹತ್ತು ವರ್ಷಗಳ ಹಿಂದೆ, ಮೆದುಳಿಗೆ ರಕ್ತ ಸಂಚಾರವಾಗುವ ನರಗಳಿಗೆ ಸಂಬಂಧಿಸಿದಂತೆ ಮೈಸೂರಿನ ಪ್ರತಿಷ್ಠಿತ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿದೆ. ಸ್ಕ್ಯಾನಿಂಗ್ ವರದಿಯ ಪ್ರಕಾರ ಎಡಭಾಗದ ರಕ್ತ ನಾಳಗಳು ಸಂಪೂರ್ಣ ಮುಚ್ಚಿಹೋಗಿದ್ದವು. ನನಗೆ ಮೆದುಳಿಗೆ ರಕ್ತ ಪೂರೈಕೆ ಆಗುವ ನರಕ್ಕೆ ಸ್ಟೆಂಟ್ ಅಳವಡಿಸಲಾಗಿತ್ತು. ಪುನಃ ಅಲ್ಲಿ ಚಿಕಿತ್ಸೆಗೆ ಹೋದರೆ ಲಕ್ಷಾಂತರ ರೂಪಾಯಿ ಹೊಂಚಬೇಕಾಗುತ್ತದೆ ಎಂದು, ಹೋಮಿಯೋಪಥಿ ವೈದ್ಯರ ಬಳಿ ಹೋದೆ. ಅವರು ಕೊಟ್ಟ ಔಷಧಿಯನ್ನು ಒಂದು ತಿಂಗಳು ತೆಗೆದುಕೊಂಡು ಪುನಃ ಸ್ಕ್ಯಾನಿಂಗ್ ಮಾಡಿಸಿದೆ. ಪವಾಡವೆಂಬಂತೆ ನನ್ನ ರಕ್ತನಾಳಗಳು ಬಹುತೇಕ ಶುದ್ಧವಾಗಿದ್ದವು.

ಮಹಮ್ಮದ್ ಕಲೀಂಉಲ್ಲ, ನಾಗಮಂಗಲ

ಆಧಾರವಿಲ್ಲದ ವಾದ

ಲೇಖಕರು ಜಿರಳೆಯ ಕಥೆಯೊಂದನ್ನು ಹೆಣೆದಿದ್ದಾರೆ, ಇದು ಸತ್ಯಕ್ಕೆ ದೂರ. ಇವರಿಗೆ ಹೋಮಿಯೋಪಥಿ ಕುರಿತು ಕನಿಷ್ಠ ಮಾಹಿತಿಯೂ ಇದ್ದಂತಿಲ್ಲ. ಅಸ್ತಮಾಕ್ಕೆ ಹೋಮಿಯೋಪಥಿಯಲ್ಲಿ ನೂರಾರು ಔಷಧಿಗಳಿವೆ. ಇಲ್ಲಿ ರೋಗಕ್ಕೆ ಔಷಧಿಯನ್ನು ಕೊಡುವ ಬದಲಾಗಿ, ರೋಗಿಗೆ ಔಷಧಿ ಕೊಡಲಾಗುತ್ತದೆ. ಅಸ್ತಮಾ ರೋಗಿಯ ಗುಣ ಲಕ್ಷಣಗಳು, ಜಿರಳೆಯ ಔಷಧಿಯ ಗುಣಲಕ್ಷಣಗಳಿಗೆ ಹೋಲಿಕೆಯಾದಲ್ಲಿ ಮಾತ್ರವೇ ಬ್ಲಾಟ ಓರಿಎಂಟಾಲಿಸ್ ಔಷಧಿ ನೀಡಬಹುದಾಗಿದೆ. ಕೋವಿಡ್ ಕಾಲದಲ್ಲಿ ಹೋಮಿಯೋಪಥಿ ಔಷಧಿ ಸೇವಿಸಿದವರ ಲಿವರ್ ಕೆಟ್ಟು ಪ್ರಾಣಬಿಟ್ಟ ಉದಾಹರಣೆಗಳಿವೆ ಎಂದು ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಯಾವುದೇ ಆಧಾರವಿಲ್ಲದ ಈ ಆರೋಪ ನೂರಾರು ವರ್ಷಗಳ ಇತಿಹಾಸವಿರುವ, ವೈಜ್ಞಾನಿಕ, ಅಡ್ಡ ಪರಿಣಾಮಗಳಿಲ್ಲದ ಹೋಮಿಯೋಪಥಿಯ ಮೇಲೆ ಗೂಬೆ ಕೂರಿಸಿ ಜನರಲ್ಲಿ ಗೊಂದಲ ಸೃಷ್ಟಿಸುವ ಹುನ್ನಾರದಂತಿದೆ.

ಡಾ.ರಾಜೇಶ್ ಎಂ., ಹೋಮಿಯೋಪಥಿ ವೈದ್ಯ, ಪುತ್ತೂರು

‘ವ್ಯಕ್ತಿ ನಿಮಿತ್ತ, ಸಾಹಿತ್ಯವೇ ದೊಡ್ಡದು

ವಿಶಾಖ ಎನ್.

ಕೇಂದ್ರ ಸಾಹಿತ್ಯ ಅಕಾಡೆಮಿಯ ಅನುವಾದ ಪ್ರಶಸ್ತಿಗೆ ಭಾಜನವಾದ ಕೃತಿ ‘ಸೀತಾ: ರಾಮಾಯಣದ ಸಚಿತ್ರ ಮರುಕಥನ’ ಸಾಕಷ್ಟು ಓದುಗರ ಮೆಚ್ಚುಗೆಗೆ ಪಾತ್ರವಾಗಿದೆ. ದೇವದತ್ತ ಪಟ್ಟನಾಯಕ ಇಂಗ್ಲಿಷ್‌ನಲ್ಲಿ ಬರೆದಿದ್ದ ‘ಸೀತಾ’ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದವರು ಪದ್ಮರಾಜ ದಂಡಾವತಿ. ಪ್ರಶಸ್ತಿಯ ಪುಲಕದಲ್ಲೇ ಅವರು ಸಾಹಿತ್ಯದ ಸುಖ, ಅನುವಾದದ ಸವಾಲು, ಪತ್ರಿಕೋದ್ಯಮದ ಅನುಭವ ಎಲ್ಲವುಗಳ ಕುರಿತು ಮುಕ್ತವಾಗಿ ಮಾತನಾಡಿದರು.

- **‘ಪ್ರಜಾವಾಣಿ’ಯಲ್ಲಿ ಸುದೀರ್ಘಾವಧಿ ಪತ್ರಕರ್ತರಾಗಿ ಕೆಲಸ ಮಾಡಿ, ಕಾರ್ಯನಿರ್ವಾಹಕ ಸಂಪಾದಕ ಹುದ್ದೆಗೆ ಏರಿ ನಿವೃತ್ತರಾದವರು ನೀವು. ಪತ್ರಿಕಾ ಕೆಲಸವೇ ಕೃತಿಯ ಅನುವಾದಕ್ಕೆ ಪ್ರೇರೇಪಿಸಿತೋ ಅಥವಾ ವಸ್ತುವಿಷಯ ಆಕರ್ಷಿಸಿತೋ?**


ಪತ್ರಕರ್ತ ಪದ್ಮರಾಜ ದಂಡಾವತಿಗೆ ಈ ಪ್ರಶಸ್ತಿ ಬಂದಿದೆ ಎಂದಷ್ಟೆ ಹೇಳುವುದು ನನಗೆ ಇಷ್ಟವಿಲ್ಲ. ಪತ್ರಿಕೆಯಲ್ಲಿ ನಾನು ಕೆಲವು ಅನುವಾದಗಳನ್ನು ಮಾಡಿರಬಹುದು, ಲೇಖನಗಳನ್ನು ಬರೆದಿರಬಹುದು. ಆದರೆ, ಎಂದೂ ಒಂದು ಕೃತಿಯನ್ನು ಅನುವಾದಿಸಬೇಕು ಎನಿಸಿರಲಿಲ್ಲ. ನಾನು ‘ನಾಲ್ಕನೇ ಆಯಾಮ’ ಅಂಕಣದಲ್ಲಿ ಒಮ್ಮೆ ‘ಜಯ’ ಕೃತಿಯ ಬಗೆಗೆ ಬರೆದಿದ್ದೆ. ಗಿರಡ್ಡಿ ಗೋವಿಂದರಾಜ ಅದನ್ನು ಅನುವಾದಿಸಿದ್ದರು. ದೇವದತ್ತ ಪಟ್ಟನಾಯಕ ಅವರೇ ಬರೆದಿದ್ದ ಕೃತಿಯ ಅನುವಾದ ಅದು. ವರ್ಷಗಳ ನಂತರ ಅದೇ ದೇವದತ್ತ ಬರೆದ ‘ಸೀತಾ’ ಓದಿದೆ. ಅದನ್ನೂ ಯಾಕೆ ಅನುವಾದಿಸಬಾರದು ಎಂದು ಗಿರಡ್ಡಿ ಅವರಿಗೆ ಸೂಚಿಸಿದೆ. ಅವರು ‘ನೀನೇ ಮಾಡಬಹುದು. ನಿನ್ನ ಕನ್ನಡ ಚೆನ್ನಾಗಿದೆ’ ಎಂದರು. ನನ್ನನ್ನು ಆ ಕೃತಿಯ ಅಂತಃಸತ್ವ ಬಹುವಾಗಿ ಕಾಡಿತ್ತು. ಹೀಗಾಗಿ ಅನುವಾದ ಮಾಡಿದೆ.

- **ಕಾಡಿದ್ದ ಕೃತಿಯ ಅಂತಃಸತ್ವದ ಕೆಲವು ಭಾಗಗಳನ್ನು ಹಂಚಿಕೊಳ್ಳಿ...**

ಸೀತಾಯಣ ಇದು. ಸೀತಾ ರಾಮಾಯಣ. ಎಂ.ಎಸ್. ಆಶಾದೇವಿ ಅವರು ಮಯೂರ ಮಾಸಪತ್ರಿಕೆಯಲ್ಲಿ ಬರೆದ ವಿಮರ್ಶೆಯಲ್ಲಿ ಇದನ್ನು ಸ್ಪಷ್ಟವಾಗಿ ಗುರುತಿಸಿದ್ದರು. ಅನುವಾದದಲ್ಲಿ ನನಗೆ ಸಲಹೆ ನೀಡಿದ ಸಿ.ಎನ್. ರಾಮಚಂದ್ರನ್ ಅವರೂ ಅದನ್ನೇ ಹೇಳಿದ್ದರು. ಸೀತೆ, ದ್ರೌಪದಿ ಪಟ್ಟಿರುವ ಕಷ್ಟದ ಮುಂದೆ ನಮ್ಮದೆಲ್ಲ ಏನೇನೂ ಅಲ್ಲ.

ರಾವಣ ಅಪಹರಿಸಿದ ಮೇಲೆ ಅವಳು ರಾಮನನ್ನು ಮತ್ತೆ ಸೇರಿದ ಸಂದರ್ಭ ಇದೆ. ಆಗ ರಾಮ, ‘ರಘುವಂಶ ಕುಲದ ಕಣ್ಣಿನ ಕಪ್ಪು ಚುಕ್ಕಿ ನೀನು’ ಎನ್ನುತ್ತಾನೆ. ವಿಭೀಷಣ, ಸುಗ್ರೀವ ಅಥವಾ ಲಕ್ಷ್ಮಣನ ಜತೆಗೆ ಹೋಗು ಎನ್ನುತ್ತಾನೆ. ಆಗ ಸೀತೆ ಅಗ್ನಿಪರೀಕ್ಷೆಗೆ ಗುರಿಯಾಗುತ್ತಾಳೆ. ಪಟ್ಟಾಭಿಷೇಕಕ್ಕೆ ಹೋಗಬೇಕಾದ ರಾಮ ಕಾಡಿಗೆ ಹೊರಟಾಗ ಅವನೊಟ್ಟಿಗೆ ಇವಳೂ ಹೊರಟು ನಿಲ್ಲುತ್ತಾಳೆ. ರಾಮನಿಗೆ ತನ್ನ ವಂಶದ ಕೀರ್ತಿಯದ್ದೇ ವ್ಯಾಕುಲ ಕಾಡುತ್ತದೆ. ತಂದೆ ಸತ್ತಮೇಲೆ ಅವನಿಗೆ ವನವಾಸ ಬಿಟ್ಟು ವಾಪಸ್ ಅರಮನೆಗೆ ಹೋಗುವಂತೆ ಕೆಲವರು ಸೂಚಿಸಿದರೂ ಅವನು ಹೋಗುವುದಿಲ್ಲ. ಮರ್ಯಾದಾ ಪುರುಷ ಎನಿಸಿಕೊಂಡ ಅವನು ಒಳ್ಳೆಯ ಗಂಡನಾ, ಒಳ್ಳೆಯ ತಂದೆಯಾ...ಎಂದರೆ ಅಲ್ಲ. ಅವನ ತೊಡೆಯ ಮೇಲೆ ಮಕ್ಕಳು ಬೆಳೆಯಲೇ ಇಲ್ಲ.

ವೇದ-ಉಪನಿಷತ್ತುಗಳನ್ನು ಕೇಳಿದ್ದ ವಾತಾವರಣದಲ್ಲಿ ಬೆಳೆದ ಸೀತೆ ಮಾಯಾಜಿಂಕೆ ತಾ ಎಂದೊಡನೆ ರಾಮನೂ ಅದರ ಹಿಂದೆ ಓಡುತ್ತಾನೆ. ಅಷ್ಟೆಲ್ಲ ವಿಜ್ಞಾನ ಓದಿದ ರಾವಣ ಕ್ಷಣಮಾತ್ರದಲ್ಲಿ


ಪದ್ಮರಾಜ ದಂಡಾವತಿ

ಸೀತೆಯನ್ನು ಹೊತ್ತೊಯ್ಯುತ್ತಾನೆ. ಇವೆಲ್ಲವೂ ಬದುಕಿನ ರೂಪಕಗಳು. ಇಂತಹವನ್ನು ಅರಿಯಲು ಕಾವ್ಯದ ಓದು ನಮಗೆ ಬೇಕು.

- **ನೀವೇ ಹೇಳಿಕೊಂಡಂತೆ ಸದಾ ನೀವು ಸಾಹಿತ್ಯದ ವಿದ್ಯಾರ್ಥಿ. ಈ ಆಸಕ್ತಿಗೆ ಕಾರಣವಾದ ಬಾಲ್ಯದ ಘಟನೆ ಯಾವುದು?**

ನನ್ನ ತಾಯಿ ಯಾವಾಗಲೂ ಶುದ್ಧಬರಹ ಬರಿ ಎನ್ನುತ್ತಿದ್ದಳು. ಮಗ್ಗಿ ಬರಿ ಎನ್ನುತ್ತಿದ್ದಳು. ನನ್ನೂರು ಮುದ್ದೇಬಿಹಾಳ. ಅಲ್ಲಿ ಗ್ರಂಥಾಲಯಕ್ಕೆ ಹೋಗಿ ಪತ್ರಿಕೆ, ಪುಸ್ತಕ ಓದುತ್ತಿದ್ದೆ. ಅನಕೃ, ಶಿವರಾಮ ಕಾರಂತರ ಕೃತಿಗಳು ಅಲ್ಲೇ ನನಗೆ ದಕ್ಕಿದ್ದು. ಅಂಕಣ ಬರೆಯುವಾಗಲೂ ಆ ಓದು ನನಗೆ ನೆರವಾಯಿತು. ಆ ಗ್ರಂಥಾಲಯದಲ್ಲಿಯೇ ನನ್ನ ಸಾಹಿತ್ಯದ ಬೀಜವಿದೆ ಎನಿಸುತ್ತದೆ.

- **ಅಂಕಣ ಬರವಣಿಗೆಯಲ್ಲೂ ನೀವು ಸಾಹಿತ್ಯ, ಸಂಸ್ಕೃತಿಯ ವಿಷಯಗಳನ್ನು ಹೆಚ್ಚಾಗಿ ತರುತ್ತಿದ್ದಿರಲ್ಲವೆ?**

ಸಾಂಸ್ಕೃತಿಕ ಸ್ವರೂಪದ ವಸ್ತುಗಳಿಗೇ ಹೆಚ್ಚು ಪ್ರತಿಕ್ರಿಯೆ ಬರುತ್ತಿತ್ತು. ಸಿನಿಮಾ, ಕಾದಂಬರಿ ಬಗೆಗೆ ಬರೆದಾಗ ಅನೇಕರು ಮೆಚ್ಚುತ್ತಿದ್ದರು. ಕೃಷಿ, ಸಾಹಿತ್ಯ, ರಾಜಕೀಯ ಹೀಗೆ ವೈವಿಧ್ಯಮಯ ವಿಷಯಗಳನ್ನು ಓದುಗರಿಗೆ ರುಚಿಸುವಂತೆ ಬರೆಯುವುದೇ ಸವಾಲು. ಅದನ್ನು ನಿಭಾಯಿಸಲು ಸಾಹಿತ್ಯದ ಓದು ನನ್ನ ನೆರವಿಗೆ ಬಂದಿತ್ತು.

- **ಪತ್ರಿಕೋದ್ಯಮ ಈಗ ವೇಗ, ಬಹುಮಾಧ್ಯಮದ ನಿಕಷಕ್ಕೆ ಒಳಪಡುತ್ತಿದೆ. ಆ ಕಾಲದ ಪತ್ರಕರ್ತರಿಗೂ, ಈ ಕಾಲದವರಿಗೂ ಏನು ವ್ಯತ್ಯಾಸವಿದೆ?**

ಮೌಲ್ಯಗಳು ಯಾವಾಗಲೂ ಹಾಗೆಯೇ ಇವೆ. ಒಳ್ಳೆಯ ಭಾಷೆ ಇರಬೇಕು ಎನ್ನುವುದು ಬರವಣಿಗೆಯ ಮೂಲ. ಇಂಗ್ಲಿಷ್, ಹಿಂದಿ ಯಾವುದನ್ನೇ ಓದಿದರೂ ಅದು ಬರವಣಿಗೆಗೆ ನೆರವು ನೀಡುತ್ತದೆ. ಇಂಗ್ಲಿಷ್ ಸುದ್ದಿಯಲ್ಲಿ ತಪ್ಪು ಬಹಳ ಕಡಿಮೆ ಇರುತ್ತದೆ. ತಪ್ಪಿಲ್ಲದೆ ಬರೆಯುವ ಬಾಧ್ಯಸ್ಥಿಕೆ ಕನ್ನಡದಲ್ಲೇ ಕಡಿಮೆ ಆಗುತ್ತಿದೆ.

- **ನಿವೃತ್ತಿಯ ನಂತರ ನಿಮ್ಮ ಬರವಣಿಗೆಯ ದಿಕ್ಕು ಸಾಹಿತ್ಯಪ್ರಣೀತವೇ ಆಯಿತಲ್ಲವೆ?**

ನಿವೃತ್ತಿಯಾದಾಗ ನಾನೇನು ಮಾಡಬೇಕು ಎನ್ನುವ ಪ್ರಶ್ನೆ ಇತ್ತು. ಅದಕ್ಕೆ ಉತ್ತರರೂಪದಲ್ಲಿ ಬರವಣಿಗೆಯಲ್ಲಿ ತೊಡಗಿದೆ. ಜರ್ಮನ್ ಮೂಲದ ಹೆನ್ರಿಷ್ ಬೋಲ್ 1974ರಲ್ಲಿ ಬರೆದ ‘ಲಾಸ್ಟ್ ಆನರ್ ಆಫ್ ಕ್ಯಾಥರೀನಾ ಬ್ಲೂಮ್’ ಎನ್ನುವ ಕೃತಿಯನ್ನು ‘ಕ್ಯಾಥರೀನಾ ಏನಾದಳು?’ ಎಂಬ ಶೀರ್ಷಿಕೆಯಲ್ಲಿ ಅನುವಾದಿಸಿರುವೆ. ಅದರಲ್ಲಿ ಮಾಧ್ಯಮದ ಕಥೆಯ ಜತೆಗೆ ಮನುಷ್ಯನ ಕಥೆಯೂ ಇದೆ. ಅದನ್ನು ಅನುವಾದ ಮಾಡುವಂತೆ ಸಲಹೆ ನೀಡಿದವರು ಸಿ.ಎನ್. ರಾಮಚಂದ್ರನ್. ‘ಕನ್ನಡ ಪತ್ರಿಕೋದ್ಯಮ: 30 ವರ್ಷ’ ಎನ್ನುವ ವಿಷಯವಾಗಿ ಹಂಪಿ ವಿಶ್ವವಿದ್ಯಾಲಯದಿಂದ ಡಿ.ಲಿಟ್ ಕೂಡ ಮಾಡಿದೆ.

- **ಸಾಹಿತ್ಯ ಕೃತಿಯ ಅನುವಾದ ಒಡ್ಡಿದ ಸವಾಲುಗಳೇನು?**

ಇಂಗ್ಲಿಷ್ ಭಾರತೀಯ ಭಾಷೆಯಲ್ಲ. ಅದರ ರೂಪುರೇಷೆ, ವಾಕ್ಯರಚನೆ ಎಲ್ಲವೂ ಭಿನ್ನ. ಹೀಗಾಗಿ ಅದನ್ನು ನಮ್ಮ ಭಾಷೆಗೆ ತರುವುದು ಸವಾಲಿನ ಕೆಲಸ. ದ್ರಾವಿಡ ಭಾಷೆಗಳಲ್ಲೇ ಪರಸ್ಪರ ಅನುವಾದ ಮಾಡುವಾಗ ಈ ರೀತಿ ಕಷ್ಟ ಇರೊಲ್ಲ. ‘ವರ್ಬ್ಯಾಟಮ್’ ಆಗದಂತೆ ಅನುವಾದಿಸುವುದು ಕಷ್ಟ. ನನಗೆ ‘ಸೀತೆ’ ಬಹುವಾಗಿ ಕಾಡಿತು. ಎಷ್ಟೋ ಸಲ ನಡುರಾತ್ರಿಯೂ ಎದ್ದು ಕೂರುತ್ತಿದ್ದೆ. ದೇವದತ್ತ ಪಟ್ಟನಾಯಕ ತಮ್ಮದೇ ಆದ ‘ಫಾರ್ಮ್’ ರೂಢಿಸಿಕೊಂಡಿದ್ದಾರೆ. ರಾಮಚಂದ್ರ ಚರಿತ ಪುರಾಣದಲ್ಲಿ ಹಾಗಿದೆ, ಹೀಗಿದೆ ಎಂಬ ಉಲ್ಲೇಖವೂ ಇರುತ್ತದೆ. ಇವೆಲ್ಲ ಅವರ ಓದಿನ ಮೊತ್ತ. ಇಂಥದನ್ನು ಅನುವಾದಿಸುವಾಗ ಕನ್ನಡದ ಮೇಲೂ ಹಿಡಿತ ಇದ್ದರಷ್ಟೆ ಅನುವಾದ ಚೆನ್ನಾಗಿ ಆಗುತ್ತದೆ.

ಗಿರಡ್ಡಿ ಅವರು ಹೇಳದೇ ಇದ್ದರೆ ಈ ಕೃತಿಯನ್ನು ನಾನು ಅನುವಾದ ಮಾಡುತ್ತಿರಲಿಲ್ಲ. ಮನೋಹರ ಗ್ರಂಥಮಾಲಾದವರು ಬಹಳ ಚೆನ್ನಾಗಿ ಮುದ್ರಿಸಿದ್ದಾರೆ. ಸಿ.ಎನ್. ರಾಮಚಂದ್ರನ್ ಅವರು ಅದನ್ನು ಪರಿಷ್ಕರಿಸಲು ನೆರವಾದರು. ಅವರಿಗೆಲ್ಲ ನಾನು ಆಭಾರಿ. ಈ ಅನುವಾದ ನನ್ನ ಬದುಕಿನ ಅತ್ಯಂತ ಸೃಷ್ಟ್ಯಾತ್ಮಕ ಪ್ರಕ್ರಿಯೆ.

- **ಈ ಕೃತಿಗೆ ಸಿಕ್ಕ ಜನಮೆಚ್ಚುಗೆ ಎಂಥದು?**

ನಾನೇ ಬೆರಗಾಗುವಷ್ಟು. ಅನೇಕರು ಫೋನ್ ಮಾಡಿ ಮಾತನಾಡಿದರು. ಬರೆದು, ಖುಷಿ ಹಂಚಿಕೊಂಡರು. ಬಿಎಂಶ್ರೀ ಪ್ರತಿಷ್ಠಾನ, ಕರ್ನಾಟಕ ಸಂಘ ಕೊಡಮಾಡುವ ಪ್ರಶಸ್ತಿಗಳೂ ಸಂದವು. ಒಂದು ಪ್ರಮುಖ ಪ್ರಶಸ್ತಿ ಮಾತ್ರ ಯಾವುದೋ, ಯಾರದ್ದೋ ಕಾರಣಕ್ಕೆ ಕೈತಪ್ಪಿತು. ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಮೇಲೆ ಬದುಕು ಪರಿಪೂರ್ಣ ಎನ್ನುವ ಭಾವನೆ ಮೂಡಿತು. ಗಿರಡ್ಡಿ ಅವರು ‘ಜಯ’ ಅನುವಾದ ಮಾಡಿದಾಗ ಅದಕ್ಕೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿತ್ತು. ಈಗ ಈ ಕೃತಿಗೆ. ಅದನ್ನು ನೋಡಲು ಅವರಿಲ್ಲ. ವ್ಯಕ್ತಿ ನಿಮಿತ್ತ ಮಾತ್ರ, ಸಾಹಿತ್ಯವೇ ದೊಡ್ಡದು ಎನ್ನುವುದಕ್ಕೆ ಇದುವೇ ಸಾಕ್ಷಿ.

- **ಪತ್ರಕರ್ತರು ಅನುವಾದದ ಕೆಲಸದಲ್ಲಿ ಮುಳುಗೇಳಬೇಕಾಗುತ್ತದೆ. ಈ ಪ್ರಕ್ರಿಯೆಯು ಸಾಹಿತ್ಯ ಕೃತಿಯ ಅನುವಾದದಲ್ಲೂ ಕೆಲಸಕ್ಕೆ ಬರಬಹುದೆ?**

ಪತ್ರಿಕೋದ್ಯಮದ ಕಾಪಿ ಅನುವಾದ ಮಾಡುವುದರಿಂದ ಮಹಾಕೃತಿಯ ಅನುವಾದಕ್ಕೆ ಅಷ್ಟೇನೂ ನೆರವು ಸಿಗಲಾರದು. ಸಾಹಿತ್ಯಿಕವಾದ ಬಹಳ ಸಂವೇದನೆ ಇದ್ದರಷ್ಟೆ ಇದು ಸಾಧ್ಯ.


ವೇದ- ಉಪನಿಷತ್ತುಗಳ ಓದಿಗಿಂತ ಸಾಹಿತ್ಯದ ಓದು ದೊಡ್ಡದು. ಮಹಾಕಾವ್ಯದ ಓದು ಬದುಕಿನ ಅಸಂಗತತೆಯನ್ನು ತೋರಿಸುತ್ತದೆ. ಕೊನೆಯಲ್ಲಿ ದುರ್ಯೋಧನನೂ ಸ್ವರ್ಗಕ್ಕೆ ಹೋಗುತ್ತಾನೆ. ಧರ್ಮರಾಯನೂ ಹೋಗುತ್ತಾನೆ!

- **ಈಗ ಯಾವ ಕೃತಿ ರಚನೆಯಲ್ಲಿ ತೊಡಗಿದ್ದೀರಿ?**

ಆತ್ಮಚರಿತ್ರೆ ಬರೆಯುತ್ತಿರುವೆ. ತೆರೆಮೇಲೆ ನೋಡಿ.

ಮೊದಲ ಓದು

ಪ್ರಚಲಿತ ರಾಜಕೀಯ ಮಹಾಭಾರತ



ಹಸ್ತಿನಾವತಿ
ಲೇ: ಜೋಗಿ
ಪ್ರ: ಅಂಕಿತ ಪುಸ್ತಕ ಬೆಂಗಳೂರು
ಸಂ: 9019190502
ಪು: 408 ₹450

ಮಹಾಭಾರತ ಅಂದಿಗೂ ಇಂದಿಗೂ ಪ್ರಸ್ತುತವೇ. ಅದರಲ್ಲೂ ರಾಜಕಾರಣದ ಸಂದರ್ಭದಲ್ಲಿ ನೋಡಿದರೆ ಕಾಲವಷ್ಟೇ ಬದಲಾಗಿದೆ; ತಂತ್ರ, ನೀತಿ, ವ್ಯವಸ್ಥೆ ಬದಲಾಗಿಲ್ಲ. ಇಂದಿನ ಕಾಲಘಟ್ಟಕ್ಕೆ ಹೊಂದುವಂತೆ ಹಿಂದಿನ ಮಹಾನ್ ಕಥನದ ಛಾಯೆ ಇಟ್ಟುಕೊಂಡು ರೂಪತಾಳಿದೆ ‘ಹಸ್ತಿನಾವತಿ’. ಪತ್ರಕರ್ತ ಜೋಗಿ ಅವರ 20ನೇ ಕಾದಂಬರಿ ಇದಾಗಿದ್ದು, ಈ ಕಾದಂಬರಿಯಲ್ಲೂ ಎಂದಿನಂತೆ ಜೋಗಿ ‘ಟಚ್’ ಇದೆ.

ದೇಶದ ಪ್ರಧಾನಿ ಸಂಜಯ್ ಸರ್ಕಾರ್, ಅವನಿಗೊಬ್ಬ ರಾಜಕೀಯ ತಂತ್ರಗಾರ ಸಹದೇವ, ಹೊರನೋಟಕ್ಕೆ ಏಕಾಂಗಿ ಅನಿಸಿಕೊಂಡಿರುವ ಪ್ರಧಾನಿಯ ಒಳಗಿನ ತುಮುಲಗಳು, ವೈಯಕ್ತಿಕ ಸಂಬಂಧಗಳು ಸಾರ್ವಜನಿಕ ಬದುಕಿನಲ್ಲಿ ಬಟಾ ಬಯಲಾಗುವ ಸಾಧ್ಯತೆ ಸದಾ ಇರುತ್ತದೆ. ಅದರಿಂದಾಗುವ ಅಪಾಯಗಳು, ಮುಗಿಬೀಳಲು ಕಾಯುತ್ತಿರುವ ಪ್ರತಿಸ್ಪರ್ಧಿಗಳು, ಸಣ್ಣ ಘಟನೆಗಳನ್ನೂ ವೈಭವೀಕರಿಸುವ (ಕೆಲವೊಮ್ಮೆ ವ್ಯವಸ್ಥೆಯನ್ನು ಕುಲಗೆಡಿಸುವ) ಮಾಧ್ಯಮಗಳು ಒಟ್ಟಾರೆ ಸಂಘರ್ಷಗಳನ್ನು ‘ಮಹಾಭಾರತ’ದ ಒಳ ಚೌಕಟ್ಟಿನಲ್ಲಿ ಕಟ್ಟಿಕೊಡಲು ಪ್ರಯತ್ನಿಸಿದೆ ಈ ಕೃತಿ. ಇಲ್ಲಿ ಬಿಲ್ಲು-ಬಾಣ, ಬುಲೆಟ್-ಬಾಂಬ್‌ಗಳು ಸದ್ದು ಮಾಡಿಲ್ಲ. ಆದರೆ, ಒಳಗೊಳಗೇ ನಡೆಯುವ ತಂತ್ರ-ಕುತಂತ್ರ, ಕುದಿ ಬೇಗುದಿಗಳನ್ನು ಯುದ್ಧದ ರೀತಿಯಲ್ಲೇ ಕಟ್ಟಿಕೊಡಲಾಗಿದೆ. ಸದ್ಯದ ಸರ್ಕಾರದ ಅವಧಿಯಲ್ಲೇ ನಡೆದ ಅನೇಕ ಘಟನೆಗಳಿಗೆ ಒಂದಿಷ್ಟು ಕಾಲ್ಪನಿಕ ಸ್ಪರ್ಶ ನೀಡಲಾಗಿದೆ. ದೆಹಲಿಯಲ್ಲಿ ಆರಂಭವಾಗುವ ಕಥೆ ದಕ್ಷಿಣ ಕನ್ನಡದ ಸುರತ್ಕಲ್‌ವರೆಗೂ ಬಂದು ಹಾದು ಹೋಗುತ್ತದೆ. ನಡುವೆ ಎಷ್ಟೊಂದು ರಾಜಕಾರಣ, ಏನೆಲ್ಲ ಧರ್ಮಕಾರಣ.

ಅಧ್ಯಾಯದಿಂದ ಅಧ್ಯಾಯಕ್ಕೆ ಹೊಸ ತಿರುವುಗಳನ್ನು ಪಡೆಯುತ್ತಾ, ಅನಿರೀಕ್ಷಿತ ಘಟನೆಗಳಿಗೆ ಖೋ ಕೊಡುತ್ತಾ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ ಕಥೆ. ಇತಿಹಾಸ ಮರುಕಳಿಸುತ್ತದೆ ಎನ್ನುವ ಮಾತಿದೆ. ಅದು ಹೇಗೆ ಮರುಕಳಿಸುತ್ತದೆ ಎನ್ನುವುದಕ್ಕೆ ಈ ಕಾದಂಬರಿಯಲ್ಲಿ ಸಾಕ್ಷ್ಯಗಳಿವೆ. ಕಥೆಯ ಚೌಕಟ್ಟಿಗೆ ಹೊಂದುವಂತೆ ಆದಿಪರ್ವ, ಸಭಾಪರ್ವ, ಅರಣ್ಯಪರ್ವ, ಉದ್ಯೋಗಪರ್ವ, ಶಾಂತಿಪರ್ವ ಎಂಬ ಭಾಗಗಳನ್ನು ಲೇಖಕರು ಮಾಡಿಕೊಂಡಿದ್ದಾರೆ. ‘ಮತ್ತೆ ಮತ್ತೆ ಬರೆಸಿಕೊಳ್ಳುವ ಮಹಾಭಾರತ, ಮತ್ತೆ ಮತ್ತೆ ಹುಟ್ಟುವ ಶ್ರೀಕೃಷ್ಣ, ಮತ್ತೆ ಮತ್ತೆ ಸಾಯುವ ದುರ್ಯೋಧನ – ಈ ಚಕ್ರ ನಿರಂತರ. ಆ ಚಕ್ರವನ್ನು ನೆತ್ತಿಯಲ್ಲಿ ಹೊತ್ತವನ ಕತೆ ಇದು’ ಎಂದೆನ್ನುವ ಜೋಗಿ, ಪುರಾಣದ ಜಾಡಿನಲ್ಲಿ ಸಾಗಿ, ವರ್ತಮಾನದ ವಿದ್ಯಮಾನಗಳಿಗೆ ಕನ್ನಡಿ ಹಿಡಿಯಲು ಬಳಸಿದ ತಂತ್ರ ಕಾದಂಬರಿಗೆ ಬೇರೆಯದೇ ಆದ ಸೊಬಗನ್ನು ನೀಡಿದೆ.

ಹೊಸ ಚಿಂತನೆಗೆ ಹಚ್ಚುವ ಬರಹಗಳು



ನಮ್ಮ ಭಾರತ
ಲೇ: ಕ್ಯಾಪ್ಟನ್ ಜಿ.ಆರ್.ಗೋಪಿನಾಥ್
ಕನ್ನಡಕ್ಕೆ: ವಿಜಯ್ ಜೋಷಿ
ಪ್ರ: ಹರಿವು ಬುಕ್ಸ್
ದೂ: 8088822171
ಪು: 174 ₹200

ಕ್ಯಾಪ್ಟನ್ ಗೋಪಿನಾಥ್ ಅವರು ನಾಡು ಕಂಡ ಅಪರೂಪದ ಉದ್ಯಮಿ. ವಿಸ್ತಾರವಾದ ಓದು ಮತ್ತು ವ್ಯಾಪಕ ಜೀವನಾನುಭವದಿಂದ ಪಕ್ವಗೊಂಡಿರುವ ಅವರ ಬರಹಗಳ ಗುಚ್ಛ ‘ನಮ್ಮ ಭಾರತ’. ಅವರ ಚಿಂತನೆಯ ಸ್ವರೂಪವೇ ವಿಶಿಷ್ಟವಾಗಿದೆ. ಅದಕ್ಕೆ ಕೃತಿಯ ಮೊದಲ ಬರಹವೇ ಸಾಕ್ಷ್ಯ ನುಡಿಯುತ್ತದೆ. ಉಳ್ಳವರು ಮತ್ತು ಇಲ್ಲದವರ ನಡುವಿನ ಅಂತರವನ್ನು ತೊಲಗಿಸಲು ಉದ್ಯಮಿಯಾದವನು ಏನು ಮಾಡಬಹುದು ಎಂಬ ಪ್ರಶ್ನೆಯನ್ನು ಇಲ್ಲಿ ನಿಕಷಕ್ಕೆ ಒಳಪಡಿಸಲಾಗಿದೆ. ‘ಉದ್ಯಮಿಗಳು ದೇಶದ ಹೊಸ ಸ್ವಾತಂತ್ರ್ಯದ ಹೋರಾಟಗಾರರು’ ಎಂದು ಅವರೂ ಕರೆಯುತ್ತಾರೆ.

ಉದ್ಯಮಿಯ ಚಿಕಿತ್ಸಕ ಕಣ್ಣುಗಳೇ ಇಲ್ಲಿನ ಲೇಖನಗಳ ಜೀವಾಳವಾಗಿದ್ದರೂ ಒಬ್ಬ ಸಾಮಾಜಿಕ ಚಿಂತಕನೂ ಈ ಲೇಖಕನೊಳಗಿದ್ದಾನೆ ಎನ್ನುವುದು ಬರಹಗಳ ವಿಸ್ತಾರವನ್ನು ನೋಡಿದಾಗ ಎದ್ದು ಕಾಣುತ್ತದೆ. ಗೋಪಿನಾಥ್ ಅವರ ರಾಜಕೀಯ ಪ್ರಜ್ಞೆಯೂ ಬೆರಗು ಮೂಡಿಸುತ್ತದೆ. ವರ್ತಮಾನವನ್ನು ಕಾಡಿದ ಸಂಗತಿಗಳ ಕುರಿತು ಅವರು ನಿರ್ಭಿಡೆಯಿಂದ ವಸ್ತುನಿಷ್ಠವಾಗಿ ಸ್ಪಂದಿಸಿರುವುದು ಓದುಗರ ಮೆಚ್ಚುಗೆಗೆ ಪಾತ್ರವಾಗುವುದಲ್ಲದೆ, ಅವರನ್ನು ಹೊಸ ಚಿಂತನೆಗೂ ಹಚ್ಚುತ್ತದೆ. ಹಿಜಾಬ್ ವಿವಾದ ಇರಬಹುದು, ಕೃಷಿ ಕಾನೂನುಗಳು ಇರಬಹುದು, ಯುದ್ಧದ ಸನ್ನಿವೇಶ ಇರಬಹುದು, ಕೋವಿಡ್ ಸಾಂಕ್ರಾಮಿಕ ಇರಬಹುದು, ಎನ್‌ಕೌಂಟರ್ ಹತ್ಯೆಗಳಿರಬಹುದು –ಈ ಪ್ರಸಂಗಗಳನ್ನು ಲೇಖಕರು ವಿಶ್ಲೇಷಿಸಿದ ರೀತಿ ಹೊಸ ಹೊಳಹುಗಳನ್ನು ನೀಡಬಲ್ಲುದು. ಕೋವಿಡ್‌ನಂತಹ ಸಂಕಷ್ಟದ ಕಾಲದಲ್ಲಿ ಭಾರತದ ಸಣ್ಣ ಉದ್ಯಮಗಳು ನಲುಗಿದ ಕಥೆಯನ್ನೂ ಅವರು ಹೇಳಿದ್ದಾರೆ.

ರಾಜಕೀಯ ನಿಲುವು, ಸಿದ್ಧಾಂತಗಳು ಉದ್ಯಮ ಜಗತ್ತನ್ನು ಹೇಗೆ ಬೆಳಗಬಲ್ಲವು ಮತ್ತು ನಲುಗಿಸಿ ಹೊಸಕಬಲ್ಲವು ಎಂಬ ಬಗೆಗೂ ಮಾರ್ಮಿಕವಾಗಿ ಮಾತನಾಡಿದ್ದಾರೆ. ಧರ್ಮರಾಯನ ತಪ್ಪನ್ನು ಇಟ್ಟುಕೊಂಡು ಸಾಮಾನ್ಯರು ಎಡವಿ, ಏಳುವ ಅಧ್ಯಾಯ ಸ್ಫೂರ್ತಿದಾಯಕ. ಪ್ರಸ್ತುತ ಭಾರತದ ಇಣುಕುನೋಟವೊಂದು ಇಲ್ಲಿ ಸಾಧ್ಯವಾಗಿದೆ. ಪತ್ರಕರ್ತ ವಿಜಯ್ ಜೋಷಿ ಅವರ ಅನುವಾದ ಅಷ್ಟೇ ಸರಳವಾಗಿದೆ.

ಎಲ್ಲ ಹೃದಯಗಳು ಪ್ರೀತಿಯ ಕಡೆಗೆ

ರಘುನಾಥ ಚ.ಹ.

ವಿಮರ್ಶೆ

ಕಾದಂಬರಿ ಪ್ರಕಾರ ಮಗ್ಗುಲು ಬದಲಿಸಿ ಕಣ್ಣರಳಿಸುತ್ತಿರುವ ಸಂದರ್ಭದಲ್ಲಿ ಪ್ರಕಟಗೊಂಡಿರುವ ಎನ್. ಸಂಧ್ಯಾರಾಣಿ ಅವರ ‘ಇಷ್ಟುಕಾಲ ಒಟ್ಟಿಗಿದ್ದು...’ ಹೊಸ ಕಟಾವಿನ ಗಮನಾರ್ಹ ಫಸಲುಗಳಲ್ಲೊಂದು. ಸಾಹಿತ್ಯ ಮತ್ತು ಸಿನಿಮಾದ ವಿದ್ಯಾರ್ಥಿ ಸಂಧ್ಯಾರಾಣಿ, ಇದೇ ಮೊದಲ ಬಾರಿಗೆ ದೀರ್ಘ ಬರವಣಿಗೆಗೆ ತಮ್ಮನ್ನೊಡ್ಡಿಕೊಂಡಿದ್ದಾರೆ ಹಾಗೂ ಆ ಪ್ರಯೋಗದಲ್ಲಿ ಗಮನಾರ್ಹ ಯಶಸ್ಸನ್ನೂ ಸಾಧಿಸಿದ್ದಾರೆ.

‘ಇಷ್ಟುಕಾಲ ಒಟ್ಟಿಗಿದ್ದು...’ ಸಂಬಂಧಗಳ ಶೋಧದ ಕೃತಿ. ಪ್ರೀತಿಗಾಗಿ ಹಂಬಲಿಸುವ ಹಾಗೂ ಪ್ರೀತಿಯನ್ನು ಪಡೆಯುವಲ್ಲಿ ವ್ಯಕ್ತಿ ಘನತೆಯೊಂದಿಗೆ ರಾಜಿಯಾಗದ ದಿಟ್ಟ ಹೆಣ್ಣುಮಕ್ಕಳು ಈ ಕಾದಂಬರಿಯಲ್ಲಿದ್ದಾರೆ. ಹೊಸ ತಲೆಮಾರಿನ ಹೆಣ್ಣುಮಕ್ಕಳ ತವಕ ತಲ್ಲಣಗಳನ್ನು ಕಾದಂಬರಿ ಆಪ್ತವಾಗಿ, ಆರ್ದ್ರತೆಯಿಂದ ಕಟ್ಟಿಕೊಡುತ್ತದೆ. ಗೌರಿ, ಇನಾಯ, ಅರುಂಧತಿ ಹಾಗೂ ರಾಮಚಂದ್ರ ಎನ್ನುವ ಸಮಾನವಯಸ್ಕ ಗೆಳೆಯರ ಈ ಕಥೆಯಲ್ಲಿ ಸರೋಜಿನಿ ಎನ್ನುವ ಪ್ರೌಢ ವಯಸ್ಕ ಮಹಿಳೆಯ ವೃತ್ತಾಂತವೂ ಇದೆ.

ಇಲ್ಲಿನ ಮಹಿಳೆಯರು ಜಾಗತೀಕರಣ ಸಂದರ್ಭ ಕಲ್ಪಿಸಿದ ಆರ್ಥಿಕ ಸ್ವಾತಂತ್ರ್ಯದ ಫಲಾನುಭವಿಗಳು. ಆರ್ಥಿಕ ಸ್ವಾತಂತ್ರ್ಯದ ಕಾರಣದಿಂದಾಗಿ ಪುರುಷಪ್ರಧಾನ ಸಮಾಜದ ಪೂರ್ವಗ್ರಹಗಳನ್ನು ಪ್ರಶ್ನಿಸುವುದು ಅವರಿಗೆ ಸಾಧ್ಯವಾಗಿದೆ. ಸಾಮಾಜಿಕವಾಗಿ ಏನೆಲ್ಲ ಪ್ರಭಾವಳಿಗಳನ್ನು ಸೃಷ್ಟಿಸಿಕೊಂಡರೂ, ಅಂತರಂಗದಲ್ಲಿ ಪ್ರತಿಯೊಬ್ಬರೂ ಪ್ರೀತಿಗಾಗಿ ಹಂಬಲಿಸುವವರೇ ಆಗಿದ್ದಾರೆ ಎನ್ನುವುದನ್ನು ಕಾದಂಬರಿ ಕಾಣಿಸುತ್ತದೆ. ಕಥಾನಾಯಕಿಯರೇ ಇಲ್ಲಿ ಪ್ರಧಾನವಾಗಿದ್ದರೂ, ಹೆಣ್ಣಿನ ಅನನ್ಯತೆಯನ್ನು ಎತ್ತಿಹಿಡಿಯುವಲ್ಲಿ ಕಾದಂಬರಿ ವಿಶೇಷ ಆಸ್ಥೆವಹಿಸಿದ್ದರೂ, ಪುರುಷನನ್ನು ಎಲ್ಲೂ ಅಪರಾಧಿ ಸ್ಥಾನದಲ್ಲಿ ನಿಲ್ಲಿಸುವುದಿಲ್ಲ.



ಇಷ್ಟುಕಾಲ ಒಟ್ಟಿಗಿದ್ದು...
ಲೇ: ಎನ್. ಸಂಧ್ಯಾರಾಣಿ
ಪ್ರ: ಸಾವಣ್ಣ ಎಂಟರ್‌ಪ್ರೈಸಸ್, ಬೆಂಗಳೂರು. ಮೊ: 9036312786
ಪು: 212 ₹250

ತನ್ನ ಬಾಳಿನಿಂದ ನಿರ್ಗಮಿಸಿದ ನಿರಂಜನನ ಬಗ್ಗೆ ಸರೋಜಿನಿಗೆ ಎಷ್ಟೇ ಪ್ರಶ್ನೆಗಳಿದ್ದರೂ, ಅವನನ್ನು ದ್ವೇಷಿಸುವುದು ಅವಳಿಂದ ಸಾಧ್ಯವಿಲ್ಲ. ಪ್ರತ್ಯೇಕವಾಗಿ ಬದುಕುತ್ತಿದ್ದರೂ, ತಂತುಹರಿದ ಸಂಬಂಧವನ್ನು ಯಾವುದೋ ರೂಪದಲ್ಲಿ ಉಳಿಸಿಕೊಳ್ಳುವುದರಲ್ಲಿ ಅವಳಿಗೆ ಸುಖವಿದೆ. ವ್ಯಕ್ತಿಘನತೆಯನ್ನು ಲಘುವಾಗಿ ಕಾಣದ ಕಾರಣದಿಂದಲೇ ಈ ಕಾದಂಬರಿಗೆ ವಿಶೇಷ ಚೆಲುವು ಪ್ರಾಪ್ತವಾಗಿದೆ.

ಸಂಬಂಧಗಳ ಶೋಧದ ನೆಪದಲ್ಲಿ ಸಂಧ್ಯಾರಾಣಿ ಅವರು ಸೃಷ್ಟಿಸಿರುವ ಪಾತ್ರಗಳು ಕುತೂಹಲಕರವಾಗಿವೆ. ತನ್ನ ಮೈಬಣ್ಣ ಹಾಗೂ ರೂಪದ ಕುರಿತಾದ ಕೀಳರಿಮೆಯೊಂದಿಗೆ ಕುಟುಂಬದ ಒಣಹೆಮ್ಮೆಯನ್ನೂ ನೀಗಿಕೊಳ್ಳುವ ಉದ್ದೇಶದಿಂದ ಸ್ವತಂತ್ರ ಬದುಕನ್ನು ಕಟ್ಟಿಕೊಳ್ಳುವ ಅರುಂಧತಿ ಕಾದಂಬರಿಯಲ್ಲಿ ಗಮನಸೆಳೆಯುವ ಪಾತ್ರ. ತನಗಿಂತಲೂ ಹಿರಿಯನಾದ ರಾಜ್‌ದೀಪ್‌ನೊಂದಿಗೆ ಆಕೆ ಕಟ್ಟಿಕೊಳ್ಳುವ ಸಂಬಂಧ ಹಾಗೂ ಆ ನಂಟನ್ನು ನಿಭಾಯಿಸುವ ಪರಿ ಸುಲಭ ತರ್ಕಕ್ಕೆ ನಿಲುಕದಂತಹದ್ದು. ನಿರ್ಭಿಡೆಯಿಂದ ಮಾತನಾಡುವ, ಕುಟುಂಬದೊಂದಿಗೆ ವೃತ್ತಿಜೀವನವನ್ನೂ ನಿಭಾಯಿಸಲು ಹೆಣಗುವ ಇನಾಯ ಮತ್ತು ಅವಳಿಗೆ ಬೆಂಬಲವಾಗಿ ನಿಲ್ಲುವ ರಫಿಯ ದಾಂಪತ್ಯ ಒಂದು ಬದಿಗಿದ್ದರೆ, ವಿರುದ್ಧ ದಿಕ್ಕುಗಳಂತೆ ಕಾಣಿಸುವ ರಾಮಚಂದ್ರ ಹಾಗೂ ಅನುಪಮಾ ಅವರ ಸಹಜೀವನ ಇನ್ನೊಂದು ಬದಿಗಿದೆ. ಅಮ್ಮ ಸರೋಜಿನಿಯ ಬದುಕನ್ನು ಅನುಕಂಪದಿಂದ ನೋಡುತ್ತಲೇ, ಪ್ರೀತಿಯ ಸುಳಿಯೊಳಗೆ ಇಳಿಯುವ ಗೌರಿಯಿದ್ದಾಳೆ.

ಮದುವೆಯ ಚೌಕಟ್ಟು ಅಥವಾ ಆ ಚೌಕಟ್ಟಿಲ್ಲದೆಯೂ ಒಟ್ಟಿಗೆ ಜೀವನ ನಡೆಸುವ ಜೋಡಿಗಳು, ಇದ್ದಕ್ಕಿದ್ದಂತೆ ಎದುರಾದ ಸನ್ನಿವೇಶಗಳಿಂದ ವಿಚಲಿತಗೊಳ್ಳುವುದು ಹಾಗೂ ಸಂಬಂಧಗಳ ಅಸಲಿಯತ್ತನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು ಈ ಕಾದಂಬರಿಯ ಮುಖ್ಯ ಆಸಕ್ತಿ. ಕೊಂಚ ಹದತಪ್ಪಿದರೂ ಲಘುವಾಗಬಹುದಾದ ವ್ಯಕ್ತಿತ್ವಗಳನ್ನು ಕಾದಂಬರಿಕಾರ್ತಿ ಬಹು ಜತನದಿಂದ ಕಟ್ಟಿಕೊಟ್ಟಿದ್ದಾರೆ. ಯಾವ ಪಾತ್ರದ ವಕಾಲತ್ತನ್ನೂ ವಹಿಸದಿರುವುದು ಹಾಗೂ ಹೆಸರಿನ ಕಾರಣದಿಂದಾಗಿ ಸಂಬಂಧವನ್ನು ಎತ್ತರಕ್ಕೇರಿಸುವುದು ಅಥವಾ ಲಘುವಾಗಿಸುವುದನ್ನು ಮಾಡದಿರುವ ಆರೋಗ್ಯಕರ ಮನೋಧರ್ಮ ಈ ಕಾದಂಬರಿಯನ್ನು ರೂಪಿಸಿದೆ. ಯಾವುದೋ ನಂಟಿನ ಸೂತ್ರದಲ್ಲಿ ಪರಸ್ಪರ ಹೆಣೆದುಕೊಂಡ ಹೆಣ್ಣುಮಕ್ಕಳ ಬದುಕನ್ನು ಕಾದಂಬರಿಗಾರ್ತಿ ಎಷ್ಟು ಆಸ್ಥೆಯಿಂದ ಚಿತ್ರಿಸಿದ್ದಾರೆಂದರೆ, ಇವರೆಲ್ಲ ಯಾವುದೋ ಒಂದು ಬಗೆಯಲ್ಲಿ ನಮ್ಮೊಂದಿಗೆ ಒಡನಾಡುತ್ತಿರುವವರೇ ಎನ್ನಿಸಿಬಿಡುತ್ತದೆ.

‘ಇಷ್ಟುಕಾಲ ಒಟ್ಟಿಗಿದ್ದು...’ ಎನ್ನುವುದು ಕಾದಂಬರಿಯ ಎಲ್ಲ ಪಾತ್ರಗಳ ಅಂತರಂಗದ ಆಲಾಪ. ಆದರೆ, ಈ ಉದ್ಗಾರದ ನಂತರದ – ‘...ಎಷ್ಟು ಬೆರೆತರೂ ಅರಿತೆವೇನು ನಾವು ನಮ್ಮ ಅಂತರಾಳವ’ ಎನ್ನುವ ಪ್ರಶ್ನೆಯ ಮಾತನ್ನೂ ಗಮನಿಸಬೇಕು. ಅರಿತೆವೇನು ನಾವು ನಮ್ಮ ಅಂತರಾಳವ ಎನ್ನುವ ಜಿಜ್ಞಾಸೆ ಸಂಗಾತಿಯ ಕುರಿತಾದ ಪ್ರಶ್ನೆಯಷ್ಟೇ ಆಗಿರದೆ, ಕಾದಂಬರಿಯಲ್ಲಿ ನಮ್ಮನ್ನು ನಾವು ಅರಿಯುವ ಸ್ವವಿಮರ್ಶೆಯೂ ಆಗಿದೆ. ಸರೋಜಿನಿ, ರಾಮಚಂದ್ರ ಹಾಗೂ ಅವನ ಸಂಗಾತಿ ಅನುಪಮಾ ಸೇರಿದಂತೆ ಎಲ್ಲರೂ ಈ ಅರಿಯುವ ದಾರಿಯ ಪಥಿಕರೇ. ಸಂಗಾತಿ ತಮ್ಮನ್ನು ಅರಿಯಬೇಕೆನ್ನುವ ಅಪೇಕ್ಷೆ, ಏಕಮುಖವಾಗಿರಬಾರದೆನ್ನುವ ಎಚ್ಚರವನ್ನು ಇಲ್ಲಿನ ಪಾತ್ರಗಳು ಕಾಣಿಸುತ್ತವೆ.


ಸಂಧ್ಯಾರಾಣಿ ಅವರ ಕಾದಂಬರಿಯ ಶಕ್ತಿ ಪಾತ್ರಗಳ ಪೋಷಣೆಯಲ್ಲಿರುವಂತೆಯೇ ಬರವಣಿಗೆಯಲ್ಲಿಯೂ ಇದೆ. ಕಾದಂಬರಿಗಾರ್ತಿ ಒಂದು ಪಾತ್ರವೂ ಆಗಿರುವುದು ನಿರೂಪಣೆಗೆ ಲವಲವಿಕೆ ತಂದುಕೊಟ್ಟಿದೆ. ಸುರಳೀತ ಭಾಷೆಯಿಂದಾಗಿಯೂ ಗಮನಸೆಳೆಯುವ ಈ ಕಥನಕ್ಕೆ, ಒಂದೇ ಸಿಟ್ಟಿಂಗ್‌ನಲ್ಲಿ ಓದಿಸಿಕೊಳ್ಳುವ ತೀವ್ರತೆಯಿದೆ.

ಪಾತ್ರಗಳನ್ನು ಚಿತ್ರಿಸುವುದರಲ್ಲಿ ಗಮನಸೆಳೆಯುವ ಕಾದಂಬರಿಗಾರ್ತಿಗೆ, ಪರಿಸರವನ್ನೂ ಕಥನದ ಭಾಗವಾಗಿಸುವಲ್ಲಿ ಅಷ್ಟಾಗಿ ಆಸಕ್ತಿ ಇರುವಂತಿಲ್ಲ. ಪರಿಸರವೂ ಕಥನದ ಭಾಗವಾಗುವ ಸಾಧ್ಯತೆಗಳನ್ನೂ ಅವರು ಬಿಟ್ಟುಕೊಟ್ಟಿರುವುದಿದೆ. ಉದಾಹರಣೆಗೆ, ಅರುಂಧತಿಯ ದೆಹಲಿ ಭೇಟಿಯನ್ನು ಗಮನಿಸಬಹುದು. ಅರುಂಧತಿ ಮತ್ತು ರಾಜ್‌ದೀಪ್ ದೆಹಲಿಯ ವಿಶ್ವಪ್ರಸಿದ್ಧ ಚಾಂದನಿ ಚೌಕ್‌ಗೆ ಚಹಾ ಕುಡಿಯಲು ಹೋಗುತ್ತಾರೆ. ಚಾಂದನಿ ಚೌಕದ ಚೆಲುವು ಹಾಗೂ ಅಲ್ಲಿನ ಚಹಾದ ಸ್ವಾದ, ಅದಾಗತಾನೆ ಮೂಡುತ್ತಿದ್ದ ಸಂಬಂಧವೊಂದಕ್ಕೆ ಭಿತ್ತಿಯಾಗಿ ಒದಗಬಹುದಿತ್ತು. ಈ ಪ್ರಸಂಗ ಕಾದಂಬರಿಯಲ್ಲಿ ಎಷ್ಟು ಸರಾಗವಾಗಿ ರೂಪುಗೊಂಡಿದೆಯೆಂದರೆ, ಚಹಾ ಕುಡಿಯುವ ಪ್ರದೇಶ ಚಾಂದನಿ ಚೌಕ ಆಗಿರದಿದ್ದರೂ ಕಥನದಲ್ಲೇನೂ ವ್ಯತ್ಯಾಸವಾಗುತ್ತಿರಲಿಲ್ಲ.

ನಗರ ಪರಿಸರದ ತಲ್ಲಣಗಳು

ಎಚ್.ದಂಡಪ್ಪ

ಒಳನೋಟ



ಬುದ್ಧನ ಕಿವಿ
ಲೇ:ದಯಾನಂದ
ಪ್ರ: ಅಲೆ ಕ್ರಿಯೇಟಿವ್ಸ್
ಸಂ: 9945065060
ಪು: 146 ₹186

ದಯಾನಂದ ಅವರ ‘ಬುದ್ಧನ ಕಿವಿ’ ಸಂಕಲನದಲ್ಲಿ ಹನ್ನೊಂದು ಕತೆಗಳಿವೆ. ಆಧುನಿಕ ಕನ್ನಡ ಸಣ್ಣ ಕತೆಗಳ ಇತಿಹಾಸವನ್ನು ಗಮನಿಸಿದರೆ ಹಳ್ಳಿಯ ಬದುಕನ್ನು ಹೆಚ್ಚಾಗಿ ವಸ್ತುವಾಗಿಸಿಕೊಂಡಿರುವುದನ್ನು ಗಮನಿಸಬಹುದು. ಜಾತಿ/ವರ್ಗದ ಸಮಸ್ಯೆಗಳನ್ನು ವಸ್ತುವಾಗಿಸಿಕೊಂಡಾಗಲಂತೂ ಹಳ್ಳಿಗಳ ಚಿತ್ರಣವೇ ಹೆಚ್ಚು. ನವ್ಯದ ಕಾಲಘಟ್ಟದಲ್ಲಿ ಕೆಲವು ಕತೆಗಾರರನ್ನು ಬಿಟ್ಟರೆ ಉಳಿದವರು ನಗರಕೇಂದ್ರಿತ ಕತೆಗಳನ್ನು ಬರೆಯಲಿಲ್ಲ. ಆದರೆ ದಯಾನಂದ ಅವರ ಕತೆಗಳು ನಗರ ಕೇಂದ್ರಿತವಾಗಿರುವುದು ವಿಶೇಷ.

ಆಧುನಿಕ ನಾಗರಿಕತೆಯ ಪರಿಸರ ಇಲ್ಲಿನ ಕತೆಗಳಲ್ಲಿದೆ. ಬಾರ್, ಪಬ್, ಹೋಟೆಲ್, ಕ್ಲಬ್, ವೈವಿಧ್ಯಮಯ ವಸ್ತುಗಳು, ಅತಿಯಾದ ಚಟುವಟಿಕೆಯ ಜೀವನಶೈಲಿ ಇವೆಲ್ಲ ನಗರದ ಬದುಕಿನಲ್ಲಿ ಹಾಸುಹೊಕ್ಕಾಗಿದ್ದು ಯಾವುದೇ ತಾರತಮ್ಯಗಳು ಮೇಲುನೋಟಕ್ಕೆ ಕಾಣುವುದಿಲ್ಲ. ಆದರೆ, ಸಾಮಾಜಿಕ ಸ್ತರ ವಿನ್ಯಾಸ, ಆರ್ಥಿಕ ಅಸಮಾನತೆಯ ವರ್ಗವಿನ್ಯಾಸ, ಜಾತಿಯ ತಾರತಮ್ಯ, ಅದರಿಂದ ಉಂಟಾಗುವ ಅವಮಾನ ನೋವು, ಹಿಂಸೆ ಇರುತ್ತವೆ. ನಗರದಲ್ಲಿನ ಈ ತಾರತಮ್ಯಗಳು, ಇದರಿಂದ ಉಂಟಾಗುವ ಪರಿಣಾಮಗಳು ಮುಂತಾದ ನೆಲೆಗಳ ಶೋಧ ಈ ಕತೆಗಳಲ್ಲಿದೆ.

ಮಧ್ಯಮ ಮತ್ತು ಕೆಳವರ್ಗದ ನೆಲೆಗಳ ಶೋಧವೂ ಇಲ್ಲಿದ್ದು ಅವರ ಬದುಕು, ಅವರ ಮಾನಸಿಕ ಸ್ಥಿತಿಗತಿಗಳ ಸ್ವರೂಪವನ್ನು ಕಟ್ಟಿಕೊಟ್ಟರುವ ವಿಧಾನವು, ಓದುಗನ ಗಮನ ಸೆಳೆದು ಚಿಂತನೆಗೆ ತೊಡಗಿಸುತ್ತದೆ. ಕೆಲವು ಕತೆಗಳಲ್ಲಿ ಜಾತಿಯ/ವರ್ಗದ ನೆಲೆಗಳು ನೇರವಾಗಿ ನಿರೂಪಿತಗೊಂಡರೆ ಕೆಲವು ಕತೆಗಳಲ್ಲಿ ನಿರೂಪಣೆಯಲ್ಲಿಯೇ ತಾರತಮ್ಯವು ಒಳಧ್ವನಿಯಾಗಿ ಹರಿಯುತ್ತದೆ.

ಅನುಭವಕ್ಕೆ ಸಂಬಂಧಿಸಿದ ಎಲ್ಲಾ ವಿವರಗಳು ಕತೆಯಲ್ಲಿ ಒಳಗೊಳ್ಳಬೇಕೆಂಬ ಕತೆಗಾರರ ಉದ್ದೇಶದಿಂದ ಹಲವಾರು ದೃಷ್ಟಿಕೋನಗಳು ಇಲ್ಲಿನ ಕತೆಗಳಲ್ಲಿ ಇದ್ದರೂ ಅವು ಜಾಳು ಜಾಳಾಗಿ ನಿರೂಪಣೆಗೊಂಡಿಲ್ಲ. ಅವೆಲ್ಲವೂ ಪರಿಣಾಮದಲ್ಲಿ ಏಕತ್ರಗೊಂಡು ಕಲಾತ್ಮಕವಾಗಿ ಮೂಡಿರುವುದು ಕತೆಗಾರರ ಸಾಧನೆ. ನೇರವಾದ, ಶಕ್ತಿಪೂರ್ಣವಾದ ಬರವಣಿಗೆಯ ಕ್ರಮದಿಂದಾಗಿ ಈ ಕತೆಗಳಲ್ಲಿ ವ್ಯಕ್ತವಾಗುವ ವಿಚಾರಗಳು ಓದುಗನನ್ನು ಬೆರಗುಗೊಳಿಸುತ್ತವೆ. ನಿದರ್ಶನಕ್ಕಾಗಿ ಸರ್ವೈವಲ್ ಬೆನಿಫಿಟ್, ತ್ರೀ ಪಾಯಿಂಟ್ ಫೈವ್, ಬೈಬಲ್ ಬಂಪ್ ಕತೆಗಳನ್ನು ನೋಡಬಹುದು. ಇಲ್ಲಿನ ಕತೆಗಳ ಆಕೃತಿ ಸೂಕ್ಷ್ಮವಾಗಿದೆ. ಸುವೇಗವಾದ ಬರವಣಿಗೆಯ ಕ್ರಮ ಇಲ್ಲಿನ ಕತೆಗಳಲ್ಲಿ ಎದ್ದು ಕಾಣುವ ಅಂಶ. ಘಟನೆಯ ನಂತರ ಘಟನೆಯನ್ನು ಅನುಸರಿಸಿಕೊಂಡು ಹೋಗುತ್ತಾ ಆ ಘಟನೆಯ ಅಂತರಂಗದಲ್ಲಿಯೇ ಮನಸ್ಸಿನ ಪದರುಗಳು ಬಿಚ್ಚಿಕೊಳ್ಳುತ್ತವೆ. ಸಮಾಜ, ಸಾಹಿತ್ಯ ಕೃತಿಯೊಂದರಲ್ಲಿ ಮೈತಳೆದಿರಬೇಕಾದ ರಾಜಕೀಯದ ಸ್ವರೂಪ, ಆರ್ಥಿಕತೆ, ಇಂದಿನ ಜಾಗತಿಕ ಸ್ಥಿತಿ, ಸಾಹಿತ್ಯದ ಹೊಸ ಹೊಸ ಪ್ರಯೋಗಗಳು - ಇವೆಲ್ಲವನ್ನೂ ಕೂಡಿಸುವಂತೆ ಲೇಖಕ ಬರೆಯಬೇಕಾಗುತ್ತದೆ. ಬೈಬಲ್ ಬಂಪ್‌ನಂತಹ ಕತೆಗಳಲ್ಲಿ ಅಂತರಂಗ ಶೋಧವಿದ್ದರೆ ವಾಟ್ಸ್ ಇನ್ ಎ ನೇಮ್ ಎಂಬ ಕತೆಯಲ್ಲಿ ಅಂತರಂಗ ಬಹಿರಂಗ ಶೋಧಗಳೆರಡೂ ಇವೆ. ಈ ಕತೆಗಳು ಸಮಗ್ರತೆಯ ಕಡೆಗೆ, ಬಂಧ ಸೌಷ್ಟವದ ಕಡೆಗೆ ಪ್ರಬಂಧ ಧ್ವನಿಯ ಕಡೆಗೆ ಸಾಗಿ ಅನುಭವ ಸರಳಗೊಳ್ಳಲು ಅವಕಾಶವನ್ನೇ ಕೊಟ್ಟಿಲ್ಲವೆಂಬುದು ಗಮನಾರ್ಹ.

ಸಮಕಾಲೀನತೆಯ ತವಕ ತಲ್ಲಣಗಳನ್ನು ಕತೆಯಲ್ಲಿ ಹಿಡಿದಿಡುವಾಗ ಕತೆಯ ಬಂಧಕ್ಕೆ, ಅದರ ಸಾರ್ವತ್ರಿಕ ಗುಣಕ್ಕೆ ಭಂಗವುಂಟಾಗಿಲ್ಲ ಎನ್ನುವುದೇ ಇಲ್ಲಿನ ಕತೆಗಳನ್ನು ಕಟ್ಟುವಿಕೆಯಲ್ಲಿರುವ ಶಕ್ತಿ. ವಾಟ್ಸ್ ಇನ್ ಎ ನೇಮ್ ಕತೆಯಲ್ಲಿ ತನ್ನ ಹೆಸರಿನಲ್ಲಿಯೇ ಜಾತಿ ಇರುವುದನ್ನು ಕಂಡು ಅಸಹನೆಯನ್ನು ವ್ಯಕ್ತಪಡಿಸುವ ನಾಗರಿಕ ಸಮಾಜವನ್ನು ಕಂಡ ಯುವಕ ಕುಸಿಯುತ್ತಾನೆ. ಕೊನೆಗೆ ಹೆಸರನ್ನು ಬದಲಾಯಿಸಿಕೊಂಡು ಬೇರೊಂದು ಕೆಲಸಕ್ಕೆ ಸೇರಿಕೊಳ್ಳುತ್ತಾನೆ. ‘ಎಜುಕೇಷನ್, ಎಕಾನಮಿಕಲ್ ಸ್ಟೇಟಸ್, ಇಂಟರ್ ಕ್ಯಾಸ್ಟ್ ಮ್ಯಾರೇಜ್ ಇಂಟೆಲೆಕ್ಚುವಾಲಿಟಿ, ಯಾವೂ ನಮ್ಮ ಅವಮಾನವನ್ನು ಕಡಿಮೆ ಮಾಡೋಕೆ ಆಗಿಲ್ಲ ಸರ್’ ಎಂದು ಹೇಳುವ ಅವನ ಮಾತು ಓದುಗರನ್ನು ಮೌನವಾಗಿ ತಟ್ಟುತ್ತದೆ. ಇದು ಕತೆಯು ಯಶಸ್ಸನ್ನು ಸಾಧಿಸಬೇಕಾದ ಒಂದು ಕ್ರಮ.

ಬದುಕಿನಲ್ಲಿರುವ ನೋವು ಅವಮಾನಗಳನ್ನು ಸಹಿಸುವ ಮತ್ತು ಅದರಿಂದ ಹೊರಬರುವ ದಾರಿಗಳನ್ನು ಹುಡುಕುವ, ಪ್ರಯತ್ನ ಇಲ್ಲಿನ ಕತೆಗಳಲ್ಲಿ ಇದೆ. ವೈಚಾರಿಕತೆಯನ್ನು ಅದರ ಪಾಡಿಗೆ ಬಿಟ್ಟು ಆಕರ್ಷಕವಾಗಿ ಕತೆ ಹೇಳುವ ಮತ್ತು ಅದನ್ನು ಅಷ್ಟೇ ಆಕರ್ಷಕವಾಗಿ ಓದುಗನಿಗೆ ತಲುಪಿಸುವ ಕಡೆ ಇಲ್ಲಿನ ಕತೆಗಳ ನಿರೂಪಣೆ ಇದೆ. ದೀರ್ಘವಾದ ವಿವರಣೆ ಇಲ್ಲಿನ ಕತೆಗಳಲ್ಲಿ ಇಲ್ಲದಿರುವುದರಿಂದ ಕಲಾತ್ಮಕತೆಯ ಅಂಶಗಳು ಒಳಗೊಳ್ಳಲು ಸಾಧ್ಯವಾಗಿದೆ. ಇಲ್ಲಿನ ಕತೆಗಳು ಭಾವಗೀತೆಯಂತೆ ಚಿಕ್ಕದಾಗಿರಲು ಇದೂ ಒಂದು ಕಾರಣ. ಭಾವಗೀತೆಯ ಸಂಕ್ಷಿಪ್ತತೆ, ತೀವ್ರತೆ, ಸೂಕ್ಷ್ಮತೆಗಳ ಮೂಲಕ ದಯಾನಂದ ಅವರು ಮಾನವೀಯ ಮೌಲ್ಯಗಳ ಹುಡುಕಾಟಕ್ಕಾಗಿ ವಿಶಿಷ್ಟವಾದ ಭಾಷೆಯನ್ನು ಬಳಸಿದ್ದಾರೆ.

ಮುತ್ತು ಬೆಳೆದಾವ...

10ನೇ ಪುಟದಿಂದ...

ಅದಕ್ಕಾಗಿ ಇನ್ನೊಂದು ಟ್ರೇನಲ್ಲಿ ಒಂದು ಪ್ಯಾರಾಸಿಟಮಲ್ ಮಾತ್ರೆಯನ್ನು ನೀರಿನಲ್ಲಿ ಕರಗಿಸಿ, ಸರ್ಜರಿ ಮಾಡಿದ ಮಸ್ಸೆಲ್ಸ್‌ಗಳನ್ನು ಆ ನೀರಿನಲ್ಲಿ ಒಂದು ದಿನ ಇಡುತ್ತೇವೆ. ಮುತ್ತು ನಮಗೆ ಬೇಕಾದ ಆಕಾರದಲ್ಲಿ ಬೆಳೆಯುವಂತೆ ಮಾಡಬಹುದು. ಅದರಲ್ಲಿ ಅಳವಡಿಸುವ ವಸ್ತುವಿನ (ನ್ಯೂಕ್ಲೀ -nuclei) ಆಕಾರದ ಮೇಲೆ ಅದು ಬೆಳವಣಿಗೆ ಹೊಂದುತ್ತ ಹೋಗುತ್ತದೆ. ಗಣೇಶ ವಿಗ್ರಹ, 786, ಸ್ವಸ್ತಿಕ... ಹೀಗೆ ಬಗೆ ಬಗೆಯ ವಿನ್ಯಾಸಗೊಳ್ಳುವಂತೆ ಮಾಡಬಹುದು ಎನ್ನುತ್ತಾರೆ ಈ ರೈತ.

600 ಮಸ್ಸೆಲ್ಸ್, ₹1 ಲಕ್ಷ ಆದಾಯ: ನಾನು ಒಟ್ಟಾರೆ 600 ಮಸ್ಸೆಲ್ಸ್‌ಗಳನ್ನು ತಂದು ಹೊಂಡದಲ್ಲಿ ಹಾಕಿದ್ದೇನೆ. ಹೊಂಡ ನಿರ್ಮಾಣ ಸೇರಿದಂತೆ ಇದಕ್ಕೆ ಒಟ್ಟಾರೆ ₹40 ಸಾವಿರ ಖರ್ಚಾಗಿದೆ. ಈವರೆಗೆ ನಮ್ಮಲ್ಲಿ ಬೆಳೆದಿರುವ 700 ಮುತ್ತುಗಳನ್ನು ಮಾರಾಟ ಮಾಡಿದ್ದೇನೆ (ಒಂದು ಮಸ್ಸೆಲ್ಸ್‌ನಲ್ಲಿ ಎರಡು ಮುತ್ತು ಉತ್ಪಾದನೆಯಾಗುತ್ತಿದ್ದು, ಅದನ್ನು ಕಟ್ ಮಾಡದೇ ಮಾರಾಟ ಮಾಡುವುದರಿಂದ ಒಂದು ಮುತ್ತಿಗೆ ₹150 ದರದಂತೆ ಖರೀದಿಸಲಾಗುತ್ತಿದೆ). ಹೈದರಾಬಾದ್‌ನಲ್ಲಿ ಮುತ್ತು ಮಾರುಕಟ್ಟೆ ಇದ್ದು, ನಾವು ಅಲ್ಲಿಗೆ ಮಾರಾಟ ಮಾಡುತ್ತಿದ್ದೇವೆ. ಈವರೆಗೆ ನನಗೆ ಮುತ್ತು ಮಾರಾಟದಿಂದ ₹1.05 ಲಕ್ಷ ಹಣ ಬಂದಿದೆ ಎನ್ನುತ್ತಾರೆ ಇವರು.

ಸಾಕಾಣಿಕೆ ಮಾಡುವ ಒಂದು ಮಸ್ಸೆಲ್ಸ್‌ಗೆ ₹10 ದರ ಇದೆ. ಮಹಾರಾಷ್ಟ್ರದ ಜಲಾಶಯಗಳಿಂದ ಇವುಗಳನ್ನು ತಂದು ಮಾರಲಾಗುತ್ತದೆ. ಅದರಲ್ಲಿ ಅಳವಡಿಸುವ ವಸ್ತುವಿಗೆ (nuclei) ₹10 ಇದೆ. ಒಂದು ಮುತ್ತು ಉತ್ಪಾದನೆಗೆ ಒಂಬತ್ತು ತಿಂಗಳು ಬೇಕು. ಮುಖ್ಯ ಕೃಷಿಯನ್ನಾಗಿ ಮಾಡುವುದಕ್ಕಿಂತ ಉಪ ಕೃಷಿಯನ್ನಾಗಿ ಇದನ್ನು ಮಾಡಬಹುದು. ನಿತ್ಯ ಅರ್ಧಗಂಟೆ ಸಮಯ ಕೊಟ್ಟರೂ ಸಾಕು. ಈ ಹೊಂಡದಲ್ಲಿ ಮೀನು ಸಾಕಾಣಿಕೆಯನ್ನೂ ಮಾಡಬಹುದು. ಹೊಂಡದ ನೀರಿನ ಗುಣಮಟ್ಟ ಕಾಪಾಡಿಕೊಳ್ಳುವುದು, ತಾಪಮಾನ ಹೆಚ್ಚಾಗದಂತೆ ನೋಡಿಕೊಳ್ಳಲು ನೆರಳಿನ ಪರದೆ ಹಾಕುವುದು ಅನಿವಾರ್ಯ.


ಸಿಹಿನೀರ ಮುತ್ತು ಕೃಷಿಯಲ್ಲಿಯ ಮಸ್ಸೆಲ್ಸ್‌ಗಳಲ್ಲಿ ಬೆಳೆದಿರುವ ಮುತ್ತು
ಪ್ರಜಾವಾಣಿ ಚಿತ್ರಗಳು /ಫಕ್ರುದ್ದೀನ್ ಎಚ್.

ಭಾರತದಲ್ಲಿ ಮುತ್ತುಗಳಿಗೆ ಬೇಡಿಕೆ ಹೆಚ್ಚಿದ್ದರೂ ಉತ್ಪಾದನೆ ಅಷ್ಟಾಗಿ ಇಲ್ಲ. ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಮಧ್ಯಪ್ರದೇಶದಲ್ಲಿ ಇದರ ಉತ್ಪಾದನೆ ಹೆಚ್ಚಿದೆ. ನಮ್ಮ ರಾಜ್ಯದಲ್ಲಿ ಈ ಕೃಷಿ ಬಗ್ಗೆ ತರಬೇತಿ ಹೆಚ್ಚಬೇಕು. ನಮ್ಮಲ್ಲಿಯೂ ಸಾಕಷ್ಟು ಅವಕಾಶ ಇದ್ದು, ಯುವಕರು ಮನಸ್ಸು ಮಾಡಬೇಕು.


ಈವರೆಗೆ ನನ್ನ ಬಳಿ 50ಕ್ಕಿಂತ ಹೆಚ್ಚು ಜನರು ಬಂದು ಹೋಗಿದ್ದಾರೆ. ಅವರಲ್ಲಿ ಹೆಚ್ಚಿನವರು ಈ ಕೃಷಿಗೆ ಆಸಕ್ತಿ ವಹಿಸಿದ್ದಾರೆ. ಮನೆಯ ಚಾವಣಿಯ ಮೇಲೂ ಈ ಕೃಷಿ ಮಾಡಬಹುದು. ಬಕೆಟ್, ಫೈಬರ್ ಟ್ಯಾಂಕ್‌ಗಳಲ್ಲಿಯೂ ಮಾಡಬಹುದು. ಕರ್ನಾಟಕದಲ್ಲಿ ಮೀನುಗಾರಿಕೆ ಇಲಾಖೆಯಿಂದ ಕಡಲ ಚಿಪ್ಪು ಸಾಕಾಣಿಕೆಗೆ ಹೊಂಡ ನಿರ್ಮಾಣಕ್ಕೆ ₹20 ಸಾವಿರ ಸಹಾಯಧನ ನೀಡುವ ಯೋಜನೆ ಇದೆ. ಇದರ ಹೊರತಾಗಿಯೂ ಸರ್ಕಾರ ನಮ್ಮ ರಾಜ್ಯದ ಜಲಾಶಯ-ನದಿಗಳ ದಡದಲ್ಲಿ ಸಿಗುವ ಮಸ್ಸೆಲ್ಸ್‌ಗಳನ್ನು ಸಂಗ್ರಹಿಸಿ ಪೂರೈಸುವ ವ್ಯವಸ್ಥೆ ಮಾಡಬೇಕು. ಈ ಕೃಷಿಕರಿಗೆ ತರಬೇತಿ, ಮಾರುಕಟ್ಟೆ ವ್ಯವಸ್ಥೆ ಮಾಡಬೇಕು ಎನ್ನುವುದು ನವೀನ್‌ಚಂದ್ರ (ಮೊ.94810 23765) ಅವರ ಸಲಹೆ.



ಇತ್ತೀಚೆಗೆ ಮುಕ್ತಾಯಗೊಂಡ 14ನೇ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಆಯೋಜನೆಯ ದೃಷ್ಟಿಯಿಂದ ಅವ್ಯವಸ್ಥೆಯ ಆಗರವೇ ಆಗಿತ್ತು. ಇವೆಲ್ಲದರ ನಡುವೆಯೂ ಒಂದಷ್ಟು ಅಂತರರಾಷ್ಟ್ರೀಯ ಚಿತ್ರಗಳು ಸಿನಿಪ್ರಿಯರಿಗೆ ಮುದ ನೀಡಿದವು...

ಉತ್ಸವವಲ್ಲ ಸಿನಿಮಾ ಜಾತ್ರೆ

ಗಿರಿಧರ್ ಖಾಸನೀಸ್



ಮಾರ್ಚ್ 23ರಿಂದ 30ರವರೆಗೆ ನಡೆದ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ 14ನೇ ಆವೃತ್ತಿಯು ಅವ್ಯವಸ್ಥೆಗೆ ಮತ್ತೊಂದು ಹೆಸರಾಗಿ ಕಾಣಿಸಿತು.

ಉತ್ಸವದ ವಿಭಾಗಗಳು ಮತ್ತು ಸ್ಪರ್ಧೆಗಳಿಗೆ ಚಲನಚಿತ್ರಗಳ ಆಯ್ಕೆಯಿಂದ ಹಿಡಿದು ಡೆಲಿಗೇಟ್ ಪಾಸ್‌ಗಳ ವಿತರಣೆ ಕ್ಯಾಟಲಾಗುಗಳ ಹಂಚುವಿಕೆ ಎಲ್ಲದರಲ್ಲೂ ಆಯೋಜನೆ ಹಾಗೂ ನಿರ್ವಹಣೆಯ ಕೊರತೆ ಕಣ್ಣಿಗೆ ತಟ್ಟುವಂತಿತ್ತು.

ಶನಿವಾರ ಹಾಗೂ ಭಾನುವಾರವಂತೂ ಪರಿಸ್ಥಿತಿ ಹದಗೆಟ್ಟಿದ್ದು, ಪ್ರವೇಶದ್ವಾರದಲ್ಲಿ ಪ್ರೇಕ್ಷಕರು ಮತ್ತು ಸ್ವಯಂಸೇವಕರ ನಡುವೆ ಒಂದೆರಡು ಬಾರಿ ಚಕಮಕಿಯಾಗಿ ಕೈಕೈ ಮಿಲಾಯಿಸುವ ಹಂತಕ್ಕೂ ಹೋಗಿದ್ದು ವಿಷಾದನೀಯ. ಇವೆಲ್ಲಕ್ಕೂ ಮೂಲಕಾರಣ ಸರ್ಕಾರದಿಂದ ತಡವಾಗಿ ಬಂದ ಅನುಮೋದನೆ ಹಾಗೂ ಮಂಜೂರಾತಿ ಎನ್ನಲಾಗಿದೆ. ಪ್ರತಿವರ್ಷ ಮಾರ್ಚ್ 3ರಿಂದ ಚಿತ್ರೋತ್ಸವ ನಡೆಯಲಿ; ನಿರ್ದಿಷ್ಟ ದಿನವನ್ನು ಮುಂಚಿತವಾಗಿ ನಿಗದಿಪಡಿಸಿದರೆ ಯೋಜನೆ ಸುಲಭ ಮತ್ತು ವೃತ್ತಿಪರವಾಗಿರಲು ಸಾಧ್ಯ ಎನ್ನುವುದು ತಜ್ಞರ ಅಭಿಪ್ರಾಯ.

ಇದೇ ಬೇಡಿಕೆಯನ್ನು ಚಿತ್ರೋತ್ಸವದ ಉದ್ಘಾಟನೆಯ ಸಂದರ್ಭದಲ್ಲೂ ಮುಂದಿಡಲಾಯಿತು ಎನ್ನಲಾಗಿದೆ. ಇಂತಹ ಸರಳ, ಸಮಂಜಸ ಮತ್ತು ತರ್ಕಬದ್ಧ ಬೇಡಿಕೆಗೆ ಸ್ಪಂದಿಸದೆ ಹಾಲಿವುಡ್ ಮತ್ತು ಬಾಲಿವುಡ್ ನಿರ್ಮಾಪಕರನ್ನು ಸೆಳೆಯಬಲ್ಲ ಮಾದರಿ ಫಿಲಂ ಸಿಟಿಯೊಂದನ್ನು ನಿರ್ಮಿಸುವ ಭವ್ಯ ಘೋಷಣೆ ಮಾಡಲಾಯಿತಂತೆ. ಮೂರು ಚಕ್ರದ ಸೈಕಲ್ ಬೇಕೆಂದು ಕೇಳಿದ ಮಗುವಿಗೆ ಏರೋಪ್ಲೇನ್ ಕೊಡಿಸುವ ಕನಸು ಕಾಣಿಸಿದ ಹಾಗೆ.

ಇವೆಲ್ಲವುಗಳ ನಡುವೆ ಹೆಕ್ಕಿ ಹುಡುಕಾಡಿದ ವೀಕ್ಷಕರಿಗೆ ಸ್ವಲ್ಪ ಮಟ್ಟಿಗಾದರೂ ಖುಷಿಪಡುವಂತಹ ಹಲವು ಚಿತ್ರಗಳು ಸಿಕ್ಕಿದವೆಂದು ಸಮಾಧಾನಪಡಬೇಕಾಯಿತು. ಸಾಮಾನ್ಯವಾಗಿ ಹೇಳುವುದಾದರೆ ಕನ್ನಡ ಚಿತ್ರಗಳಿಗೆ ಉತ್ತಮ ಪ್ರತಿಕ್ರಿಯೆ ದೊರೆತಂತೆ ಕಂಡಿತು. ಶ್ರೇಷ್ಠ ಚಲನಚಿತ್ರ ಛಾಯಾಗ್ರಾಹಕ ದಿವಂಗತ ವಿ.ಕೆ. ಮೂರ್ತಿಯವರ ನೆನಪಿನಲ್ಲಿ ಕಾಣಿಸಿದ ಹಲವು ಹಳೆ ಹಿಂದಿ ಚಿತ್ರಗಳು (ಪ್ಯಾಸಾ, ಕಾಗಜ್ ಕೆ ಫೂಲ್, ಚೌದ್ವೀ ಕ ಚಾಂದ್, ಇತ್ಯಾದಿ) ಪ್ರೇಕ್ಷಕರನ್ನು ಮತ್ತೊಮ್ಮೆ ರಂಜಿಸಿದವು. ಅದರ ಜೊತೆಗೆ ರೌಂಡ್ ಟೇಬಲ್‌ನಲ್ಲಿ ಮೂರ್ತಿಯವರ ಒಡನಾಡಿಗಳಾದ ಗೋವಿಂದ್ ನಿಹಲಾನಿ, ಬಸವರಾಜು, ಭಾಸ್ಕರ್ ಅವರ ಮಾತು ಕೇಳುವ ಅವಕಾಶ ಸಿಕ್ಕಿತು.

ಹಾಂಗ್‌ಕಾಂಗ್‌ನ ನಿರ್ದೇಶಕ ವಾಂಗ್ ಕರ್-ವಾಯ್ ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಖ್ಯಾತರಾದವರು. ಸಂಕೀರ್ಣ ಕಥೆಗಳನ್ನು ಅವರದೇ ಆದ ಶೈಲಿಯಲ್ಲಿ ನಿಧಾನಗತಿಯಲ್ಲಿ ತೆರೆದಿಡುವ ವಾಂಗ್ ಕರ್-ವಾಯ್ ಅವರ ಚಿತ್ರಗಳು ದಶಕಗಳ ನಂತರವೂ ಜನಪ್ರಿಯವಾಗಿವೆ ಎಂದು ಈ ಚಿತ್ರೋತ್ಸವ ದೃಢಪಡಿಸಿತು. ಚಿತ್ರೋತ್ಸವಗಳಿಗೇ ಮಾಡಿಸಿದಂತೆ ಕಾಣುವ ಅವರ ಐದು ಫಿಲಂಗಳು (ಚುಂಗ್ ಕಿಂಗ್ ಎಕ್ಸ್ ಪ್ರೆಸ್ / 1994; ಫಾಲನ್ ಏಂಜೆಲ್ಸ್ /1995; ಹ್ಯಾಪಿ ಟುಗೆದೆರ್/1997; ಇನ್ ದಿ ಮೂಡ್ ಫಾರ್ ಲವ್ /2000; /2004) ಪ್ರದರ್ಶಿಸಲ್ಪಟ್ಟವು.

ಸಾಮಾನ್ಯ ಘಟನೆಗಳಿಂದ ಪ್ರಾರಂಭವಾಗಿ ತಮ್ಮದೇ ಆದ ಸಂಕೀರ್ಣತೆಗಳನ್ನು ಬೆಳೆಯಲು ಬಿಡುವ ಇರಾನ್ ದೇಶದ ಕೆಲವು ಚಿತ್ರಗಳು (ಸಬ್ ಟ್ರಾಕ್ಷನ್ /ನಿ: ಮನಿ ಹಗ್ಗೀಘಿ ; ಅನ್‌ಟಿಲ್ ಟುಮಾರೊ/ ನಿ: ಅಲಿ ಅಸ್ಗರಿ; ಸ್ಪೈಡರ್ /ನಿ : ಅಲಿ ಅಬ್ಬಾಸಿ, ಇತ್ಯಾದಿ) ಒಂದು ಹಂತದವರೆಗೆ ಗಮನ ಸೆಳೆದವು. ಅಜರ್‌ಬೈಜಾನ್ ದೇಶದ ಹಿಲಾಲ್ ಬೈದರೊವ್ ಬರೆದು ನಿರ್ದೇಶಿಸಿದ 'ಕ್ರೇನ್ ಲ್ಯಾಂಟರ್ನ್' (2021) ಒಂದು ವಿಶಿಷ್ಟವಾದ ಕತೆಯನ್ನು ಹೇಳಲು ಪ್ರಯತ್ನಿಸುತ್ತದೆ. ಅತಿ ಎನಿಸುವ ವಾಚಾಳಿತನದ ದೋಷದ ಹೊರತಾಗಿಯೂ ಬೈದರೊವ್ ಅವರೇ ಸಿನಿಮಾಟೋಗ್ರಫಿ ಮಾಡಿ ಸೆರೆಹಿಡಿದ ಕಾವ್ಯಾತ್ಮಕ ದೃಶ್ಯಗಳಿಂದ 'ಕ್ರೇನ್ ಲ್ಯಾಂಟರ್ನ್' ಸೂರೆಗೊಂಡಿತು.



ಉಕ್ರೇನಿಯನ್ ಚಲನಚಿತ್ರ 'ಕ್ಲೋನ್ಡಿಕೆ'ಯಲ್ಲಿ (ನೀ: ಮರಿಯಾನಾ ಗೋರ್ಬಾಚ್) ಯುದ್ಧ ಭೀಭತ್ಸ ಸನ್ನಿವೇಶಗಳನ್ನು ಅಮಾನವೀಯ ಹಿಂಸೆ, ಗೊಂದಲಗಳನ್ನು ಹೊಟ್ಟೆ ಕಿವುಚುವ ಹಾಗೆ ಚಿತ್ರಿಸಲಾಗಿದೆ. ಆದರೆ ವಿಶಾಲ ದೃಷ್ಟಿಕೋನದಿಂದ ನೋಡಿದಾಗ ಇದು ಏಕಮುಖ ನೋಟದಂತೆ ಕಂಡು ತೀವ್ರತೆಯನ್ನು ಕಳೆದುಕೊಳ್ಳುತ್ತದೆ.

ಸಾಮಾನ್ಯವಾಗಿ ಎಲ್ಲ ಸ್ತರಗಳಲ್ಲೂ ರಂಜಿಸಿದ ಚಿತ್ರಗಳಲ್ಲಿ 'ಆಫ್ಟರ್ ಸನ್" (ನಿರ್ದೇಶಕಿ: ಷಾರ್ಲೆಟ್ ವೆಲ್ಸ್ /2022) ಒಂದಾಗಿತ್ತು. ತಂದೆ ಹಾಗೂ ಮಗಳ ನಡುವಿನ ವಿಶೇಷ ಸಂಬಂಧ, ಅವರ ಸಂತೋಷ ಮತ್ತು ಖಾಸಗಿ ಪ್ರಕ್ಷುಬ್ಧ ಸನ್ನಿವೇಶಗಳನ್ನು ಬಹಳ ಸೂಕ್ಷ್ಮವಾಗಿ ಸಮರ್ಪಕವಾಗಿ ಹೊರತರಲಾಯಿತು. ಚಿತ್ರದ ಯಶಸ್ಸಿಗೆ ನಿರ್ದೇಶಕಿಯ ಜೊತೆ ಪ್ರಮುಖ ಪಾತ್ರಗಳಲ್ಲಿ ನಟಿಸಿದ ಪಾಲ್ ಮೆಸ್ಕ್ಯಾಲ್ ಹಾಗೂ ಫ್ರಾಂಕೀ ಕೋರಿಯೊ ಕೂಡ ಕಾರಣ ಅನ್ನಲೇ ಬೇಕು. ಇದು ವೆಲ್ಸ್ ನಿರ್ದೇಶನದ ಮೊದಲ ಚಿತ್ರ ಎಂದಾಗ ಆಶ್ಚರ್ಯ ಮತ್ತು ಸಂತೋಷ ಇನ್ನೂ ಹೆಚ್ಚಾಯಿತು.

ವೀಕ್ಷಕರನ್ನು ಆಕರ್ಷಿಸಿದ ಇತರ ಚಿತ್ರಗಳಲ್ಲಿ ರೊಮೇನಿಯಾದ ಆರ್‌ಎಂಎನ್ (ನಿ: ಕ್ರಿಶ್ಚಿಯನ್ ಮುಂಗಿಯು); ಫ್ರಾನ್ಸ್ ಭಾಷೆಯ ದಿ ನೈಟ್ ಆಫ್ ದಿ ಟ್ವೇಲ್ಫತ್ (ನಿ: ಡೊಮಿನಿಕ್ ಮೋಲ್); ಸ್ಪಾನಿಷ್ ಚಿತ್ರ ದಿ ಬೀಸ್ಟ್ಸ್ (ನಿ: ರೋಡ್ರಿಗೋ ಸರಗಯನ್) ಹಾಗೂ ಬೊಲೀವಿಯಾದ ಉತಮ (ನಿ: ಅಲೆಜಾಂಡ್ರೋ ಗ್ರಿಸಿ) ಸೇರಿದ್ದವು.

ಅತ್ಯುತ್ತಮ ಛಾಯಾಚಿತ್ರಣ, ನಟನೆ ಹಾಗೂ ಪರಿಕಲ್ಪನೆಯಿಂದ ಕೂಡಿದ್ದ ಬೆಲ್ಜಿಯಂ ದೇಶದ ಕ್ಲೋಸ್ (ನಿ: ಲುಕಾಸ್ ದೋಣ್ತ್) ಉಚ್ಚ ಶ್ರೇಣಿಯ ಚಿತ್ರವಾಗಿತ್ತು. ಪ್ರತಿಷ್ಠಿತ ಕಾನ್ ಚಿತ್ರೋತ್ಸವದಲ್ಲಿ ಅತ್ಯುತ್ತಮ ಚಿತ್ರ ಪ್ರಶಸ್ತಿಯನ್ನು (2022) ಈ ಚಿತ್ರ ಪಡೆದದ್ದರಲ್ಲಿ ಆಶ್ಚರ್ಯವಿಲ್ಲ. ಅದೇ ಮಾತನ್ನು ಇತ್ತೀಚಿಗೆ ಅನೇಕ ಆಸ್ಕರ್ ಪ್ರಶಸ್ತಿಗಳನ್ನು ತನ್ನ ತಕ್ಕೆಗೆ ಹಾಕಿಕೊಂಡ ಎವೆರಿಥಿಂಗ್ ಎವೆರಿವೇರ್ ಆಲ್ ಅಟ್ ವನ್ಸ್ (ನಿ: ಡ್ಯಾನ್ ಕ್ವಾನ್ /ಡೇನಿಯಲ್ ಸ್ಕ್ಯಾನಿರಾಟ್) ಬಗ್ಗೆ ಹೇಳಲು ಸಾಧ್ಯವೇ ಇಲ್ಲ. ಹೀಗೆ ಹಲವು ಕಾರಣಗಳಿಂದ ಈ ವರ್ಷದ BIFFES ಚಲನಚಿತ್ರೋತ್ಸವವು ಬೆಲ್ಲದ ಜೊತೆ ಸ್ವಲ್ಪ ಹೆಚ್ಚಾಗಿಯೇ ಬೇವಿನ ರುಚಿಯನ್ನು ಪ್ರೇಕ್ಷಕರಿಗೆ ಉಣಬಡಿಸಿತು. ಈ ವರ್ಷ ಕಂಡ ಅನಿಶ್ಚಿತತೆ ಅವ್ಯವಸ್ಥೆ ಅವಾಂತರಗಳು ಮುಂದಿನ ಆವೃತ್ತಿಗಳಲ್ಲಿ ಕಾಣದಂತೆ ಮಾಯವಾಗಲಿ ಎಂಬುದು ಎಲ್ಲರ ಆಶಯ.

ಡೀಪ್‌ಫೇಕ್

10ನೇ ಪುಟದಿಂದ...

ಇಂಥ ವಂಚಕ ತಂತ್ರಗಾರಿಕೆಯ ಬತ್ತಳಿಕೆಗೆ ಹೊಸದೊಂದು ಸೇರ್ಪಡೆ 2017ರಲ್ಲಿ ಮೊತ್ತಮೊದಲಿಗೆ ಬೆಳಕಿಗೆ ಬಂದ ಡೀಪ್‌ಫೇಕ್! ಅಸಲಿ ನಕಲಿಯ ನಡುವೆ ವ್ಯತ್ಯಾಸವನ್ನೇ ಗುರುತಿಸಲಾಗದ ಕೃತಕ ಬುದ್ಧಿಮತ್ತೆಯನ್ನು (Artificial Intelligence) ಆಧರಿಸಿದ, ನಡುಕ ಹುಟ್ಟಿಸುವ ಡೀಪ್‌ಫೇಕ್ ತಂತ್ರಜ್ಞಾನವು ಈಗಾಗಲೇ ಕಲುಷಿತಗೊಂಡಿರುವ ಸಾರ್ವಜನಿಕ ವಲಯವನ್ನು ಇನ್ನೂ ಹದಗೆಡಿಸುವುದರಲ್ಲಿ ಯಾವುದೇ ಅನುಮಾನವಿಲ್ಲ.

